ಆಡುತ್ತಿರತಕ್ಕಂಥ ಮಾತು. ಏಕೆಂದರೆ ಡೆಮಾಕ್ರಸಿ ಬಗ್ಗೆ ಜನರಿಗೆ ಸಂಪೂರ್ಣವಾಗಿ ವಿಶ್ವಾಸ ಹೋಗುವುದರೊಳಗಾಗಿ ನಾವು ನಮ್ಮ ನಡವಳಿಕೆಗಳನ್ನು ತಿದ್ದಿಕೊಳ್ಳಬೇಕಾಗುತ್ತದೆ. ನಾನು ಯಾವುದೋ ಮಾಜಿ ಮಂತ್ರಿಗಳ ಬಗ್ಗೆ ಹೇಳಿದ್ದೆ. ಏಕೆ ಬಹಳ ನೋವಿನಿಂದ ಹೇಳುತ್ತಿದ್ದೇನೆ ಎಂದರೆ, ಡಾಲರ್ ಕಾಲನಿಯಲ್ಲಿ ಯಾವುದೋ ಒಂದು ಮನೆ ನನ್ನದಲ್ಲ ಎಂದು ಪತ್ರಿಕೆಯಲ್ಲಿ ಹೇಳಿಕೆ ಕೊಟ್ಟು ಇವತ್ತು ಆ ಮನೆಯಲ್ಲಿ ವಾಸ ಮಾಡುತ್ತಿದ್ದಾರೆ ಎಂದರೆ don't you think that he is laughing at democracy.

ಅಧ್ಯಕ್ಷರು:– ಪ್ರೊಫೆಸರ್‌ರವರೇ, ತಾವು ದಯವಿಟ್ಟು ನನಗೆ ಬರೆದು ಕಳಿಸಿ. I cannot allow all these things.

ಪ್ರೊ. ಎಂ.ಡಿ. ನಂಜುಂಡಸ್ವಾಮಿ:– ಮಾನ್ಯ ಅಧ್ಯಕ್ಷರೆ, I just wanted to know what action the Chief Minister has taken.

ಅಧ್ಯಕ್ಷರು:– ತಾವು ಬರೆದು ಕಳುಹಿಸಿ. ನಾನು ಸರ್ಕಾರಕ್ಕೆ ತಿಳಿಸುತ್ತೇನೆ. ಏಕೆಂದರೆ

ಪ್ರೊ. ಎಂ.ಡಿ. ನಂಜುಂಡಸ್ವಾಮಿ:– Sir.....

ಅಧ್ಯಕ್ಷರು:– ಇಂತಹ ವಿಷಯವನ್ನು ಎತ್ತಬೇಕಾದರೆ ತಾವು ನನ್ನ ಸಂಗಡ ಪ್ರಸ್ತಾಪ ಮಾಡಬೇಕು.

ಪ್ರೊ. ಎಂ.ಡಿ. ನಂಜುಂಡಸ್ವಾಮಿ:– ಅಧಿಕೃತ ದಾಖಲೆಗಳನ್ನು ಕೊಟ್ಟಿದ್ದೇನೆ.

ಶಾಸನ ರಚನೆ ಕಾರ್ಯಕಲಾಪಗಳು

ಕರ್ನಾಟಕ ಲಿಫ್ಟ್‌ಗಳ (ತಿದ್ದುಪಡಿ) ವಿಧೇಯಕ, 1993

ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಎಸ್. ಎಂ. ಕೃಷ್ಣ (ಉಪಮುಖ್ಯಮಂತ್ರಿಗಳು, ನೀರಾವರಿ ಮತ್ತು ವಿದ್ಯುಚ್ಛಕ್ತಿ ಸಚಿವರು):– ಮಾನ್ಯ ಅಧ್ಯಕ್ಷರೇ, 1993ರ ಕರ್ನಾಟಕ ಲಿಫ್ಟ್‌ಗಳ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಅಧ್ಯಕ್ಷರು:– ಪ್ರಸ್ತಾವ ಏನೆಂದರೆ 1993ರ ಕರ್ನಾಟಕ ಲಿಫ್ಟ್‌ಗಳ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ಎಸ್. ಎಂ. ಕೃಷ್ಣ (ಉಪಮುಖ್ಯಮಂತ್ರಿಗಳು, ನೀರಾವರಿ ಮತ್ತು ವಿದ್ಯುಚ್ಛಕ್ತಿ ಸಚಿವರು):– ಮಾನ್ಯ ಅಧ್ಯಕ್ಷರೇ, 1993ರ ಕರ್ನಾಟಕ ಲಿಫ್ಟ್‌ಗಳ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು:– ಅನುಬಂಧ ವಿಧೇಯಕವನ್ನು ಮಂಡಿಸಲಾಯಿತು.

ವಿತ್ತೀಯ ಕಾರ್ಯಕಲಾಪಗಳು

ಅಧ್ಯಕ್ಷರು:– 1993–94ನೇ ಸಾಲಿನ ಕೆಳಕಂಡ ಬೇಡಿಕೆಗಳ ಬಗ್ಗೆ ಚರ್ಚೆ....

ಶ್ರೀ ಹೆಚ್. ಏಕಾಂತಯ್ಯ:– ನನ್ನದು ಪಾಯಿಂಟ್ ಆಫ್ ಆರ್ಡರ್ ಇದೆ. ಮಾನ್ಯ ಅಧ್ಯಕ್ಷರೇ,

ಈಗ ಮಾನ್ಯ ಉಪಮುಖ್ಯಮಂತ್ರಿಗಳು ಕೆಲವು ಬೇಡಿಕೆಗಳನ್ನು ಈ ಸದನದ ಅನುಮೋದನೆಗಾಗಿ ಇಡಲಿಕ್ಕೆ ತಾವು ಕರೆದಿದ್ದೀರಿ. ಅದಕ್ಕೆ ನನ್ನ ಆಕ್ಷೇಪ ಇದೆ.

ಶ್ರೀ ಕೆ. ಹೆಚ್. ರಂಗನಾಥ್:– ಪಾಯಿಂಟ್ ಆಫ್ ಆರ್ಡರ್‌ಗೆ ಅವಕಾಶ ಎಲ್ಲಿದೆ? ಒಂದು ವಿಧೇಯಕ ಮುಗಿದಿದೆ. ಅವರು ಇನ್ನೂ ಕರೆದಿಲ್ಲ. Now we are in a vaccum. ವ್ಯಾಕ್ಯೂಂನಲ್ಲಿ ಪಾಯಿಂಟ್ ಆಫ್ ಆರ್ಡರ್ ಏನಿದೆ?

ಶ್ರೀ ಹೆಚ್. ಏಕಾಂತಯ್ಯ:– ಮಾನ್ಯ ಉಪಮುಖ್ಯಮಂತ್ರಿಗಳನ್ನು, ಈ ಬೇಡಿಕೆಗಳ ಮಂಡನೆಗಾಗಿ, ಮಾನ್ಯ ಸಭಾಧ್ಯಕ್ಷರು ಕರೆದಿದ್ದಾರೆ. ಅವರು ಮಂಡನೆಗೆ ಪ್ರಯತ್ನಪಟ್ಟಾಗ, ಆ ಮಂಡನೆಗೆ ವಿರುದ್ಧವಾಗಿ ನಾನು ಕೆಲವು ಮಾತುಗಳನ್ನು ಹೇಳುತ್ತೇನೆ.

SRI K.H. RANGANATH:– Now we are in a vaccum.

ಶ್ರೀ ಹೆಚ್. ಏಕಾಂತಯ್ಯ:– ಹಾಗಾದರೆ, ಪಾಯಿಂಟ್ ಆಫ್ ಆರ್ಡರ್ ಯಾವಾಗ ತೆಗೆಯಬೇಕು. ಈಗ ನಾನೂ ಕೂಡ ಅದನ್ನೇ ಹೇಳುತ್ತಿದ್ದೇನೆ. ಮಾನ್ಯ ಉಪಮುಖ್ಯಮಂತ್ರಿಗಳು ಯಾವಾಗ ಈ ಸದನದ ಮುಂದೆ ತಮ್ಮ ಬೇಡಿಕೆಗಳನ್ನು ಮಂಡಿಸುವುದಕ್ಕೆ ಎದ್ದರೋ, ಆಗ ನಾನು ಕ್ರಿಯಾಲೋಪ ಎತ್ತಿದ್ದೇನೆ. ಅವರು ಎದ್ದಿರಲಿಲ್ಲವೆಂದು ಹೇಳಿದರೆ, ನನ್ನದೇನೂ ತಕರಾರು ಇಲ್ಲ, ನಾನು ಕುಳಿತುಕೊಳ್ಳುತ್ತೇನೆ. ಇನ್ನೊಂದು ನಿಮಿಷದಲ್ಲಿ ಏನೂ ಆಗುವುದಿಲ್ಲ.

ಶ್ರೀ ಕೆ. ಹೆಚ್. ರಂಗನಾಥ್:– ನೀವು ಕಾನೂನನ್ನು ತಪ್ಪು ಮಾಡುವಂಥಾದ್ದು ಸರಿಯಲ್ಲವೆಂದು ಹೇಳಿದೆ. ಮಾನ್ಯ ಅಧ್ಯಕ್ಷರು ಅವರನ್ನು ಕರೆದು, ಅವರು ಪ್ರಾರಂಭ ಮಾಡುವುದಕ್ಕೆ ಮುಂಚೆಯೇ ತಾವು ಎತ್ತಿದ್ದರೆ ಆಗಬಹುದಿತ್ತು. ಅಧ್ಯಕ್ಷರು ಇನ್ನೂ ಅವರನ್ನು ಕರೆದೇ ಇಲ್ಲ, ಪಾಯಿಂಟ್ ಆಫ್ ಆರ್ಡರ್ ಎಲ್ಲಿ ಆಗುತ್ತದೆ.

ಶ್ರೀ ಬಿ.ಹೆಚ್. ಬನ್ನಿಕೋಡ್:– ಅಧ್ಯಕ್ಷರು ಅವರನ್ನು ಕರೆದರು, ಅವರು ಏಳುತ್ತಿದ್ದರು. ಅದಕ್ಕಾಗಿಯೇ ಅವರು ಕ್ರಿಯಾಲೋಪ ಎತ್ತುತ್ತಿದ್ದಾರೆ.

ಅಧ್ಯಕ್ಷರು:– 1993–94ನೇ ಸಾಲಿಗೆ ಸಂಬಂಧಿಸಿದಂತೆ ಈ ಕೆಳಕಂಡ ಬೇಡಿಕೆಗಳ ಮೇಲೆ ಚರ್ಚೆ ಹಾಗೂ ಮತಕ್ಕೆ ಹಾಕುವುದು. ಈ ಬೇಡಿಕೆಗಳನ್ನು ಮಾನ್ಯ ಉಪಮುಖ್ಯಮಂತ್ರಿಗಳು ಮಂಡಿಸಬೇಕು.

ಭಾರಿ ಮತ್ತು ಮಧ್ಯಮ ನೀರಾವರಿ
ವಿದ್ಯುಚ್ಛಕ್ತಿ ಯೋಜನೆಗಳು
ಸಣ್ಣ ನೀರಾವರಿ ಇತ್ಯಾದಿ

† ಶ್ರೀ ಹೆಚ್. ಏಕಾಂತಯ್ಯ:– ನನ್ನದೊಂದು ಕ್ರಿಯಾಲೋಪವಿದೆ. ಈ ಸಭೆಯನ್ನು ಯಾವ ರೀತಿ ನಡೆಸಬೇಕೆನ್ನುವುದಕ್ಕೆ ನಮ್ಮ ವಿಧಾನಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳನ್ನು ರೂಪಿಸಿಕೊಂಡಿದ್ದೇವೆ. ಆ ನಿಯಮಗಳ ಅಡಿಯಲ್ಲಿ, ಒಂದು ಆಯವ್ಯಯ ಪತ್ರವನ್ನು ಸಂಬಂಧಪಟ್ಟ ಮಂತ್ರಿಗಳು, ಅವರು ಮುಖ್ಯಮಂತ್ರಿಗಳಾಗಿರಬಹುದು, ಇಲ್ಲವೇ ಹಣಕಾಸಿನ ಮಂತ್ರಿಗಳಾಗಿರಬಹುದು. ಯಾರು ಮಂಡಿಸುತ್ತಾರೆ, ಆ ರೀತಿ ಮಂಡಿಸಿದ ಮೇಲೆ ಅದನ್ನು ಚರ್ಚೆ ಮಾಡುವುದಕ್ಕೆ ನಮ್ಮದೇ ಆದಂಥ ನಿಯಮಗಳನ್ನು ರೂಪಿಸಿಕೊಂಡಿದ್ದೇವೆ. ಮೊದಲು ಸಾರ್ವತ್ರಿಕವಾಗಿ ಆಯವ್ಯಯದ ಮೇಲೆ ಚರ್ಚೆ ಮಾಡುವುದಕ್ಕೆ ಅವಕಾಶ ಇದೆ. ತದನಂತರ, ಬೇಡಿಕೆಗಳ ಮೇಲೆ ಚರ್ಚೆಯನ್ನು ಪ್ರಾರಂಭ ಮಾಡಬೇಕಾಗಿದೆ. ಈ ಬೇಡಿಕೆಗಳ ಮೇಲೆ ಚರ್ಚೆ ಮಾಡಬೇಕಾದರೆ, ನಾವು ಒಂದು ನಿಯಮವನ್ನು ಮಾಡಿಕೊಂಡಿದ್ದೇವೆ. ಕನಿಷ್ಠಪಕ್ಷ ಇಂತಿಷ್ಟು

ದಿವಸಗಳು ಈ ಬೇಡಿಕೆಗಳ ಚರ್ಚೆಗಾಗಿ ಗೊತ್ತು ಮಾಡಲ್ಪಡಬೇಕು. ಈ ರೀತಿ ಗೊತ್ತು ಮಾಡಿಕೊಡುವಂಥ ಸಂದರ್ಭದಲ್ಲಿ ಸರ್ಕಾರದ ಪರವಾಗಿ, ಸರ್ಕಾರದ ಮುಖ್ಯಸ್ಥರಲ್ಲಿ ಸಮಾಲೋಚನೆ ಮಾಡಿ, ತಾವು ಕನಿಷ್ಠಪಕ್ಷ 10 ದಿವಸಗಳಿಗೆ ಕಡಿಮೆ ಇಲ್ಲದಂತೆ ನಮಗೆ ಕಾಲಾವಕಾಶವನ್ನು ಕೊಡುವುದು ಅವಶ್ಯಕತೆ ಇದೆಯೆಂದು ಭಾವಿಸಿ, ನಾವು ಇಂತಹ ನಿಬಂಧನೆಯನ್ನು ನಮ್ಮ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮಗಳಲ್ಲಿ ಹಾಕಿಕೊಂಡಿದ್ದೇವೆ. ಸನ್ಮಾನ್ಯ ಅಧ್ಯಕ್ಷರೇ, ಇವತ್ತಿನ ದಿವಸ ನಮಗೆ ಬಂದಿರುವಂಥ ಮಾಹಿತಿ ಪ್ರಕಾರ, ಇವತ್ತಿನಿಂದ ಕೇವಲ 5 ದಿವಸಗಳು ಮಾತ್ರ ನಮಗೆ ಕೊಡುತ್ತಿದ್ದೀರಿ. ತಮಗೆ ಗೊತ್ತಿರುವ ಹಾಗೆ, ಮಾನ್ಯ ಮುಖ್ಯಮಂತ್ರಿಗಳು ಸುಮಾರು 8,735 ಕೋಟಿ ರೂಪಾಯಿಗಳ ವೆಚ್ಚವನ್ನು ಈ ಆಯವ್ಯಯ ಪತ್ರದಲ್ಲಿ ಜಮಾಖರ್ಚಿನಲ್ಲಿ ತೋರಿಸಿದ್ದಾರೆ. ಇಂತಹ ಅಗಾಧ ಪ್ರಮಾಣದ ವೆಚ್ಚವನ್ನು ಸುಮಾರು 62 ಬೇಡಿಕೆಗಳ ಬಗ್ಗೆ....

ಶ್ರೀ ಕೆ. ಹೆಚ್. ರಂಗನಾಥ್:- ಮಾನ್ಯ ಸದಸ್ಯರು ಏನು ಪ್ರಸ್ತಾಪ ಮಾಡುತ್ತಿದ್ದಾರೆ, ಈ ವಿಷಯ ಕಲಾಪ ಸಲಹಾ ಸಮಿತಿಯ ಮುಂದೆ ಬಂದಿದೆ. ಕಲಾಪ ಸಲಹಾ ಸಮಿತಿಯು ಸಮ್ಮತಿ ಕೊಟ್ಟು, ಆ ವರದಿಯನ್ನು ಸಭೆಯ ಮುಂದೆ ಕಾರ್ಯದರ್ಶಿಗಳು ಇಟ್ಟಿದ್ದಾರೆ ಮತ್ತು ಅದನ್ನು ನಾವೆಲ್ಲರೂ ಒಪ್ಪಿಕೊಂಡಿದ್ದೇವೆ. Where does the point of order arise in respect of that particular rule? How does that arise.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ:- ಮಾನ್ಯ ಅಧ್ಯಕ್ಷರೇ, ವಿರೋಧಪಕ್ಷದ ನಾಯಕರಾದಿಯಾಗಿ, ಸಲಹಾ ಸಮಿತಿಯಲ್ಲಿ ಒಪ್ಪಿದ್ದಾರೆ, ಜೊತೆಗೆ ಈ ಸದನವೂ ಒಪ್ಪಿದೆ.

ಶ್ರೀ ಕೆ. ಹೆಚ್. ರಂಗನಾಥ್:- ಮಾನ್ಯ ಅಧ್ಯಕ್ಷರೇ, ಕಲಾಪ ಸಲಹಾ ಸಮಿತಿಯು, ಈ ಸದನದ ಸಮಿತಿ. ಅದು ಕೊಟ್ಟಿರತಕ್ಕ ವರದಿಯನ್ನು ಈ ಸಭೆಯು ಒಪ್ಪಿದೆ. The hon'ble member never objected for that. Now how can he raise that point of order?

ಶ್ರೀ ಹೆಚ್. ಏಕಾಂತಯ್ಯ:- ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಏನೇ ಹೇಳಲಿ.

ಶ್ರೀ ಕೆ. ಹೆಚ್. ರಂಗನಾಥ್:- ಇದು ಮಂತ್ರಿಗಳು ಹೇಳುವುದಲ್ಲ. ಈ ಸದನ ಒಪ್ಪಿದೆ. ಈ ಸದನದ ತೀರ್ಮಾನವನ್ನು, ಕ್ರಿಯಾಲೋಪ ಎತ್ತುವ ಮುಖಾಂತರ ಪ್ರಶ್ನೆ ಮಾಡಬಹುದೇ, ಮಾಡುವುದಕ್ಕೆ ಬರುತ್ತದೆಯೇ. ಇದು ನನ್ನ ಪಾಯಿಂಟ್ ಆಫ್ ಆರ್ಡರ್.

ಶ್ರೀ ಹೆಚ್. ಏಕಾಂತಯ್ಯ:- ಅದನ್ನು ತೀರ್ಮಾನ ಮಾಡಲಿ, ನನ್ನದೂ ತೀರ್ಮಾನ ಮಾಡಲಿ. ಈಗ ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಹೇಳಿದಂತೆ ಅಲ್ಲ. ಬಿಜಿನೆಸ್ ಅಡ್ವೈಸರಿ ಕಮಿಟಿ ಯಾವುದು ತೀರ್ಮಾನ ಮಾಡಬಹುದು ಎಂದರೆ, ಯಾವ ನಿಯಮಗಳು ಇಲ್ಲಿ ಇವೆ ಆ ನಿಯಮಗಳಿಗೆ ಅನುಸಾರವಾಗಿ ಬಿಜಿನೆಸ್ ಅಡ್ವೈಸರಿ ಕಮಿಟಿ ತೀರ್ಮಾನ ಮಾಡಬಹುದು. ಯಾವುದಾದರೂ ಒಂದು ನಿಯಮಕ್ಕೆ ವಿರುದ್ಧವಾಗಿ ನಾವು ಏನಾದರೂ ಕಾರ್ಯಕಲಾಪಗಳನ್ನು ಗೊತ್ತು ಮಾಡುವುದಾದರೆ ಅಥವಾ ನಡವಳಿಕೆಗಳನ್ನು ಮಾಡುವುದಾದರೆ ಮೊಟ್ಟಮೊದಲು ನಾವು ಮಾಡಬೇಕಾದುದು ಆ ನಿಯಮಗಳ ಸಸ್‌ಪೆನ್‌ಷನ್. ಅದನ್ನು ಮಾಡಲಿಕ್ಕೆ ನಮ್ಮದೇ ಆದಂಥ ನಿಯಮಗಳು ಇವೆ. ಆದ್ದರಿಂದ ಮಾನ್ಯ ಹಿರಿಯ ಸಚಿವರಾದ ರಂಗನಾಥ್‌ರವರು ಏನು ಹೇಳಿದರು ಅದು ನಮ್ಮ ನಿಯಮಗಳಿಗೆ ವಿರುದ್ಧ. ಕೇವಲ ಅಡ್ವೈಸರಿ ಕಮಿಟಿಯಲ್ಲಿ ತೀರ್ಮಾನ ಆಗಿದೆಯೆಂದು ಹೇಳಿ ಅದನ್ನು ನಮ್ಮ ಮೇಲೆ ಹಾಕುವುದಕ್ಕೆ ಸಾಧ್ಯವಿಲ್ಲ. ನಾವು ಯಾವ ನಿಯಮಗಳನ್ನು ಮಾಡಿಕೊಂಡಿದ್ದೇವೆ ಎಂದರೆ ಬಜೆಟ್ ಬಗ್ಗೆ ಚರ್ಚೆ ಮಾಡುವುದಕ್ಕೆ 10 ದಿವಸ ಇರಲೇಬೇಕು ಎಂದು ನಿಯಮಗಳನ್ನು ಮಾಡಿಕೊಂಡಿದ್ದೇವೆ.

ಶ್ರೀ ಕೆ. ಹೆಚ್. ರಂಗನಾಥ್:- ನಾನು ಬರೀ ಬಿಜಿನೆಸ್ ಅಡ್ವೈಸರಿ ಕಮಿಟಿ ತೀರ್ಮಾನ ಎಂದು

ಹೇಳಲಿಲ್ಲ. ಆ ತೀರ್ಮಾನವನ್ನು ಕಾರ್ಯದರ್ಶಿಗಳು ಸಭೆಯ ಮುಂದೆ ಇಟ್ಟು ಅದಕ್ಕೆ ಈ ಸಭೆ ಒಪ್ಪಿಗೆ ಕೊಟ್ಟಿದೆ. Now the decision is not the decision of the Business Advisory Committee. The decision is the decision of the House.

ಶ್ರೀ ಹೆಚ್. ಏಕಾಂತಯ್ಯ:– ಮಾನ್ಯ ಅಧ್ಯಕ್ಷರೇ, ಅದು ಸಾಧ್ಯವಾಗುವುದಿಲ್ಲ. ಮಾನ್ಯ ಮಂತ್ರಿಗಳು ಹೇಳಿದ ಹಾಗೆ ಇಲ್ಲಿ ಬಿಜಿನೆಸ್ ಅಡ್ವೈಸರಿ ಕಮಿಟಿ ನಡವಳಿಕೆ ಏನು ಇದೆ ಅದನ್ನು ಸಭೆಯಲ್ಲಿ ಓದಿದ ತಕ್ಷಣ ಈ ಸಭೆ ಒಪ್ಪಿಕೊಂಡಂತೆ ಆದರೂ ಸಹ ಈ ನಿಯಮಾವಳಿಗೆ ವಿರುದ್ಧವಾಗಿ ಆಗಲಿಕ್ಕೆ ಸಾಧ್ಯವಿಲ್ಲ. ನಿಯಮಾವಳಿಗಳು ಏನಿವೆ ಆ ನಿಯಮವಳಿಗಳಲ್ಲಿ 10 ದಿವಸಗಳ ಕಾಲ ನಮಗೆ ಅವಕಾಶ ಇರಲೇಬೇಕು ಎಂಬ ನಿಯಮ ಇದೆ.

ಶ್ರೀ ಕೆ. ಹೆಚ್. ರಂಗನಾಥ್:– ಆ ನಿಯಮಾವಳಿಗಳನ್ನು ಪಾಸ್ ಮಾಡಿರತಕ್ಕಂಥಾದ್ದು ಈ ಸಭೆ. ಈ ನಿಯಮಾವಳಿಗಳು ಅದಕ್ಕೆ ಅನುಕೂಲವಾಗಿದೆಯೊ, ಪ್ರತಿಕೂಲವಾಗಿದೆಯೋ ಆ ಮಾತು ಬೇರೆ. ಬಿಜಿನೆಸ್ ಅಡ್ವೈಸರಿ ಕಮಿಟಿ ತೀರ್ಮಾನವನ್ನು ಕಾರ್ಯದರ್ಶಿಗಳು ಈ ಸಭೆಯ ಮುಂದೆ ಇಟ್ಟ ಮೇಲೆ whether we were alert or we were not alert is a different matter but the House has accepted now. We will have to start from that premises.

ಆ ಪ್ರಿಮಿಸಸ್‌ನಿಂದ ವಿಚಾರ ಮಾಡಬೇಕಾಗುತ್ತದೆ. ಆ ಪ್ರಿಮಿಸಸ್‌ನಿಂದ ವಿಚಾರ ಮಾಡುವಾಗ is there any point of order?

ಶ್ರೀ ಹೆಚ್. ಏಕಾಂತಯ್ಯ:– ಮಾನ್ಯ ಅಧ್ಯಕ್ಷರೇ, ಇಲ್ಲಿ ಪ್ರಶ್ನೆ ಬಂದಿರುವುದು ಕೇವಲ ಸಚಿವರು ಹೇಳಿದಂತೆ ಅಲ್ಲ. ನಮ್ಮ ನಿಯಮಾವಳಿಗಳು ಏನಿವೆ ಆ ನಿಯಮಾವಳಿಗಳನ್ನು ಬದಲಾವಣೆ ಮಾಡಬೇಕಾದರೆ ಅಥವಾ ಆ ನಿಯಮಾವಳಿಗಳನ್ನು ಸಧ್ಯಕ್ಕೆ ಅಮಾನತ್ತುಗೊಳಿಸುವುದಾದರೆ ಅದಕ್ಕೆ ತನ್ನದೇ ಆದಂತಹ ನಿಯಮ ಇದೆ. ಕೇವಲ ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಒಂದು ತೀರ್ಮಾನ ಆಯಿತು ಎಂದು ಆ ತೀರ್ಮಾನವನ್ನು ಓದುವುದರ ಮೂಲಕ ಇಲ್ಲಿರುವಂಥ ನಿಯಮಗಳನ್ನು ರದ್ದು ಮಾಡುವುದಕ್ಕೆ ಸಾಧ್ಯವಿಲ್ಲ, Suspension of the Rule ಏನು ಹೇಳಿದೆ, ಅದು ಕೇವಲ ಅಧ್ಯಕ್ಷರು ಅಥವಾ ಕಾರ್ಯದರ್ಶಿಗಳು ಬುಲೆಟಿನ್ ಓದುವುದರ ಮುಖಾಂತರ ಮಾಡಲಿಕ್ಕೆ ಸಾಧ್ಯ ಇದೆಯೇ ? ಆ ರೀತಿ ನಿಯಮಗಳಲ್ಲಿ ಏನಾದರೂ ಇದೆಯೇ ? ಅಂತಹ ನಿಯಮಗಳು ಇಲ್ಲ. ಅದಕ್ಕೆ ಬದಲಾಗಿ ಏನು ನಿಯಮ ಇದೆಯೆಂದರೆ ಯಾವುದಾದರೊಂದು ನಿಯಮವನ್ನು ಅಥವಾ ರೂಲನ್ನು ನಾವು ಈ ಸಂಬಂಧವಾಗಿ ಆಚರಣೆಗೆ ತರಬಾರದು, ವಿನಾಯಿತಿ ಬೇಕು ಎಂದರೆ ಅದಕ್ಕೆ ಪ್ರತ್ಯೇಕವಾದ ನಡವಳಿಕೆ ಆಗಬೇಕೆಂದು ನಮ್ಮ ಪುಸ್ತಕಗಳಲ್ಲಿ ಮಾಡಿಕೊಂಡಿದ್ದೇವೆ. ಅಂತಹ ನಿಯಮಗಳನ್ನು ನಾವು ಅಮಾನತ್ತು ಮಾಡಬಹುದೇ ಹೊರತಾಗಿ ಇಲ್ಲದಿದ್ದರೆ ಸಾಧ್ಯವಿಲ್ಲ. ಆದ್ದರಿಂದ ನನ್ನ ವಿಧಿಬಿಂದು ಏನೆಂದರೆ, ಇವತ್ತಿನ ದಿವಸ ನಾವು ಮಾಡಿಕೊಂಡಿರುವ ನಿಯಮಗಳ ಪ್ರಕಾರ ಮತ್ತು ಎಲ್ಲಕ್ಕಿಂತ ಹೆಚ್ಚಾಗಿ ಸುಮಾರು 8735 ಕೋಟಿ ರೂಪಾಯಿಗಳ ಆಯವ್ಯಯವನ್ನು ಇವತ್ತಿನ ದಿವಸ ಚರ್ಚೆ ಮಾಡದೆ, ಸಾಕಷ್ಟು ಸಮಯ ಇಲ್ಲದೆ ಪಾಸ್ ಮಾಡುತ್ತೇವೆ ಎಂದು ಹೇಳಿದರೆ ಅದಕ್ಕಿಂತ ದೊಡ್ಡ ಅಪಚಾರ ಬೇರೆ ಏನೂ ಇಲ್ಲ, ಈ ದೇಶದ ಜನತೆಗೆ ಆಗಲಿ ಅಥವಾ ಯಾವುದೇ ದೃಷ್ಟಿಯಿಂದ ಸರ್ಕಾರ ತೀರ್ಮಾನ ತೆಗೆದುಕೊಳ್ಳಬೇಕಾದರೆ ಸಹ ಸುಮಾರು 62 ಬೇಡಿಕೆಗಳ ಬಗ್ಗೆ ಚರ್ಚೆ ಮಾಡುವುದೇ, ಬೇಡವೇ ? ಅದಕ್ಕೋಸ್ಕರ ನಾವೇ ನಿಯಮಗಳನ್ನು ಮಾಡಿಕೊಂಡಿದ್ದೇವೆ. ಸರ್ಕಾರ ಏನೇ ಹೇಳಲಿ ಆ ನಿಯಮಗಳ ಪ್ರಕಾರ ಕನಿಷ್ಟಪಕ್ಷ 10 ದಿವಸಗಳ ಅವಕಾಶವನ್ನು ಕೊಡಲೇಬೇಕು. ಅದಕ್ಕಿಂತ ಕಡಿಮೆ ಇಲ್ಲದಂತೆ ಬೇಕಾದರೆ ಜಾಸ್ತಿ ಮಾಡಬಹುದು. ಆದರೆ ಇಲ್ಲಿ ಅದು ಆಗಿಲ್ಲ. ಅದಕ್ಕೆ ಬದಲಾಗಿ 5 ದಿವಸಕ್ಕೆ ಬಂದಿದೆ. ಹಾಗಾದರೆ ಒಂದೇ ದಿವಸ 23ನೇ ತಾರೀಖು ಎಲ್ಲಾ ಮಾಡಿಕೊಂಡರೆ

ಆಯಿತಲ್ಲ. ಹಾಗಿದ್ದರೆ ಈ ನಿಯಮ ಏತಕ್ಕೆ ಬೇಕು ? ಆ ದಿಶೆಯಲ್ಲಿ ನಾನು ಹೇಳುತ್ತಿದ್ದೇನೆ. ನಿಯಮ 177ನ್ನು ನಾನು ಓದುತ್ತೇನೆ.

"The Speaker shall, in consultation with the Leader of the House allot so many days, not being less than ten days, as may be compatible with the public interest for the discussion and voting of the demands for grants."

ಹಾಗಾದರೆ ಇದರಲ್ಲಿ ಸಾರ್ವಜನಿಕ ಹಿತ ಏನೂ ಇಲ್ಲವೇ ? ಸಾರ್ವಜನಿಕ ಹಿತ ಎಂದರೆ ಏನು ? ವಿಧಾನಸಭೆಯಲ್ಲಿ ಏನು ಬೇಡಿಕೆಗಳು ಬರುತ್ತವೆ ಕನಿಷ್ಟಪಕ್ಷ 10 ದಿವಸಕ್ಕೆ ಕಡಿಮೆ ಇಲ್ಲದಂತೆ ನಾವು ಚರ್ಚೆ ಮಾಡಬೇಕು, ಆ ಚರ್ಚೆ ಸಮಯದಲ್ಲಿ ಸಂಬಂಧಪಟ್ಟ ಇಲಾಖೆಗಳ ಮಂತ್ರಿಗಳು ಅಥವಾ ಆ ಒಂದು ಬೇಡಿಕೆಗಳ ಬಗ್ಗೆ ಏನು ಕಾರ್ಯಕ್ರಮಗಳಿವೆ. ಅವು ಎಷ್ಟರಮಟ್ಟಿಗೆ ಉಪಯೋಗ ಆಗಿದೆ ಅಥವಾ ಇಲ್ಲ ಎನ್ನುವುದರ ಬಗ್ಗೆ ಚರ್ಚೆ ಮಾಡಲಿಕ್ಕೆ ಅವಕಾಶ ಕೊಡಬೇಕು ಎಂಬ ದೃಷ್ಟಿಯಿಂದ ಇಂತಹ ಒಂದು ನಿಯಮ ಮಾಡಿಕೊಂಡಿದ್ದೇವೆ. ಇದೆಲ್ಲವನ್ನೂ ಬಿಟ್ಟು ನಾವು 3 ದಿವಸ, 2 ದಿವಸ ಇಟ್ಟು ಈ ಬೇಡಿಕೆಗಳನ್ನು ಒಪ್ಪಲಿಲ್ಲ ಎಂದರೆ ಅಂತಹ ಚರ್ಚೆ ಮಾಡುವುದರಲ್ಲಿ ಏನಾದರೂ ಅರ್ಥ ಇದೆಯೇ ? ಆದ್ದರಿಂದ ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಕನಿಷ್ಟಪಕ್ಷ 10 ದಿವಸಕ್ಕೆ ಕಡಿಮೆ ಇಲ್ಲದಂತೆ ತಾವು ಚರ್ಚೆ ಮಾಡಲು ಅವಕಾಶ ಮಾಡಿಕೊಡಬೇಕು ಮತ್ತು ಈ ಬಗ್ಗೆ ತಮ್ಮ ತೀರ್ಮಾನ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ವೈ.ಕೆ. ರಾಮಯ್ಯ:– ಈಗ ಹತ್ತು ದಿವಸಗಳಿಗೆ ಕಡಿಮೆ ಇಲ್ಲದೆ ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದು ಸಭೆಯ ನಿಯಮವಾಗಿದೆ. ಮಾನ್ಯ ಅಧ್ಯಕ್ಷರಲ್ಲಿ ನನ್ನ ನೇರವಾದ ಪ್ರಶ್ನೆ ಇಷ್ಟೇ, The Business Advisory Committee cannot go against the provisions of this.

ಶ್ರೀ ಕೆ. ಹೆಚ್. ರಂಗನಾಥ್:– ಬಿಎಸಿಯವರ ರಿಪೋರ್ಟ್‌ಗೆ ಈ ಸಭೆಯು ಒಪ್ಪಿಗೆ ಕೊಟ್ಟಿದೆ. ಬಿಎಸಿಯವರು ಕಡಿಮೆ ಮಾಡಿರಬಹುದು. ಆದರೆ ಆ ಒಂದು ತೀರ್ಮಾನವನ್ನು ಸಭೆಯ ಮುಂದೆ ಕಾರ್ಯದರ್ಶಿಯವರು ಇಡುತ್ತಾರೆ. ಅದಕ್ಕೆ ಪ್ರತ್ಯೇಕವಾದಂಥ ಚಾಪ್ಟರ್ ಇದೆ. ಅದನ್ನು ದಯಮಾಡಿ ನೋಡಬೇಕು. ಆದರ ಪ್ರಕಾರ ಕಾರ್ಯದರ್ಶಿಯವರು ಆ ತೀರ್ಮಾನವನ್ನು ಸಭೆಯ ಮುಂದಿಟ್ಟಿದ್ದಾರೆ. ಸಭೆಯು ಅದಕ್ಕೆ ಒಪ್ಪಿಗೆ ಕೊಟ್ಟಿದೆ. Supposing for arguments sake it is less than 10 days, the House has accepted that. ಆದ್ದರಿಂದ ಬಿಎಸಿಯ ಮೇಲೆ ಆಪಾದನೆ ಮಾಡತಕ್ಕಂಥಾದ್ದು ಅಲ್ಲ. ಬಿಎಸಿಯಲ್ಲಿ ಎಲ್ಲಾ ಪಕ್ಷಗಳ ಸದಸ್ಯರೂ ಇದ್ದಾರೆ. ಎಲ್ಲಾ ಪಕ್ಷಗಳ ಸದಸ್ಯರೂ ಅದರಲ್ಲಿ ಭಾಗಿಯಾಗಿದ್ದಾರೆ.

ಶ್ರೀ ವೈ.ಕೆ. ರಾಮಯ್ಯ:– ಮಾನ್ಯರು ತಮ್ಮ ಸ್ಥಾನದಲ್ಲಿ ಕುಳಿತು ಕೆಲಸ ಮಾಡಿದಂಥ ಶಕ್ತರು ಇದ್ದಾರೆ. ನನ್ನ ಪ್ರಶ್ನೆ ಏನೆಂದರೆ, ಒಂದು ನಿಯಮವನ್ನು ನಾವೇ ಮಾಡಿಕೊಂಡಿದ್ದೇವೆ. ಅಧ್ಯಕ್ಷರಾಗಲೀ, ಸದಸ್ಯರಾಗಲೀ, ಯಾವುದೋ ಒಂದು ಸಮಿತಿಯಾಗಲೀ ಆ ಒಂದು ನಿಯಮಕ್ಕೆ ವಿರುದ್ಧವಾಗಿ ಒಂದು ತೀರ್ಮಾನವನ್ನು ತೆಗೆದುಕೊಳ್ಳಲು ಸಾಧ್ಯವೇ ?

ಶ್ರೀ ಕೆ. ಹೆಚ್. ರಂಗನಾಥ್:– ಯಾವುದೋ ಒಂದು ಸಮಿತಿಯಲ್ಲ ಈ ಸದನ ಸಮಿತಿಯ ಕಾರ್ಯಕಲಾಪಗಳು ಕಾರ್ಯದರ್ಶಿಯ ಮುಖಾಂತರ, it is he, the Secretary, that places the Business Advisory Committee Report before the House.

ಅದನ್ನು ಇಟ್ಟಮೇಲೆ, ಸದನ ಒಪ್ಪಿಗೆ ಕೊಟ್ಟ ಮೇಲೆ ಮತ್ತೆ ಪುನಃ ನಾವು ಬಿಎಸಿಯ ಮೇಲೆ ಆಪಾದನೆ ಮಾಡತಕ್ಕಂಥಾದ್ದು ಸಾಧ್ಯವಾಗುವುದಿಲ್ಲ.

ಶ್ರೀ ವೈ.ಕೆ. ರಾಮಯ್ಯ:- ಮಾನ್ಯ ಅಧ್ಯಕ್ಷರೇ, my interest is only academic. ನಾವು ಒಂದು ನಿಯಮವನ್ನು ಮಾಡಿಕೊಂಡಿದ್ದೇವೆ. ಆ ನಿಯಮದ ವಿರುದ್ಧವಾಗಿ ಈ ಸದನದ ಅಧ್ಯಕ್ಷರಾಗಲೀ, ಸದಸ್ಯರಾಗಲಿ ಸರಕಾರವಾಗಲೀ, ಯಾವುದಾದರೂ ಸಮಿತಿಯಾಗಲೀ, ತೀರ್ಮಾನವನ್ನು ತೆಗೆದುಕೊಳ್ಳಲು ಸಾಧ್ಯವೆ ? ಅಂಥ ಒಂದು ನಿಯಮವನ್ನು ಮುರಿಯುವ ಸಾಧ್ಯತೆ ನನ್ನ ಪ್ರಕಾರದಲ್ಲಿ ಯಾವ ಸಂದರ್ಭದಲ್ಲಿ ಬರುತ್ತದೆ ಎಂದರೆ, ಸಾರ್ವಜನಿಕ ಹಿತದೃಷ್ಟಿಯಿಂದ ಮಾತ್ರ. ಹತ್ತು ದಿವಸಗಳ ಕಾಲ ಈ ರಾಜ್ಯದ ಸಮಗ್ರ ಅಭಿವೃದ್ಧಿಗಾಗಿ ಮಾಡತಕ್ಕಂಥ ಕೆಲಸಗಳನ್ನು ವ್ಯಾಪಕವಾಗಿ ಚರ್ಚೆ ಮಾಡತಕ್ಕಂಥ ಕಾಲವನ್ನು ಕಡಿಮೆ ಮಾಡುವಂಥ ಪರಿಸ್ಥಿತಿಯು ಯಾವುದಿದೆ ಇದು ದೇಶದ ಒಳಿತಿಗಾಗಿ ಮಾಡುತ್ತಿರುವುದೆ ? ಸಾರ್ವಜನಿಕ ಹಿತದೃಷ್ಟಿಯಿಂದ ಮಾಡುತ್ತಿರುವುದೆ ? Whether anybody can go against these rules? If one can go, one can go only when it serves the public purpose.

ಈಗ ನೀವು ಕಾಲವನ್ನು ಕಡಿಮೆ ಮಾಡುತ್ತಾ ಇರುವುದು ಜನತೆಯ ಹಿತದೃಷ್ಟಿಯಿಂದ ಒಳ್ಳೆಯದೆ ? ಈ ಸದನದ ನಿಯಮವನ್ನು ಯಾರಾದರೂ ಮುರಿಯುವುದಕ್ಕೆ ಸಾಧ್ಯವೆ ? ರಾಜ್ಯದ ಜನತೆಯ ಹಿತದೃಷ್ಟಿಯಿಂದ ಕಾಲವನ್ನು ಕಡಿಮೆ ಮಾಡುವುದು ಒಳ್ಳೆಯದು ಎನ್ನುವುದಾದರೆ I am prepared to leave these rules. ನಮಗೆ ಕಾನೂನು ಬೇಡ. ಈ ರಾಜ್ಯದ ಹಿತದೃಷ್ಟಿಯಿಂದ ಚರ್ಚೆ ಮಾಡುವ ಕಾಲವನ್ನು ಕಡಿಮೆ ಮಾಡಬೇಕು ಎನ್ನುವ ತೀರ್ಮಾನವನ್ನು ತಾವುಗಳು ಹೇಳುವುದಾದರೆ ನನ್ನ ಯಾವ ವಾದವೂ ಇಲ್ಲ.

ಶ್ರೀ ಹೆಚ್. ಏಕಾಂತಯ್ಯ:- ಮಾನ್ಯ ಅಧ್ಯಕ್ಷರೇ, ಬಿಎಸಿಯ ತೀರ್ಮಾನವನ್ನು ಈ ಸಭೆಯಲ್ಲಿ ಓದುವುದರ ಮುಖಾಂತರ ಸಭೆಯ ಒಪ್ಪಿಗೆಯಾಗಿದೆ ಎಂದು ಭಾವಿಸಿದ್ದರೂ ಕೂಡ....

ಶ್ರೀ ಕೆ. ಹೆಚ್. ರಂಗನಾಥ್:- ತಾವು ಇಡೀ ಸದನಕ್ಕೆ ಆಪಾದನೆ ಮಾಡತಕ್ಕಂಥ ರೀತಿಯಲ್ಲಿ ಮಾತನಾಡುವುದು ಸರಿ ಹೋಗುವುದಿಲ್ಲ. ಇದು ಕಲಾಪಗಳಲ್ಲಿ ಹೋಗಿರುತ್ತದೆ. ಸೆಕ್ರೆಟರಿಗಳು ಅದನ್ನು ಸಭೆಯಲ್ಲಿ ಓದಿದ್ದಾರೆ. ತದನಂತರ ಅದು ಒಪ್ಪಿಗೆಯಾಗಿದೆ. When nobody objects to it, it means the House has accepted it. ಆದ್ದರಿಂದ ಭಾವನೆ ಮಾಡತಕ್ಕಂಥ ಪ್ರಶ್ನೆಯಲ್ಲ. It is a fact. Everything is a fact.

ಶ್ರೀ ಹೆಚ್. ಏಕಾಂತಯ್ಯ:- ತಮ್ಮ ಮಾತನ್ನು ಒಪ್ಪಿಕೊಂಡರೂ ಸಹ ಈ ಸಭೆಯಲ್ಲಿ ತಾವು ಬಿಎಸಿಯ ತೀರ್ಮಾನವನ್ನು ಓದುತ್ತೀರಿ...

ಶ್ರೀ ಎಂ. ವೀರಪ್ಪಮೊಯಿಲಿ:- ಸನ್ಮಾನ್ಯ ಅಧ್ಯಕ್ಷರೇ, ಇವೊತ್ತು ಸನ್ಮಾನ್ಯ ಉಪಮುಖ್ಯ ಮಂತ್ರಿಯವರ ಡಿಮ್ಯಾಂಡ್ ಇದೆ. ಈಗ ಟೋಟಲ್ ಡಿಮ್ಯಾಂಡನ್ನು ಮೂವ್ ಮಾಡುತ್ತಾ ಇಲ್ಲ. ಪಾಸ್ ಮಾಡುತ್ತಾ ಇಲ್ಲ. "The House, in consultation with the Speaker, should allot not less than..." ಎಂದು ಇರತಕ್ಕಂಥಾದ್ದು ಇದು ಒಂದು ಹೆಜ್ಜೆ ಮುಂದೆ ಹೋಗಿ ಬಿಎಸಿಯಲ್ಲಿ ನಾವು ನಿರ್ಣಯ ಮಾಡಿದ್ದೇವೆ, ಅದು ಈ ಸದನಕ್ಕೆ ಬಂದಿದೆ, ಸನ್ಮಾನ್ಯ ಉಪಮುಖ್ಯ ಮಂತ್ರಿಯವರು ಕೂಡ ಇದರ ಬಗ್ಗೆ ಹೇಳಿದ್ದಾರೆ. ತಾವು ಈಗ ಟೆಕ್ನಿಕಲ್ ಆಗಿ ಹೋಗುವುದಾದರೂ ಕೂಡ I have a technical objection for your technical objection. The Hon'ble Deputy Chief Minister is moving his demands.

ಡಿಮ್ಯಾಂಡ್‌ಗೆ 10 ದಿವಸಗಳ ಕಾಲ ಕೊಡಬೇಕೆಂದೇನೂ ಇಲ್ಲವಲ್ಲ! Is there anything like that? Let us argue on a point. ಈಗ ಈ ಡಿಮ್ಯಾಂಡಿಗೆ 10 ದಿವಸ ಅವಕಾಶ ಕೊಡಬೇಕು ಎಂದು ಏನಾದರೂ ಇದೆಯೇ ?

With regard to the other ten days, let us go back to the Business Advisory Committee and ask them to advise and allot. ನೀವು ಹೇಳುವಂಥಾದ್ದು ಒಂದು ಲೆಕ್ಕದಲ್ಲಿ Under the rules this is provided but the Business Advisory Committee has already taken a decision on that. In so far as the Demand before the House which is sought to be moved by the Hon'ble Deputy Chief Minister, is concerned, I don't think this point of order will survive because it is only for the totality of the demands not less than 10 days ಎಂದು ಇರತಕ್ಕಂಥಾದ್ದು ಈ ಸನ್ಮಾನ್ಯ ಉಪ ಮುಖ್ಯ ಮಂತ್ರಿಗಳು ಮೂವ್ ಮಾಡತಕ್ಕಂಥಾದ್ದು ಇದಕ್ಕೆ ಸೀಮಿತವಾದರೆ I think we have allotted one or two days for this Demand. It is a question of one or two days for this Demand.

ಈಗ ಮೂವ್ ಮಾಡತಕ್ಕಂಥಾದ್ದಕ್ಕೆ ಅಡ್ಡಿ ಬರಲಿಕ್ಕೆ ಯಾವುದೇ ಪಾಯಿಂಟ್ ಆಫ್ ಆರ್ಡರ್ ಕೂಡ ಎದುರು ಬರುವುದಿಲ್ಲ. ಉಳಿದಂತೆ ಅವರ ವ್ಯಾಪಕವಾದಂಥ ಪ್ರಶ್ನೆ ಏನಿದೆ, that is always available for the Hon'ble Speaker to call the Business Advisory Committee and discuss.

ಶ್ರೀ ಹೆಚ್. ಏಕಾಂತಯ್ಯ:– ನನ್ನ ಆಕ್ಷೇಪ ಅಷ್ಟೇ ಅಲ್ಲ. ನನ್ನ ಆಕ್ಷೇಪವು ಇನ್ನೂ ಮುಂದಿದೆ. ಮಾನ್ಯ ಹಿರಿಯ ಸಚಿವರಾದಂಥ ರಂಗನಾಥ್‌ರವರು ಬಿಎಸಿಯ ತೀರ್ಮಾನವನ್ನು ಇಲ್ಲಿ ಓದಿದ್ದೇವೆ, ಈ ಸಭೆಯು ಒಪ್ಪಿಗೆಯಾಗಿದೆ, ಆದ್ದರಿಂದ ಈ ಒಂದು ಆಕ್ಷೇಪವು ಬರುವುದಿಲ್ಲ ಎಂದು ಹೇಳಿದರು. ಆದರೆ ಈ ಸಭೆಯು ಒಪ್ಪಿಗೆ ಬಂದರೂ ಸಹ, ತೀರ್ಮಾನವನ್ನು ಓದಿದ್ದರೂ ಸಹ, ಓದುವ ಮುಖಾಂತರ ತಾವು ಸಭೆಯ ಒಪ್ಪಿಗೆಯನ್ನು ಪಡೆದಿದ್ದೇವೆ ಎಂದು ಹೇಳಿದ್ದರೂ ಸಹ, ಅದರಿಂದ ಈ ನಿಯಮವನ್ನು ಸಸ್ಪೆಂಡ್ ಮಾಡಲು ಸಾಧ್ಯವಿಲ್ಲ. ಅದಕ್ಕಿಂತ ಹೆಚ್ಚಾಗಿ ಬಿಎಸಿಯಲ್ಲಿ ಏನು ತೀರ್ಮಾನವಾಯಿತು. ಆ ತೀರ್ಮಾನವಾದಂಥ 9 ದಿವಸಗಳೂ ಸಹ ನೀವು, ನಮಗೆ ಅವಕಾಶವನ್ನು ಕೊಟ್ಟಿಲ್ಲ. ಬಿಎಸಿಯ ತೀರ್ಮಾನವನ್ನು ಏನು ಈ ಸಭೆಯು ಒಪ್ಪಿತ್ತು, ಅದಕ್ಕೆ ವಿರುದ್ಧವಾಗಿ ಇವೊತ್ತಿನ ದಿವಸ 4 ದಿವಸಗಳನ್ನು ಕಳೆದಿದ್ದೀರಲ್ಲ ? ತಾವುಗಳು ಹೇಳಿದಂಥ ಮಾತುಗಳನ್ನು ಒಪ್ಪಿಕೊಳ್ಳೋಣ, ಬಿಎಸಿಯಲ್ಲಿ 9 ದಿವಸಗಳು ಇಡಬೇಕೆಂದು ತಾವೇ ಹೇಳಿದ್ದೀರಿ ? ಹಾಗೆ ಹೇಳಿಯೂ ಕೂಡ 9 ದಿವಸ ನೀವು ಇಟ್ಟಿಲ್ಲ ? ಹಾಗಾದರೆ ಬಿಎಸಿಯ ತೀರ್ಮಾನವನ್ನು ಉಲ್ಲಂಘನೆಯನ್ನು ಮಾಡಿಲ್ಲವೆ ? ಹೀಗೆ ಉಲ್ಲಂಘನೆ ಮಾಡುವ ಅಧಿಕಾರ ಯಾರಿಗೆ ಇದೆ ? ನಾನು ಅಧ್ಯಕ್ಷರ ಮೂಲಕ ಸಭೆಯ ಗಮನಕ್ಕೆ ತರುತ್ತಾ ಇದ್ದೇನೆ.

ಶ್ರೀ ಕೆ. ಹೆಚ್. ರಂಗನಾಥ್:– ನಮ್ಮ ಡಿಮ್ಯಾಂಡ್ಸ್ ಮೂವ್ ಆಗಬೇಕಾಗಿದ್ದುದು 10ನೇ ತಾರೀಖು. 10ನೇ ತಾರೀಖನ್ನು ಲೆಕ್ಕ ಹಾಕಿಕೊಂಡರೆ 177ನೇ ರೂಲ್ ಎಲ್ಲಿ ವಯೊಲೈಟ್ ಆಗಿದೆ ? ತಮ್ಮ ಪಾಯಿಂಟ್ ಆಫ್ ಆರ್ಡರನ್ನು ಅಧ್ಯಕ್ಷರಿಗೆ ಮಾಡುತ್ತಾ ಇದ್ದೀರಿ. ಆದರೆ ನಾವು, ಈ ಸದನದಲ್ಲಿ ಮೂವ್ ಮಾಡುವುದಕ್ಕೆ ಅವಕಾಶ ಕೊಡದಿದ್ದರೆ ?.......

How can you, say "the decision of the Business Advisory

Committee, the decision of the House is wrong and it is not according to the rule" ? ಎಂದು ಹೇಗೆ ಹೇಳುತ್ತೀರಿ ?

ಶ್ರೀ ಎಂ. ವೀರಪ್ಪಮೊಯಿಲಿ:– ಈಗ The question is, the Business Advisory Committee, as a matter of fact, allowed more than 10 days. So it has been allotted. Whether we could conform to it or not is a question which is always debatable. But the question is, the Business Advisory Committee has allotted 10 days or not. It has allotted.

ಶ್ರೀ ಹೆಚ್. ಏಕಾಂತಯ್ಯ:– ನನ್ನ ಪ್ರಶ್ನೆಗೆ ದಯಮಾಡಿ ಉತ್ತರ ಕೊಡಿ. ಮಾನ್ಯ ಮುಖ್ಯ ಮಂತ್ರಿಯವರು ಬಿಎಸಿಯವರು 10 ದಿವಸಗಳನ್ನು ಕೊಟ್ಟಿದ್ದಾರೆ ಎಂದು ಹೇಳುತ್ತಿದ್ದಾರೆ. ಆದರೆ ಒಟ್ಟು 9 ದಿವಸಗಳು ಮಾತ್ರ ಆಗುತ್ತವೆ.

(ಗೊಂದಲ)

12.40 ಪಿ. ಎಂ.

ಶ್ರೀ ಬಿ.ಹೆಚ್. ಬನ್ನಿಕೋಡ್:– ಇವತ್ತು ತಾಂತ್ರಿಕ ಕಾರಣಗಳನ್ನು ಮುಂದಿಟ್ಟು ಸರ್ಕಾರದ ವೈಫಲ್ಯತೆಗಳನ್ನು ಚರ್ಚೆ ಮಾಡುವುದಕ್ಕೆ ಅವಕಾಶವನ್ನು ಕೊಡದಂಥದ್ದನ್ನು ನೋಡಿದರೆ ಬಹುತೇಕ ಸರ್ಕಾರ ತಾಂತ್ರಿಕ ಕಾರಣಗಳನ್ನು ಕೊಡುತ್ತಿದೆ. ಚರ್ಚೆಗೆ ಅವಕಾಶವನ್ನು ಕೊಟ್ಟು ಜನತೆಗೆ ಇಲ್ಲಿರತಕ್ಕಂಥ ಲೋಪದೋಷಗಳ ಬಗ್ಗೆ, ಅಭಿವೃದ್ಧಿ ಕಾರ್ಯಗಳ ಬಗ್ಗೆ ಚರ್ಚೆ ಮಾಡಲಿಕ್ಕೆ ಅವಕಾಶವನ್ನು ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್.ಹೆಚ್. ಕೌಜಲಗಿ:– ಇವತ್ತು the word used is 'shall' 'ಶೇ' ವರ್ಡಿಂಗ್ ಉಪಯೋಗಿಸಿದ ನಂತರ ಅವರು ಕಡಿಮೆ ಮಾಡಲಿಕ್ಕೆ ಬರುವುದಿಲ್ಲ. ಮೇ ಎಂದು ಇದ್ದರೆ ಅವರು ಹೇಳಿದ್ದುದು ಕರೆಕ್ಟ್, ನಾನು ಒಪ್ಪುತ್ತೇನೆ. "Not less than 10 days" ಎಂದು ಇದ್ದಾಗ the word used "shal" ಇದೆ. ಆದಕಾರಣ ತಾವು ಕಡಿಮೆ ಮಾಡಲಿಕ್ಕೆ ಬರುವುದಿಲ್ಲ. ಆದಕಾರಣ 10 ದಿವಸ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಎಂ. ಕೃಷ್ಣ:– ನಾನು ಈ ವಿಚಾರವನ್ನು ಹೇಳಲೆ ನನ್ನ ಡಿಮ್ಯಾಂಡ್ ಮೂವ್ ಮಾಡಲೇ.

ಅಧ್ಯಕ್ಷರು:– ತಾವು ಡಿಮ್ಯಾಂಡ್ ಮೂವ್ ಮಾಡಿ. I reserve my ruling over this matter.

SRI H. EKANTHAIAH:– It cannot be reserved.

SRI S.M. KRISHNA:– Mr. Speaker, if I can venture to help you in order to give your ruling, Rule 239, Constitution of the Business Advisory Committee is not questioned; the term of the Committee is not questioned; the functions of the Committee is not questioned. Now, the Report of the Committee. That is where we come.

SRI H. EKANTHAIAH:– I am not questioning that also.

SRI S.M. KRISHNA:– If you are not questioning all these, you cannot

question this also. Rule 244 reads: "Allocation of Time Order: The allocation of time in respect of Bills and other business as approved by the House shall take effect as if it were an order of the House." As my senior colleague Shri. Ranganath has told, the House has accepted the recommendation of the Business Advisory Committee Report as presented to this House by the Secretary. "The allocation of time in respect of Bills and other business as approved by the House shall take effect as if it were an order of the House." This is the order of the House which you and I will have to submit ourselves to.

ಶ್ರೀ ಹೆಚ್. ಏಕಾಂತಯ್ಯ:- ಮಾನ್ಯ ಅಧ್ಯಕ್ಷರೆ, ನಾವು ತಮ್ಮ ಗಮನಕ್ಕೆ ತಂದಿದ್ದುದು ಏನು ಅಂದರೆ, ಆ ರೀತಿ ಒಂದು ರೂಲನ್ನು ಸಸ್ಪೆಂಡ್ ಮಾಡಲಿಕ್ಕೆ ಅವಕಾಶ ಇಲ್ಲ. ಅದಕ್ಕೆ ಬದಲಾಗಿ ಒಂದು ನಿಯಮವನ್ನು ಮಾಡಿಕೊಂಡಿದ್ದೇವೆ. You should move a resolution. Only acceptance of that could be done and nothing else.

ಶ್ರೀ ಸಿ. ಬೈರೇಗೌಡ:- ಮಾನ್ಯ ಉಪಮುಖ್ಯಮಂತ್ರಿಗಳು ಮತ್ತು ಮಾನ್ಯ ರಂಗನಾಥ್‌ರವರು ಬಿಜಿನೆಸ್ ಅಡ್ವೈಸರಿ ಕಮಿಟಿ ರಿಪೋರ್ಟನ್ನು ಸದನ ಒಪ್ಪಿಕೊಂಡಿದೆ ಎನ್ನುವ ಮಾತನ್ನು ಹೇಳಿದ್ದಾರೆ. ಇಲ್ಲಿ ನಮಗೆ ಅಭ್ಯಾಸ ಏನಾಗಿದೆ ಅಂದರೆ, ಬಿಜಿನೆಸ್ ಅಡ್ವೈಸರಿ ಕಮಿಟಿಯ ರಿಪೋರ್ಟನ್ನು ಅಧ್ಯಕ್ಷರು ಸಭೆಯ ಗಮನಕ್ಕೆ ತರುತ್ತಾರೆ. ಇಂತಹ ದಿವಸ ಬಿಜಿನೆಸ್ ಅಡ್ವೈಸರಿ ಕಮಿಟಿ ಸೇರಿತ್ತು, ಈ ರೀತಿ ತೀರ್ಮಾನ ತೆಗೆದುಕೊಂಡಿದೆ ಎನ್ನುವುದನ್ನು For the information of the House the Hon'ble Speaker will read it. That does not mean that the House has accepted. ಸದನ ಒಪ್ಪಬೇಕಾಗಿದ್ದರೆ It should come before the House in the form of a Motion "That this House agrees with the report of the Business Advisory Committee". It must come in the form of a Motion. ಅದು ಆಗುತ್ತಾ ಇಲ್ಲ. till then it is for the....

SRI K.H. RANGANATH:- The Hon'ble Member is not correct. The accepted convention, and the accepted practice that is there, we will have to follow.

SRI C. BYRE GOWDA:- The information has been passed on by Hon'ble Speaker is for the information of the House only. It cannot be a decision of the House.

ಶ್ರೀ ಎಂ.ವಿ. ವೆಂಕಟಪ್ಪ:- ಆಗ ಇವರು ಬೇಕಾದರೆ ಅಬ್ಜೆಕ್ಷನ್ ರೈಸ್ ಮಾಡಬಹುದಾಗಿತ್ತು.

ಶ್ರೀ ಸಿ. ಬೈರೇಗೌಡ:- ಇವತ್ತು ಬೇರೆ ಬೇರೆ ನಮ್ಮ ಸದನದ ಸಮಿತಿಗಳಿವೆ. ಪಬ್ಲಿಕ್ ಅಕೌಂಟ್ಸ್ ಕಮಿಟಿ ಇದೆ, ಪಬ್ಲಿಕ್ ಅಂಡರ್‌ಟೇಕಿಂಗ್ಸ್ ಕಮಿಟಿ ಇದೆ. ಅಲ್ಲಿ ಯಾರು ಅಧ್ಯಕ್ಷರು ಆಗಿರುತ್ತಾರೋ they place the Report before the House. Is it binding on the Government?

SRI K.H. RANGANATH:- Any Member of the House, for the benefit of the House, can raise an objection. He can press for his objection. That can be placed before the House. It can be ruled out also. The House can reject it also.

ಒಂದು ವೇಳೆ ಹೌಸ್ ಅಕ್ಸೆಪ್ಟ್ ಮಾಡಿದ್ದರೆ ಮತ್ತೊಂದು ಸಾರಿ ಮಾಡುವ ಹಕ್ಕು ಸಭೆಗೆ ಇದೆ. ಮಾನ್ಯ ಸದಸ್ಯರಾದ ಏಕಾಂತಯ್ಯನವರು ಹೇಳುತ್ತಿದ್ದರೆ ಮತ್ತೆ ಈ ಸಭೆ ಪುನರ್ .ಪರಿಶೀಲನೆ ಮಾಡಬಹುದಾಗಿತ್ತು.

ಶ್ರೀ ಬಿ.ಹೆಚ್. ಬನ್ನಿಕೋಡ್:- ಯಾವುದೇ ಕಾರಣಕ್ಕಾಗಿ ಅವಕಾಶವನ್ನು ತಪ್ಪಿಸಬಾರದು. ಮರುಪರಿಶೀಲನೆ ಮಾಡಿ ಅವಕಾಶವನ್ನು ಕೊಡಿ.

ಅಭಿಯಾಚನೆ ಕ್ರಮಾಂಕ 36 ಮತ್ತು 50

ಶ್ರೀ ಎಸ್. ಎಂ. ಕೃಷ್ಣ (ಉಪಮುಖ್ಯಮಂತ್ರಿಗಳು):- ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ದಿನಾಂಕ: 31-3-1994ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬೇಡಿಕೆಗಳ ಸಂಖ್ಯೆ 36 ಮತ್ತು 50, ಇವುಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ಮತ್ತು ಬಂಡವಾಳ ಖಾತೆಯಲ್ಲಿ ಬೇಡಿಕೆಗಳ ಪಟ್ಟಿಯಲ್ಲಿರುವ ಮೊತ್ತಕ್ಕೆ ಮೀರಿದ ಮೊಬಲಗುಗಳನ್ನು ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಭಿಯಾಚನೆ ಕ್ರಮಾಂಕ: 46,47,48

ಶ್ರೀ ಕೆ. ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು):- ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ದಿನಾಂಕ: 31-3-1994ರಂದು ಆರ್ಥಿಕ ವರ್ಷದಲ್ಲಿ ಬೇಡಿಕೆಗಳ ಸಂಖ್ಯೆ: 46,47,48 ಇವುಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ಮತ್ತು ಬಂಡವಾಳ ಖಾತೆಯಲ್ಲಿ ಬೇಡಿಕೆಗಳ ಪಟ್ಟಿಯಲ್ಲಿರುವ ಮೊತ್ತಕ್ಕೆ ಮೀರಿದ ಮೊಬಲಗುಗಳನ್ನು ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಭಿಯಾಚನೆ ಕ್ರಮಾಂಕ: 44

ಡಾ।। ಆರ್.ಬಿ. ಚೌಧುರಿ (ಸಣ್ಣ ನೀರಾವರಿ ಮಂತ್ರಿಗಳು):- ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ದಿನಾಂಕ : 31-3-1994ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬೇಡಿಕೆಯ ಸಂಖ್ಯೆ: 44 ಇದಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ಮತ್ತು ಬಂಡವಾಳ ಖಾತೆಯಲ್ಲಿ ಬೇಡಿಕೆಗಳ ಪಟ್ಟಿಯಲ್ಲಿರುವ ಮೊತ್ತಕ್ಕೆ ಮೀರಿದ ಮೊಬಲಗುಗಳನ್ನು ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಧ್ಯಕ್ಷರು:- ಬೇಡಿಕೆಗಳನ್ನು ಮಂಡಿಸಲಾಯಿತು.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಮಾನ್ಯ ಅಧ್ಯಕ್ಷರೆ, ಇವತ್ತಿನ ಕಾರ್ಯಕ್ರಮದ ಪ್ರಕಾರ ಬೇಡಿಕೆ 45 ಸಹಿತ ಚರ್ಚೆಗೆ ಬರಬೇಕು, ಅದಕ್ಕೆ ಸಂಬಂಧಪಟ್ಟ ಮಾನ್ಯ ಮಂತ್ರಿಗಳು ಅದನ್ನು ಮಂಡಿಸಲಿಲ್ಲ.

ಅಧ್ಯಕ್ಷರು:- ನಾನು ಅವರನ್ನು ಕರೆಯಲಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ:– ಹಾಗಾದರೆ ಇಲ್ಲಿ ಬೇಡಿಕೆ ಸಂಖ್ಯೆ 45 ಎಂದು ಇದೆ. ಹಾಗಾದರೆ ಇದು ಅಲ್ಲ ಎಂತಲೇ ?

ಅಧ್ಯಕ್ಷರು:– ಪಟ್ಟಿಯಲ್ಲಿ ಇದೆ. ಆದರೆ ನಾನು ಸಂಬಂಧಪಟ್ಟ ಮಂತ್ರಿಯವರಿಗೆ ಮಂಡಿಸಬೇಕೆಂದು ಕರೆಯಲಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ:– ಆದರೆ ಇವತ್ತು ಅದನ್ನು ಮಂಡಿಸುವುದಿಲ್ಲ.

ಅಧ್ಯಕ್ಷರು:– ಇವತ್ತು ಮಂಡಿಸುವುದಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ:– ಇಲ್ಲಿ ಅದಕ್ಕೆ ಸಂಬಂಧಪಟ್ಟಂಥ ಮಂತ್ರಿಗಳು ಇಲ್ಲ, ಅದಕ್ಕೆ ನಾನು ಹೇಳುತ್ತಿರುವುದು.

ಶ್ರೀ ಹೆಚ್. ಏಕಾಂತಯ್ಯ:– ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ಚರ್ಚೆ ಅವಶ್ಯಕತೆ ಇದೆಯೇ ?

ಅಧ್ಯಕ್ಷರು:– ನಾನು ಚರ್ಚೆ ಮಾಡಬೇಕೆಂದು ತಮ್ಮನ್ನು ಕರೆದಿದ್ದೇನೆ.

ಶ್ರೀ ಹೆಚ್. ಏಕಾಂತಯ್ಯ:– ಸರ್ಕಾರದವರು ನಡೆದುಕೊಳ್ಳುವಂತಹ ರೀತಿಯನ್ನು ನೋಡಿದರೆ, ಈ ಚರ್ಚೆ ಅವಶ್ಯಕತೆ ಇಲ್ಲ ಎಂದು ನನ್ನ ಭಾವನೆಯಾಗಿದೆ.

ಶ್ರೀ ಕೆ. ಹೆಚ್. ರಂಗನಾಥ್:– ಮಾನ್ಯ ಸದಸ್ಯರು, ಹಿರಿಯ ಸದಸ್ಯರು ಇವರಿಗೆ ಸಾಕಷ್ಟು ಅನುಭವ ಇದೆ. ಆ ಆಪಾದನೆಗೆ ಅರ್ಥವಿದೆಯೋ ? ಸರ್ಕಾರ ನಡೆದುಕೊಳ್ಳುವಂತಹ ರೀತಿ ಎನ್ನುವ ಮಾತಿಗೆ ಅರ್ಥವಿದೆಯೋ ?

ಶ್ರೀ ಹೆಚ್. ಏಕಾಂತಯ್ಯ:– ಇದೆ. ಇವತ್ತಿನ ದಿವಸ 6 ಅಥವಾ 7 ಬೇಡಿಕೆಗಳನ್ನು ಇಟ್ಟಿದ್ದಾರೆ. ನಮ್ಮ ಸಂಪ್ರದಾಯ ಏನಿದೆ, ನಮ್ಮ ಜನತಂತ್ರ ವ್ಯವಸ್ಥೆಯಲ್ಲಿ ಪಾರ್ಲಿಮೆಂಟರಿ ಪ್ರಜಾಸತ್ತೆಯಲ್ಲಿ ಏನಿದೆ ಅಂದರೆ ಇಲಾಖೆಗೆ ಸಂಬಂಧಪಟ್ಟಂತೆ ವಾರ್ಷಿಕ ವರದಿಯನ್ನು ಕೊಡಬೇಕು ಎಂಬ ಮಾತು ಇದೆ. ನಿರ್ವಹಣಾ ಆಯವ್ಯಯವನ್ನು ಕೊಡಬೇಕೆಂಬ ಮಾತು ಇದೆ. ಏತಕ್ಕೋಸ್ಕರ, ಯಾವ ಪುರುಷಾರ್ಥಕ್ಕೋಸ್ಕರ ಸರ್ಕಾರದವರು ಇಲ್ಲಿ ಬೇಡಿಕೆಯನ್ನು ಬೇಕಾಬಿಟ್ಟಿ ಮಂಡಿಸುತ್ತಾರೆ. ಇವತ್ತಿನ ದಿವಸ 3025 ಕೋಟಿ ರೂಪಾಯಿ ಯೋಜನಾ ವೆಚ್ಚ ಏನಿದೆ ಅದರಲ್ಲಿ ಅರ್ಧಕ್ಕಿಂತ ಹೆಚ್ಚು ಭಾಗದ ಬಗ್ಗೆ ನಾವು ಇವತ್ತಿನ ದಿವಸ ಚರ್ಚೆ ಮಾಡಬೇಕಾಗಿದೆ. ಇವರು ಹೇಳುವುದರಲ್ಲಿ ಏನಾದರೂ ಅರ್ಥ ಇದೆಯೇ ? ಇಂಧನ ಇಲಾಖೆಯ ವಾರ್ಷಿಕ ವರದಿ ಈಗ ನಮ್ಮ ಮುಂದೆ ಬರುತ್ತಿದೆ. ಅದರ ಅರ್ಥ ಏನು ಸ್ವಾಮಿ ? ಈ ಸರ್ಕಾರಕ್ಕೆ ಏನಾದರೂ ಆಸಕ್ತಿ ಇದೆಯೇ ? 3025 ಕೋಟಿ ರೂಪಾಯಿ ಯೋಜನಾ ವೆಚ್ಚ ಏನಿದೆ, ಇವತ್ತಿನ ದಿವಸ ಮಾನ್ಯ ಮಂತ್ರಿಗಳು ಏನು ಮಂಡಿಸಿದ್ದಾರೆ, ಸುಮಾರು 1550 ಕೋಟಿ ರೂಪಾಯಿಗಳಿಗಿಂತ ಹೆಚ್ಚು ಹಣವನ್ನು ಇವತ್ತಿನ ದಿವಸ ಸದನದ ಒಪ್ಪಿಗೆಗಾಗಿ ಇಟ್ಟಿದ್ದಾರೆ. ಅದಕ್ಕೆ ಅವರಿಗೆ ಅರ್ಥ ಇಲ್ಲವೇ ?

ಶ್ರೀ ಕೆ. ಹೆಚ್. ರಂಗನಾಥ್:– ಮಾನ್ಯ ಸದಸ್ಯರು ಬಹಳ ಟೆಕ್ನಿಕಲ್ ಆಗಿ ಮಾತನಾಡುವುದಾದರೆ ನಾವು ಬಹಳ ಟೆಕ್ನಿಕಲ್ ಆಗಿ ಸಂವಿಧಾನ ಪ್ರಕಾರವೇ ಮಾಡುತ್ತೇವೆ. ಸಂವಿಧಾನದಲ್ಲಿ ತಾವು ಪ್ರಸ್ತಾಪ ಮಾಡಿದ್ದು ಎಲ್ಲಿದೆ ? ಈ ಸಭೆಗೆ ಮಾನ್ಯ ಸದಸ್ಯರಿಗೆ ಅದನ್ನು ತಿಳಿದುಕೊಳ್ಳುವುದಕ್ಕೆ ಕಾಲಾವಕಾಶಬೇಕಾಗುತ್ತದೆ; ವಿಷಯ ಬೇಕಾಗುತ್ತದೆ, ಲಿಟರೇಚರ್ ಬೇಕಾಗುತ್ತದೆ. ಈ ದೃಷ್ಟಿಯಿಂದ ಕೊಡಬೇಕು ಒಪ್ಕೋಣ. ಆ ದೃಷ್ಟಿಯಲ್ಲಿ ಸಂಬಂಧಪಟ್ಟಂಥ ಇಲಾಖೆಯ ತಪ್ಪು ಆಗಿದೆ, ಆ ಆಪಾದನೆಯನ್ನು ಒಪ್ಪಿಕೊಳ್ಳೋಣ. ಆದರೆ ಸದನಕ್ಕೆ ಇದನ್ನು ಡಿಸ್‌ಕಷನ್ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿಲ್ಲ ಎನ್ನುವ ಆಪಾದನೆ ಏನು ಇದೆ ಅದರಿಂದ ಅರ್ಥ ಇದೆಯೋ ?

ಶ್ರೀ ಹೆಚ್. ಏಕಾಂತಯ್ಯ:– ಸನ್ಮಾನ್ಯ ಅಧ್ಯಕ್ಷರೇ, ಇದನ್ನು ನಾವು ಕೇವಲ ನಿಯಮಗಳಿಂದ ಮಾಡುವುದಿಲ್ಲ. ನಾನು ಸಂಪ್ರದಾಯ ಎಂದು ಹೇಳಿದೆ. ಏನು ನಮ್ಮ ಸಂಪ್ರದಾಯ ಇದೆ, ಅದನ್ನು ಓದುತ್ತೇನೆ. Kaul & Shakdher.

Copies of the Performance Budget for the various Ministries and Department received from the respective Ministeries/Departments are also made available to the Members in connection with the discussion on the Demands for Grants. The performance budget presents the budget position in terms of functions, programmes and activities, before the commencement of the budget session and most of the departments of Governments are requested to ensure that the copies of the annual reports and performance budget of the Ministries are made available to the Lok Sabha Secretariat sufficiently in advance so that these may be circulated to the Members a week before the Demands for grants of concerned Ministries are taken up."

ಇದಕ್ಕಿಂತ ನಾನು ಏನೂ ಹೇಳುವುದಕ್ಕೆ ಆಗುವುದಿಲ್ಲ. ಇದು ತಮ್ಮ ಮನಸ್ಸಿಗೆ ತಕ್ಕದ್ದಲ್ಲ ಎಂದು ತಮ್ಮ ಅಪ್ಪಣೆಯಾದರೆ ನನ್ನದು ಏನೂ ತಕರಾರಿಲ್ಲ. ನಾನು ವಾದ ಮಾಡಲಿಕ್ಕೆ ಅಥವಾ ಚರ್ಚೆಯಲ್ಲೂ ಸಹ ಭಾಗವಹಿಸುವುದಿಲ್ಲ.

(ಗೊಂದಲ)

ಶ್ರೀ ಶಿವಾನಂದ ಹೆಚ್. ಕೌಜಲಗಿ:– ಬಿಸಿನೆಸ್ ಅಡ್ವೈಸರಿ ಕಮಿಟಿಯವರು ಒಂದು ವಾರ ಮೊದಲು ಕೊಡಬಾರದು ಎಂದು ಸಸ್ಪೆಂಡ್ ಮಾಡಿದ್ದರೆ ನಮ್ಮದು ಏನೂ ತಕರಾರು ಇಲ್ಲ. ಈಗ ನಾವು ಬಂದಾಗ 12 ಗಂಟೆಗೆ ಇದನ್ನು ಕೊಟ್ಟಿದ್ದಾರೆ. ನಾವು ಯಾವಾಗ ಓದಬೇಕು, ಏನು ಮಾಡಬೇಕು ಎಂದು ನೀವು ವಿಚಾರ ಮಾಡಿ.

(ಗೊಂದಲ)

ಶ್ರೀ ಶಿವಾನಂದ ಹೆಚ್. ಕೌಜಲಗಿ:– ಇದರ ಬಗ್ಗೆ ನಾವು ಚರ್ಚೆ ಮಾಡಬೇಕೆಂದು ಬಂದಿದೆಯೇ ಅಥವಾ ಹಾಗೆಯೇ ಪಾಸ್ ಮಾಡಬೇಕೆಂದು ಬಂದಿದೆಯೋ ವಿಚಾರ ಮಾಡಬೇಕು. It is nothing but farce. ಅಧ್ಯಕ್ಷರೇ, ಎಲ್ಲಾ ಗಿಲೆಟಿನ್ ಮಾಡಬೇಕು ಎನ್ನುವ ಉದ್ದೇಶದಿಂದ ಇವತ್ತಿನ ದಿವಸ ಆ ಪ್ರಕಾರ ಮಾಡಿದ್ದಾರೆ. ಇವರು ಮಾಡುವ ಉದ್ದೇಶವೇನೆಂದರೆ ಸರ್ಕಾರದ ವೈಫಲ್ಯವನ್ನು ಯಾರು ಎತ್ತಬಾರದು. ಬರೀ ಗಿಲೆಟಿನ್ ಆಗಬೇಕು. ಆ ಪ್ರಕಾರ ಆದರೆ ನಾವು ಹೇಗೆ ವಿಚಾರ ಮಾಡಬೇಕು, ಅದೂ ಕೋಟ್ಯಾಂತರ ರೂಪಾಯಿಗಳ ಪ್ರಸಂಗ ಇದ್ದಾಗ.

ಶ್ರೀ ಸಿ. ಬೈರೇಗೌಡ:– ನನ್ನ ನಿಜವಾದಂತ ಒಂದು ಅನಿಸಿಕೆ ಏನಿದೆ ಎಂದರೆ, ಈ ಇಂಧನ ಇಲಾಖೆ ಬಗ್ಗೆ ಹಿಂದೆ ಇಲ್ಲಿ ಸಾಕಷ್ಟು ಚರ್ಚೆಯಾಗಿದೆ. ಈ ವಿದ್ಯುತ್ ಯಾವಾಗ ಹೋಗುತ್ತದೋ, ಯಾವಾಗ ಬರುತ್ತದೋ ಎಂಬುದು ನಮಗೆ ಗೊತ್ತಿಲ್ಲ. ಈ ವಿದ್ಯುತ್ ಹೋಗುವುದು ಬರತಕ್ಕಂಥದ್ದು ಇವರ ಕೈಯಲ್ಲಿ ಇಲ್ಲವೆಂದು ಇಟ್ಟುಕೊಳ್ಳೋಣ. ಈಗ ಇವರು ಆಡಳಿತ ವರದಿಯನ್ನಾದರೂ ಕೂಡ ಸಮಯಕ್ಕೆ ಸರಿಯಾಗಿ ಕೊಟ್ಟಿಲ್ಲ. ನಿನ್ನೆ ನನಗೆ ಬಂದಂಥ ಕವರನ್ನು ಹುಡುಕಿದೆ. ಏಕೆಂದರೆ ಇದರ ಬಗ್ಗೆ ನಾನು ಬಹಳ ತೀವ್ರವಾಗಿ ಮಾತನಾಡಬೇಕು, ತಯಾರಾಗಬೇಕು ಎನ್ನತಕ್ಕ ದೃಷ್ಟಿಯಿಂದ ನಾನು

ಹುಡುಕಿದೆ. ನನಗೆ ಬಂದಂತಹ ಕವರ್‌ನಲ್ಲಿ ಇರಲಿಲ್ಲ. ಆದರೆ ಇಲ್ಲಿ ಇದೆ. ಈಗ ಇದನ್ನು ಇಟ್ಟುಕೊಂಡು ನಾನು ಚರ್ಚೆಯಲ್ಲಿ ಭಾಗವಹಿಸಬೇಕು ಎಂದರೆ ಯಾವ ರೀತಿ ಸಾಧ್ಯ. ಅದು ಬಹಳ ಕಷ್ಟವಾಗುತ್ತದೆ. ಈಗ ವಿದ್ಯುತ್ ಬಗ್ಗೆ ಸದನದ ಸಮಿತಿ ಆಗಿದೆ. ಅದರ ಬಗ್ಗೆ ಏನಾಗಿದೆ ಎಂದು ಹೇಳಬೇಕು. ಅದಕ್ಕೆ ನನಗೆ ಅಂಕಿ ಅಂಶಗಳು ಬೇಕಾಗುತ್ತದೆ. ಏನು ಮಾಡಿದ್ದಾರೆ ಎನ್ನತಕ್ಕದ್ದು ತಿಳಿದುಕೊಳ್ಳಬೇಕಾಗುತ್ತದೆ. ನಾನು ಸದನದಲ್ಲಿ ಪರಿಣಾಮಕಾರಿಯಾಗಿ ಚರ್ಚೆಯಲ್ಲಿ ಭಾಗವಹಿಸಬೇಕಾಗುತ್ತದೆ. ಇವತ್ತು ತಂದು ಇಲ್ಲಿ ಇಟ್ಟು ಭಾಗವಹಿಸಿ ಎಂದರೆ ನಾವು ಯಾವ ರೀತಿ ಭಾಗವಹಿಸಬೇಕು ದಯವಿಟ್ಟು ತಾವು ಹೇಳಿ, ನಾವು ಇಲ್ಲಿ ಎಷ್ಟು ತೀವ್ರವಾಗಿ ವಿದ್ಯುತ್ ಬಗ್ಗೆ ಪ್ರಸ್ತಾಪ ಮಾಡುತ್ತೇವೋ ಅಷ್ಟೇ ತೀವ್ರವಾಗಿ ಜನಗಳ ಕಷ್ಟ ಏರುತ್ತಿದೆ. ಅದು ಏನೂ ಕಡಿಮೆಯಾಗಿಲ್ಲ. ಆದರಿಂದಾಗಿ ನಾವು ಸುಮ್ಮನೆ ಕುಳಿತಿರಬೇಕಾಗುತ್ತದೆ. ಸುಮ್ಮನೆ ಕುಳಿತಿದ್ದರೂ ಸಹ ಕಷ್ಟ ಬಗೆಹರಿಯುವುದಿಲ್ಲ ಪುಸ್ತಕ ಈಗ ಕೊಟ್ಟಿದ್ದಾರೆ. ಇದು ಸುಮಾರು 43 ಪುಟ ಇದೆ. ಅದನ್ನು ಯಾವ ರೀತಿ ಓದಬೇಕು. ನಮ್ಮ ಕಷ್ಟಗಳನ್ನು ತಮಗೆ ನಿವೇದಿಸಿಕೊಂಡಿದ್ದೇವೆ ದಯವಿಟ್ಟು ನಮ್ಮ ಸಹಾಯಕ್ಕೆ ತಾವು ಬರಬೇಕೆಂದು ಕೇಳಿಕೊಳ್ಳುತ್ತೇನೆ.

DR. JEEVARAJ ALVA:– It is a very serious lapse on the part of the Government. ಆದ್ದರಿಂದ ರಂಗನಾಥ್‌ರವರು ಟೆಕ್ನಿಕಲ್ ಆಗಿ ಮಾತನಾಡುತ್ತೇವೆಂದರೆ ಅದನ್ನು ನಾವು ಒಪ್ಪಲಿಕ್ಕೆ ಸಾಧ್ಯವಿಲ್ಲ. ನಿನ್ನೆ ರಾತ್ರಿ ಬರದೆ, ಇವತ್ತು ಬೆಳಿಗ್ಗೆ ಬಂದರೆ, how do you expect the hon. member to reply or initiate the debate? He is a responsible member; he has to study.

ಶ್ರೀ ಕೆ. ಹೆಚ್. ರಂಗನಾಥ್:– ಸರ್ಕಾರ ಡಿಸ್‌ಕಸ್ ಮಾಡುವುದಕ್ಕೆ ಅಡ್ಡಿ ಬರುತ್ತಿದೆ ಎನ್ನುವ ರೀತಿಯಲ್ಲಿ ಆಪಾದನೆ ಮಾಡಿದ್ದರು. ಅದಕ್ಕೆ ಹೇಳಿದೆ. ಆ ಉದ್ದೇಶ ಇಲ್ಲ. ಕಾರಣಾಂತರದಿಂದ ಕೆಲವೊಂದು ರಿಪೋರ್ಟ್ ಬರದೇ ಇರಬಹುದು. But the Government does not want to prohibit...

DR. JEEVARAJ ALVA:– You are curtailing by deliberate inaction, apathy, callousness shown by the Government, has resulted in Mr. Ekantheiah not getting himself prepared. ಇವತ್ತು ವಿರೋಧಪಕ್ಷದ ಪರವಾಗಿ ಇನಿಷಿಯೇಟ್ ಮಾಡುವಂಥವರಿಗೆ ನೀವು ದಾಖಲೆಗಳನ್ನು ಕೊಡದೆ ಇದ್ದರೆ ಪರ್‌ಫಾರ್ಮೆನ್ಸ್, ಬಡ್ಜೆಟ್ ಕೊಡದೇ ಇದ್ದರೆ, ರಿಪೋರ್ಟ್ ಕೊಡದೇ ಇದ್ದರೆ ಏನು ಪ್ರಯೋಜನ? ಇವತ್ತು ಏಕಾಂತಯ್ಯನವರು ಮಾತನಾಡುತ್ತಾರೆಂದು ನಾನು ನಿರೀಕ್ಷೆ ಮಾಡಿದ್ದೆ, ಆದರೆ Naturally he is hurt. ಆದ್ದರಿಂದ unqualified apology from the Government is necessary. ಇದು ಒಂದು ತರಹ ತೋರಿಕೆ ಮಾಡಬೇಡಿ. It is a failure. Whatever it is, we are not attaching any motives to it. ಇದು ಡೆಲಿಬರೇಟ್ ಎಂದು ಹೇಳುವುದಕ್ಕೆ ಸಾಧ್ಯವಿಲ್ಲ. It is a failure on the part of the Government a nd they must express an unqualified apology.

ಶ್ರೀ ಪಿ.ಜಿ.ಆರ್. ಸಿಂಧ್ಯ:– ನಾವು ಬಿ.ಎ.ಸಿಯಲ್ಲಿ ತೀರ್ಮಾನ ಮಾಡಿದ ಪ್ರಕಾರ ಈ ತಿಂಗಳ 10ನೇ ತಾರೀಖಿನಿಂದ ಡಿಮ್ಯಾಂಡ್‌ಗಳನ್ನು ತೆಗೆದುಕೊಳ್ಳಬೇಕಾಗಿತ್ತು. ಮತ್ತು ಲಿಸ್ಟ್ ಮಾಡಿರತಕ್ಕದ್ದು ಇರಿಗೇಶನ್ ಮತ್ತು ಪವರ್ ಬಗ್ಗೆ ಚರ್ಚೆ ಮಾಡಬೇಕು ಎಂಬುದು. ಮಿನಿಮಂ 10 ದಿವಸ ಎಂದು ಇದರ ಬಗ್ಗೆ ನಾವು ತೀರ್ಮಾನ ಮಾಡಿಕೊಂಡಿದ್ದೇವೆ. ಇಲ್ಲಿ ಒಂದು ದಿನ ಕಡಿಮೆಯಾಗಿದೆ. ಆದರೆ ಮುಖ್ಯವಾಗಿ ನೀರಾವರಿಗೆ ಸಂಬಂಧಪಟ್ಟಂತೆ ಒಂದು ರಿಪೋರ್ಟ್ ಏನು ಇದೆ ಅದನ್ನು 2–3 ದಿವಸ ಮುಂಚೆ ಕೊಟ್ಟಿದ್ದರು. ಆದರೆ ಇಂಧನಕ್ಕೆ ಸಂಬಂಧಪಟ್ಟ ಹಾಗೆ ರಿಪೋರ್ಟ್ ಇವೊತ್ತು 10.30ಕ್ಕೆ

ಸದನಕ್ಕೆ ಬಂಧ ಮೇಲೆ ಕೊಡಲು ಶುರು ಮಾಡಿದ್ದಾರೆ. ನಮಗೆ ಕೆ.ಇ.ಬಿ. ಬಗ್ಗೆಯಾಗಲಿ, ಪವರ್ ಜನರೇಷನ್ ಬಗ್ಗೆಯಾಗಲಿ, ಏಕಾಂತಯ್ಯನವರಿಗೆ ಅಥವಾ ಇತರ ಸದಸ್ಯರುಗಳಿಗೆ ಏನೂ ಗೊತ್ತಿಲ್ಲ ಎನ್ನತಕ್ಕ ವಿಚಾರ ಅಲ್ಲ. ಇಲ್ಲಿ ನಾವು ಚರ್ಚೆ ಮಾಡಬೇಕು. ಚರ್ಚೆ ಕನ್‌ಸ್ಟ್ರಕ್ಟೀವ್ ಆಗಿರಬೇಕು; ಸರ್ಕಾರಕ್ಕೆ ನಮ್ಮ ಕಡೆಯಿಂದ ಸಲಹೆಯನ್ನು ಕೊಡಬೇಕಾದರೆ ಹಾಗೂ ನಮ್ಮ ಚರ್ಚೆಗೆ ಅರ್ಥ ಬರಬೇಕಾದರೆ ನಾವು ಅಂಕಿಅಂಶಗಳನ್ನು ಕೊಡಬೇಕಾಗುತ್ತದೆ. ಅಂಕಿಅಂಶಗಳನ್ನು ಬಿಟ್ಟು ಮಾತನಾಡುವುದರಲ್ಲಿ ಅರ್ಥ ಇಲ್ಲ. You know he is hurt. ನಾವು ಅವರಿಗೆ ಎರಡು ದಿವಸಗಳಿಂದ ಈ ಡಿಮ್ಯಾಂಡ್‌ಗಳನ್ನು ಇನ್‌ಷಿಯೇಟ್ ಮಾಡಬೇಕು ಎಂದು ಹೇಳಿದ್ದೇವೆ. ಹಾಗೂ ಮಾಧುಸ್ವಾಮಿಯವರು ತಯಾರು ಮಾಡಿಕೊಂಡು ಬಂದಿದ್ದಾರೆ. ರಿಪೋರ್ಟ್ ದೊರೆಯದೆ ಅವರಿಗೆ ನಿರಾಸೆಯಾಗಿದೆ. ಶ್ರೀ ಎಸ್. ಎಂ. ಕೃಷ್ಣ, ಶ್ರೀ ಎಂ. ವೀರಪ್ಪಮೊಯಿಲಿ ಇದನ್ನು ಮಾಡಲು ಆಗುವುದಿಲ್ಲ ಎನ್ನುವುದು ನಮಗೆ ಅರ್ಥವಾಗುತ್ತದೆ. ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳು ಇದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಇವುಗಳನ್ನು ನಾವು ಎಂ.ಎಲ್.ಎ.ಗಳಿಗೆ ಕೊಡಬೇಕು ಎಂದು ಅವರು ತಿಳಿದುಕೊಳ್ಳಬೇಕು. ಇದು ಇಲ್ಲದಿದ್ದರೂ ನಡೆಯುತ್ತದೆ ಎನ್ನತಕ್ಕ ಧೋರಣೆಯನ್ನು ಅಧಿಕಾರಿಗಳು ತಾಳಿದಂತಿದೆ. ಇನ್ನು ಮುಂದೆ ಡಿಮ್ಯಾಂಡ್‌ಗಳ ಬಗ್ಗೆ ಏನು ಚರ್ಚೆ ನಡೆಯುತ್ತದೆ ಅವುಗಳಿಗೆ ಸಂಬಂಧಪಟ್ಟ ವರದಿಗಳನ್ನು ಕನಿಷ್ಟ ಪಕ್ಷ ಒಂದು ದಿವಸಕ್ಕೆ ಮೊದಲು ಕೊಡುವಂಥ ಕ್ರಮ ಕೈಗೊಳ್ಳಬೇಕು ಎಂದು ಹೇಳುತ್ತೇನೆ.

ಶ್ರೀ ಎಸ್. ಎಂ. ಕೃಷ್ಣ:- ಮಾನ್ಯ ಅಧ್ಯಕ್ಷರೇ, ಡಾ।। ಆಳ್ವರವರು ಸೂಚಿಸಿರತಕ್ಕ ವಿಚಾರದಲ್ಲಿ ನನ್ನ ಸಹಮತ ಇದೆ. ಪ್ರೊ. ಏಕಾಂತಯ್ಯನವರು....

ಶ್ರೀ ವಾಟಾಳ್ ನಾಗರಾಜ್:- ಹಿಂದೆ ಮುಖ್ಯಮಂತ್ರಿಗಳು ಪ್ರೊ. ನಂಜುಂಡಸ್ವಾಮಿಯವರೇ, ಡಾ।। ನಂಜುಂಡಸ್ವಾಮಿಯವರೆ ಎಂದು ಹೇಳಿದರು. ನಾನು 2–3 ಸಾರಿ ಕೇಳಿದೆ. ಇವೊತ್ತು ಶ್ರೀ ಕೃಷ್ಣರವರು, ಏಕಾಂತಯ್ಯನವರನ್ನು ಪ್ರೊ. ಏಕಾಂತಯ್ಯನವರು ಎಂದು ಹೇಳುತ್ತಿದ್ದಾರೆ. ಏನಿದು ? ಏನು ತಪ್ಪಾಗಿದೆ ಅವರ ಕಡೆಯಿಂದ....

ಶ್ರೀ ಎಸ್. ಎಂ. ಕೃಷ್ಣ:- ಮಾನ್ಯ ಸದಸ್ಯರಾದಂತಹ ಶ್ರೀಮಾನ್ ಏಕಾಂತಯ್ಯನವರು ವಿಚಾರಗಳೆಲ್ಲವನ್ನೂ ಕೂಡ ಬಹಳ ತೀವ್ರವಾಗಿ ಅಭ್ಯಾಸ ಮಾಡಿಕೊಂಡು ಬರತಕ್ಕಂಥ ಮಾನ್ಯ ಸದಸ್ಯರುಗಳಲ್ಲಿ ಒಂದು ವಿಶಿಷ್ಟವಾದಂತಹ ಸ್ಥಾನವನ್ನು ನನ್ನ ದೃಷ್ಟಿಯಲ್ಲಿ ಪಡೆದಿದ್ದಾರೆ. ಇಂಧನ ಇಲಾಖೆಯ ಪರ್‌ಫಾರ್ಮೆನ್ಸ್ ಮತ್ತು ವಾರ್ಷಿಕ ವರದಿ – ಇವೆರಡರ ಬಗ್ಗೆ ನನ್ನ ಗಮನವನ್ನು ಸೆಳೆದಿದ್ದಾರೆ. ಇದರಲ್ಲಿ ಕೊಂಚ ಅಚಾತುರ್ಯ ನಡೆದಿದೆ ಎನ್ನತಕ್ಕಂಥಾದ್ದನ್ನು ನಾನು ಒಪ್ಪಿಕೊಳ್ಳುತ್ತೇನೆ ಮತ್ತು ಅದಕ್ಕೆ ಮಾನ್ಯ ಸಭಾಧ್ಯಕ್ಷರೆ ಈ ಸದನದ ಕ್ಷಮೆಯನ್ನು ಕೇಳುತ್ತೇನೆ. ಇನ್ನು ಮುಂದಿನ ವರ್ಷಗಳಲ್ಲಿ ಈ ವರದಿಗಳು ಕನಿಷ್ಟಪಕ್ಷ ಒಂದು ವಾರಕ್ಕೆ ಮುಂಚಿತವಾದರೂ ಕೂಡ ಪ್ರಿಂಟ್ ಆಗಬೇಕು, ಸರ್ಕ್ಯುಲೇಟ್ ಆಗಬೇಕು, ಮಾನ್ಯ ಸದಸ್ಯರುಗಳು ಮಾಡತಕ್ಕಂಥ ಚರ್ಚೆಗೆ ಅದು ಸಹಾಯಕವಾಗಬೇಕು ಎನ್ನುವಂತಹ ಒಂದು ಐಡಿಯಲ್ ಪರಿಸ್ಥಿತಿ ಏನು ಇದೆ ಅದನ್ನು ನಾವು ರೆಸ್ಟೋರ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ನಮ್ಮ ಮಾನ್ಯ ಸಿಂಧ್ಯಾರವರು, ಇನ್ನು ಮುಂದೆ ಬರತಕ್ಕಂಥ ಎಲ್ಲಾ ಬೇಡಿಕೆಗಳ ಬಗ್ಗೆ, ನಾಲ್ಕಾರು ದಿವಸಗಳ ಮೊದಲೆ ಆ ವರದಿಗಳನ್ನು ಕೊಡಬೇಕು ಎನ್ನತಕ್ಕಂಥ ಸಲಹೆ ಏನು ಕೊಟ್ಟಿದ್ದಾರೆ ಆ ಸಲಹೆಯನ್ನು ಸಂಪೂರ್ಣವಾಗಿ ನಾನು ಒಪ್ಪುತ್ತೇನೆ ಮತ್ತು ಸರ್ಕಾರದ ಪರವಾಗಿ ತಮಗೆ ಆ ಭರವಸೆಯನ್ನು ಕೊಡುತ್ತೇನೆ. ಈ ಇಂಧನ ಶಾಖೆಯಲ್ಲಿ ವಾರ್ಷಿಕ ವರದಿ ಮತ್ತು ಪರ್‌ಫಾರ್ಮೆನ್ಸ್ ಎರಡನ್ನೂ ಒಟ್ಟಿಗೆ ಸೇರಿಸಿದ್ದಾರೆ.

ಅದು ಎಷ್ಟರಮಟ್ಟಿಗೆ ತಮಗೆ ಸಮಾಧಾನವಾಗುತ್ತದೆಯೋ ಅದು ಬೇರೆ ವಿಚಾರ. ಆದರೆ

1992–93ನೇ ಸಾಲಿನ ಕೆಲಸಗಳ ಯೋಜನೆ ಮತ್ತು ಪ್ರಗತಿ. ಅದೇ ಪರ್‌ಫಾರ್ಮೆನ್ಸ್ ಬಜೆಟ್ ಎಂದು ವಿಶೇಷವಾಗಿ ಎರಡು ಪುಸ್ತಕ ಮಾಡುವ ಬದಲು ಒಂದೇ ಪುಸ್ತಕದಲ್ಲಿ ಎಲ್ಲಾ ಬರೆದುಕೊಟ್ಟಿದ್ದಾರೆ. ಆದ್ದರಿಂದ ಮಾನ್ಯ ಏಕಾಂತಯ್ಯನವರು, ತಾವು ತಮ್ಮ ಚರ್ಚೆಯನ್ನು ಪ್ರಾರಂಭಿಸಿ ತಮ್ಮ ಮಾರ್ಗದರ್ಶನವನ್ನು ಸರಕಾರಕ್ಕೆ ಕೊಡಬೇಕು ಎಂದು ಹೇಳಿ ಅತ್ಯಂತ ನಮ್ರತೆಯಿಂದ ಕೇಳಿಕೊಳ್ಳುತ್ತೇನೆ.

† ಶ್ರೀ ಹೆಚ್. ಏಕಾಂತಯ್ಯ (ಚಿತ್ರದುರ್ಗ):– ಸನ್ಮಾನ್ಯ ಅಧ್ಯಕ್ಷರೇ, ನಮ್ಮ ಆಕ್ಷೇಪ ಏನೆಂದರೆ ಸಂಬಂಧಪಟ್ಟ ಅಧಿಕಾರಿಗಳಿಗೆ ಇದೇನೂ ಹೊಸದಲ್ಲ. ಮಾನ್ಯ ಮಂತ್ರಿಗಳು ಹೇಳಲಿ, ಹೇಳದೇ ಇರಲಿ ಇಲ್ಲಿಯವರೆಗೂ ಕೇವಲ ಒಂದೇ ಒಂದು ಕಾರ್ಯನಿರ್ವಹಣಾ ಆಯವ್ಯಯ ಸದಸ್ಯರಿಗೆ ಬಂದಿದ್ದರೆ ಅದು ಕೇವಲ ನೀರಾವರಿಯದು ಮಾತ್ರ. ಮೊನ್ನೆಯ ದಿವಸ ಬಂದಿದೆ. ಇಲ್ಲಿಯವರೆಗೆ 62 ಬೇಡಿಕೆಗಳ ಬಾಬ್ತು, ಯಾವುದರಲ್ಲೂ ಕಾರ್ಯ ನಿರ್ವಹಣಾ ಆಯವ್ಯಯವನ್ನು ಕಳುಹಿಸಬೇಕೋ ಅದನ್ನು ಯಾರೂ ಕಳುಹಿಸಿಲ್ಲ. ಅಂದಮೇಲೆ ಇದು ಏನು ಸೂಚಿಸುತ್ತದೆ ? ನಮ್ಮ ಆಕ್ಷೇಪ ಅಷ್ಟೇ ಹೊರತಾಗಿ ಮತ್ತೇನೂ ಇಲ್ಲ. ಮತ್ತು ಒಂದು ಕಾರ್ಯ ನಿರ್ವಹಣಾ ಆಯವ್ಯಯ ಏನು ಇದೆ, ಅದನ್ನು ಪರಿಶೀಲನೆ ಮಾಡಿದಾಗ ಮಾತ್ರ 1992–93ರಲ್ಲಿ ಎಷ್ಟರಮಟ್ಟಿಗೆ ನಾವು ಬಜೆಟ್‌ನಲ್ಲಿ ಕೊಟ್ಟಂಥ ಹಣವನ್ನು ಯಾವ ಯಾವ ಕಾರ್ಯಕ್ರಮಗಳಿಗೆ ಕೊಟ್ಟಿದ್ದೇವೆ, ಆ ಕಾರ್ಯಕ್ರಮಗಳನ್ನು ಜಾರಿ ಮಾಡುವುದಕ್ಕೆ ಹಣ ಖರ್ಚು ಮಾಡಿದ್ದಾರೊ ಇಲ್ಲವೋ ಎನ್ನುವುದನ್ನು ತಿಳಿದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆಯೇ ಹೊರತಾಗಿ ಇಲ್ಲದಿದ್ದರೆ ಸಾಧ್ಯವಾಗುವುದಿಲ್ಲ. ನಾವು ಮಾತನಾಡುವುದಕ್ಕೆ ಮುಖ್ಯವಾಗಿ ಬೇಕಾದಂಥ ಅಂಕಿಅಂಶಗಳು ಇರುವುದು ಎಂದರೆ ಆಯವ್ಯಯದಲ್ಲಿ. ಈ ಒಂದು ಕಾರಣಕ್ಕೋಸ್ಕರ ನಾನು ಒತ್ತಾಯಮಾಡಿದೆ. ಆದರೂ ಸಹ ಮಾನ್ಯ ಉಪಮುಖ್ಯಮಂತ್ರಿಗಳು ಹೇಳಿದಂತೆ ಈ ಒಂದು ಚರ್ಚೆಯನ್ನು ಪ್ರಾರಂಭ ಮಾಡುತ್ತಾ ಕೆಲವು ಮುಖ್ಯ ವಿಚಾರಗಳನ್ನು ತಮ್ಮ ಮುಖಾಂತರ ಮಾನ್ಯ ಉಪಮುಖ್ಯಮಂತ್ರಿಗಳ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ಈಗ ಏನು ಬೇಡಿಕೆಗಳನ್ನು ಮಾನ್ಯ ಉಪಮುಖ್ಯಮಂತ್ರಿಗಳಾದಂಥ ಕೃಷ್ಣರವರು ಹಾಗೂ ಹಿರಿಯ ಲೋಕೋಪಯೋಗಿ ಸಚಿವರಾದಂಥ ರಂಗನಾಥ್‌ರವರು ಬೇಡಿಕೆ 45ನ್ನು ಹೊರತುಪಡಿಸಿ ಇವತ್ತು ಈ ಸಭೆಯ ಅನುಮೋದನೆಗಾಗಿ ಇಟ್ಟಿದ್ದಾರೆ. ಈ ಬೇಡಿಕೆಗಳನ್ನು ವಿರೋಧಿಸುತ್ತಾ, ಕೆಲವು ಪ್ರಮುಖವಾದಂಥ ವಿಚಾರಗಳನ್ನು ತಮ್ಮ ಮುಖಾಂತರ ಸರ್ಕಾರದ ಗಮನಕ್ಕೆ ತರಬಯಸುತ್ತೇನೆ. ತಮಗೆ ಗೊತ್ತಿರುವ ಹಾಗೆ, 1992–93 ರಲ್ಲಿ ನೀರಾವರಿ ಯೋಜನೆಗಾಗಿ 472 ಕೋಟಿ ರೂಪಾಯಿಗಳನ್ನು ಭಾರೀ ಮತ್ತು ಮಧ್ಯಮ ನೀರಾವರಿಗಳಿಗೆ ಇಟ್ಟಿದ್ದರು. ಅದೇ ರೀತಿ 48.89 ಕೋಟಿ ರೂಪಾಯಿಗಳನ್ನು ಸಣ್ಣ ನೀರಾವರಿಗೆ ಇಟ್ಟಿದ್ದರು. ಸಮೀಕ್ಷೆ ಮತ್ತು ಅನ್ವೇಷಣೆಗಾಗಿ 2.20 ಕೋಟಿ ಇಟ್ಟಿದ್ದರು. ಒಟ್ಟು ಸುಮಾರು 523 ಕೋಟಿ ರೂಪಾಯಿಗಳನ್ನು ಅವರು ಇಟ್ಟಿದ್ದರು. ಇದು ಒಂದು ಆರ್ಥಿಕ ಗುರಿಯಾಗಿತ್ತು. ಆದರೆ ಸಾಧಿಸಿದ್ದನ್ನು ನೋಡಿದಾಗ ಅವರ ಒಂದು ವಾರ್ಷಿಕ ವರದಿ ಪ್ರಕಾರ ಕೇವಲ 318 ಕೋಟಿ ರೂಪಾಯಿಗಳನ್ನು ಮಾತ್ರ ಖರ್ಚು ಮಾಡಿದ್ದಾರೆ. ಹಾಗಾದರೆ ಮಾನ್ಯ ಮುಖ್ಯಮಂತ್ರಿಗಳು ಶೇಕಡ 60ರಷ್ಟು ಎಂದು ಏನು ಹೇಳಿದರು. 60ರಷ್ಟು ಆಗಿದೆಯೇ ಹೊರತಾಗಿ ಅದಕ್ಕಿಂತ ಹೆಚ್ಚು ಖರ್ಚು ಮಾಡುವುದಕ್ಕೆ ಆಗಿಲ್ಲ. ಒಂದು ಕಡೆ ನೀರಾವರಿ ಯೋಜನೆಗಳಿಗೆ ನಾವು ಆದ್ಯತೆಯನ್ನು ಕೊಡುತ್ತೇವೆ, ಕಾವೇರಿಯಾಗಿರಬಹುದು, ಕೃಷ್ಣ ಆಗಿರಬಹುದು ಮತ್ತು ಬೇರೆ ಬೇರೆ ಯೋಜನೆಗಳಾಗಿರಬಹುದು, ಆ ಒಂದು ನೀರಾವರಿ ಯೋಜನೆಗಳನ್ನು ನಿಗದಿತವಾದ ಸಮಯದಲ್ಲಿ ನಾವು ಪೂರ್ಣ ಮಾಡುತ್ತೇವೆ, ಹೆಚ್ಚು ಹಣವನ್ನು ಕೊಡುತ್ತೇವೆ ಎನ್ನುವ ಮಾತನ್ನು ಹೇಳಿದ್ದರೂ ಸಹ ಹೆಚ್ಚಲ್ಲದಿದ್ದರೂ ಕೊಟ್ಟಂಥ ಹಣವನ್ನೂ ಸಹ ಖರ್ಚು ಮಾಡಲಾರದಂಥ ಪರಿಸ್ಥಿತಿಯಲ್ಲಿ ನಮ್ಮ ಸರ್ಕಾರದ ಆಡಳಿತ ವ್ಯವಸ್ಥೆ ಇದೆ. ಇದು 1992–93ಕ್ಕೆ ಆರ್ಥಿಕ ಗುರಿಯನ್ನು ಪರಿಶೀಲನೆ ಮಾಡಿದಾಗ ಕಂಡುಬರುವಂಥ ವಿಚಾರ. ಅದೇ

ರೀತಿಯಾಗಿ ಒಂದು ಭೌತಿಕ ಗುರಿಯನ್ನು ಫಿಸಿಕಲ್ ಟಾರ್ಗೆಟ್ ಏನಿದೆ ಅದನ್ನು ಪರಿಶೀಲನೆ ಮಾಡಿದಾಗ ನಮ್ಮ ಗುರಿ 57,020 ಹೆಕ್ಟೇರ್‌ಗಳಿಗೆ ನಾವು ನೀರಾವರಿ ಸಾಮರ್ಥ್ಯವನ್ನು ಸೃಜಿಸಬೇಕಾಗಿತ್ತು. ಆದರೆ 1992-93ರಲ್ಲಿ ಅವರದೇ ಆದಂಥ ಅಂಕಿಅಂಶಗಳ ಪ್ರಕಾರ ಕೇವಲ 19,566 ಹೆಕ್ಟೇರ್‌ಗಳಿಗೆ ಮಾತ್ರ ಸೃಜಿಸಿದ್ದಾರೆ. ಹಾಗಾದರೆ ಅವರ ಒಂದು ಗುರಿ ಏನಿದೆ, ಆ ಗುರಿಗೆ ಇದು ಬಹಳ ಕಡಿಮೆ ಎಂಬ ಮಾತನ್ನು ಅವರು ಒಪ್ಪುತ್ತಾರೆ.

ಇದರಿಂದಾಗಿ ಶೇಕಡಾ 40ರಷ್ಟು ಮಾತ್ರ ಈ ಭೌತಿಕ ಗುರಿಯನ್ನು ಮುಟ್ಟುವುದಕ್ಕೆ ಸಾಧ್ಯವಾಗಿದ್ದಾರೆ. ಇದಕ್ಕೆ ಏನು ಕಾರಣ ? ತಮಗೆ ಗೊತ್ತಿರುವ ಹಾಗೆ ಸಂಪನ್ಮೂಲ ಸಂಗ್ರಹಣೆಯಲ್ಲಿ ನಾವು ವಿಪರೀತ ಮಾತನಾಡುತ್ತೇವೆ. ಈ ದೇಶಕ್ಕೆ ಮುಖ್ಯವಾಗಿ ಆದಾಯವನ್ನು ತರುವಂತಹ ವಾಣಿಜ್ಯ ತೆರಿಗೆ ವಿಭಾಗ ಇರಬಹುದು, ಎಕ್ಸೈಜ್ ಇರಬಹುದು, ಸ್ಟ್ಯಾಂಪ್ಸ್ ಇರಬಹುದು ಅಥವಾ ಮತ್ತೊಂದು ಪ್ರಾಮುಖ್ಯವಾದಂತಹ ಸಂಪನ್ಮೂಲ ಸಂಗ್ರಹಣೆಗೆ ಸಹಕಾರಿಯಾದಂತಹ ಇಲಾಖೆ ಇರಬಹುದು. ನಾವು ಆ ಸಂಗ್ರಹಣೆ ಮಾಡುವಾಗ ಸೋರುವುದನ್ನು ನೋಡಿದ್ದೇವೆ. ಇಲ್ಲಿ ಅದಕ್ಕೆ ತದ್ವಿರುದ್ಧವಾದ ರೀತಿಯಲ್ಲಿ ನಡೆದಿದೆ. ಕಷ್ಟಪಟ್ಟು ಸಂಗ್ರಹ ಮಾಡಿದಂತಹ ಹಣವನ್ನು ಈ ಇಲಾಖೆಗಳಿಗೆ ಕೊಟ್ಟರೂ ಸಹ ಈ ಇಲಾಖೆಯ ಆಡಳಿತ ವ್ಯವಸ್ಥೆ ಎಷ್ಟರಮಟ್ಟಿಗೆ ಇದೆ ಎಂದರೆ ಕೊಟ್ಟಂತಹ ಹಣವನ್ನು ಸಹ ಖರ್ಚು ಮಾಡಲಾರದಂತಹ ಪರಿಸ್ಥಿತಿಯಲ್ಲಿದೆ. ಇದು ಕೇವಲ ಭಾರಿ ಮತ್ತು ಮಧ್ಯಮ ನೀರಾವರಿಗಳಿಗೆ ಮಾತ್ರ ಅಲ್ಲ. ಈ ವಿಚಾರದಲ್ಲಿ ಮುಂದಕ್ಕೆ ಹೋದಾಗಲೆಲ್ಲ ಪ್ರತಿಯೊಂದು ವೈಯಕ್ತಿಕವಾದ ಯೋಜನೆಗಳು ಏನು ಇವೆ, ಕೃಷ್ಣಾ ಮೇಲ್ದಂಡೆ ಯೋಜನೆ ಇರಬಹುದು ಅಥವಾ ಬೇರೆ ಬೇರೆ ಯೋಜನೆಗಳು ಇರಬಹುದು. ಎಲ್ಲಾ ಯೋಜನೆಗಳನ್ನು ಎಷ್ಟರಮಟ್ಟಿಗೆ 1992-93ರಲ್ಲಿ ಕಾರ್ಯಗತ ಮಾಡಿದ್ದಾರೆ ಎಂದರೆ ಪ್ರತಿಯೊಂದರಲ್ಲೂ ಸಹ ಯಾವುದೇ ಗುರಿಯನ್ನು ಇವರು ಮುಟ್ಟುವುದಕ್ಕೆ ಸಾಧ್ಯವಾಗಿಲ್ಲ. ಹಾಗಾದರೆ ಕಾರಣ ಏನು ? ಒಂದು ಕಡೆ ಹಣ ಇಲ್ಲವೆಂದು ಹೇಳುವುದು ಮತ್ತೊಂದು ಕಡೆ ಇದ್ದಂತಹ ಹಣವನ್ನು ಖರ್ಚು ಮಾಡಲಾರದಂತಹ ಪರಿಸ್ಥಿತಿಯಲ್ಲಿ ಇಲಾಖೆ ಇದೆ. ಇದಕ್ಕೆ ವಿಶೇಷವಾದ ಕಾರಣ ಇರಬೇಕು. ಹೀಗೆ ಸುಮಾರು 42 ಭಾರಿ ಮತ್ತು ಮಧ್ಯಮ ನೀರಾವರಿ ಯೋಜನೆಗಳು ನಮ್ಮ ಕರ್ನಾಟಕ ರಾಜ್ಯದಲ್ಲಿವೆ. ಈ 42 ಯೋಜನೆಗಳಿಗೂ ಸಹ ನಾವು ನಿಗದಿತವಾದಂತಹ ಸಮಯದಲ್ಲಿ ಹಣವನ್ನು ಖರ್ಚು ಮಾಡಿ ನೀರಾವರಿ ಸಾಮರ್ಥ್ಯವನ್ನು ಸೃಷ್ಟಿಸಬೇಕೆಂದು ಇದ್ದರೂ ಸಹ ಇವತ್ತು ಅದು ಆಗಲಾರದ ಒಂದು ಪರಿಸ್ಥಿತಿಯನ್ನು ನಾವು ಕಾಣುತ್ತಾ ಇದ್ದೇವೆ. ಒಂದೇ ಒಂದರಲ್ಲಿ ಮಾತ್ರ ನಾನು ನೋಡಿದೆ. ಈ ಮಾತನ್ನು ಮಾನ್ಯ ಮುಖ್ಯಮಂತ್ರಿಗಳು ಇದ್ದಾಗ ಹೇಳಬೇಕು ಎಂದು ನನಗೆ ಇಷ್ಟ ಇತ್ತು. ನಾವು ಅನೇಕ ಸಂದರ್ಭದಲ್ಲಿ ಆಡಳಿತದಲ್ಲಿ ಇದ್ದಂತಹ ಜನ. ನೀವು ಈ ರಾಜ್ಯದ ಜನರ ಹಿತವನ್ನು ಕಾಪಾಡುವುದಕ್ಕಿಂತ ಹೆಚ್ಚಾಗಿ ನಮ್ಮ ನಮ್ಮ ಪ್ರದೇಶದ ಹಿತವನ್ನು ಕಾಪಾಡುವುದಕ್ಕೆ ಪ್ರಯತ್ನ ಮಾಡಿದ್ದೀರಿ ಎನ್ನುವುದಕ್ಕೆ ಒಂದೇ ಒಂದು ಉದಾಹರಣೆಯನ್ನು ಕೊಡುವುದಕ್ಕೆ ಬಯಸುತ್ತೇನೆ. ಈಗ ವಾರಾಹಿ ಯೋಜನೆ ಇದೆ. ಇದು ದಕ್ಷಿಣ ಕನ್ನಡ ಜಿಲ್ಲೆಯ ಕುಂದಾಪುರ ಮತ್ತು ಉಡುಪಿ ತಾಲ್ಲೂಕಿಗೆ ನೀರಾವರಿ ಸಾಮರ್ಥ್ಯವನ್ನು ಕೊಡಲಿಕ್ಕೆ ನಾವು ಸೃಜಿಸಿದಂತಹ ಕಾರ್ಯಕ್ರಮ. ಈ ಯೋಜನೆಯನ್ನು ಕಾರ್ಯಗತ ಮಾಡಬೇಡಿ ಎಂಬ ಮಾತನ್ನು ನಾನು ಹೇಳುತ್ತಾ ಇಲ್ಲ, ಮಾಡಬೇಕು, ತೀವ್ರವಾಗಿ ಮಾಡಬೇಕು. ಅದೇ ರೀತಿಯಾಗಿ ಬೇರೆ ಬೇರೆ ನೀರಾವರಿ ಕಾಮಗಾರಿಗಳನ್ನು ಮಾಡಬೇಕಲ್ಲ. ಒಂದೇ ಒಂದು ಮುಖ್ಯವಾದ ವಿಚಾರವನ್ನು ಮಾತ್ರ ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಈ ಒಂದು ವಾರಾಹಿ ಯೋಜನೆಗೆ 1992-93ರಲ್ಲಿ 40 ಲಕ್ಷ ರೂಪಾಯಿ ಮಾತ್ರ ಇಟ್ಟಿದ್ದರು. ಅವರ ಅಂಕಿಅಂಶಗಳ ಪ್ರಕಾರ ಖರ್ಚಾಗಿರುವುದು ಕೇವಲ 24 ಲಕ್ಷ ರೂಪಾಯಿ ಮಾತ್ರ. ಈ ಪುಸ್ತಕದಲ್ಲಿ ಅದಕ್ಕೆ ಮುಂದಿನ ಸಾಲಿಗೆ ನಾವು ಹಣವನ್ನು ಐದು ಕೋಟಿ ಇಟ್ಟಿದ್ದೇವೆಂದು ಹೇಳಿದ್ದಾರೆ. ಇವೆಲ್ಲಾ ಬೇಡ ಎಂದು ನಾನು ಹೇಳುವುದಿಲ್ಲ. ಆದರೆ

ಮಾನ್ಯ ಮುಖ್ಯಮಂತ್ರಿಗಳು ದಕ್ಷಿಣ ಕನ್ನಡ ಜಿಲ್ಲೆಯವರು ಆಗಿದ್ದಾರೆ ಎನ್ನುವ ಒಂದೇ ಒಂದು ಕಾರಣಕ್ಕೋಸ್ಕರವಾಗಿ ಎಂದು ನಾನು ಭಾವಿಸಿದ್ದೇನೆ. ಈ ವರ್ಷವೇ ಪರಿಷ್ಕೃತ ಅಂದಾಜನ್ನು ಮಾಡಿದರು. ಪರಿಷ್ಕೃತ ಅಂದಾಜು ಮಾಡಿ ಎಲ್ಲಿ ಕೇವಲ 40 ಲಕ್ಷ ರೂಪಾಯಿ ಮಾತ್ರ ಇತ್ತೋ ಅಲ್ಲಿ ಐದು ಕೋಟಿ ರೂಪಾಯಿಯನ್ನು ಹಿಂದಿನ ಒಂದೆರಡು ತಿಂಗಳಲ್ಲಿ ಕೊಟ್ಟಿದ್ದಾರೆ. 542 ಲಕ್ಷ ಅಂದರೆ ಸುಮಾರು 5 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಇದಕ್ಕೆ ಏನು ಕಾರಣ ? ಅಲ್ಲಿ ಏನಾದರೂ ಜಲಾಶಯ ಆಗಿದೆಯೇ ? ಇಲ್ಲ, ಜಲಾಶಯಕ್ಕೆ ಒಂದು ಪೈಸೆ ಸಹ ಖರ್ಚು ಆಗಿಲ್ಲ. ಅದರ ಆಣೆಕಟ್ಟು, ಕಾಲುವೆಗಳು ಮತ್ತು ಶಾಖೆಗಳು ಎಂದು ಏನಿವೆ, ಛಾನಲ್ಸ್ ಮತ್ತು ಫೀಲ್ಡ್ ಛಾನಲ್ಸ್ ಎಂದು ಏನು ಹೇಳುತ್ತೇವೆ, ಇದಕ್ಕೆ 290 ಲಕ್ಷ ರೂಪಾಯಿಗಳನ್ನು ಈ ವರ್ಷ ಕೊಟ್ಟಿದ್ದೀರಿ. ಮೊದಲು ಎಷ್ಟು ಕೊಟ್ಟಿದ್ದಿರಿ ? ಕೇವಲ 1 ಲಕ್ಷ ಎಂದು ಕಾಣುತ್ತದೆ. 1.08 ಲಕ್ಷ ರೂಪಾಯಿ. ಇಲ್ಲಿಯವರೆಗೆ ಸಹ 1992–93ರಲ್ಲಿ ಖರ್ಚು ಆಗಿರುವಂತಹ ಹಣ ಕೇವಲ 1.08 ಲಕ್ಷ ರೂಪಾಯಿ ಮಾತ್ರ. ಅಲ್ಲಿ ಕೊಟ್ಟಂತಹ 40 ಲಕ್ಷ ರೂಪಾಯಿ ಖರ್ಚು ಆಗಿಲ್ಲ. ಆದರೆ ತಮ್ಮ ಅಪೇಕ್ಷೆ ಏನು ಎಂದರೆ ಅಲ್ಲಿ ಸುಮಾರು 290 ಲಕ್ಷ ರೂಪಾಯಿಗಳನ್ನು ಪರಿಷ್ಕೃತ ಅಂದಾಜಿನಲ್ಲಿ ಸೇರಿಸಿ ಆ ಒಂದು 290.21 ಲಕ್ಷ ರೂಪಾಯಿಗಳನ್ನು ತಾವು ಕೊಟ್ಟಿದ್ದೀರಿ. ಇದಕ್ಕೆ ಕಾರಣ ಏನು ಎಂದು ಕೇಳಬಹುದೇ ? ನಮ್ಮಲ್ಲಿ ಎಲ್ಲೆಲ್ಲಿ ಕೆರೆಗಳು ಆಗಿವೆ, ಎಲ್ಲೆಲ್ಲಿ ನೀರಾವರಿ ಯೋಜನೆಗಳನ್ನು ಪೂರ್ಣ ಮಾಡಿದ್ದೇವೆ, ಎಲ್ಲೆಲ್ಲಿ ಜಲಾಶಯಗಳನ್ನು ನಿರ್ಮಾಣ ಮಾಡಿದ್ದೇವೆ, ಅಲ್ಲಿ ಕಾಲುವೆಗಳನ್ನು ಮಾಡುವುದಕ್ಕೆ ನಮಗೆ ಹಣ ಇಲ್ಲ. ಅವರೇ ಹೇಳಿದ್ದಾರೆ. ಇಲ್ಲಿಯವರೆಗೂ ಸಹ ಸೃಜಿಸಿದಂತಹ ನೀರಾವರಿ ಸಾಮರ್ಥ್ಯವನ್ನು ನಾವು ಉಪಯೋಗಿಸಿಕೊಳ್ಳಬೇಕಾದರೆ 1992–93ನ್ನೂ ಸೇರಿಸಿ ಇವತ್ತಿನ ದಿವಸ ನಾವು ಸೃಜಿಸಿದಂತಹ ನೀರಾವರಿ ಸಾಮರ್ಥ್ಯವನ್ನು ಪೂರ್ಣವಾಗಿ ಉಪಯೋಗಿಸಿಕೊಳ್ಳುವುದಕ್ಕೆ ಆಗಿಲ್ಲ. 1993–94ರಲ್ಲಿ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ ಎನ್ನುವ ಮಾತನ್ನು ಹೇಳಿದ್ದಾರೆ. ಎಲ್ಲಿದೆ ಹಣ ? ಅವರನ್ನು ನಾನು ಕೇಳುವುದು ಏನು ಎಂದರೆ, ಇವತ್ತಿನ ದಿವಸ ನಿಮ್ಮ ಕಾರ್ಯ ನಿರ್ವಹಣೆ ಹೇಗಿದೆ ಎಂದರೆ, ಈ ದೇಶದ ಜನರ ಹಿತವನ್ನು ಗಮನದಲ್ಲಿಟ್ಟುಕೊಂಡು ಅಲ್ಲ ಅಥವಾ ಆದ್ಯತೆಯ ಮೇಲೆ ನಾವು ನಮ್ಮ ಹಿತವನ್ನು ಬಟವಾಡೆ ಮಾಡುತ್ತಾ ಇಲ್ಲ, ಅದಕ್ಕೆ ಬದಲಾಗಿ ಎಲ್ಲೆಲ್ಲಿ ಪ್ರಭಾವಿ ವಲಯಗಳು ಇದ್ದಾವೆ, ಆ ಪ್ರಭಾವಿ ವಲಯಗಳಿಗೆ ಮಾತ್ರ ಹಣವನ್ನು ಕೊಡುವಂತಹ ಒಂದು ಪದ್ಧತಿ ಏನಿದೆ ಅದು ಮೊದಲಿಂದ ನಡೆದುಕೊಂಡು ಬಂದಿದೆ ಎಂದು ನಾನು ಭಾವಿಸಿದ್ದೇನೆ.

ಸನ್ಮಾನ್ಯ ಅಧ್ಯಕ್ಷರೇ, ಈ ದಿಸೆಯಿಂದ ಇವೊತ್ತಿನ ದಿವಸ ಒಂದು ಹೊಸ ದೃಷ್ಟಿಕೋನ ನೀರಾವರಿ ಇಲಾಖೆಗೆ ಬರಬೇಕಾಗಿದೆ. ನೀರಾವರಿ ಇಲಾಖೆ ಕೇವಲ ಒಂದು ಪ್ರದೇಶದ ಅಭಿವೃದ್ಧಿ ಮಾತ್ರವಲ್ಲ, ಇಡೀ ಕರ್ನಾಟಕ ರಾಜ್ಯವನ್ನು ಸಮತೋಲನ ದೃಷ್ಟಿಯಿಂದ ನೋಡಿ, ಜನತೆಯ ಹಿತದಿಂದ ನಾವು ಕಾಮಗಾರಿಗಳನ್ನು ತೆಗೆದುಕೊಳ್ಳುವ ಮತ್ತು ಆದ್ಯತೆ ಕೊಡುವಂಥ ಪ್ರವೃತ್ತಿ ನಮ್ಮಲ್ಲಿ ಬರಬೇಕಾಗಿದೆಯೆಂದು ನಾನು ಭಾವಿಸಿದ್ದೇನೆ. ಈ ದಿಸೆಯಲ್ಲಿ ನೋಡಿದಾಗ ಇವೊತ್ತಿನ ದಿವಸ ಸುಮಾರು 850 ಕೋಟಿ ರೂಪಾಯಿಗಳನ್ನು ನೀರಾವರಿ ಇಲಾಖೆಗೆ ಇಟ್ಟಿದ್ದೇವೆಂಬ ಮಾತನ್ನು ಹೇಳಿದರು. 600 ಕೋಟಿ ರೂಪಾಯಿಗಳನ್ನು ಕೃಷ್ಣ ಮತ್ತು ಬೇರೆ ಯೋಜನೆಗಳಿಗೆ ಹಾಗೂ ಸುಮಾರು 250 ಕೋಟಿ ರೂಪಾಯಿಗಳನ್ನು ಕಾವೇರಿ ಜಲಾಸಯನ ಪ್ರದೇಶಾಭಿವೃದ್ಧಿಗಾಗಿ ಇಟ್ಟಿದ್ದೇವೆಂಬ ಮಾತನ್ನು ಹೇಳಿದರು. ಇಷ್ಟು ಹಣವಲ್ಲದೆ ಇನ್ನೂ ಹೆಚ್ಚು ಹಣ ಕೊಡಲಿ. ಹಣವನ್ನು ಏನು ಕೊಟ್ಟಿದ್ದಾರೆ. ಅದನ್ನು ಸರಿಯಾದ ರೀತಿಯಲ್ಲಿ ಖರ್ಚು ಮಾಡುವಂಥ ವ್ಯವಸ್ಥೆ ಅಥವಾ ಆಡಳಿತ ವ್ಯವಸ್ಥೆ ನಮ್ಮ ರಾಜ್ಯದಲ್ಲಿಲ್ಲ ಎನ್ನುವ ಮಾತನ್ನು ಹೇಳುತ್ತೇನೆ. ಈ ಒಂದು ನೀರಾವರಿ ಇಲಾಖೆಗೆ ಏನು ಹಣವನ್ನು ಕೊಡುತ್ತಾರೆ, ಬಹಳಷ್ಟು ಹಣ ಪೋಲಾಗುತ್ತದೆಂಬ ಮಾತನ್ನು ನಾನು ಅನೇಕ ಸಂದರ್ಭಗಳಲ್ಲಿ ಹೇಳಿದ್ದೇನೆ. ಹಣ ಪೋಲಾಗುವುದಕ್ಕೆ ಏನಾದರೂ ನಿದರ್ಶನಗಳಿವೆಯೆ ? ಎಂದು

ಮಾನ್ಯ ಉಪಮುಖ್ಯಮಂತ್ರಿಗಳು ಕೇಳಬಹುದು. ಸನ್ಮಾನ್ಯ ಅಧ್ಯಕ್ಷರೆ, ನಾನು ಕಂಡಂತೆ ಅಥವಾ ನನ್ನ ಭಾವನೆಯಂತೆ ಈ ದೇಶದಲ್ಲಿ ಗುತ್ತಿಗೆದಾರರ ಹತ್ತಿರವಿರುವಂಥ ಇಲಾಖೆಯೆಂದರೆ ಈ ನೀರಾವರಿ ಇಲಾಖೆಯಾಗಿದೆ. ನಾವು ಬೇರೆ ಇಲಾಖೆಗಳ ಬೇಡಿಕೆಗಳ ಬಗ್ಗೆ ಚರ್ಚಿಸುವಾಗ ಹೇಳುತ್ತೇವೆ. ಅದು ಎಕ್ಸೈಸ್ ಇರಬಹುದು ಅಥವಾ ಬೇರೆ ಇಲಾಖೆ ಇರಬಹುದು. ಈ ದೇಶದ ಅಧಿಕಾರಿಗಳು ಬಹಳಷ್ಟು ಮಟ್ಟಿಗೆ ಬಂಡವಾಳಶಾಹಿಗಳ ಪರವಾಗಿದ್ದಾರೆಂಬ ಮಾತನ್ನು ಹೇಳಿದರೆ ತಪ್ಪಾಗಲಿಕ್ಕಿಲ್ಲ. ನಾನು ಎಲ್ಲಾ ಅಧಿಕಾರಿಗಳನ್ನು ಸಾರಾಸಗಟಾಗಿ ಹೇಳುವುದಿಲ್ಲ. ಇವೊತ್ತಿನ ದಿವಸ ಬಹಳಷ್ಟು ಜನ ಅಧಿಕಾರಿಗಳು ಈ ರಾಜ್ಯದ ಹಿತವನ್ನು ಗಮನದಲ್ಲಿಟ್ಟುಕೊಳ್ಳದೆ ಬಂಡವಾಳಶಾಹಿಗಳು, ಗುತ್ತಿಗೆದಾರರುಗಳು ಅಥವಾ ರಾಜಕೀಯ ಪ್ರತಿನಿಧಿಗಳು ಏನಿದ್ದಾರೆ, ಅವರ ಸಂಬಂಧವೇನಿದೆ, ಆ ಸಂಬಂಧದಲ್ಲಿ ಭಾಗಿಯಾಗಿದ್ದಾರೆಂದರೆ ತಪ್ಪಾಗುವುದಿಲ್ಲ. ಇದರ ಬಗ್ಗೆ ಒಂದೆರಡು ಉದಾಹರಣೆಗಳನ್ನು ಮಾತ್ರ ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ನಮ್ಮಲ್ಲಿ ಏನು ಇಂಜಿನಿಯರುಗಳಿದ್ದಾರೆ, ಅವರು ಅನೇಕ ಸಂದರ್ಭಗಳಲ್ಲಿ ಅವರ ಸ್ವಭಾವದಿಂದ ಮೃದುವಾದ ಕಲ್ಲುಗಳು ಗಟ್ಟಿಯಾಗುತ್ತವೆ. ಗಟ್ಟಿಯಾದಂಥ ಕಲ್ಲುಗಳು ಮೃದುವಾಗುವುದನ್ನು ನೋಡಿದ್ದೇವೆ. ಈ ಕುರಿತು ಒಂದೆರಡು ಸರ್ಕಾರಿ ಆದೇಶಗಳನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಇಂತಹ ಸರ್ಕಾರಿ ಆದೇಶಗಳು 1989ರಲ್ಲಾಗಿರಬಹುದು, 1990ರಲ್ಲಾಗಿರಬಹುದು. ಕಳೆದ ಮೂರು ವರ್ಷಗಳ ಅವಧಿಯಲ್ಲಿ ಏನೇನಾಗಿದೆಯೆಂಬುದರ ಬಗ್ಗೆ ಸರ್ಕಾರ ಒಂದು ಶ್ವೇತಪತ್ರ ಹೊರಡಿಸಬೇಕು. ತಾವು ಎಷ್ಟು ಸರ್ಕಾರಿ ಆದೇಶಗಳನ್ನು ಹೊರಡಿಸಿ, ಎಷ್ಟು ಸಮಿತಿಗಳನ್ನು ನೇಮಕ ಮಾಡಿ, ಈ ದೇಶದ ಬಂಡವಾಳಗಾರರಿಗೆ, ಗುತ್ತಿಗೆದಾರರಿಗೆ ಎಷ್ಟು ಕೋಟಿ ರೂಪಾಯಿಗಳ ಹಣವನ್ನು ತಾವು ಕೊಟ್ಟಿದ್ದೀರೆಂಬುದು ಈ ದೇಶದ ಜನರಿಗೆ ಗೊತ್ತಾಗಬೇಕು. ಇದರ ಬಗ್ಗೆ ನಾನು ಒಂದು ಉದಾಹರಣೆ ಹೇಳುತ್ತೇನೆ. ಮುದಬಾಗಿಲು ಬ್ಯಾಂಕಿನಲ್ಲಿ ಒಂದು ಸಲ ಅಲ್ಲಿದ್ದಂಥ ಗುತ್ತಿಗೆದಾರನಿಗೂ ಮತ್ತು ಇಂಜಿನಿಯರ್‌ಗೂ ಜಗಳವುಂಟಾಯಿತು. ನನಗೆ ಗೊತ್ತಿರುವಂತೆ ಇಂಟರ್‌ನ್ಯಾಷನಲ್ ಬಿಡ್ಡಿಂಗ್ ಡಾಕ್ಯುಮೆಂಟ್ಸ್ ಏನಿದೆ, ಇದರಲ್ಲಿ ನಾವುಒಂದು ನಿಯಮ ಮಾಡಿಕೊಂಡಿದ್ದೇವೆ. ಯಾವುದಾದರೊಂದು ಕ್ಲಾಸಿಫಿಕೇಷನ್ ಅಥವಾ ಒಂದು ಕಲ್ಲು ಮೃದು ಅಥವಾ ಗಟ್ಟಿ ಎಂದು ಹೇಳುವಂಥ ತೀರ್ಮಾನಮಾಡುವಂಥ ಅಧಿಕಾರವನ್ನು ಅಲ್ಲಿರುವಂಥ ಇಂಜಿನಿಯರುಗಳಿಗೆ ನಾವು ಕೊಟ್ಟಿದ್ದೇವೆ. ಅಲ್ಲಿರುವಂಥ ಚೀಫ್ ಇಂಜಿನಿಯರ್ ಒಂದು ದಿವಸ ಒಂದು ಹೇಳುತ್ತಾನೆ, ಮತ್ತೊಂದು ದಿವಸ ಇನ್ನೊಂದು ಹೇಳುತ್ತಾನೆ. ಅಷ್ಟೇ ಅಲ್ಲ, ತಮಗೆ ಗೊತ್ತಿರುವಂತೆ, 'ಷೇಲ್' ಎಂಬ ಕಲ್ಲಿನ ಬಗ್ಗೆ ನಾನು ಹಿಂದಿನ ಸಲ ಪ್ರಸ್ತಾಪ ಮಾಡಿದ್ದೇನೆ. ಪ್ರಸ್ತಾಪಿಸಿದ ನಂತರ ಏನು ಅನುಕೂಲವಾಯಿತೆಂದರೆ ಈ ದೇಶದ ಎಲ್ಲಾ ಗುತ್ತಿಗೆದಾರರೂ ಸಹ ಈ ಷೇಲ್ ಎಂಬುದು ಬಹಳ ಗಟ್ಟಿಯಾದಂಥ ಕಲ್ಲು, ನಾವು ಇದನ್ನು ಗಟ್ಟಿಯಾದಂಥ ಕಲ್ಲು ಎಂದು ತೀರ್ಮಾನ ಮಾಡಿ ಅದೇ ಹಣವನ್ನು ಕೊಡಬೇಕೆಂದು ಸರ್ಕಾರವನ್ನು ಕೇಳಿದರು. ಸರ್ಕಾರದಲ್ಲಿದ್ದಂಥ ಜನ ಅಷ್ಟೇ ಮೃದುವಾಗಿ ಅದನ್ನು ಗಟ್ಟಿಯಾದ ಕಲ್ಲು ಎಂದು ತೀರ್ಮಾನಿಸಿ ಅವರಿಗೆ ಕೋಟಿಗಟ್ಟಲೆ ಹಣವನ್ನು ಕೊಟ್ಟರು. ಇವೊತ್ತಿನ ದಿವಸ ನಮಗೆಲ್ಲಾ ಗೊತ್ತಿರುವಂತೆ ಮಾನ್ಯ ಉಪಮುಖ್ಯಮಂತ್ರಿಗಳಿಗೆ ಗೊತ್ತಿರುವಂತೆ, ಯಾರು ಈ ದೇಶದಲ್ಲಿ 'ಷೇಲ್' ಅಥವಾ 'ಸ್ಲೇಟ್' ಎಂದು ಏನು ಹೇಳುತ್ತಾರೆ, ಅದನ್ನು ಗಟ್ಟಿ ಕಲ್ಲು ಎಂದು ಹೇಳುವುದಿಲ್ಲ. ಅಷ್ಟೇ ಅಲ್ಲ, ಇದು ಮೃದುವಾದಂಥ ಕಲ್ಲು ಎಂದು ನಾವು ನಮ್ಮ ನಿಯಮಗಳಲ್ಲಿ ಬರೆದುಕೊಂಡಿದ್ದೇವೆ, ಅಗ್ರಿಮೆಂಟ್‌ನಲ್ಲೂ ಸಹ ಬರೆದುಕೊಂಡಿದ್ದೇವೆ. ಹೀಗಿದ್ದರೂ ಸಹ ಇದನ್ನು ಬಹಳ 'ಹಾರ್ಡ್‌ರಾಕ್' ಎಂದು ಕರೆದು ಹಾರ್ಡ್‌ರಾಕ್‌ಗೆ ಕೊಡುವಷ್ಟೇ ಹಣವನ್ನು ಕೊಟ್ಟರು ಮತ್ತು ತಮಗೆ ಗೊತ್ತಿರುವಂತೆ ಎಲ್ಲೆಲ್ಲಿ ಈ ಒಂದು ಗುತ್ತಿಗೆ ಇದೆ, ಈ ಗುತ್ತಿಗೆ ಹಣವನ್ನು ಕೊಡುವಾಗ ಇನ್ನೊಂದು ಹೊಸ ನಿಯಮಗಳನ್ನು ಮಾಡಿಕೊಂಡಿದ್ದಾರೆ. ಈ ದೇಶದಲ್ಲಿ ನಿಮ್ಮ ಗುತ್ತಿಗೆ ಕರಾರು ಏನಿದೆ, ಅದು ಮೊದಲು

ಪರಿಷ್ಕರಣೆಯಾಗಬೇಕು. ಇದು ದೇಶದಲ್ಲಿರುವಂಥ ಬಂಡವಾಳಗಾರರಿಗೆ, ಗುತ್ತಿಗೆದಾರರಿಗೆ ಅನುಕೂಲವಾಗಿದೆಯೇ ಹೊರತು ಸರ್ಕಾರಕ್ಕಾಗಲಿ, ಜನ ಸಾಮಾನ್ಯರ ಹಿತ ಕಾಪಾಡುವಂಥ ರೀತಿಯಲ್ಲಿ ಗುತ್ತಿಗೆ ಕರಾರಿನ ನಿಬಂಧನೆಗಳು ಇಲ್ಲವೆಂದು ಹೇಳುತ್ತೇನೆ. 100 ಚದರ ಅಡಿ ಎಂದರೆ ಅದು ಕ್ಯುಬಿಕ್ ಮೀಟರ್ ಆಗಿರಬಹುದು, ಘನ ಅಡಿ ಇರಬಹುದು. ಅಷ್ಟು ಕಲ್ಲಿಗೆ ನಾವು ಇದರಲ್ಲಿ ಏನಾದರೂ ಕ್ವಾಂಟಿಟಿ 125ರಷ್ಟು ಅಂದರೆ 25ರಷ್ಟು ಜಾಸ್ತಿಯಾದರೆ ಅಥವಾ ಕಡಿಮೆಯಾದರೆ ಸಂಬಂಧಪಟ್ಟ ಗುತ್ತಿಗೆದಾರರಿಗೆ ನಾವು ಹೆಚ್ಚು ಹಣವನ್ನು ಕೊಡಬೇಕೆನ್ನುವ ಒಂದು ನಿಯಮ ಮಾಡಿಕೊಂಡಿದ್ದೇವೆ.

ಇದನ್ನು ಏಕೆ ಹೇಳುತ್ತಿದ್ದೇನೆಂದರೆ 'ಷೇಲ್' ಎನ್ನತಕ್ಕಂಥ ಮೃದುವಾದಂಥ ಕಲ್ಲನ್ನು ಗಟ್ಟಿ ಕಲ್ಲೆಂದು ತೀರ್ಮಾನ ಮಾಡಿದ್ದರಿಂದ ಅವನಿಗೆ ಎರಡು ವಿಧದಲ್ಲಿ ಲಾಭವಾಯಿತು. ಒಂದು ಮೃದುವಾದ ಕಲ್ಲನ್ನು ಗಟ್ಟಿಯೆಂದು ಗಟ್ಟಿ ಕಲ್ಲಿನ ದರವನ್ನು ತೆಗೆದುಕೊಂಡದ್ದು, ಮತ್ತೊಂದು ಕ್ವಾಂಟಿಟಿ 125ಕ್ಕಿಂತ ಹೆಚ್ಚಾಗಿದ್ದಕ್ಕೆ ಆ ರೀತಿ ಹೆಚ್ಚಾಗಿದ್ದಂಥ ರೀತಿಯಲ್ಲಿ ಬೆಲೆಯನ್ನು ಪಡೆದುಕೊಂಡಿದ್ದು. ಈ ದಿಸೆಯಲ್ಲಿ ಒಂದೇ ಒಂದು ವಿಷಯಕ್ಕೆ ಸನ್ಮಾನ್ಯ ಉಪಮುಖ್ಯಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ. ಮುದುನಾಳ್‌ನಲ್ಲಿ ಈ ರೀತಿಯಾದ ಒಂದು ವಿವಾದವಾಯಿತು. ಆ ರೀತಿ ಆದ ವಿವಾದದ ಬಗ್ಗೆ ಆತ ಅರ್ಜಿಯನ್ನು ಕೊಟ್ಟರೆ ಅಲ್ಲಿರತಕ್ಕ ಚೀಫ್ ಇಂಜಿನಿಯರ್‌ರವರು ಇದು ಅಲ್ಲ ಎಂದು ಹೇಳಿದರು. ಅನಂತರ ಅವರು ಸರ್ಕಾರಕ್ಕೆ, ಮಂತ್ರಿಗಳಿಗೆ ಅರ್ಜಿಯನ್ನು ಕೊಡುತ್ತಾರೆ. ಆಗ ಅವರು ಏನು ಮಾಡುತ್ತಾರೆಂದರೆ, ಈ ದೇಶದಲ್ಲಿ ಹೊಸದಾದ ಒಂದು ಆಡಳಿತ ವ್ಯವಸ್ಥೆ ಬಂದಿದೆ, ಸಂಬಂಧಪಟ್ಟ ಅಧಿಕಾರಿಗಳಿಗೆ ಅದನ್ನು ತೀರ್ಮಾನ ಮಾಡತಕ್ಕ ಅಧಿಕಾರವಿದೆ, ಸಂಬಂಧಪಟ್ಟ ಕಾರ್ಯದರ್ಶಿಗಳಿಗೆ, ಮಂತ್ರಿಗಳಿಗೆ ಇದರ ಬಗ್ಗೆ ನಿರ್ಣಯ ತೆಗೆದುಕೊಳ್ಳತಕ್ಕ ಅಧಿಕಾರ ಇದೆ. ಆದರೆ ಅವರುಗಳು ಆ ಒಂದು ಹೊಣೆಗಾರಿಕೆಯನ್ನು ನಿರ್ವಹಿಸಲು ಇಷ್ಟಪಡುವುದಿಲ್ಲ. ಅದಕ್ಕೆ ಬೇರೆ ಮಾರ್ಗದಿಂದ, ತಮಗೆ ಸರಿ ಎನಿಸಿದ್ದನ್ನು ಬೇರೆಯವರ ಮುಖಾಂತರ ಮಾಡಿಸಿಕೊಳ್ಳುವ ಹವ್ಯಾಸ ನಮ್ಮಲ್ಲಿ ಮೊದಲಿನಿಂದಲೂ ನಡೆದುಕೊಂಡು ಬಂದಿದೆ. ಅವರು ಇದಕ್ಕಾಗಿ ಒಂದು ಕಮಿಟಿಯನ್ನು ನೇಮಕ ಮಾಡುತ್ತಾರೆ. ಆ ಕಮಿಟಿಯಲ್ಲಿ ಇರತಕ್ಕ ಸದಸ್ಯರುಗಳು ಯಾರೆಂದರೆ ನಿವೃತ್ತರಾದ ಚೀಫ್ ಇಂಜಿನಿಯರ್‌ರವರು. ತಮಗೆ ಗೊತ್ತಿದೆ ಅವರು ಅಲ್ಲಿ ಏಕೆ ಬೇಕು? ಅವರು ಅಂಥ ಒಂದು ಸಮಿತಿಯನ್ನು ನೇಮಕ ಮಾಡಿಕೊಳ್ಳುವುದರ ಮುಖಾಂತರ ಅವರಿಂದ ಒಂದು ಶಿಫಾರಸ್ಸನ್ನು ತೆಗೆದುಕೊಳ್ಳುವುದು ಆ ಶಿಫಾರಸ್ಸನ್ನು ಓದಿದರೆ ಈ ದೇಶದ ಎಂಥ ನರಸತ್ತ ಪ್ರಾಣಿಗೂ ಕೂಡ ಸಿಟ್ಟುಬರುತ್ತದೆ. ಆ ಶಿಫಾರಸ್ಸಿನ ಎಲ್ಲಾ ವಿಷಯವನ್ನು ಓದದೆ ಕೆಲವೊಂದು ಅಂಶಗಳನ್ನು ಮಾತ್ರ ಹೇಳುವುದಕ್ಕೆ ಇಷ್ಟಪಡುತ್ತೇನೆ. ಎಷ್ಟರಮಟ್ಟಿಗೆ ಈ ಕಮಿಟಿ ಇದೆ, ಇದನ್ನು ಟೆಕ್ನಿಕಲ್ ಕಮಿಟಿ ಎಂದು ಕರೆಯುತ್ತಾರೆಯೋ ಗೊತ್ತಿಲ್ಲ. ಆ ಕಮಿಟಿಯ ಹೆಸರಿನಲ್ಲಿ ಅವರು ಒಂದು ಶಿಫಾರಸ್ಸನ್ನು ಮಾಡುತ್ತಾರೆ. ಈ 'ಷೇಲ್' ಎನ್ನತಕ್ಕದ್ದು ಬಹಳ ಗಟ್ಟಿಯಾದ ಕಲ್ಲು ಇದಕ್ಕೆ ಹೆಚ್ಚು ಹಣವನ್ನು ಕೊಡಬೇಕೆಂದು ಹೇಳುತ್ತಾರೆ. ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ಅಲ್ಲಿರತಕ್ಕ ಕಾರ್ಯದರ್ಶಿಯಾಗಲಿ, ಹಣಕಾಸಿನ ಕಾರ್ಯದರ್ಶಿಯಾಗಲಿ, ಸಂಬಂಧಪಟ್ಟ ಮಂತ್ರಿಗಳಾಗಲಿ ತಲೆಕೆಡಿಸಿಕೊಳ್ಳಲು ಹೋಗುವುದಿಲ್ಲ. ಅವರು ಏನು ಹೇಳುತ್ತಾರೆಂದರೆ, ಇಂಥ ಒಂದು ಸಮಿತಿ ಇದೆ, ನಾವು ಅದರ ತೀರ್ಮಾನವನ್ನು ಒಪ್ಪಿಕೊಳ್ಳುತ್ತೇವೆ ಎಂದು ಹೇಳಿ ಅವರಿಗೆ ಕೋಟ್ಯಾಂತರ ರೂಪಾಯಿಗಳನ್ನು ಕೊಟ್ಟಿದ್ದಾರೆ. ಹಾಗಾದರೆ ಈ ಸರ್ಕಾರ ಯಾರ ಪರವಾಗಿದೆ ಅಧ್ಯಕ್ಷರೆ? ಇಂಥ ಒಂದು ಆದೇಶವನ್ನು ಐಡಿ ನಂ:51 ಡಬ್ಲ್ಯೂಸಿ 90, ತಾರೀಖು 14–8–1991 ರಂದು ಹೊರಡಿಸಿ ಸಂಬಂಧಪಟ್ಟವರಿಗೆ ಕೋಟ್ಯಾಂತರ ರೂಪಾಯಿಗಳನ್ನು ಕೊಟ್ಟರು. ಮತ್ತೆ ಇದರಲ್ಲಿ ಒಂದು ಒಳ್ಳೆಯ ವಾಕ್ಯವನ್ನು ಹೇಳುತ್ತಾರೆ, ಅದೇನೆಂದರೆ: 'under the circumstances the recommendation of the Expert Committee on the issue of classification

of the disputed escalation items on gong ICB Mudnal Canal of Upper Krishna Bank as noted in the Preamble are accepted subject to the condition that these recommendations are exclusively for Mudnal Bank Canal should not become precedent for any other work....

ಇದು ನಿಜವಾಗಿಯೂ ಸರ್ಕಾರದ ಇರಾದೆ, ಅಪೇಕ್ಷೆಯಾಗಿದ್ದರೆ ಇದು ನಡೆಯಬೇಕಾಗಿತ್ತು. ಆದರೆ ಇದು ನಡೆಯಲಿಲ್ಲ, ಇದನ್ನೇ ನಮೂದು ಮಾಡಿ ಇನ್ನೊಂದು ಕಡೆ ಇಂಡಿ ಬ್ಯಾಂಕ್ ಗುತ್ತಿಗೆದಾರರು ಬರುತ್ತಾರೆ, ಅದನ್ನೂ ಸಹ ಓದುತ್ತೇನೆ, ಅದೇನೆಂದರೆ:

Under the circumstances noted in the Preamble approval is hereby accorded for working of claims of 3 ICB Contracts, Indi Bank Canal from 0.30 K.m. as noted in paras 2 and 3 of the preamble of the same Expert Committee that examined the issue of classification of hard slate in Mudnal Bank Canal....

ಅದೇ ಆಜ್ಞೆಯಲ್ಲಿ ಇದು ಯಾರಿಗೂ ಅನ್ವಯವಾಗಬಾರದೆಂದು ಹೇಳುತ್ತಾರೆ. ಆದರೆ ಸರ್ಕಾರದವರು ಪುನಃ ಅಂಥದ್ದೇ ಒಂದು ಆದೇಶವನ್ನು ಈ ಒಂದು ಪರಿಣಿತರ ಸಮಿತಿಯು ಕೊಡಲು ಹೇಳುತ್ತಾರೆ ಮತ್ತು ಕೋಟಿಗಟ್ಟಲೆ ಹಣವನ್ನು ಕೊಟ್ಟಿರುತ್ತಾರೆ. ಸ್ವಾಮಿ ಇದು ಯಾರ ಹಣ. ಇದನ್ನು ಏಕೆ ಹೇಳುತ್ತಿದ್ದೇನೆಂದರೆ, ಇಲ್ಲಿರತಕ್ಕ ಬಹಳಷ್ಟು ಅಧಿಕಾರಿಗಳು, ಅವರು ಯಾರೇ ಆಗಿರಲಿ, ಅವರು ಈ ದೇಶದ ಹಿತವನ್ನು ಕಾಪಾಡುವುದಕ್ಕಿಂತ ಹೆಚ್ಚಾಗಿ ಈ ದೇಶದ ಬಂಡವಾಳಗಾರರು ಯಾರಿದ್ದಾರೆ, ಮಂತ್ರಿಗಳ ಹತ್ತಿರ ಓಡಾಡುವವರು ಯಾರು ಇದ್ದಾರೆ ಅವರ ಹಿತವನ್ನು ಕಾಪಾಡುವುದರಲ್ಲಿ ಹೆಚ್ಚು ಆಸಕ್ತಿ ವಹಿಸುತ್ತಿದ್ದಾರೆ.

ಇಂಥ ಹೊಣೆಗಾರಿಕೆಯನ್ನು ನಿರ್ವಹಿಸಬೇಕಾದ ಕಾರ್ಯದರ್ಶಿಗಳು ಅಥವಾ ಸಂಬಂಧಪಟ್ಟ ಇಂಜಿನಿಯರ್‌ಗಳು ಯಾರಿದ್ದಾರೆ ಅವರು ಈ ಕೆಲಸವನ್ನು ಗಮನಕ್ಕೆ ತೆಗೆದುಕೊಳ್ಳುವುದಿಲ್ಲ. ಅವರು ಹೇಗೆ ಇವೇಡ್ ಮಾಡುತ್ತಾರೆಂದರೆ: this is the way. They recommend for constitution of Expert Committee. They refer to Expert Committee, they get some opinion wanted and they will pay the amount....

ಇದು ಒಂದೇ ಅಲ್ಲ. ಕೇವಲ 2 ಆದೇಶಗಳನ್ನು ಮಾತ್ರ ತಮ್ಮ ಗಮನಕ್ಕೆ ತರುತ್ತಿದ್ದೇನೆ. ಕಳೆದ 2-3 ವರ್ಷಗಳ ಅವಧಿಯಲ್ಲಿ ಇಂಥ ವಂಚನೆಯನ್ನು ಈ ದೇಶದ ಅಧಿಕಾರಿಗಳು ಮತ್ತು ರಾಜಕಾರಣಿಗಳು ಶಾಮೀಲಾಗಿ ಮಾಡುತ್ತಿದ್ದಾರೆಂದು ಹೇಳಬಯಸುತ್ತೇನೆ. ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ಹಿಂದೆ ನಾನು ಇದೇ ಸದನದಲ್ಲಿ ಪ್ರಸ್ತಾಪ ಮಾಡಿದಾಗ ಇದರಲ್ಲಿ ನಿಮಗೇನಾದರೂ ಆಸಕ್ತಿ ಇದ್ದಿದ್ದರೆ ನೀವು ವಿಚಾರಣೆಯನ್ನು ಮಾಡುತ್ತಿದ್ದಿರಿ. ನಾನು ಹಿಂದೆ ಇದೇ ವಿಚಾರವನ್ನು ಪ್ರಸ್ತಾಪ ಮಾಡಿದಾಗ ಅದನ್ನು ಯಾರೂ ಗಮನಿಸಲಿಲ್ಲ. ಏಕೆಂದರೆ ಅವರಿಗೆ ಇದು ಬೇಕಾಗಿಲ್ಲ. ನಮಗೆ ಯಾರೇ ಅಧಿಕಾರಿಯನ್ನಾಗಲಿ ಕಂಡಾಗ ಅವರ ಬಗ್ಗೆ ವಿಶೇಷವಾದ ದ್ವೇಷವಾಗಲಿ, ಪ್ರೀತಿಯಾಗಲಿ ಇಲ್ಲ. ಈ ದೇಶದ ಜನಸಾಮಾನ್ಯರ ಹಿತವನ್ನು ಗಮನದಲ್ಲಿಟ್ಟುಕೊಂಡು ಈ ಸದನದಲ್ಲಿ ಯಾವುದಾದರೊಂದು ವಿಚಾರವನ್ನು ಪ್ರಸ್ತಾಪ ಮಾಡಿದರೆ ಹೊಣೆಗಾರಿಕೆ ಇರತಕ್ಕ ಯಾವುದೇ ಸರ್ಕಾರವಾದರೂ ಅದರ ಬಗ್ಗೆ ತನಿಖೆಯನ್ನು ಮಾಡಿಸಬೇಕು. ಹಾಗೇನಾದರೂ ಇವರು ಮಾಡಿದ್ದಾರೆಯೆ ? ಯಾವುದಾದರೂ ಕ್ರಮವನ್ನು ತೆಗೆದುಕೊಂಡಿದ್ದಾರೆಯೆ ? ತೆಗೆದುಕೊಂಡಿಲ್ಲವೆಂದು

ನಾನು ಭಾವಿಸುವುದಾದರೆ ತಾವು ನನಗೆ ಮನವರಿಕೆ ಮಾಡಿಕೊಡಿ. ತಾವು ಕ್ರಮವನ್ನು ತೆಗೆದುಕೊಂಡಿದ್ದರೆ ನಾನು ತಮಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಕ್ರಮ ತೆಗದುಕೊಂಡಿಲ್ಲದಿದ್ದರೆ ಇದರಲ್ಲಿ ಸರ್ಕಾರದ ಪಾತ್ರವೇನು ? ಸರ್ಕಾರ ಇದರಲ್ಲಿ ಶಾಮೀಲಾಗಿದೆ ಎಂದು ನಾನು ಏತಕ್ಕೆ ಹೇಳಬಾರದು ? ಇದು ಒಂದು ಮಾರ್ಗ.

ಇನ್ನೊಂದು ಬಹಳ ಅತ್ಯುತ್ತಮವಾದ ಮಾರ್ಗವನ್ನು ಇವರು ಆರಿಸಿಕೊಂಡಿದ್ದಾರೆ. ಅದೇನೆಂದರೆ ಸಂಬಂಧಪಟ್ಟ ಕಂಟ್ರ್ಯಾಕ್ಟ್‌ದಾರನಿಗೆ, ಅವನಿಗೆ ಬೇಕಾದ ರೀತಿಯಲ್ಲಿ ಸಹಾಯ ಮಾಡುವುದಕ್ಕಾಗಿ ಸರ್ಕಾರದ ಇಲಾಖೆಯವರು ತಾವೇ ತಪ್ಪುಗಳನ್ನು ಮಾಡುವುದು, ಆ ತಪ್ಪುಗಳನ್ನು ಆಧಾರವಾಗಿಟ್ಟುಕೊಂಡು ಆ ಕಂಟ್ರ್ಯಾಕ್ಟರ್ ಆರ್ಬಿಟ್ರೇಷನ್‌ಗೆ ಹೋಗುತ್ತಾನೆ. ಅಲ್ಲಿ ನಮ್ಮ ಈ ಸರ್ಕಾರಿ ವಕೀಲರ ನೆರವಿನಿಂದ ಕಂಟ್ರ್ಯಾಕ್ಟ್‌ದಾರರು ಲಾಭ ಪಡೆದುಕೊಳ್ಳುತ್ತಿದ್ದಾರೆ. ಏಕೆಂದರೆ ಅನೇಕ ದೃಷ್ಟಾಂತಗಳು ನಮ್ಮೆದುರಿಗೆ ಇವೆ. ಅನೇಕ ಸಂದರ್ಭಗಳಲ್ಲಿ ನಮ್ಮ ಸರ್ಕಾರದ ಹಿತವನ್ನು ಕಾಪಾಡುವಂಥ ಈ ವಕೀಲರು ಯಾರಿದ್ದಾರೆ ಅವರು ಈ ಕಂಟ್ರ್ಯಾಕ್ಟ್‌ದಾರರಿಗೆ ಸಹಾಯ ಮಾಡುತ್ತಾರೆಂಬು ಸಂಶಯ ಬರುವ ರೀತಿಯಲ್ಲಿ ನಡೆದುಕೊಂಡಿದ್ದಾರೆ. ಈ ರೀತಿ ಆರ್ಬಿಟ್ರೇಷನ್‌ಗೆ ರೆಫರ್ ಮಾಡುವುದರ ಮುಖಾಂತರ ಕೋಟಿಗಟ್ಟಲೆ ಹಣವನ್ನು ಇವರು ಕೊಟ್ಟಿದ್ದಾರೆ. ಇದಕ್ಕೆ ಸಂಬಂಧಪಟ್ಟಂತೆ ಒಂದೇ ಒಂದು ಅಂಶವನ್ನು ತಮ್ಮ ಗಮನಕ್ಕೆ ತರುತ್ತೇನೆ. ಇಲ್ಲಿ 213 ಲಕ್ಷ ರೂಪಾಯಿಗಳನ್ನು ಇವರು ಕೊಟ್ಟಿದ್ದಾರೆ. ನಮ್ಮ ಊರಿನಲ್ಲಿ ಒಂದು ಕೆರೆಯನ್ನು ಕಟ್ಟಬೇಕು, 500 ರೂಪಾಯಿ ಕೊಡಿ ಎಂದರೆ ಅದಕ್ಕೆ ದುಡ್ಡಿಲ್ಲ. ಮಳೆಯ ಪ್ರವಾಹದಿಂದ ನಮ್ಮ ಊರಿನಲ್ಲಿ ಒಂದು ಕೆರೆ ಒಡೆದುಹೋಯಿತು, ಅದಕ್ಕೆ 5 ಲಕ್ಷ ರೂಪಾಯಿ ಕೊಡಿ ಎಂದರೆ ಈ ಬಜೆಟ್‌ನಲ್ಲಿ ಎಲ್ಲೂ ಕಾಣುವುದಿಲ್ಲ. ನಾನಾದರೂ ಹೇಳುತ್ತೇನೆ, ಆರ್ಬಿಟ್ರೇಷನ್ ಮುಖಾಂತರ ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳು ಶಾಮೀಲಾಗಿ ಕಂಟ್ರ್ಯಾಕ್ಟ್‌ದಾರರಿಗೆ ನೆರವಾಗುವ ರೀತಿಯಲ್ಲಿ ಆರ್ಬಿಟ್ರೇಷನ್ ಪ್ರೊಸೀಡಿಂಗ್ಸ್‌ನ್ನು ನಡೆಸಿ ಕೋಟಿಗಟ್ಟಲೆ ಹಣವನ್ನು ಕೊಡಿಸುವಂಥ ಪ್ರವೃತ್ತಿ ನಡೆದುಕೊಂಡು ಬಂದಿದೆ. ಇದನ್ನು ತಾವು ಮೊದಲು ತಡೆಹಿಡಿಯಬೇಕು. ಇದಕ್ಕೆ ಒಂದೆರಡು ಉದಾಹರಣೆಗಳನ್ನು ತಮ್ಮ ಮುಂದೆ ಹೇಳಬಯಸುತ್ತೇನೆ. ಆದೇಶ ಸಂಖ್ಯೆ ಪಿಡಬ್ಲ್ಯುಡಿ 56, ಡಬ್ಲ್ಯುಡಿ 88, ತಾ:2–7–88. ಈ ಆದೇಶವನ್ನು ಸರ್ಕಾರದವರು ಹೊರಡಿಸುವಾಗ ಸ್ಪಷ್ಟವಾಗಿ ಒಂದು ಮಾತನ್ನು ಏನು ಹೇಳಿದ್ದಾರೆ ಎಂದರೆ ಇದರಲ್ಲಿ ಯಾರ್ಯಾರು ತಪ್ಪು ಮಾಡಿದ್ದಾರೆ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿದ್ದಾರೆ. ಇದಕ್ಕಾಗಿ ಒಬ್ಬ ವಿಚಾರಣಾಧಿಕಾರಿಯನ್ನು ಇವರು ನೇಮಕ ಮಾಡಿದ್ದಾರೆ. ಆದರೆ ಆ ವಿಚಾರಣಾಧಿಕಾರಿ ಯಾವುದೇ ಕೆಲಸವನ್ನೂ ಮಾಡಿಲ್ಲ. ಆತ ಕೆಲಸವನ್ನು ಮಾಡಲಿಲ್ಲವೆಂದು ನಂತರ 5 ಜನ ಅಧಿಕಾರಿಗಳನ್ನು ಬದಲಾವಣೆ ಮಾಡಿದ್ದಾರೆ. ಕೊನೆಯದಾಗಿ ಹೇಳುವುದಾದರೆ, ಪ್ರತಿಯೊಂದನ್ನೂ ದೀರ್ಘವಾಗಿ ಹೇಳುವುದಕ್ಕೆ ಆಗುವುದಿಲ್ಲ. ಅವರು ಏನು ತಪ್ಪು ಮಾಡಿದ್ದಾರೆ ಆ ತಪ್ಪುಗಳನ್ನು ವಿಚಾರಣೆ ಮಾಡಬೇಕೆಂದು ಈ ಆದೇಶದಲ್ಲಿ ಹೇಳಿದ್ದಾರೆ. ಪುನಃ ಇದೇ ಆದೇಶವನ್ನು ಜಾರಿ ಮಾಡುವ ಸಂದರ್ಭದಲ್ಲೂ ಕೂಡ ಅಧಿಕಾರಿ ಮೇಲೆ ಏನಾದರೂ ಕ್ರಮ ತೆಗೆದುಕೊಂಡಿದ್ದಾರೆಯೇ ಎಂಬುದನ್ನು ಕೇಳುವಂಥ ಸೌಜನ್ಯ ಯಾರಲ್ಲೂ ಇಲ್ಲ. ಈ ಸಚಿವಾಲಯದಲ್ಲಿರತಕ್ಕ ಹಿರಿಯ ಅಧಿಕಾರಿಗಳು ಯಾರಿದ್ದಾರೆ ಇವರು ಅವರ ಜೊತೆ ಶಾಮೀಲಾಗಿದ್ದಾರೆ. ಆ ಅಧಿಕಾರಿಗಳಿಗೆ ಈ ರಾಜ್ಯದ ರಾಜಕಾರಣಿಗಳ ಕುಮ್ಮಕ್ಕೂ ಇದೆಯೆಂಬುದನ್ನು ಇದು ಸೂಚಿಸುತ್ತದೆ. ಇಲ್ಲದಿದ್ದರೆ ಇವರ ಮೇಲೆ ಕ್ರಮ ತೆಗೆದುಕೊಳ್ಳಬೇಕಾಗಿತ್ತು. ಅನೇಕ ಸಂದರ್ಭಗಳಲ್ಲಿ ನಾನು ನೋಡಿದ್ದೇನೆ; ಈ ಎಲ್ಲಾ ಅಧಿಕಾರಿಗಳಿಗೂ ನಾವು ರಕ್ಷಣೆಯನ್ನು ಕೊಡುತ್ತೇವೆ. ಯಾವ ರೀತಿ ಎಂದರೆ ತಪ್ಪಿತಸ್ಥರ ವಿರುದ್ಧ ಕ್ರಮ ತೆಗದುಕೊಳ್ಳಿ ಎಂದರೆ ಅದಕ್ಕ ಸಂಬಂಧಪಟ್ಟ ಫೈಲುಗಳೇ ಸಿಕ್ಕುವುದಿಲ್ಲ. ಇಂಥ ಅನೇಕ ಪ್ರಕರಣಗಳನ್ನು ನಾನು ನಿದರ್ಶನವಾಗಿ ಕೊಡಬಲ್ಲೆ. ಈ ಸಚಿವಾಲಯ ಎಷ್ಟು ಕೆಟ್ಟಿದೆ ಎಂದರೆ, ನಮ್ಮ

ತಾಲ್ಲೂಕು ಆಫೀಸು ಎಷ್ಟೋ ಉತ್ತಮ. ಏಕೆಂದರೆ, ನಾವು ಕೇಳಿದ ಫೈಲಾದರೂ ಅಲ್ಲಿ ಸಿಕ್ಕುತ್ತದೆ. ಆದರೆ ಇಲ್ಲಿ ಆ ರೀತಿ ಇಲ್ಲ. ಇಲ್ಲಿ ವಿಚಾರಣಾಧಿಕಾರಿ ಕ್ರಮ ತೆಗೆದುಕೊಳ್ಳಲು ಶಿಫಾರಸು ಮಾಡಿದರೆ ಫೈಲನ್ನೇ ಇಲ್ಲದಂತೆ ಮಾಡುತ್ತಾರೆ. ಇಂಥ ಪ್ರಕರಣಗಳು ನಮ್ಮ ಸರ್ಕಾರದಲ್ಲಿವೆ. ತಾವು 5 ಜನ ವಿಚಾರಣಾಧಿಕಾರಿಗಳನ್ನು ನೇಮಕ ಮಾಡಿದರೂ ಆ ವಿಚಾರಣೆ ಆಗಲಿಲ್ಲ.

ನಾಲ್ಕು ತಿಂಗಳಲ್ಲಿ ವರದಿಯನ್ನು ಕೊಡಬೇಕೆಂದು ಹೇಳಿದರು, ಮೂರು ತಿಂಗಳಲ್ಲಿ ಕೊಡಬೇಕೆಂದು ಹೇಳಿದರು. ಎರಡು ವರ್ಷಗಳಾಯಿತು. ಆದರೆ ಯಾವ ಅಧಿಕಾರಿಯ ಮೇಲೆ ಕ್ರಮ ತೆಗೆದುಕೊಳ್ಳತಕ್ಕಂಥ ಪ್ರವೃತ್ತಿ ನಮ್ಮ ಸರ್ಕಾರಕ್ಕೆ ಇಲ್ಲ. ಅದಕ್ಕೆ ಬದಲಾಗಿ ಆ ಅಧಿಕಾರಿಗೆ ಸಂಬಂಧಪಟ್ಟಂಥ ಕಡತವನ್ನು ಬಚ್ಚಿಡುತ್ತಾರೆ, ಇಲ್ಲವೆಂದರೆ ಅವರು ರಿಟೈರ್ ಆಗುವವರೆಗೂ ಕಾಯುತ್ತಾರೆ, ಇಲ್ಲವೆಂದರೆ ಅವರು ಸಾಯುವವರೆಗೂ ಕಾಯುತ್ತಾರೆ. ಅನೇಕ ಸಂದರ್ಭಗಳಲ್ಲಿ ಯಾವ ಒಂದು ವಿಚಾರಣೆಯನ್ನು ಮಾಡಿ ಸಂಬಂಧಪಟ್ಟವರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ಶಿಫಾರಸು ಮಾಡಿದರೆ, ಯಾವುದಾದರೂ ಒಂದು ಸಮಿತಿ ಅಥವಾ ವಿಧಾನಸಭೆಯಲ್ಲಿ ನಾವೇನಾದರೂ ಹೇಳಿದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುವಂಥ ಪ್ರವೃತ್ತಿ ಸರ್ಕಾರಕ್ಕೆ ಇಲ್ಲ. ಅದಕ್ಕೆ ಬದಲಾಗಿ ಅವನಿಗೆ ರಕ್ಷಣೆಯನ್ನು ಕೊಡುವಂಥ ಕೆಲಸವನ್ನು ಮಾಡುತ್ತಿದ್ದಾರೆ. ಮಾನ್ಯ ಅಧ್ಯಕ್ಷರೇ, ಇದು ಒಬ್ಬರಿಗೆ ಸಂಬಂಧಪಟ್ಟದ್ದು ಮಾತ್ರವಲ್ಲ, ಇದೇ ರೀತಿ ಬೇರೆ ಬೇರೆ ಆದೇಶಗಳನ್ನು ಸಹ ಇವತ್ತಿನ ದಿವಸ ನಾವು ನೋಡುತ್ತಿದ್ದೇವೆ. ಇದೇ ರೀತಿಯಾಗಿ ಇನ್ನೊಂದು ಆದೇಶವನ್ನು ನಾನು ಹೇಳಲಿಕ್ಕೆ ಇಷ್ಟಪಡುತ್ತೇನೆ. 9ನೇ ಸೆಪ್ಟೆಂಬರ್ 1991 ಐ.ಡಿ. 91 ಡಬ್ಲ್ಯುಡಿ 88. ಈ ಕೆಲಸದಲ್ಲೂ ಸಹ ಸುಮಾರು 80 ಲಕ್ಷಕ್ಕೂ ಹೆಚ್ಚು ಹಣವನ್ನು ಕೊಟ್ಟಿರತಕ್ಕಂಥ ಪ್ರಕರಣಗಳು ಇವೆ. ಈ 2–3 ಪ್ರಕರಣಗಳನ್ನು ತಮ್ಮ ಗಮನಕ್ಕೆ ಏತಕ್ಕೆ ತರುತ್ತಿದ್ದೇನೆಂದರೆ, ಈ ನೀರಾವರಿ ಇಲಾಖೆಯಲ್ಲಿ ಮತ್ತು ಪಿ.ಡಬ್ಲ್ಯು.ಡಿ. ಇಲಾಖೆಯಲ್ಲಿ ಆಡಳಿತ ವ್ಯವಸ್ಥೆ ಯಾವ ರೀತಿ ನಡೆಯುತ್ತಿದೆ ಎಂದರೆ, ಅವರು ಈ ದೇಶದ ಜನಸಾಮಾನ್ಯರ ಹಿತವನ್ನು ಕಾಪಾಡುವುದಕ್ಕೆ ಬದಲಾಗಿ, ಈ ದೇಶದ ಬಂಡವಾಳಶಾಹಿ, ಗುತ್ತಿಗೆದಾರರು ಯಾರು ಇರುತ್ತಾರೆ ಅವರ ಹಿತವನ್ನು ಕಾಪಾಡಲಿಕ್ಕೆ ಸಹಾಯವಾಗುವಂಥ ರೀತಿಯಲ್ಲಿ ಕೆಲಸ ಮಾಡುತ್ತಿದ್ದಾರೆ. ಆದ್ದರಿಂದ ನಾನು ಹೇಳುತ್ತಿದ್ದೇನೆ. ಎಲ್ಲಿಯವರೆಗೆ ಈ ದೇಶದ ಈ ಒಂದು ಸರ್ಕಾರ ದೃಢ ಮನಸ್ಸಿನಿಂದ ಸಂಬಂಧಪಟ್ಟವರ ಮೇಲೆ ಕಠಿಣವಾದ ಕ್ರಮವನ್ನು ತೆಗೆದುಕೊಳ್ಳತಕ್ಕಂಥ ಪ್ರವೃತ್ತಿಯನ್ನು ತೋರುವುದಿಲ್ಲ ಅಲ್ಲಿಯವರೆಗೆ ನೀವು ಎಷ್ಟು ಕೋಟಿ ರೂಪಾಯಿಗಳನ್ನು ಕೃಷ್ಣಾ ಯೋಜನೆಗೆ ಹಾಕಿದರೂ ಕೆಲಸವಾಗುವುದಿಲ್ಲ. ಕಾವೇರಿ ಬೇಸಿನ್‌ನಲ್ಲಿ ಹಾಕಿದರೂ ಕೆಲಸವಾಗುವುದಿಲ್ಲ. ಅದಕ್ಕಿಂತ ಹೆಚ್ಚಾಗಿ ಆ ಹಣ ಅಪವ್ಯಯವಾಗುತ್ತದೆ ಎನ್ನುವ ಮಾತನ್ನು ಹೇಳಲಿಕ್ಕೆ ಇಷ್ಟಪಡುತ್ತೇನೆ.

ಮಾನ್ಯ ಅಧ್ಯಕ್ಷರೇ, ಮತ್ತೊಂದು ಇಲಾಖೆಯ ವೈಶಿಷ್ಟ್ಯವೆಂದರೆ, ಒಂದು ಎಂ.ಐ.ಸಿ. ಬೋರ್ಡ್ ಎಂದು ಮಾಡಿಕೊಂಡಿರುತ್ತಾರೆ. ಮೇಜರ್ ಇರಿಗೇಷನ್ ಪ್ರಾಜೆಕ್ಟ್ ಕಂಟ್ರೋಲ್ ಬೋರ್ಡ್ ಎಂದು. ಇದಕ್ಕೆ ಏನು ಹೇಳಬೇಕೋ ಗೊತ್ತಿಲ್ಲ. ಇದು ಬಹಳ ಅತ್ಯುತ್ತಮವಾದಂಥ ತಂತ್ರಜ್ಞರಿಂದ ಕೂಡಿದಂಥ ಒಂದು ಮಂಡಲಿ ಎನ್ನುವ ಮಾತನ್ನು ಹೇಳಿಕೊಳ್ಳುತ್ತಾರೆ. ಇದರ ಕೆಲಸವೇನೆಂದರೆ, ತಂತ್ರಜ್ಞಾನವನ್ನು ಸರ್ಕಾರಿ ಅಧಿಕಾರಿಗಳಿಗಾಗಲಿ, ಸರ್ಕಾರಕ್ಕಾಗಲಿ ಕೊಡುವುದಲ್ಲ. ಅದಕ್ಕಿಂತ ಹೆಚ್ಚಾಗಿ ಫೈನಾನ್ಷಿಯಲ್ ಮ್ಯಾಟರ್ಸ್ ಯಾವ ಯಾವ ಯೋಜನೆಗಳಿಗೆ ಎಷ್ಟು ಹಣವನ್ನು ಕೊಡಬೇಕು, ಆಕ್ಟ್ ಪ್ರಕಾರ ಏನು ಮಾಡಬೇಕು ಎಂದು ಹೇಳತಕ್ಕಂಥ ಒಂದು ಅಡ್ವೈಸರಿ ಬಾಡಿಯಾಗಿತ್ತು. ಇದನ್ನು ಸಾರ್ವಜನಿಕ ಲೆಕ್ಕಪತ್ರ ಸಮಿತಿಯವರು ಪರಿಶೀಲನೆ ಮಾಡಿ ಈ ಒಂದು ಅಧಿಕಾರವನ್ನು ತೆಗೆಯಬೇಕೆಂದು ಹೇಳಿ ಅದನ್ನು ತೆಗೆದುಹಾಕಿದರೂ ಸಹ, ಇವತ್ತು ಅದು ಅಡ್ವೈಸರಿ ಬಾಡಿ ಎಂದು ಹೇಳಿದ್ದರೂ ಸಹ ಅನೇಕ ಸಂದರ್ಭಗಳಲ್ಲಿ ನಾನು ತಿಳಿದುಕೊಂಡಿರುವ ಹಾಗೆ 100ಕ್ಕೆ 99ರಷ್ಟು ಸಂದರ್ಭಗಳಲ್ಲೂ ಸಹ ಆ ಅಡ್ವೈಸರಿ ಬಾಡಿಯ ಒಪೀನಿಯನ್ ಏನಿದೆ ಅದನ್ನೇ ಇವತ್ತಿನ ದಿವಸ ಅನುಮೋದನೆ ಮಾಡುತ್ತಿದ್ದೇವೆ.

ಇದನ್ನು ಏತಕ್ಕೋಸ್ಕರ ಮಾಡುತ್ತಿದ್ದೇವೆಂದರೆ, ನಾನು ಹೇಳಿದ ಹಾಗೆ ಯಾವುದನ್ನು ನೇರವಾಗಿ ಮಾಡಲಿಕ್ಕೆ ಆಗುವುದಿಲ್ಲ ಹೊಣೆಗಾರಿಕೆಯಿಂದ ನಾವು ತಪ್ಪಿಸಿಕೊಳ್ಳುವುದಕ್ಕೋಸ್ಕರ, ನುಣುಚಿಕೊಳ್ಳುವುದಕ್ಕೋಸ್ಕರ ಇಂಥ ಒಂದು ಎಂ.ಐ.ಪಿ.ಸಿ. ಬೋರ್ಡ್‌ಗಳನ್ನು ಮಾಡಿಕೊಂಡಿದ್ದೇವೆ, ಇಂತಹ ಟೆಕ್ನಿಕಲ್ ಕಮಿಟಿಗಳನ್ನು ಮಾಡಿಕೊಂಡಿದ್ದೇವೆ, ನಾವು ಯಾವುದನ್ನು ನೇರವಾಗಿ ಸಾಧಿಸಲಿಕ್ಕೆ ಆಗುವುದಿಲ್ಲ ಅದನ್ನು ಇವುಗಳ ಮುಖಾಂತರ ಸಾಧಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಇದರಿಂದ ಭ್ರಷ್ಟಾಚಾರ ಇವತ್ತು ಜಾಸ್ತಿಯಾಗಿದೆ ಎಂದು ಹೇಳಿದರೆ ತಪ್ಪಾಗಲಿಕ್ಕೆ ಇಲ್ಲ. ಸನ್ಮಾನ್ಯ ಅಧ್ಯಕ್ಷರೇ, ಹಿಂದೆ ಮಾನ್ಯ ಉಪಮುಖ್ಯಮಂತ್ರಿಗಳು ತಮ್ಮ ಸ್ಥಾನದಲ್ಲಿ ಕುಳಿತಿದ್ದಾಗ ಹೇಳಿದೆ. ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ಎಷ್ಟು ಆಲಸ್ಯದಿಂದ ಈ ಸರ್ಕಾರಗಳು ನಡೆಯುತ್ತಿವೆ, ಇವರು ಜನರ ಪ್ರತಿನಿಧಿಗಳಾಗಿ ಸರ್ಕಾರವನ್ನು ನಡೆಸುತ್ತಿದ್ದಾರೆಯೇ ಇಲ್ಲವೇ ಎನ್ನುವುದಕ್ಕೆ ಒಂದು ಮಾತನ್ನು ಹೇಳುತ್ತೇನೆ. 1985ರಲ್ಲಿ ಒಂದು ವಿಚಾರಣ ಆಯೋಗ ನಡೆಯಿತು. ಆ ಒಂದು ವಿಚಾರಣ ಆಯೋಗದ ವರದಿ 31-7-89ರಲ್ಲಿ ಕೊಡಲ್ಪಟ್ಟಿತು. 21-6-90ರಲ್ಲಿ ಈ ಸದನದಲ್ಲಿ ಅದನ್ನು ಇಟ್ಟರು. ನಾನು ಆಗ ಅಧ್ಯಕ್ಷ ಪೀಠದಲ್ಲಿದ್ದ ಇಂದಿನ ಮಾನ್ಯ ಉಪಮುಖ್ಯಮಂತ್ರಿಗಳನ್ನು ಕೇಳಿದೆ. ಈ ಸರ್ಕಾರ ಈ ವರದಿಯನ್ನು ಒಪ್ಪಿಕೊಂಡಿದೆಯೇ ಎಂದು ಕೇಳಿದೆ. ಸ್ವಾಮಿ ಇವತ್ತಿನವರೆಗೂ ಅದಕ್ಕೆ ಸರಿಯಾದಂಥ ಉತ್ತರ ನನಗೆ ಬರಲಿಲ್ಲ. ನಾನು ಇವತ್ತು ಮಾನ್ಯ ಉಪಮುಖ್ಯಮಂತ್ರಿಗಳನ್ನು ಕೇಳುತ್ತಿದ್ದೇನೆ, ಏನು ಈ ಒಂದು ವರದಿಯನ್ನು ಕೊಟ್ಟಿದ್ದಾರೆ, ಕೋಟ್ಯಾಂತರ ರೂಪಾಯಿಗಳ ಅವ್ಯವಹಾರ ನಡೆದಿದೆ ಎನ್ನುವ ಮಾತನ್ನು ವರದಿಯಲ್ಲಿ ಹೇಳಿದ್ದಾರೆ; ಸಂಬಂಧಪಟ್ಟಂಥ ಹಿರಿಯ ಅಧಿಕಾರಿಗಳ ಮೇಲೆ ಗುರುತರವಾದ ಆರೋಪಣೆ ಮಾಡಿದ್ದಾರೆ ಆ ಒಂದು ವರದಿಯನ್ನು ಸರ್ಕಾರ ಒಪ್ಪಿಕೊಂಡಿದೆಯೇ ಎಂದು ನೇರವಾಗಿ ಕೇಳುತ್ತಿದ್ದೇನೆ ? ಒಪ್ಪಿಕೊಂಡಿದ್ದರೆ ಏನು ಕ್ರಮವನ್ನು ತೆಗೆದುಕೊಂಡಿದೆ.

ಆ ವರದಿಯಲ್ಲಿ ಬಹಳ ಮುಖ್ಯವಾದ ಒಂದು ಮಾತನ್ನು ಹೇಳುತ್ತೇನೆ:

It is highly desirable to confine references to MIPC Board for its opinion only to the matters of technical nature. The Board should not be consulted in matters relating to terms of contract or in any manner involving financial relationship between the Government and the contractors. For example, advances, ex-gratia payments to-be made etc. Officials of the Department are sufficiently experienced and capable of taking necessary decisions with regard to these matters..... If the departmental officers are in a position to achieve the results but unable to avoid responsibility for the decision by manipulation and getting necessary recommendations of the committee or MIPC Board as the case may be it will lead to corruption and favouritism ಇದಕ್ಕಿಂತ ಇನ್ನು ಏನು ಬೇಕು ? ಈ ರೀತಿಯಾಗಿ ಯಾವುದನ್ನು ತಾವು ಮಾಡಲಿಕ್ಕೆ ಇದ್ದರೂ ಸಹ ಅದನ್ನು ಬೇರೆಯವರ ಶಿಫಾರಸ್ಸನ್ನು ತೆಗೆದುಕೊಂಡು ಮಾಡುವುದರ ಮೂಲಕ ಕೋಟ್ಯಾಂತರ ರೂಪಾಯಿ ಅವರಿಗೆ ಸಹಾಯ ಮಾಡುವುದರ ಮೂಲಕ ಸಂಬಂಧಪಟ್ಟವರು ಇದರಿಂದ ಸಹಾಯ ಪಡೆದಿರಬಹುದೆಂಬ ಸಂಶಯ ನಮಗೆ ಬಂದರೆ ಅದರಲ್ಲಿ ತಪ್ಪೇನಿದೆ ? ಈ ದಿಸೆಯಲ್ಲಿ ನೀರಾವರಿ ಇಲಾಖೆ ಮತ್ತು ಲೋಕೋಪಯೋಗಿ ಇಲಾಖೆ ಏನಿದೆ – ಈ ಎರಡು ಇಲಾಖೆಗಳಿಗೆ ಮತ್ತು ಇತರ ಇಲಾಖೆಗಳಿಗೆ ಈ ದೇಶದ ಯೋಜನೆಯಲ್ಲಿ ಶೇಕಡ ಅರ್ಧಕ್ಕಿಂತ ಹೆಚ್ಚು ಹಣವನ್ನು ನಾವು ಕೊಡುತ್ತಿದ್ದೇವೆ. ಆದರೆ ಈ ಇಲಾಖೆಗಳು ಕೆಲಸ ಮಾಡುವ ವೈಖರಿಯನ್ನು ಕಂಡಾಗ ನನಗೆ

ಅನ್ನಿಸುತ್ತದೆ, ಅವು ಈ ದೇಶದ ಪರ ಇಲ್ಲ ಎಂದು. ಅದಕ್ಕೆ ಬದಲಾಗಿ ಈ ದೇಶದ ಪುಢಾರಿಗಳ ಪರ ಇದೆ, ಭ್ರಷ್ಟ ಅಧಿಕಾರಿಗಳ ಪರ ಇವೆ ಎಂದರೆ ತಪ್ಪಾಗುವುದಿಲ್ಲ. ಅಂಥ ಒಂದು ಪರಿಸ್ಥಿತಿಯನ್ನು ಹೋಗಲಾಡಿಸುವ ರೀತಿಯಲ್ಲಿ ತಾವು ಏನಾದರೂ ಕ್ರಮ ಕೈಗೊಳ್ಳುತ್ತೀರಾ ಎಂದು ಉಪಮುಖ್ಯ ಮಂತ್ರಿಗಳನ್ನು ಕೇಳುತ್ತಿದ್ದೇನೆ. ಕ್ರಮ ತೆಗೆದುಕೊಳ್ಳುವುದಾದರೆ ನೇರವಾಗಿ ವಿಧಾನಸಭೆಯಲ್ಲಿ ಹೇಳಬೇಕು ಮತ್ತು ಕ್ರಮ ತೆಗೆದುಕೊಂಡದ್ದಕ್ಕೆ ಈ ದೇಶದ ಜನರಿಗೆ ಗೋಚರವಾಗುವಂಥ ರೀತಿಯಲ್ಲಿ ತಾವು ಹೇಳಬೇಕೆಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ಹೊಸ ಒಂದು ಪಿಡುಗು ಇದೆ. ಪ್ರತಿಯೊಂದಕ್ಕೂ ಎಆರ್ಐ. ಇವರಿಗೆ ಅಡ್ಡ ಬರುತ್ತದೆ. ಎಆರ್ಐ ಇಲ್ಲದಿದ್ದರೆ ನಮಗೆ ಎನ್ಎಂಆರ್ ಇದೆ. ಅದರ ಪ್ರಕಾರ ಹೆಸರನ್ನು ಬರೆದುಕೊಂಡು ಅವನ ಸಹಿ ಹಾಕಿಸಿಕೊಂಡು ಕೆಲಸ ಮಾಡಿದ್ದ ಎಂದು ಅವನಿಗೆ ಬಟವಾಡೆ ಮಾಡತಕ್ಕ ಪದ್ಧತಿ ಎಆರ್ಐನಲ್ಲಿದೆ. ಅದಕ್ಕೆ ಕೇಂದ್ರ ಸರ್ಕಾರದ ತನ್ನದೇ ಆದ ನೀತಿ ಇದೆ. ಅದನ್ನು ಒಂದು ಕಡೆ ಬಿಡೋಣ. ಆದರೆ ತಮ್ಮ ಇಲಾಖೆ ಏನು ಮಾಡುತ್ತಿದೆ ಎಂದರೆ, ಈ ವಿಧಾನವನ್ನು ನಿಮ್ಮ ಇಲಾಖೆ ಅನುಸರಿಸುತ್ತಿದೆ. ಎನ್ಎಂಆರ್ ಮುಖಾಂತರ ಏನು ಮಾಡುತ್ತಿದೆ ಎಂದರೆ, ಸರ್ಕಾರ ಅಥವಾ ಇಲಾಖೆ ಏನಾದರೂ ಕೆಲಸ ಮಾಡಬೇಕೆಂದಾಗ ಪೀಸ್ ವರ್ಕ್ ಮುಖಾಂತರ ಕೆಲಸ ಕೈಗೊಳ್ಳುತ್ತದೆ. ಇಲಾಖೆ ಕೆಲಸವನ್ನು ಕೈಗೊಳ್ಳತಕ್ಕ ಸಂದರ್ಭದಲ್ಲಿ ಎನ್ಎಂಆರ್ ಪದ್ಧತಿಯನ್ನು ಅನುಸರಿಸುವ ಮುಖಾಂತರ ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳುತ್ತಾರೆ; ಮತ್ತು ಒಂದಕ್ಕೆ ಎರಡರಷ್ಟು ಬಿಲ್ ಮಾಡಿ ಹಣ ತೆಗದುಕೊಳ್ಳುವ ಪ್ರವೃತ್ತಿ ನಮ್ಮ ಎಲ್ಲಾ ಶಾಸಕರ ಗಮನಕ್ಕೂ ಬಂದಿರಬಹುದು. ಇದನ್ನು ನಿಲ್ಲಿಸುವುದಕ್ಕೆ ಸಾಧ್ಯವಿಲ್ಲವೆ; 15 ಸಾವಿರ ರೂಪಾಯಿಗಳ ಕೆಲಸಕ್ಕೆ 30–35 ಸಾವಿರ ರೂಪಾಯಿ ಬಿಲ್ ಮಾಡಿ ಹಣ ದೋಚುವ ಪ್ರವೃತ್ತಿ ಇವತ್ತಿನ ದಿವಸ ಬಂದಿದೆ. ಅದಕ್ಕೆ ಸರ್ಕಾರದವರು ಹಿಂದೆ ಒಂದು ಆಜ್ಞೆ ಮಾಡಿದ್ದರು. ಇದು ಎನ್ಎಂಆರ್; ಪೀಸ್ ವರ್ಕ್ ಕೊಡಬಾರದು; ಬಹುಶಃ 1976ರಲ್ಲಿ ಇರಬಹುದು. ಆಗ ಒಂದು ಕಾಲದಲ್ಲಿ ಪೀಸ್ ವರ್ಕ್ ಯಾರಿಗೂ ಕೊಡಬಾರದೆಂದು ಹೇಳಿದ್ದವರು ಪುನಃ ಹೇಳಿದರು, ಇಲ್ಲ, ಇಲ್ಲ, ಪೀಸ್ ವರ್ಕ್ ಕೊಡುವಂಥ ವ್ಯವಸ್ಥೆ ನಮ್ಮಲ್ಲಿ ಇಲ್ಲದಿದ್ದರೆ ಕೆಲಸ ಮಾಡುವುದಕ್ಕಾಗುವುದಿಲ್ಲ ಎಂದು. ಯಾವ ಅಧಿಕಾರಿಗಳು ಕೊಡಬಾರದೆಂದು ಹೇಳಿದ್ದರೋ ಅದೇ ಅಧಿಕಾರಿಗಳು ಪುನಃ ಅಲ್ಲ ಇಲ್ಲ, ಈ ರೀತಿ ಕೊಡದಿದ್ದರೆ ಸಾಧ್ಯವಿಲ್ಲ, ಅವರಿಗೆ ಕೊಡಬೇಕೆಂದು ಹೇಳುವ ಮುಖಾಂತರ ಎಲ್ಲಾ ಕೆಲಸಗಳನ್ನು ತುಂಡು ಮಾಡಿ ತಮಗೆ ಬೇಕಾದ ಪುಢಾರಿಗಳಿಗೆ, ತಮಗೆ ಬೇಕಾದ ಗುತ್ತಿಗೆದಾರರಿಗೆ ಕೊಡುವ ಮುಖಾಂತರ ಕಳಪೆ ಕೆಲಸ ಮಾಡುವುದಕ್ಕೆ ಮತ್ತು ಹೆಚ್ಚು ಹಣ ದರೋಡೆ ಮಾಡುವುದಕ್ಕೆ ಅವಕಾಶ ಇದೆ. ಇದನ್ನು ತಾವು ನಿಲ್ಲಿಸುವುದಕ್ಕೆ ಪ್ರಯತ್ನ ಮಾಡಬೇಕು; ಕ್ರಮ ಕೈಗೊಳ್ಳಬೇಕು. ಸ್ವಲ್ಪ ತಡವಾಗಬಹುದು, ಇಲ್ಲವೆಂದು ಹೇಳುವುದಿಲ್ಲ. ಆದರೆ ಈ ಕೆಲಸ ಮಾಡದೆ ಬಿಟ್ಟರೆ ಹೊಣೆಗಾರಿಕೆಯಿಂದ ಕೆಲಸ ಆಗುವುದಕ್ಕೆ ಸಾಧ್ಯವಿಲ್ಲ. ತಡವಾಗುತ್ತದೆಂಬ ಒಂದೇ ಕಾರಣಕ್ಕಾಗಿ ಈ ರೀತಿ ಮಾಡುವುದಾದರೆ ಈ ದೇಶದಲ್ಲಿ ಕಳಪೆ ಕೆಲಸ ಜಾಸ್ತಿಯಾಗುತ್ತದೆ ಮತ್ತು ಭ್ರಷ್ಟತನ ಜಾಸ್ತಿಯಾಗುತ್ತದೆಂಬ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನೂ ಹಲವಾರು ಯೋಜನೆಗಳನ್ನು ನಾವು ಕಾರ್ಯರೂಪಕ್ಕೆ ತರುತ್ತೇವೆ, ಸಣ್ಣ ಕೆರೆ ಇರಬಹುದು ದೊಡ್ಡ ಕೆರೆ ಇರಬಹುದು, ಬೇರೆ ಬೇರೆ ಕಾಮಗಾರಿಗಳು ಇರಬಹುದು; ಈ ಕಾಮಗಾರಿಗಳಲ್ಲಿ ಕೆಲಸ ಮಾಡಬೇಕಾದರೆ ನಮಗೆ ಗೊತ್ತಿದೆ ಇಂತಿಷ್ಟು ಅವಧಿಯಲ್ಲಿ ಅಂದಾಜನ್ನು ತಯಾರಿಸಬೇಕು ಎಂದು. ನಮಗೆ ನಾಚಿಕೆಯಾಗುತ್ತದೆ; ಈ ದೇಶದಲ್ಲಿ ಅಂದಾಜನ್ನು ತಯಾರು ಮಾಡುವವರಿಗೆ ಮೊದಲು ದುಡ್ಡು ಕೊಡಬೇಕು. ಎಸ್ಟಿಮೇಟ್ ಪ್ರಿಪೇರ್ ಮಾಡುವುದಕ್ಕೆ ಹಣ ಕೊಡಬೇಕು, ಎಸ್ಟಿಮೇಟ್ ಅಪ್ರೂವ್ ಮಾಡುವುದಕ್ಕೆ ಹಣ ಕೊಡಬೇಕು. ಹೇಗೆ ಎಂದು ತಾವು ಕೇಳಬಹುದು. ಎಷ್ಟೋ ಪ್ರಕರಣಗಳಲ್ಲಿ, ನೋಡಿ ಎಸ್ಟಿಮೇಟ್ ಎಂದು ತಯಾರಾಗುತ್ತದೆ, ಎಂದು ಅಪ್ರೂವ್ ಆಗುತ್ತದೆ, ಕೆಲಸ ಎಂದು ಆಗುತ್ತದೆಂದು ನೋಡಿ.

ಅನೇಕ ಸಂದರ್ಭಗಳಲ್ಲಿ ಅದೇ ದಿವಸ ಎಸ್ಟಿಮೇಟ್ ಆದದ್ದು, ಅದೇ ದಿವಸ ಕೆಲಸ ಆದದ್ದು, ಅದೇ ದಿವಸ ಬಿಲ್ ತೆಗೆದುಕೊಂಡದ್ದೂ ನೋಡಿದ್ದೇವೆ. ತಾವು ಮಾರ್ಚ್ ತಿಂಗಳ ಕೊನೆಯಲ್ಲಿ ನೋಡಿ. ಈ ದೇಶದ ಎಲ್ಲ ಭಾಗದಲ್ಲೂ ಜಾರಿಯಲ್ಲಿದೆ. ಕೇವಲ ಚಿತ್ರದುರ್ಗಕ್ಕೆ ಮಾತ್ರ ಸೀಮಿತವಲ್ಲ ಅಥವಾ ಒಬ್ಬ ಅಧಿಕಾರಿಗೆ ಮಾತ್ರ ಸೀಮಿತವಲ್ಲ. ಈ ಪದ್ಧತಿ ಏತಕ್ಕೆ ಇದೆ ಎಂದರೆ ಕಾಯಿ, ಕುಡುಗೋಲು ಎರಡೂ ಅವರ ಹತ್ತಿರ ಇರುತ್ತವೆ.

ಈಗ ನಮ್ಮ ಊರುಗಳಲ್ಲಿ ಸಣ್ಣ ಸಣ್ಣ ಗುತ್ತಿಗೆದಾರರು ಯಾರೂ ಇಲ್ಲ. ನಮ್ಮ ಊರಿನಲ್ಲಿ ಗುತ್ತಿಗೆದಾರರು ಯಾರಿದ್ದಾರೆಂದರೆ, ಜೂನಿಯರ್ ಇಂಜನಿಯರ್, ಅಸಿಸ್ಟೆಂಟ್ ಇಂಜನಿಯರ್, ಅವರ ಅಣ್ಣತಮ್ಮಂದಿರು, ಎಂಎಲ್ಎ ಅವರ ಅಣ್ಣತಮ್ಮಂದಿರು ಇರಬಹುದು. ಇಂತಹ ಒಂದು ಪರಿಸ್ಥಿತಿ ನಿರ್ಮಾಣವಾಗಿದೆ. ಈ ಅಂದಾಜುಗಳನ್ನು ತಯಾರು ಮಾಡುವಾಗಲೇ ಅದನ್ನು ಹೆಚ್ಚು ಹೆಚ್ಚು ಉನ್ನತೀಕರಿಸಿ ಅಂದಾಜುಗಳನ್ನು ತಯಾರು ಮಾಡುವ ಪ್ರವೃತ್ತಿ ಇದೆ. ಒಂದು ಉದಾಹರಣೆ ಹೇಳುತ್ತೇನೆ, ಒಂದು ಕಿಲೋಮೀಟರ್ ರಸ್ತೆಗೆ ಡಾಮರು ಹಾಕಲಿಕ್ಕೆ ಲೋಕೋಪಯೋಗಿ ಇಲಾಖೆಗೆ 1 ಲಕ್ಷದ 20 ಸಾವಿರ ರೂಪಾಯಿ ಆದರೆ ಜಿಲ್ಲಾಪರಿಷತ್‌ನವರಿಗೆ 1 ಲಕ್ಷದ 70 ಸಾವಿರ ಬಿಲ್ ಮಾಡುತ್ತಾರೆ. ಇದು ಹೇಗೆ ಸಾಧ್ಯ? ಇಷ್ಟೊಂದು ವ್ಯತ್ಯಾಸ ಹೇಗಾಗುತ್ತದೆ? ಅಲ್ಲಿ ಎಲ್ಲಾ ತಗ್ಗು ಇತ್ತೆಂದು ಹೇಳುತ್ತಾರೆ. ಇದನ್ನು ನಾನು ಏತಕ್ಕೋಸ್ಕರ ಹೇಳುತ್ತಿದ್ದೇನೆಂದರೆ, ಸಂಬಂಧಪಟ್ಟ ಅಧಿಕಾರಿಗಳು ಏನಿದ್ದಾರೆ ಅವರಲ್ಲಿ ಪ್ರಾಮಾಣಿಕತೆ ಇಲ್ಲದೇ ಇರುವುದರಿಂದ, ಮತ್ತೆ ಹಿರಿಯ ಅಧಿಕಾರಿಗಳು ಅದನ್ನು ಪರಿಶೀಲನೆ ಮಾಡುವ ಒಂದು ಕಾರ್ಯಕ್ರಮವನ್ನು ಹಾಕಿಕೊಂಡಿಲ್ಲದೇ ಇರುವುದರಿಂದ, ಸಂಬಂಧಪಟ್ಟ ಅತ್ಯಂತ ಹಿರಿಯ ಅಧಿಕಾರಿಗಳು ಮತ್ತು ಮಂತ್ರಿಗಳು ಯಾವುದೇ ಹೊಣೆಗಾರಿಕೆಯಿಂದ ಕೆಲಸ ನಿರ್ವಹಿಸುವುದಕ್ಕೆ ಇಷ್ಟಪಡದೇ ಇರುವುದರಿಂದ ಈ ರೀತಿಯಾಗಿದೆಯೆಂದು ಭಾವಿಸಿದರೆ ತಪ್ಪಾಗಲಾರದು. ಈ ಮಾತನ್ನು ಏತಕ್ಕೋಸ್ಕರ ಹೇಳುತ್ತಿದ್ದೇನೆಂದರೆ, ಈ ದೇಶದ ಹಣ ಪೋಲಾಗುತ್ತಿದೆ. ನೂರಾರು ಕೋಟಿ ರೂಪಾಯಿ ಹಣವನ್ನು ತಾವೇನು ಕೊಡುತ್ತಾ ಇದ್ದೀರಿ ಈ ರೀತಿ ಕೊಟ್ಟಂತಹ ಹಣ ಪೋಲಾಗುವುದಕ್ಕೆ ಅವಕಾಶವಾಗಿದೆ. ಅದಕ್ಕಿಂತ ಹೆಚ್ಚಾಗಿ ಅಡ್ವಾನ್ಸ್‌ಯೆಂದು ಕಂಟ್ರಾಕ್ಟರ್‌ಗೆ ಕೊಡುತ್ತಾರೆ. ಏಕೆ ಅಡ್ವಾನ್ಸ್ ಕೊಡುತ್ತೀರಿ ಸ್ವಾಮಿ? ಕಾನೂನು ಪ್ರಕಾರ ಅಡ್ವಾನ್ಸ್ ಕೊಡುವುದಕ್ಕೆ ಅವಕಾಶವಿದೆ. ಕೊಡಿ ನಾನು ಬೇಡವೆನ್ನುವುದಿಲ್ಲ. ಆದರೆ ಕೊಟ್ಟಮೇಲೆ 8–10 ವರ್ಷ ವಸೂಲಿ ಮಾಡುವುದಿಲ್ಲ ಏಕೆ? ಇಂತಹ ಪ್ರಕರಣಗಳು ಇಲ್ಲವೆ? ನೀವು ಅಡ್ವಾನ್ಸ್ ಕೊಡುವಾಗ ಏನೆಂದು ನಿಯಮವಿದೆ ಎಂದರೆ ಬಿಲ್ ಮಾಡಿದಾಗ ಅಡ್ವಾನ್ಸ್ ಹಣವನ್ನು ಕಡಿದುಕೊಳ್ಳಬೇಕೆಂದು ನಿಯಮವಿದೆ. ಆದರೆ ಆ ನಿಯಮಕ್ಕೆ ವಿರುದ್ಧವಾಗಿ ಇವತ್ತಿನ ದಿವಸ ಅಡ್ವಾನ್ಸನ್ನು ಕೊಟ್ಟು ಅವನಿಗೆ ಬಡ್ಡಿ ಇಲ್ಲದೆ ಹಣವನ್ನು ಕೊಡುವುದರ ಮುಖಾಂತರ ಪರೋಕ್ಷವಾಗಿ ಸಹಾಯ ಮಾಡುವಂತಹ ನೀತಿಯನ್ನು ಅನುಸರಿಸುತ್ತೀರಲ್ಲ ಅವರ ಮೇಲೆ ತಾವೇನು ಕ್ರಮವನ್ನು ತೆಗೆದುಕೊಂಡಿದ್ದೀರಿ? ಇದಕ್ಕಿಂತ ಹೆಚ್ಚಾಗಿ ತಾವು ಇನ್ವೆಂಟರಿಯನ್ನು ನೋಡಬೇಕು, ಸ್ಟೋರ್ ನೋಡಬೇಕು. ಆ ಸ್ಟೋರ್‌ನಲ್ಲಿ ಅವರಿಗೆ ಬೇಕಾದ ಸಾಮಾನು ಇರುವುದಿಲ್ಲ. ಅಲ್ಲಿರುವಂತಹ ದುರುಪಯೋಗ ಈ ದೇಶದಲ್ಲಿ ಎಲ್ಲೂ ಆಗುವುದಿಲ್ಲ. ನಾನು ಮೊನ್ನೆ ಚಿತ್ರದುರ್ಗ ಪಿಹೆಚ್ಇ ಇಂಜನಿಯರಿಂಗ್ ವಿಭಾಗದಲ್ಲಿ 40 ಲಕ್ಷ ರೂಪಾಯಿ ದುರುಪಯೋಗವಾಗಿದೆಯೆಂದು ದೂರುಗಳನ್ನು ಹೇಳುತ್ತಿದ್ದಾರೆ.

1.40 ಪಿ.ಎಂ.

ಹಾಗಾದರೆ ದುರುಪಯೋಗವಾಗಿದೆಯೆ? ಇಲ್ಲವೆಂದರೆ ಇಲ್ಲ. ಆಗಿದೆ ಅದರಲ್ಲಿ ಏನೂ ಅನುಮಾನವಿಲ್ಲ. ಅಂಕಿಅಂಶಗಳು ವ್ಯತ್ಯಾಸವಿರಬಹುದು. 30ರಿಂದ 40 ಲಕ್ಷ ರೂಪಾಯಿಗಳು ಒಂದು ವಿಭಾಗದ ಸ್ಟೋರ್‌ನಲ್ಲಿ ದುರುಪಯೋಗವಾಗುವುದಾದರೆ ಸಂಬಂಧಪಟ್ಟ ಅಧಿಕಾರಿಗಳು ಏನಿದ್ದಾರೆ

ಅವರೇನು ಮಾಡುತ್ತಿದ್ದರು? ಅವರು ನಿಗದಿಯಾದ ಕಾಲದಲ್ಲಿ ಪರೀಕ್ಷೆ ಮಾಡಬೇಕೆಂದು ನಿಯಮವಿಲ್ಲವೆ? ಅಲ್ಲಿರುವ ಎಕ್ಸಿಕ್ಯುಟಿವ್ ಇಂಜಿನಿಯರ್ ಆಗಲೀ, ಸೂಪರಿಂಟೆಂಡಿಂಗ್ ಇಂಜಿನಿಯರ್ ಆಗಲೀ, ಚೀಫ್ ಇಂಜಿನಿಯರ್ ಆಗಲೀ ಅವರಿಗೆ ಯಾರಿಗೂ ಕೆಲಸ ಇಲ್ಲವೇ? ಈ ದೇಶದಲ್ಲಿ ಒಂದು ಭಾವನೆ ಬೆಳೆದು ಬಂದಿದೆ. ಈ ದೇಶದ ಎಲ್ಲಾ ಅಧಿಕಾರಿಗಳು ಅಂದರೆ ನೀರಾವರಿ ಮತ್ತು ಲೋಕೋಪಯೋಗಿ ಇಲಾಖೆಯ ಇಂಜಿನಿಯರ್‌ಗಳು ಮಾತ್ರವಲ್ಲ, ಈ ದೇಶದ ಬಹುತೇಕ ಅಧಿಕಾರಿಗಳಿಗೆ ಹಣವಿದ್ದರೆ, ಪ್ರಭಾವವಿದ್ದರೆ, ಜಾತಿಯಿದ್ದರೆ ಖಂಡಿತವಾಗಿಯೂ ಸಹ ಯಾರು ಬೇಕಾದರೂ ಉಳಿಸುತ್ತಾರೆ ಮತ್ತು ಉಳಿದುಕೊಂಡು ಬರಬಹುದು ಎನ್ನುವ ಒಂದು ಪ್ರವೃತ್ತಿ ಬೆಳೆದು ಬಂದಿದೆ. ಇದಕ್ಕೆ ಕಡಿವಾಣ ಹಾಕಬೇಕು. ಹಿರಿಯ ಮಂತ್ರಿಗಳಾಗಲೀ, ಉಪಮುಖ್ಯಮಂತ್ರಿಗಳಾಗಲೀ, ಲೋಕೋಪಯೋಗಿ ಸಚಿವರಾಗಲೀ ನಿಮಗೆ ನಿಜವಾಗಿಯೂ ಕಳಕಳಿಯಿದ್ದರೆ ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ, ತಮಗೆ ಕಳಕಳಿ ಇದೆಯೆಂದು ಭಾವಿಸಿ ಈ ಮಾತನ್ನು ಹೇಳುತ್ತಿದ್ದೇನೆ. ನಾವು ಹಿಂದೆ ಹೇಳಿರತಕ್ಕ ಎಲ್ಲ ಮಾತುಗಳು ಅರಣ್ಯರೋದನವಾಗಿದೆ. ಇವತ್ತಾದರೂ ಇಂತಹ ಪ್ರವೃತ್ತಿಯನ್ನು ತಡೆಗಟ್ಟುವುದಕ್ಕೆ ತಾವು ಕ್ರಮವನ್ನು ತೆಗೆದುಕೊಳ್ಳಬೇಕು. ಅನೇಕ ಸಂದರ್ಭಗಳಲ್ಲಿ ರಸ್ತೆ ಮಾಡಲಿಕ್ಕೆ ಜಲ್ಲಿ ಹೊಡೆಯುತ್ತಾರೆ. ಅಲ್ಲಿ ಜಲ್ಲಿಯೇ ಇರುವುದಿಲ್ಲ. ಹೇಗೆ ಇರುವುದಿಲ್ಲವೆಂದು ನೀವು ಕೇಳಬಹುದು. ತಿಂಗಳಿಗೊಂದು ಸಾರಿ ಮೆಟೀರಿಯಲ್ ಕಲೆಕ್ಷನ್ ಬಗ್ಗೆ ವರದಿಯನ್ನು ಕೊಡಬೇಕೆಂದು ನಿಯಮ ಇದೆ. ನಿಮ್ಮ ಇಲಾಖೆಯಲ್ಲಾಗಲೀ, ಸಂಬಂಧಪಟ್ಟ ಲೋಕೋಪಯೋಗಿ ಇಲಾಖೆಯಲ್ಲಿ ಎಷ್ಟು ಜನ ನಿಮ್ಮ ಕೆಳಗಿನ ಅಧಿಕಾರಿಗಳು ಇಂತಹ ಒಂದು ವರದಿಯನ್ನು ಕೊಟ್ಟಿದ್ದಾರೆ? ಯಾರೂ ಕೊಡುವುದಿಲ್ಲ. ಹಿಂದಿರುವ ಕಲ್ಲನ್ನು ಮುಂದಕ್ಕೆ ತೆಗೆದುಕೊಂಡು ಹೋಗುತ್ತಾರೆ; ಅದನ್ನು ಮತ್ತೊಂದು ಕಡೆಗೆ ತೆಗೆದುಕೊಂಡು ಹೋಗುತ್ತಾರೆ. ಇಂತಹ ಒಂದು ಪ್ರವೃತ್ತಿ ನಡೆದುಕೊಂಡು ಬಂದಿರುವುದರಿಂದ ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ, ಎಲ್ಲಿಯವರೆಗೆ ಆಡಳಿತದಲ್ಲಿರುವ ಮೇಲ್ಮಟ್ಟದ ಅಧಿಕಾರಿಗಳಾಗಲೀ, ಅಧಿಕಾರೇತರರಾಗಲೀ ಪ್ರಾಮಾಣಿಕವಾಗಿ ಈ ದೇಶದ ಹಿತವನ್ನು ಕಾಪಾಡುವುದಕ್ಕೆ ಪ್ರಯತ್ನಪಡುವುದಿಲ್ಲ ಅಲ್ಲಿಯವರೆಗೆ ಇಂತಹ ಹಗರಣಗಳು ನಡೆದೇ ನಡೆಯುತ್ತವೆ. ಆದ್ದರಿಂದ ನೀರಾವರಿ ಮತ್ತು ಲೋಕೋಪಯೋಗಿ ಇಲಾಖೆಯ ಬೇಡಿಕೆಗಳ ಬಗ್ಗೆ ಮಾತನಾಡುವಂತಹ ಸಂದರ್ಭದಲ್ಲಿ ಹಲವಾರು ಲೋಪದೋಷಗಳನ್ನು ತಮ್ಮ ಗಮನಕ್ಕೆ ತಂದಿದ್ದೇನೆ. ಅವುಗಳ ಬಗ್ಗೆ ಪರಿಪೂರ್ಣವಾದ ತನಿಖೆ ಮಾಡುವುದರ ಮುಖಾಂತರ, ನಿರ್ದಾಕ್ಷಿಣ್ಯವಾದ ಕ್ರಮವನ್ನು ತೆಗೆದುಕೊಳ್ಳುವ ಮುಖಾಂತರ ತಾವೊಂದು ಹೊಸ ಅಧ್ಯಾಯ ಪ್ರಾರಂಭ ಮಾಡಲಿಯೆಂದು ನಾನು ಅವರಲ್ಲಿ ವಿನಂತಿಸಿಕೊಳ್ಳುತ್ತೇನೆ.

ಅಧ್ಯಕ್ಷರು:- ಈಗ ಸಭೆಯ ಕಲಾಪವನ್ನು ಮುಂದೂಡಿ ಸಭೆ ಪುನಃ 2.30ಕ್ಕೆ ಸೇರುವುದು.

(ಸದನ 1-35ಕ್ಕೆ ಮುಂದೂಡಲ್ಪಟ್ಟಿತು)

ಸದನವು ಪುನಃ ಮಧ್ಯಾಹ್ನ 2.55ಕ್ಕೆ ಸಮಾವೇಶಗೊಂಡಿತು

ಅಧ್ಯಕ್ಷರು (ಶ್ರೀ ವಿ.ಎಸ್. ಕೌಜಲಗಿ) ಅವರು ಪೀಠವನ್ನು ಅಲಂಕರಿಸಿದ್ದರು.

ಶ್ರೀ ಹೆಚ್. ಏಕಾಂತಯ್ಯ:- ಸನ್ಮಾನ್ಯ ಅಧ್ಯಕ್ಷರೆ, ನಾನು ಈಗಾಗಲೇ ಮಾತನಾಡುತ್ತಾ ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಿದೆ. ಯಾವ ಒಂದು ಲೋಪದೋಷದಿಂದಾಗಿ ಈ ನೀರಾವರಿ ಯೋಜನೆ ಇರಬಹುದು ಅಥವಾ ಲೋಕೋಪಯೋಗಿ ಇಲಾಖೆಗೆ ಸಂಬಂಧಪಟ್ಟ ಕಟ್ಟಡಗಳ ನಿರ್ಮಾಣ ಇರಬಹುದು, ಈ ನಿರ್ಮಾಣದಲ್ಲಿ ಕೆಲವು ಲೋಪದೋಷಗಳನ್ನು ನಾವು ಸಾಮಾನ್ಯವಾಗಿ ಕಾಣುತ್ತೇವೆ. ಇದನ್ನು ಇವತ್ತು ಹೊಸದಾಗಿ ಕಾಣುತ್ತಿಲ್ಲ. ಕಳೆದ ಅನೇಕ ದಶಕಗಳಿಂದ ಈ ಲೋಪದೋಷಗಳನ್ನು ನಾವು ಕಾಣುತ್ತಿದ್ದೇವೆ. ಮೊದಲನೆಯದಾಗಿ ಯಾವುದಾದರೂ ತನಿಖೆ

ಇನ್‌ವೆಸ್ಟಿಗೇಷನ್ ಮಾಡಬೇಕಾದರೆ ಅದು ಅತ್ಯಂತ ಲೋಪದೋಷದಿಂದ ಕೂಡಿದಂಥ ಇನ್‌ವೆಸ್ಟಿಗೇಷನ್ ಆಗಿದೆ. ಸರಿಯಾದ ರೀತಿಯಲ್ಲಿ ಮಣ್ಣಿನಗುಣ ಪರೀಕ್ಷೆ ಮಾಡದೆ ತಮಗೆ ಬೇಕಾದ ರೀತಿಯಲ್ಲಿ ಅಂದಾಜನ್ನು ತಯಾರಿಸುವುದರಿಂದ ಅನೇಕ ಸಂದರ್ಭಗಳಲ್ಲಿ ಕಂಟ್ರಾಕ್ಟರಿಗೆ ಅನುಕೂಲವಾಗುವಂಥ ರೀತಿಯಲ್ಲಿ ಪರಿವರ್ತನೆ ಆಗುವುದನ್ನು ನೋಡಿದ್ದೇವೆ. ಇವತ್ತು ಮೊಟ್ಟಮೊದಲನೆಯದಾಗಿ ಮಾಡಬೇಕಾದುದು ಏನೆಂದರೆ, ಡಿಫೆಕ್ಟೀವ್ ಇನ್‌ವೆಸ್ಟಿಗೇಷನ್ ಏನಿದೆ ಅದು ಸಾಧ್ಯವಾದಷ್ಟು ಇಲ್ಲದಂತೆ ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಆಡಳಿತ ವ್ಯವಸ್ಥೆಯಲ್ಲಿ ಮತ್ತೊಂದು ಬಹಳ ಅಪಾಯಕಾರಿಯಾದ ರೀತಿಯಲ್ಲಿ ಬೆಳೆಯುತ್ತಿರುವ ಅಂಶ ಅಂದರೆ, ಪದೇ ಪದೇ ಈ ಅಂದಾಜನ್ನು ರಿವೈಸ್ ಮಾಡುವ ಒಂದು ಪ್ರವೃತ್ತಿ. ಕೆಲವು ಸಂದರ್ಭಗಳಲ್ಲಿ 5–6–7–8 ಸಾರಿ ರಿವೈಸ್ ಆಗಿದೆ. ಕೆಲವು ಸಂದರ್ಭಗಳಲ್ಲಿ ತಾಂತ್ರಿಕ ವರದಿ ಏನಿದೆ ಅದಕ್ಕೆ ವಿರುದ್ಧವಾಗಿ ನಾವು ಆಡಳಿತಾತ್ಮಕ ಅನುಮೋದನೆ ಕೊಟ್ಟಿದ್ದೇವೆ. ಅದರಿಂದ ಪರಿಣಾಮ ಏನಾಗಿದೆ ಎನ್ನುವುದಕ್ಕೆ ಒಂದೇ ಒಂದು ಉದಾಹರಣೆ ಕೊಡುತ್ತೇನೆ. ಜನತಂತ್ರ ವ್ಯವಸ್ಥೆಯಲ್ಲಿ ಕೆಲವು ಸಾರಿ ಜನರ ಆಶೋತ್ತರಗಳಿಗೆ ಸ್ಪಂದಿಸುವುದಕ್ಕೆ ರಿವೈಸ್ ಮಾಡಬೇಕಾದುದು ಅವಶ್ಯಕವಾದರೂ ಕಾನೂನಿಗೆ ವಿರುದ್ಧವಾಗಿ ಅಥವಾ ತಂತ್ರಜ್ಞರ ವರದಿಗೆ ವಿರುದ್ಧವಾಗಿ ಕೆಲಸ ಮಾಡಿದಾಗ ಕೋಟ್ಯಾಂತರ ರೂಪಾಯಿ ಇದರಿಂದ ನಷ್ಟವಾಗಿದೆ. ಅದಕ್ಕೆ ಒಂದೇ ಒಂದು ಉದಾಹರಣೆ ಎಂದರೆ ತಾರಕ ಯೋಜನೆ. ಈ ತಾರಕ ಯೋಜನೆಯನ್ನು ಅನೇಕ ಸಾರಿ ರಿವೈಸ್ ಮಾಡಿದ್ದೇವೆ. ಅಲ್ಲಿ ನೀರೇ ಇಲ್ಲ. ಆದರೆ ಅಣೆಕಟ್ಟನ್ನು ರಿವೈಸ್ ಮಾಡಿದ್ದೇವೆ. ಕಟ್ಟೆಯ ಎತ್ತರವನ್ನು ಹೆಚ್ಚಿಸಿದ್ದೇವೆ. ಕಳೆದ 4–5 ವರ್ಷಗಳಿಂದ ಅಲ್ಲಿ ನೀರು ಬರುವುದಿಲ್ಲವೆಂದು ಅವರೇ ಹೇಳುತ್ತಾರೆ. ಆದರೆ ಕೋಟ್ಯಾಂತರ ರೂಪಾಯಿಗಳ ಹಣ ಖರ್ಚು ಮಾಡಿ ಅಂಥ ಯೋಜನೆಗಳಿಗೆ ನಾವು ಮಂಜೂರಾತಿ ಕೊಟ್ಟಿದ್ದೇವೆ. ಅದಕ್ಕೆ ನಾನು ಯಾರನ್ನೂ ದೂಷಣೆ ಮಾಡುವುದಿಲ್ಲ, ಆದರೆ ನಮ್ಮಲ್ಲಿ ಇರುವಂತಹ ಪ್ರವೃತ್ತಿ ಏನಿದೆ ಎಂದರೆ ತಂತ್ರಜ್ಞರ ವರದಿಗೆ ವಿರುದ್ಧವಾಗಿ ಇಂಥ ಕೆಲವು ಸಂದರ್ಭಗಳಲ್ಲಿ ನಡವಳಿಕೆ ಮಾಡುವುದರಿಂದ ನಾವು ದೇಶದ ಹಿತವನ್ನು ಮರೆತು ಕೇವಲ ಸ್ವಂತ ಅಥವಾ ರಾಜಕೀಯ ಲಾಭಕ್ಕೋಸ್ಕರ ಯೋಜನೆಗಳನ್ನು ಮಂಜೂರು ಮಾಡುವುದು ನೋಡಿದ್ದೇವೆ. ಆದರಿಂದ ದುಷ್ಪರಿಣಾಮವಾಗುತ್ತದೆ ಮತ್ತು ದೇಶದ ಹಣ ಅಪವ್ಯಯವಾಗುತ್ತದೆಂದರೆ ತಪ್ಪಾಗುವುದಿಲ್ಲ.

ಅಂಥದಕ್ಕೆ ಅವಕಾಶ ಕೊಡದಂಥ ರೀತಿಯಲ್ಲಿ ಈ ಇಲಾಖೆ ಕೆಲಸ ಮಾಡಬೇಕಾದುದು ಅತ್ಯಂತ ಅವಶ್ಯಕ ಇದೆ. ಸರ್ವೇ ಸಾಮಾನ್ಯವಾಗಿ ಸ್ಟೋರ್‌ಗೆ ಸಂಬಂಧಪಟ್ಟ ಹಾಗೆ ನೋಡುವುದಾದರೆ, ನಮಗೆ ಸಾಮಾನು ಬೇಕಿರಲಿ, ಬೇಡದಿರಲಿ ಅದನ್ನು ಕೊಳ್ಳುವುದು. ಅದು ಪಿಹೆಚ್.ಇ ಆಗಿರಬಹುದು, ಪಿಡಬ್ಲ್ಯೂಡಿ ಆಗಿರಬಹುದು, ಇರಿಗೇಷನ್ ಡಿಪಾರ್ಟ್‌ಮೆಂಟ್ ಇರಬಹುದು. ಅನೇಕ ಸಂದರ್ಭಗಳಲ್ಲಿ ಇನ್ವೆಂಟರಿ ಮಾಡಬೇಕಾದರೆ ನಮಗೆ ಅವಶ್ಯಕತೆ ಇದೆಯೋ ಇಲ್ಲವೇ ಎಂದು ಯಾರೂ ನೋಡುವುದಿಲ್ಲ. ಸಂಬಂಧಪಟ್ಟವರ ಅನುಮೋದನೆ, ಒಪ್ಪಿಗೆ ಪಡೆಯಬೇಕೆಂದು ಇದ್ದರೂ ಸಹ ಮೇಲ್ಪಟ್ಟ ಅಧಿಕಾರಿಗಳ ಒಪ್ಪಿಗೆ ಪಡೆಯದೆ ತಮಗೆ ಇಷ್ಟಬಂದ ರೀತಿಯಲ್ಲಿ, ತಮಗೆ ಬೇಕಾದ ಸಾಮಾನುಗಳನ್ನು ಅನಾವಶ್ಯಕವಾಗಿ ಅವಶ್ಯಕತೆ ಇಲ್ಲದೆ ಕೊಂಡುಕೊಂಡಿರುವುದನ್ನು ಗಮನಿಸಿದ್ದೇವೆ. ಆದುದರಿಂದ ಅಂಥ ಪ್ರವೃತ್ತಿಗೂ ಸಹ ಅವರು ಮಿತಿ ಹಾಕಬೇಕಾಗುತ್ತದೆ ಮತ್ತು ಸಂಬಂಧಪಟ್ಟವರಿಗೆ ಸೂಕ್ತವಾದ ಸೂಚನೆ ಕೊಡಬೇಕಾಗುತ್ತದೆ. ಸರ್ವೇಸಾಮಾನ್ಯವಾಗಿ ಈ ನೀರಾವರಿ ಯೋಜನೆಗಳು ತಡವಾಗುವುದು ಮತ್ತು ಕಾಲುವೆಗಳನ್ನು ತೆಗೆಸುವುದಕ್ಕೆ ಏತಕ್ಕೆ ಸಾಧ್ಯವಾಗುವುದಿಲ್ಲವೆಂದರೆ ಸಂಬಂಧಪಟ್ಟವರ ಭೂಮಿಯನ್ನು ಭೂಸ್ವಾಧೀನಪಡಿಸಿಕೊಳ್ಳುವುದಕ್ಕೆ ನಾವು ಸಕಾಲದಲ್ಲಿ ಕ್ರಮ ಕೈಗೊಳ್ಳುವುದಿಲ್ಲ ಅಥವಾ ಅನೇಕ ಸಂದರ್ಭಗಳಲ್ಲಿ ಗುತ್ತಿಗೆದಾರರೂ ಸಹ ಅವರ ಪರವಾಗಿ ಮಾತನಾಡುವುದರ ಮುಖಾಂತರ ಅಥವಾ ಅವರಿಗೆ ಪ್ರಚೋದನೆ ಮಾಡುವುದರ ಮುಖಾಂತರ ಈ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವುದಕ್ಕೆ

ತಡವಾಗಿ ಅದರಿಂದ ಕಂಟ್ರಾಕ್ಟರಿಗೆ ಲಾಭವಾಗುವ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಆದುದರಿಂದ ಈ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವುದಕ್ಕೆ ಕಾನೂನು ಪ್ರಕಾರ ಸಾಧ್ಯವಾದಷ್ಟು ಬೇಗ ಕ್ರಮ ಕೈಗೊಳ್ಳುವುದಕ್ಕೆ ಅವರು ಪ್ರಯತ್ನ ಮಾಡಬೇಕಾಗುತ್ತದೆ. ಒಟ್ಟಿನಲ್ಲಿ ನಾವು ಎಲ್ಲರೂ ಹೇಳುತ್ತೇವೆ, ಬಚಾವತ್ ಅವಾರ್ಡ್ ಪ್ರಕಾರ 2000 ಇಸವಿಯೊಳಗೆ ಕೃಷ್ಣನದಿ ನೀರನ್ನು ಉಪಯೋಗಿಸಿಕೊಳ್ಳಬೇಕೆಂಬ ಇರಾದೆಯಲ್ಲಿ ಯಾವುದೇ ಎರಡನೆ ಮಾತಿಲ್ಲ.

ಆದರೆ ವಸ್ತುಸ್ಥಿತಿಯಲ್ಲಿ ಅದು ಎಷ್ಟರ ಮಟ್ಟಿಗೆ ಸಾಧ್ಯವಿದೆ ಎಂಬುದನ್ನು ಆಲೋಚನೆ ಮಾಡಬೇಕು. ಕೃಷ್ಣ ಇರಬಹುದು, ಕಾವೇರಿ ಇರಬಹುದು. ಈ ಯೋಜನೆಗಳು ಬಹಳ ಮುಖ್ಯ ಎನ್ನುವುದರಲ್ಲಿ ಎರಡು ಅಭಿಪ್ರಾಯ ಇಲ್ಲ. ಆದರೆ ಈ ಯೋಜನೆಗಳನ್ನು ತ್ವರಿತಗತಿಯಲ್ಲಿ ಪೂರೈಸುವುದಕ್ಕೆ ನಾವು ದೃಢ ಮನಸ್ಸು ಮಾಡಬೇಕು. ನಿಜ, ಸಂಪನ್ಮೂಲದ ಕೊರತೆ ಇದೆ. ಆದರೆ ಆ ಕೊರತೆ ಇದಕ್ಕೆ ನೆಪ ಆಗಬಾರದು. ಇವತ್ತಿನ ದಿವಸ ನಮ್ಮ ರಾಜ್ಯದ ಸಂಪತ್ತು ಅಂದರೆ ಶೇಕಡಾ 40ರಷ್ಟು ವ್ಯವಸಾಯದ ಉತ್ಪನ್ನದಿಂದ ನಮ್ಮ ರಾಜ್ಯಕ್ಕೆ ಆದಾಯ ಬರುತ್ತಾ ಇದೆ. ಅಂತಹ ವ್ಯವಸಾಯದ ಉತ್ಪನ್ನವನ್ನು ನಾವು ಕಡಿಮೆ ಮಾಡುವುದಾದರೆ, ಆದಾಯ ನಿರಾಕರಣೆ ಮಾಡುವುದಾದರೆ, ಅದು ದೇಶದ ತಲಾವಾರು ಆದಾಯವಾಗಲಿ ಅಥವಾ ರಾಜ್ಯದ ಆರ್ಥಿಕ ಪರಿಸ್ಥಿತಿಯನ್ನು ಹೆಚ್ಚು ಅಭಿವೃದ್ಧಿಪಡಿಸುವುದಕ್ಕೆ ಸಹಾಯಕವಾಗುವುದಿಲ್ಲ. ಆ ದಿಸೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳು ಭಾಷಣದಲ್ಲಿ ಹೇಳಿದ್ದಾರೆ. ಸುಮಾರು 3,800 ಕೋಟಿಗಿಂತಲೂ ಹೆಚ್ಚು ಹಣವನ್ನು, ಶೇಕಡ 53ರಷ್ಟು ಹಣವನ್ನು ಸೇವಾ ವೆಚ್ಚ, ವೇತನ, ಸಹಾಯಧನವಾಗಿ ಕೊಡುತ್ತೇವೆಂದು ಹೇಳುತ್ತಿದ್ದಾರೆ. ಇದಕ್ಕೆ ಎಲ್ಲಾ ಸರ್ಕಾರಗಳು, ಯಾವುದೇ ಪಕ್ಷದವರು ಇದ್ದರೂ ಕೂಡ ಮೊದಲಿನಿಂದಲೂ ಪ್ರಚಾರಪ್ರಿಯ ಕೆಲವು ಕಾರ್ಯಕ್ರಮಗಳನ್ನು ಹಾಕಿರುವುದರಿಂದ ಈ ಒಂದು ಸ್ಪರ್ಧೆಯಾಗಿ, ಈ ಒಂದು ಪರಿಸ್ಥಿತಿ ಉದ್ಭವವಾಗಿದೆ. ನಾನು ಮಾನ್ಯ ಉಪಮುಖ್ಯಮಂತ್ರಿಗಳನ್ನು ಕೇಳುತ್ತೇನೆ. ನಾವು ಯಾರೂ ಅಧಿಕಾರದಲ್ಲಿ ಬಹಳ ವರ್ಷ ಇರುವುದಿಲ್ಲ. ಇದ್ದಷ್ಟು ದಿವಸದಲ್ಲಿ ಕಠಿಣವಾದ, ನಿಷ್ಠೂರವಾದ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ನಾನು ಅವರನ್ನು ವಿನಂತಿ ಮಾಡುತ್ತೇನೆ. ತಮ್ಮ ಕಾಲದಲ್ಲಾದರೂ ಮಾತ್ರ ಮುಖ್ಯಮಂತ್ರಿಗಳಿಗೆ ಹೇಳಿ ಪ್ರಚಾರ ಪ್ರಿಯವಾದ ಕಾರ್ಯಕ್ರಮ ವಿನು ಅನುತ್ಪಾದಿತ ವೆಚ್ಚ, ಅದು ವೇತನ ಆಗಿರಬಹುದು, ಇನ್ನಿತರ ವೆಚ್ಚ ಇರಬಹುದು ಅದಕ್ಕೆ ಕಡಿವಾಣ ಹಾಕಬೇಕು. ನಾವು ಹಸಿರು ಕಾರ್ಡು ಕೊಡುತ್ತೇವೆಂದು ನೀವು ಕೇಸರಿ ಕಾರ್ಡ್ ಕೊಡುವುದು ಬೇಡ. ಅವರು ಕೇಸರಿ ಕಾರ್ಡ್ ಕೊಟ್ಟರೆ ಇನ್ನೊಬ್ಬರು ಇನ್ನೊಂದು ಕಾರ್ಡ್ ಕೊಡುವುದರಿಂದ ಈ ರೀತಿಯಾಗಿ ನಮ್ಮ ದೇಶದಲ್ಲಿರುವ ಆದಾಯದ ಬಹುಭಾಗ ಇವತ್ತಿನ ದಿವಸ ಈ ಒಂದು ಅನುತ್ಪಾದಕ ವೆಚ್ಚಗಳಿಗೆ ಖರ್ಚು ಆಗುತ್ತಿದೆ. ಅದಕ್ಕೆ ತಡೆ ಹಾಕಬೇಕು. ನಿಜ, ನಿಷ್ಠೂರವಾಗಿ ಹೇಳುವುದರ ಮುಖಾಂತರ ನಮಗೆ ಅಷ್ಟೊಂದು ಪ್ರಚಾರ ಸಿಗುವುದಿಲ್ಲ ಅಥವಾ ಜನಸಾಮಾನ್ಯರೂ ಸಹ ನಮಗೆ ವಿರೋಧ ಮಾಡಬಹುದು, ವಿರೋಧ ಮಾಡುತ್ತಾರೆ ಎನ್ನುವ ಕಾರಣಕ್ಕೆ ಕೈಕಟ್ಟಿ ಕುಳಿತುಕೊಳ್ಳುವುದು ಬೇಡ. ಅನೇಕ ಸಂದರ್ಭಗಳಲ್ಲಿ ಇವೆಲ್ಲಾ ಮಾಡದೇ ಇದ್ದರೂ ಸಹ ನಾವು ಸೋತಿದ್ದೇವೆ. ಕೇವಲ ಚುನಾವಣೆಯಲ್ಲಿ ಗೆದ್ದು ಅಧಿಕಾರಕ್ಕೆ ಬರಬೇಕೆನ್ನುವುದನ್ನು ಮನಸ್ಸಿನಲ್ಲಿಟ್ಟುಕೊಳ್ಳದೇ, ಅನುತ್ಪಾದಕತೆಯ ವೆಚ್ಚಗಳಿಗೆ, ಸೇವಾವೆಚ್ಚ, ಬೇರೆ ರೀತಿಯ ವೆಚ್ಚಗಳಿಗೆ ಕಡಿಮೆ ಮಾಡಿ ಹೆಚ್ಚು ಹೆಚ್ಚು ಹಣವನ್ನು ನೀರಾವರಿಗೆ ತಾವು ಖರ್ಚು ಮಾಡುವುದಕ್ಕೆ ಪ್ರಯತ್ನ ಮಾಡಬೇಕು.

ಅದಕ್ಕಾಗಿ ಒಂದು ಪಕ್ಷ ಅವಶ್ಯಕವಿದ್ದರೆ ಎಲ್ಲಾ ಪಕ್ಷಗಳ ಅಭಿಪ್ರಾಯವನ್ನು ಪಡೆದು ನಾವೆಲ್ಲರೂ ಇದರಲ್ಲಾದರೂ ಒಗ್ಗಟ್ಟಾಗಿ ಈ ದೇಶದ ಹಿತ ಕಾಪಾಡುವುದಕ್ಕೆ ಪ್ರಯತ್ನ ಮಾಡಬೇಕೆಂದು ಹೇಳುವುದಕ್ಕೆ ಬಯಸುತ್ತೇನೆ. ಮಾನ್ಯ ಅಧ್ಯಕ್ಷರೇ, ನಾವು ಎಂತಹ ಪರಿಸ್ಥಿತಿಯಲ್ಲಿದ್ದೇವೆ ಎಂದರೆ, ಉದಾಹರಣೆಗೆ ರಾಮಯ್ಯನವರು ಹೇಳುತ್ತಿದ್ದರು. ಹೇಮಾವತಿ ನಾಲೆಯ ವಲಯ ಇರಬಹುದು,

ಹೇಮಾವತಿ ಯೋಜನೆ ಇರಬಹುದು, ಈ ಯೋಜನೆಗಳಿಗೆ ನಾವು ಹಣವನ್ನು ಖರ್ಚು ಮಾಡಿದ್ದೇವೆ. ಖರ್ಚು ಮಾಡಿದರೂ ಕೂಡ ಅಲ್ಲಿ ಕಾಲುವೆ ತೆಗೆಯುವುದಕ್ಕೆ ಹಣವನ್ನು ಖರ್ಚು ಮಾಡುವುದಕ್ಕಾಗದೇ ಅಥವಾ ಜಲಾಶಯ ಪೂರ್ತಿಯಾದ ಅನೇಕ ಪ್ರಕರಣಗಳಲ್ಲಿ ಎಂದರೆ ಮಧ್ಯಮ ನೀರಾವರಿ, ಭಾರಿ ನೀರಾವರಿ ಇರಬಹುದು, ಈ ಯೋಜನೆಗಳ ಅಡಿಯಲ್ಲಿ ಜಲಾಶಯಗಳನ್ನು ನಿರ್ಮಾಣ ಮಾಡಿದ್ದರೂ ಕೂಡ ನೀರನ್ನು ಉಪಯೋಗಿಸಿಕೊಳ್ಳುವಂಥ ಪರಿಸ್ಥಿತಿಯಲ್ಲಿ ನಾವು ಇಲ್ಲ. ಅದಕ್ಕೋಸ್ಕರ ಇಂತಹ ಕಾಲುವೆಗಳನ್ನು ತೆಗೆಯಲಿಕ್ಕೆ ಅಥವಾ ಬೇರೆ ವಿಧವಾದ ಕೆಲಸ ಕಾರ್ಯಗಳನ್ನು ತೆಗೆದುಕೊಳ್ಳಲಿಕ್ಕೆ ಹೆಚ್ಚು ಆದ್ಯತೆಯನ್ನು ಕೊಡಬೇಕು. ಅಲ್ಲಿ ಆದ್ಯತೆ ಕೊಡುವುದರ ಮುಖಾಂತರ ಪ್ರತಿಫಲ ಉತ್ಪಾದನೆ ಹೆಚ್ಚು ಮಾಡುವುದಕ್ಕೆ ಸಹಾಯ ಮಾಡಿದ ಹಾಗೆ ಆಗುತ್ತದೆ. ಆ ದಿಸೆಯಲ್ಲಿ ಈ ಕೆಲಸವನ್ನು ಮಾಡುವುದು ಅತ್ಯಂತ ಅವಶ್ಯಕತೆ ಇದೆ. ಎಲ್ಲದಕ್ಕಿಂತಲೂ ಹೆಚ್ಚಾಗಿ ಕೆಲವು ಸಣ್ಣ ಸಣ್ಣ ಯೋಜನೆಗಳು ಇವೆ. 5 ಕೋಟಿ, 10 ಕೋಟಿ, 20 ಕೋಟಿ ರೂಪಾಯಿ ಹಾಕಿದರೆ ಆ ಕಾರ್ಯಕ್ರಮಗಳು ಪೂರ್ತಿಯಾಗುತ್ತವೆ, ಇಡೀ ಪ್ರದೇಶ ನೀರಾವರಿ ಸಾಮರ್ಥ್ಯಕ್ಕೆ ಅರ್ಹವಾಗಿ ಬಳಕೆಯಾಗುತ್ತದೆ. ಅಂತಹ ಯೋಜನೆಗಳಿಗೆ ನಾವು ಆದ್ಯತೆ ಕೊಡಬೇಕು. ಇವತ್ತು ಒಂದೇ ಕಡೆ 500 ಕೋಟಿ ರೂಪಾಯಿ ಖರ್ಚು ಮಾಡುವ ವಲಯದಲ್ಲಿ 25 ಕೋಟಿ ರೂಪಾಯಿ ಕಡಿಮೆ ಮಾಡಿದರೂ ಪರವಾಗಿಲ್ಲ, ಯಾವ ಯಾವ ಕಾಮಗಾರಿಗಳು ಪೂರ್ತಿ ಆಗುವುದಕ್ಕೆ 10 ಕೋಟಿ, 20 ಕೋಟಿ ರೂಪಾಯಿ ಖರ್ಚು ಮಾಡುವುದಕ್ಕೆ ಸಾಧ್ಯವಿದೆ ಆ ಹಣವನ್ನು ಅದಕ್ಕೆ ಖರ್ಚು ಮಾಡುವುದರ ಮುಖಾಂತರ ಅದರ ಪ್ರತಿಫಲವನ್ನು ಈ ದೇಶದ, ಈ ರಾಜ್ಯದ ಜನರಿಗೆ ಸಿಕ್ಕುವ ಹಾಗೆ ಮಾಡಿದರೆ ರಾಜ್ಯದ ಉತ್ಪಾದನೆ ಹೆಚ್ಚು ಆಗುತ್ತದೆ. ಈ ದಿಸೆಯಲ್ಲಿ ನಾವು ಕಾರ್ಯಕ್ರಮ ಹಾಕಿಕೊಳ್ಳಬೇಕೆಂದು ಹೇಳುತ್ತೇನೆ. ಬಚಾವತ್ ಅವಾರ್ಡ್ ಬಗ್ಗೆಯಾಗಲೀ, ಕಾವೇರಿ ಬಗ್ಗೆಯಾಗಲೀ ಎರಡನೇ ಮಾತು ಇಲ್ಲ. ಅದಕ್ಕೆ ಸುಮಾರು 6ಸಾವಿರ ಕೋಟಿ ರೂಪಾಯಿ ಬೇಕೆಂದು ಮುಖ್ಯಮಂತ್ರಿಗಳು ಹೇಳುತ್ತಿದ್ದಾರೆ. ಇದು 2000ನೇ ಇಸವಿವರೆಗೆ ಅಲ್ಲ, ಅದಕ್ಕಿಂತಲೂ ಮೊದಲೇ ಮಾಡಲೇಬೇಕು. ಮುಖ್ಯವಾಗಿ ಕಾವೇರಿ ಬೇಸಿನ್‌ನಲ್ಲಿ ಇನ್ನು ಒಂದೆರಡು ವರ್ಷದಲ್ಲಿ ಮಾಡುವ ರೀತಿಯಲ್ಲಿ ನಾವು ಕಾರ್ಯಕ್ರಮ ಹಾಕಿಕೊಳ್ಳಬೇಕು. ಇದಕ್ಕೆ ಎಲ್ಲಾ ಪಕ್ಷಗಳ ಸಹಕಾರ ಸಹಾಯ ಸಿಗುತ್ತದೆಂದು ಹೇಳುತ್ತೇನೆ. ಸನ್ಮಾನ್ಯ ಅಧ್ಯಕ್ಷರೇ, ಅದು ಆದಮೇಲೆ ಈ ಒಂದು ಭಾರಿ ಮತ್ತು ಮಧ್ಯಮ ನೀರಾವರಿಯಲ್ಲಿ ಏನು ಒಂದು ಲೋಪದೋಷವನ್ನು ನೋಡಿದ್ದೇವೆ, ಅಂತಹದ್ದೇ ಲೋಪದೋಷವನ್ನು ನಾವು ಇವತ್ತು ಸಣ್ಣ ನೀರಾವರಿಯಲ್ಲೂ ಕಾಣುತ್ತೇವೆ. ನಿಜ, ಸಣ್ಣ ನೀರಾವರಿಯಲ್ಲಿ ನಾವು ಸೃಜಿಸಬಹುದಾದ ನೀರಾವರಿ ಸಾಮರ್ಥ್ಯ ಕೇವಲ 10 ಸಾವಿರ ಎಕರೆ. ಅದರಲ್ಲಿ ಈಗಾಗಲೇ ಶೇಕಡ 90ರಷ್ಟು ನಾವು ಬಳಕೆ ಮಾಡಿಕೊಂಡಿದ್ದೇವೆ.

992–93ರಲ್ಲಿ ವಿಶ್ವಬ್ಯಾಂಕಿನ ಸಹಾಯದಿಂದ 78 ಟ್ಯಾಂಕ್‌ಗಳನ್ನು ನಾವು ತೆಗೆದುಕೊಂಡಿದ್ದೇವೆ. ...ಬ್ಯಾಂಕಿನ ಗೈಡ್‌ಲೈನ್ಸ್. ಏನಿದೆ ಆ ಗೈಡ್‌ಲೈನ್ಸ್‌ನ ಅನುಸಾರವಾಗಿ ಮಾಡಲಿಕ್ಕೆ ಆಗದೆ, 1993ರಲ್ಲಿ ...ಬೇಕೆಂದು ಇತ್ತು ಮಾಡಲಿಕ್ಕೆ ಆಗಲಿಲ್ಲ, ಅದಕ್ಕೆ ಬದಲಾಗಿ 1993–94ನೇ ಸಾಲಿನಲ್ಲಿ ಈ ...ವನ್ನು ಮಾಡಲಿಕ್ಕೆ ಪ್ರಯತ್ನ ಮಾಡಿದ್ದಾರೆ. ಕರ್ನಾಟಕ ರಾಜ್ಯದಲ್ಲಿ ಸಣ್ಣ ನೀರಾವರಿ ಯೋಜನೆಯ ...ಎಲ್ಲಿ ಕೆರೆಗಳನ್ನು ಕಟ್ಟಲಿಕ್ಕೆ ಸಾಧ್ಯವಿಲ್ಲ. ಅದಕ್ಕೋಸ್ಕರ ನಾನು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ. ...ತಲೂ ಸುಲಭವಾಗಿ ಹೂಳೆತ್ತುವುದರ ಮುಖಾಂತರ ಹೆಚ್ಚು ನೀರನ್ನು ಅಲ್ಲಿ ಸ್ಟೋರ್ ...ಕ್ಕೆ ಸಾಧ್ಯವಾಗುತ್ತದೆ. ಅದರ ಉಪಯೋಗ ಮಾಡಲಿಕ್ಕೆ ಪ್ರಯತ್ನ ಮಾಡಬೇಕೆನ್ನುವ ಮಾತನ್ನು ...ನೆ. ಗಂಗಾಕಲ್ಯಾಣವಿರಬಹುದು, ಅಥವಾ ಗ್ರೌಂಡ್ ವಾಟರ್ ಏನಿದೆ ಅದನ್ನು ಹೆಚ್ಚು ಹೆಚ್ಚು ...ೋಗಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕಾಗಿದೆ. ತಮಗೆ ಗೊತ್ತಿರುವ ಹಾಗೆ ಈಗಾಗಲೇ 80ರಷ್ಟು ಗ್ರೌಂಡ್ ವಾಟರನ್ನು ನಾವು ಬಳಕೆ ಮಾಡುತ್ತಿದ್ದೇವೆ. ಆದರೂ ಸಹ ಇನ್ನು

ಉಳಿದಂತಹ ನೀರಾವರಿ ಸಾಮರ್ಥ್ಯವನ್ನು ಹೆಚ್ಚಿಗೆ ಮಾಡಲಿಕ್ಕೆ ಸಾಧ್ಯವಿದೆ, ಅದಕ್ಕೆ ಬೇಕಾದ [illegible] ಮತ್ತು ಸಹಕಾರವನ್ನು ತಾವು ಇಂಧನ ಮಂತ್ರಿಗಳಾಗಿರುವುದರಿಂದ ಅದಕ್ಕೆ ಬೇಕಾದ ವಿದ್ಯುಚ್ಛಕ್ತಿಯನ್ನು ನಾವು ಪಡೆಯಲಿಕ್ಕೆ ಸಹಾಯ ಮಾಡಬೇಕೆಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಇನ್ನು ಮುಖ್ಯವಾಗಿ ಅಚ್ಚುಕಟ್ಟು ಪ್ರದೇಶ ಅಭಿವೃದ್ಧಿಗಾಗಿ ನಾವು ಹಣವನ್ನು ಕೊಡುತ್ತೇವೆ. ಎಷ್ಟೇ ಮಾಡಿದರೂ ಸಹ ಹೊಲಗಳಲ್ಲಿ ಚರಂಡಿಗಳನ್ನು ಫೀಲ್ಡ್ ಡ್ರೈನ್‌ಗಳನ್ನು ಮಾಡದಿದ್ದರೆ ಅದಕ್ಕೆ ಬೇಕಾದ ಹಣವನ್ನು ಕೊಟ್ಟಿದ್ದರೂ ಸಹ ಅನೇಕ ಸಂದರ್ಭದಲ್ಲಿ ಅದು ಸರಿಯಾದ ರೀತಿಯಲ್ಲಿ ಉಪಯೋಗವಾಗಿಲ್ಲ. ಶೇಕಡ 60ರಷ್ಟೂ ಸಹ ಅಚ್ಚುಕಟ್ಟು ಪ್ರದೇಶಾಭಿವೃದ್ಧಿಯಾಗಿಲ್ಲವೆಂದು ಹೇಳುತ್ತಿದ್ದಾರೆ. ಇದು ಕೇಂದ್ರ ಸರ್ಕಾರದ ಕೇಂದ್ರ ಪುರಸ್ಕೃತ ಯೋಜನೆ. ಕೇಂದ್ರ ಸರ್ಕಾರದವರೇ ತಮಗೆ ಹಣವನ್ನು ಕೊಟ್ಟಿದ್ದಾರೆ. ಆ ರೀತಿ ಕೊಟ್ಟಂತಹ ಹಣದಲ್ಲಿ ಅಂದರೆ ಇವತ್ತಿನ ದಿವಸ ನಮಗೆ ತಮ್ಮ ವರದಿ ಏನು ಹೇಳುತ್ತದೆ ಅದರ ಪ್ರಕಾರ 11ಕೋಟಿ ರೂಪಾಯಿಯಷ್ಟು ಕೇಂದ್ರ ಸರ್ಕಾರದವರು ಏನು ಸಾಲವನ್ನು ಕೊಟ್ಟಿದ್ದಾರೆ ಆ ಹಣ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರಗಳು ಏನು ಇವೆ, ಅವಕ್ಕೆ ತಾವು ಹಣವನ್ನು ಕೊಟ್ಟಿಲ್ಲವೆನ್ನುವ ಮಾತನ್ನು ಹೇಳುತ್ತಾರೆ. ಆದ್ದರಿಂದ ಈ ರೀತಿಯಾಗಿ ಕೇಂದ್ರ ಪುರಸ್ಕೃತ ಯೋಜನೆಯಲ್ಲಿ ಹಣ ಸಾಲವಾಗಿ ಬರಬಹುದು ಅಥವಾ ಸಹಾಯಧನವಾಗಿ ಬರಬಹುದು, ಈ ಎಲ್ಲಾ ಹಣವನ್ನು ಉಪಯೋಗಿಸಿಕೊಂಡು ಈವೊಂದು ಪ್ರದೇಶವನ್ನು ಅಭಿವೃದ್ಧಿಪಡಿಸುವುದಕ್ಕೆ ತಾವು ಕ್ರಮವನ್ನು ತೆಗೆದುಕೊಳ್ಳಬೇಕೆಂದು ಹೇಳುವುದಕ್ಕೆ ಇಚ್ಛಿಪಡುತ್ತೇನೆ.

ಇನ್ನು ಲೋಕೋಪಯೋಗಿ ಇಲಾಖೆಯ ಬಗ್ಗೆ ಕೆಲವು ಮಾತುಗಳನ್ನು ಹೇಳುವುದಕ್ಕೆ ಇಚ್ಛಿಪಡುತ್ತೇನೆ. ಇವತ್ತಿನ ದಿವಸ 1 ಲಕ್ಷದ 20 ಸಾವಿರ ಕಿ.ಮೀ.ಗಿಂತ ಹೆಚ್ಚು ದೂರದ ರಸ್ತೆ ನಮ್ಮಲ್ಲಿದೆ. ಇಷ್ಟು ರಸ್ತೆ ಇದ್ದರೂ ಸಹ ಯೋಗ್ಯವಾದ ರಸ್ತೆ ಇತ್ತೀಚೆಗೆ ಲೋಕೋಪಯೋಗಿ ಇಲಾಖೆ ತೆಗೆದುಕೊಂಡಂತಹ ರಸ್ತೆಗಳನ್ನು ಸೇರಿಸಿದರೂ ಸುಮಾರು 40 ಸಾವಿರ ಕಿಲೋಮೀಟರ್ ರಸ್ತೆಯಾಗುತ್ತದೆ. ಕಚ್ಚಾ ರಸ್ತೆ ಸೇರಿದಂತೆ ಕೇವಲ 60 ಸಾವಿರ ಕಿಲೋಮೀಟರ್ ರಸ್ತೆ ಇದೆ. ಕಚ್ಚಾ ರಸ್ತೆಯನ್ನು ಹೊರತುಪಡಿಸಿದರೆ 40 ಸಾವಿರ ಕಿಲೋಮೀಟರ್ ಪ್ರದೇಶ ನಮಗೆ ಬರುತ್ತದೆ. ನಾವು ಇಲ್ಲಿ ಬೆಳವಣಿಗೆಯ ಅಸಮತೋಲನವನ್ನು ಕಾಣುತ್ತೇವೆ. ನಾನು ಮಾನ್ಯ ಲೋಕೋಪಯೋಗಿ ಸಚಿವರನ್ನು ಕೇಳಿಕೊಳ್ಳುವುದೇನೆಂದರೆ, ಇಡೀ ಕರ್ನಾಟಕ ರಾಜ್ಯದಲ್ಲಿ ಕೊನೆಯ ಪಕ್ಷ ನೀವು ಈ ಜಿಲ್ಲಾವಾರು ಏನು ವಿಸ್ತೀರ್ಣ ಇದೆ, ಜನಸಂಖ್ಯೆ ಇದೆ, ಎಲ್ಲಿ ಒಳ್ಳೆಯ ರಸ್ತೆಗಳು ಇವೆ ಅವುಗಳನ್ನು ಗಮನಕ್ಕೆ ತೆಗೆದುಕೊಂಡು ಪ್ರಾದೇಶಿಕ ಸಮತೋಲನವನ್ನು ಕಾಪಾಡಿಕೊಂಡು ಹೆಚ್ಚು ಉತ್ತಮವಾದ ರಸ್ತೆಗಳು ಎಲ್ಲಾ ಪ್ರದೇಶಗಳಲ್ಲೂ ಆಗುವ ರೀತಿಯಲ್ಲಿ ತಾವು ಕ್ರಮವನ್ನು ತೆಗೆದುಕೊಳ್ಳಬೇಕು. ಅದಕ್ಕಿಂತ ಹೆಚ್ಚಾಗಿ 43 ಸಾವಿರ ಕಿಲೋಮೀಟರ್ ರಸ್ತೆ ಏನಿದೆ ಅದನ್ನು ತಾವು ಹೆಚ್ಚು ಮಾಡಲಿಕ್ಕೆ ಪ್ರಯತ್ನ ಮಾಡಬೇಕು. ನಿಜ, ಹಿಂದೆ ಜಿಲ್ಲಾಪರಿಷತ್‌ನವರ ವ್ಯಾಪ್ತಿಯಲ್ಲಿ ಬರುವ ರಸ್ತೆಗಳನ್ನು ತಾವು ತೆಗೆದುಕೊಂಡು ಮೇಜರ್ ಡಿಸ್ಟ್ರಿಕ್ಟ್ ರಸ್ತೆಗಳನ್ನು ಮಾಡಿದ್ದೀರಿ. ಅದೇ ರೀತಿಯಾಗಿ ಈ ವರ್ಷವೂ ತಾವು ಮಾಡಲಿಕ್ಕೆ ಪ್ರಯತ್ನ ಮಾಡಬೇಕೆಂದು ಹೇಳುವುದಕ್ಕೆ ಇಚ್ಛಿಪಡುತ್ತೇನೆ. ಹಿಂದಿನ ವರ್ಷ ನೆರೆಹಾವಳಿಯಿಂದ ಅನೇಕ ರಸ್ತೆಗಳು ಕೆಟ್ಟು ಹೋಗಿವೆ. ಅವುಗಳನ್ನು ಸರಿಮಾಡಲಿಕ್ಕೆ ನೂರಾರು ಕೋಟಿ ರೂಪಾಯಿ ಹಣ ಬೇಕು ಎಂದು ಎಲ್ಲಾ ಕಡೆಯಿಂದ ಮನವಿಗಳು ಬಂದಿವೆ. ಆದರೆ ಇದುವರೆಗೆ ರಸ್ತೆಗಳನ್ನು ಸರಿಪಡಿಸಲಿಕ್ಕೆ ನಮಗೆ ಹಣ ಬಿಡುಗಡೆಯಾಗಿಲ್ಲ. ಆದ್ದರಿಂದ ನಾನು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ. ಇವತ್ತಿನ ದಿವಸವಾದರೂ ಸಹ ಈ ರಸ್ತೆಗಳನ್ನು ಸರಿಪಡಿಸುವುದಕ್ಕೆ ವಿಶೇಷ ಅನುದಾನವನ್ನು ಎಲ್ಲೆಲ್ಲಿ ನೆರೆಹಾವಳಿಯಿಂದ ರಸ್ತೆಗಳು ಕೆಟ್ಟು ಹೋಗಿವೆ ಅಂತಹ ಕಡೆಗೆ ಕೊಡಲಿಕ್ಕೆ ಪ್ರಯತ್ನ ಮಾಡಬೇಕು. ಆಮೇಲೆ ಎಲ್ಲಾ ತಾಲ್ಲೂಕುಗಳಲ್ಲಿ ಮತ್ತು ಜಿಲ್ಲೆಗಳಲ್ಲೂ ಸಹ ಯಾವುದೇ ಒಂದು ಕಛೇರಿಗಳಿಗೆ ಕಟ್ಟಡಗಳು ಇಲ್ಲದಿರುವ ಪರಿಸ್ಥಿತಿ ನಿರ್ಮಾಣವಾಗಿದೆ. ಇದರಿಂದ ಏನಾಗಿದೆ

ಅಂದರೆ ಆ ಕಛೇರಿ ನಿರ್ಮಾಣ ಮಾಡುವುದಕ್ಕಿಂತ ಹೆಚ್ಚು ಹಣವನ್ನು ಬಾಡಿಗೆ ರೂಪದಲ್ಲಿ ಜಿಲ್ಲಾ ಕೇಂದ್ರಗಳಲ್ಲಿ ಮತ್ತು ತಾಲ್ಲೂಕು ಕೇಂದ್ರಗಳಲ್ಲಿ ಕೊಡುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಆದ್ದರಿಂದ ಆದ್ಯತೆಯ ಮೇಲೆ ಎಲ್ಲಾ ಜಿಲ್ಲೆಗಳಲ್ಲೂ ಸಹ ಮಿನಿ ವಿಧಾನಸೌಧ ಕಟ್ಟಡ ಕಟ್ಟುವುದು. ಅದಕ್ಕೆ ಈಗ ನಾವೇನು ಬಾಡಿಗೆಗೆ ಕೊಡುತ್ತೇವೆ ಆ ಹಣವೇ ಸಾಕಾಗಬಹುದು. ಆ ರೀತಿ ಮಾಡಲಿಕ್ಕೆ ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ. ಎಲ್ಲದಕ್ಕಿಂತ ಹೆಚ್ಚಾಗಿ ಈ ಇಲಾಖೆ ಪುನರ್ ರಚನೆಯಾಗಬೇಕು. ಅದು ಅತಿ ಅವಶ್ಯಕವಿದೆ. ಅನೇಕ ಸಂದರ್ಭಗಳಲ್ಲಿ ನಾವು ಏನು ಡಿವಿಜನ್‌ಗಳನ್ನು ಮಾಡಿದ್ದೇವೆ, ಸಬ್ ಡಿವಿಜನ್‌ಗಳನ್ನು ಮಾಡಿದ್ದೇವೆ ಇವನ್ನು ಯಾವುದೇ ವೈಜ್ಞಾನಿಕವಾದ ಆಧಾರದ ಮೇಲೆ ಮಾಡಿಲ್ಲ. ಅಲ್ಲಿ ಎಷ್ಟು ಕೆಲಸವಿದೆ, ಎಷ್ಟು ಹಣ ಕೊಡಬೇಕು ಎಂದು ಯಾವ ಯೋಜನೆಗಳೂ ಇಲ್ಲ. ಯಾವುದೋ ಕಾರಣದಿಂದ ಉಪವಿಭಾಗಗಳನ್ನು ಮಾಡಿದ್ದೇವೆ. ಅಲ್ಲಿರುವಂತಹ ಇಂಜಿನಿಯರ್‌ಗಳಿಗೆ ಕೆಲಸವೇ ಇರುವುದಿಲ್ಲ. ಅನೇಕ ಸಂದರ್ಭಗಳಲ್ಲಿ ಇಂಜಿನಿಯರ್‌ಗಳಿಗೆ ಕೆಲಸವಿಲ್ಲದ ಪರಿಸ್ಥಿತಿ ನಿರ್ಮಾಣವಾಗಿರಬಹುದು. ಅಥವಾ ಹಣ ಕೊಟ್ಟಿಲ್ಲದೇ ಇರಬಹುದು. ಇದೆಲ್ಲವನ್ನೂ ದೃಷ್ಟಿಯಲ್ಲಿಟ್ಟುಕೊಂಡು ಇಡೀ ಇಲಾಖೆಯನ್ನು ಪುನರ್‌ರಚನೆ ಮಾಡಬೇಕಾಗಿದೆ.

ಇವತ್ತಿನ ದಿವಸ ಪಿ.ಡಬ್ಲ್ಯೂ.ಡಿ. ಇಲಾಖೆಗೂ ಸಹ ಒಂದು ಕೋಡನ್ನು ಮಾಡಿಕೊಂಡಿದ್ದಾರೆ. ಅದು ನೀರಾವರಿ ಇಲಾಖೆಗೂ ಸಹ ಅನ್ವಯವಾಗುತ್ತದೆ. ಪಿ.ಡಬ್ಲ್ಯೂ.ಡಿ. ಇಲಾಖೆಯ ನೌಕರರಿಗೂ ಅನ್ವಯವಾಗುತ್ತದೆ. ಈ ಕೋಡನ್ನು ಪುನರ್‌ವಿಮರ್ಶಿಸಿ ಹೊಸದು ತರುವುದು ಒಳ್ಳೆಯದೆಂದು ನಾನು ಭಾವಿಸುತ್ತೇನೆ. ಏಕೆಂದರೆ ಅನೇಕ ಸಂದರ್ಭದಲ್ಲಿ ಇರುವಂಥ ಕಾನೂನುಗಳು ಸರಿಯೆಂದು .ನಮ್ಮ ಭಾವನೆ. ಆದರೂ ಸಹ ಇತ್ತೀಚಿನ ಬೆಳವಣಿಗೆಗಳಿಂದಾಗಿ ಎಲ್‌ಸಿಬಿ ಮತ್ತು ಐ.ಸಿ.ಬಿ. ಏನು ಕಂಟ್ರಾಕ್ಟರ್ಸ್ ಇದ್ದಾರೆ, Local competitive Bidding ನಿಮ್ಮ ಪ್ರದೇಶದಲ್ಲಿ, ಅಥವಾ International Competitive Bidding ಎಂದು ಏನು ಮಾಡುತ್ತೇವೆ, ಇವುಗಳೆಲ್ಲವನ್ನೂ ಗಮನದಲ್ಲಿಟ್ಟುಕೊಂಡು ಪಿ.ಡಬ್ಲ್ಯೂ.ಡಿ ಕೋಡನ್ನು ಪುನರ್‌ರಚನೆ ಮಾಡಬೇಕಾದಂಥ ಅವಶ್ಯಕತೆ ಇದೆಯೆಂದು ನಾನು ಭಾವಿಸಿದ್ದೇನೆ. ಆ ದಿಸೆಯಲ್ಲಿ ಅವರು ಕೆಲಸ ಮಾಡಬೇಕು. ಆಮೇಲೆ ಅನೇಕ ಕೆಲಸ ಕಾರ್ಯಗಳು. ಎಂದರೆ ಅದು ಹಳ್ಳಿ ಹೆದ್ದಾರಿ ಇರಬಹುದು, ಸೇತುಬಂಧನ ಇರಬಹುದು, ಕೆರೆಕಲ್ಯಾಣ ಇರಬಹುದು, ಬೇರೆ ಬೇರೆ ಕೆಲಸಗಳನ್ನು ಏನು ಜಿಲ್ಲಾಪರಿಷತ್ತಿಗೆ ಕೊಟ್ಟಿದ್ದೀರಿ, ಅದು ಅಲ್ಲಿಯೂ ಸರಿಯಾಗುವುದಿಲ್ಲ, ಇಲ್ಲಿಯೂ ಸರಿಯಾಗುವುದಿಲ್ಲ ಎಂಬ ಅನೇಕ ದೂರುಗಳು ಬಂದಿವೆ. ಆದ್ದರಿಂದ ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಏನೆಂದರೆ, ಇವತ್ತು ಏನು ಕೆಲಸಗಳನ್ನು ಜಿಲ್ಲಾಪರಿಷತ್ತುಗಳಿಗೆ ಕೊಟ್ಟಿದ್ದೀರಿ, ಅಲ್ಲಿ ಕೆಲಸ ಇದ್ದರೆ ಕೊಡಿ, ಬೇಡವೆಂದು ಹೇಳುವುದಿಲ್ಲ. ಆದರೆ ನಿಮ್ಮವರಿಗೂ ಕೆಲಸ ಇಲ್ಲ, ಅಲ್ಲಿಯವರಿಗೂ ಕೆಲಸ ಇಲ್ಲ ಎನ್ನುವುದು ಆಗಬಾರದು. ತಮ್ಮ ಇಲಾಖೆಯ ವ್ಯಾಪ್ತಿಯಲ್ಲಿ ಏನು ಈ ಎಲ್ಲಾ ಕಾರ್ಯಕ್ರಮಗಳು ಇವೆ ಅದು ಎಂ.ಎನ್.ಪಿ. ಇರಬಹುದು ಅಥವಾ ಬೇರೆ ಬೇರೆ ಏನು ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದೀರಿ, ಆ ಕೆಲಸವನ್ನು ತಮ್ಮ ಪರಿವೀಕ್ಷಣೆಯಲ್ಲೇ ಮಾಡುವಂಥ ಒಂದು ವ್ಯವಸ್ಥೆಯನ್ನು ತಾವು ಮಾಡಿಕೊಳ್ಳಬೇಕಾಗುತ್ತದೆ. ಅದೆಲ್ಲದಕ್ಕಿಂತ ಹೆಚ್ಚಾಗಿ, ಈ ಪಿ.ಡಬ್ಲ್ಯೂ.ಡಿ. ಇಲಾಖೆ, ನೀರಾವರಿ ಇಲಾಖೆ, ಪಿ.ಎಚ್.ಇ. ಮತ್ತು ಜಿಲ್ಲಾಪರಿಷತ್ತು ಬೇರೆ ಬೇರೆ ಇಲಾಖೆಯವರಿಗೆ ಡೆಪ್ಯೂಟೇಶನ್ ಮೇಲೆ ತಾವು ಅವರನ್ನು ಕಳಿಸಿಕೊಡುತ್ತೀರಿ. ನನಗೆ ಆಶ್ಚರ್ಯವಾಗುತ್ತದೆ, ಈ ನಿಯೋಜನೆ ಮೇಲೆ ನೀವು ಕಳಿಸಿದರೂ ಕೂಡ, ಅವರ ಮೇಲೆ ನಿಮ್ಮ ಹಿಡಿತ ಇಲ್ಲ. ಏತಕ್ಕೆಂದರೆ ಅನೇಕ ಸಂಧರ್ಭದಲ್ಲಿ ನಿಮ್ಮ ಇಲಾಖೆಯ ನೌಕರರನ್ನು ವರ್ಗ ಮಾಡುವವರು ಅವರು. ಅವರು ತಮ್ಮ ಇಲಾಖೆಯಲ್ಲಿ ಮಾಡಿಕೊಳ್ಳುವುದಿಲ್ಲ. ತಮ್ಮ ಇಲಾಖೆಯನ್ನು ಹೊರತುಪಡಿಸಿ, ಬೇರೆ ಇಲಾಖೆಗೆ ವರ್ಗ ಮಾಡುವಂಥ ಒಂದು ಪ್ರವೃತ್ತಿ ನಡೆಯುತ್ತದೆ. ಇದು ಎಷ್ಟರಮಟ್ಟಿಗೆ ಸರಿ.

ಆದ್ದರಿಂದ ನಾನು ಕೇಳುತ್ತಿದ್ದೇನೆ, ಇದಕ್ಕೊಂದು ಕಡಿವಾಣ ಹಾಕಬೇಕಾಗಿದೆ. ಇವತ್ತು ತಾವೇನು ಬೇರೆ ಬೇರೆ ಇಲಾಖೆಗಳಿಗೆ ಡೆಪ್ಯೂಟೇಶನ್ ಮೇಲೆ ಕಳಿಸುತ್ತಿದ್ದೀರಿ, ಅವರು ಅಲ್ಲಿ ಬೇರು ಬಿಟ್ಟುಕೊಳ್ಳುವುದಕ್ಕೆ ಅವಕಾಶ ಮಾಡಿಕೊಡಬೇಡಿ. ಅಲ್ಲಿ ಶಾಸಕರು ಇರಬಹುದು, ಮಂತ್ರಿಗಳು ಇರಬಹುದು; ಯಾರದ್ದೇ ಪ್ರಭಾವ ಇರಬಹುದು. ಇವರನ್ನು ನೀವು ಸತತವಾಗಿ ಜಿಲ್ಲಾಪರಿಷತ್ತಿನಲ್ಲಿ ಇಡುವುದರಿಂದ, ಸೂಕ್ಷ್ಮವಾದ ಪ್ರದೇಶ ಅಥವಾ ಸ್ಥಾನಗಳೆಂದು ಏನು ಕರೆಯುತ್ತೇವೆ, ಹೆಚ್ಚೆಚ್ಚು ಹಣ ಎಲ್ಲಿ ಚಲಾವಣೆಯಾಗುತ್ತದೆ, ಅಲ್ಲಿ ಸತತವಾಗಿ ಅವರನ್ನೇ ಇಡುವುದರ ಮುಖಾಂತರ ಅವರನ್ನು ಭ್ರಷ್ಟರನ್ನಾಗಿ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಆದ್ದರಿಂದ ಯಾರನ್ನೇ ಆಗಲಿ, ಮೂರು ವರ್ಷ, ಐದು ವರ್ಷ ಎಂದು ತಾವೇನು ಕಾನೂನು ಮಾಡಿಕೊಂಡಿದ್ದೀರಿ, ಆ ಕಾನೂನಿನ ವ್ಯಾಪ್ತಿಗೆ ಅವರನ್ನು ತಂದು, ಅವರನ್ನು ಬೇರೆ ಬೇರೆ ಕಡೆಗೆ ಹಾಕುವ ಪ್ರವೃತ್ತಿ ಬರಬೇಕು. ಕೆಲವು ಪ್ರದೇಶಗಳು, ಅವು ನ್ಯಾಷನಲ್ ಹೈವೇಸ್ ಇರಬಹುದು, ಜಿಲ್ಲಾಪರಿಷತ್ತುಗಳು ಇರಬಹುದು ಮತ್ತು ಎಲ್ಲಿ ಹೆಚ್ಚೆಚ್ಚು ಹಣ ಏನು ಓಡಾಡುತ್ತದೆ ಅಂತಹ ಕಡೆಗಳಲ್ಲಿ ಈ ರೀತಿಯಾದ ಪ್ರಭಾವಗಳನ್ನು ನಾವು ಕಾಣಬಹುದು. ಅದು ಇನ್‌ವೆಸ್ಟಿಗೇಷನ್ ಡಿವಿಜನ್ ಇರಬಹುದು. ಅವರ ಸೇವಾವಧಿಯಲ್ಲಿ ಎಲ್ಲಾ ಕಡೆಗೂ ಕೆಲಸ ಮಾಡುವಂಥ ವ್ಯವಸ್ಥೆ ಮಾಡಿದರೆ ಅಥವಾ ಮೂರು ವರ್ಷಗಳಿಗಿಂತ, ಐದು ವರ್ಷಗಳಿಗಿಂತ ಹೆಚ್ಚು ಕಾಲ ಅವರು ಒಂದೇ ಜಾಗದಲ್ಲಿ ಇರುವುದಿಲ್ಲ ಎಂದು ಆದರೆ ನಾವು ನಿಮ್ಮ ಹತ್ತಿರ ಓಡಾಡುವುದು ತಪ್ಪುತ್ತದೆ. ಯಾವುದೇ ಶಾಸಕರು ಹೀಗೆ ಓಡಾಡದ ರೀತಿಯಲ್ಲಿ ಒಂದು ನೀತಿಯನ್ನು ತಾವು ರೂಪು ಮಾಡಿ ಜಾರಿಗೆ ಕೊಡುವ ಪ್ರಯತ್ನ ಮಾಡಬೇಕೆಂದು ನಾನು ಹೇಳುತ್ತೇನೆ. ಅದಕ್ಕಿಂತಲೂ ಹೆಚ್ಚಾಗಿ ಇಂಜಿನಿಯರುಗಳು ಏನಿದ್ದಾರೆ, ಅವರು ಹೊಸಹೊಸದಾಗಿ ಅಲ್ಲಿಗೆ ಬರುತ್ತಿದ್ದಾರೆ ಅಥವಾ ಬಂದಂಥ ಹೊಸದರಲ್ಲಿ ಅವರಿಗೆ ಹೆಚ್ಚಿನ ಅನುಭವ ಇಲ್ಲದೇ ಇರಬಹುದು. ಅವರಿಗೆ ಸರಿಯಾದ, ವೈಜ್ಞಾನಿಕವಾದಂಥ ರೀತಿಯಲ್ಲಿ, ಒಂದು ತರಬೇತಿಯನ್ನು ಕೊಡುವ ವ್ಯವಸ್ಥೆ ಆಗಬೇಕು. ಅದು ಆಗದೇ ಇದ್ದರೆ ಅಷ್ಟು ಒಳ್ಳೆಯದಾಗುವುದಿಲ್ಲ ಎಂದು ನಾನು ಭಾವಿಸುತ್ತೇನೆ. ಇವತ್ತು ನಾನು ನೋಡಿದ್ದೇನೆ. ನಮ್ಮಲ್ಲಿರುವಂಥ ಅನೇಕ ಜೂನಿಯರ್ ಇಂಜಿನಿಯರುಗಳಿಗೆ, ಎಸ್ಟಿಮೇಟ್ ಮಾಡುವುದಕ್ಕೇ ಬರುವುದಿಲ್ಲ. ಅವರು ಎಸ್ಟಿಮೇಟ್ ಮಾಡಬೇಕಾದರೆ ಇನ್ನೊಬ್ಬರ ಹತ್ತಿರ ಹೋಗಬೇಕು. ಇನ್ನೊಬ್ಬರು ಯಾರಾದರೂ ಬುದ್ಧಿವಂತರು ಇದ್ದರೆ ಅವರ ಹತ್ತಿರ ಮಾಡಿಸಿಕೊಂಡು ಬರಬೇಕು. ಇದನ್ನು ಏಕೆ ಹೇಳುತ್ತಿದ್ದೇನೆ ಎಂದರೆ, ಮೊನ್ನೆ ಒಂದು ವಾಟರ್ ವರ್ಕ್ಸ್‌ಗೆ ಎಸ್ಟಿಮೇಟ್ ಮಾಡಬೇಕಾಗಿತ್ತು. ಏಕೆ ಕಳುಹಿಸಲಿಲ್ಲವೆಂದರೆ, ನಾಳೆ ಕಳಿಸುತ್ತೇವೆ, ನಾಳೆ ಕಳಿಸುತ್ತೇವೆ ಎಂದು ಹೇಳಿ ಒಂದು ವರ್ಷವಾದರೂ ಕಳಿಸಲಿಲ್ಲ. ಆಮೇಲೆ ಗೊತ್ತಾಯಿತು ಅವರಿಗೆ, ಮಾಡಲಿಕ್ಕೇ ಬರುವುದಿಲ್ಲ ಎಂದು. ಈ ರೀತಿಯಾದ ಪರಿಸ್ಥಿತಿ ಇರುತ್ತದೆ. ಆದ್ದರಿಂದ ಅಂತಹ ಇಂಜಿನಿಯರುಗಳು ಯಾರಿದ್ದಾರೆ, ನಾನು ಅವರನ್ನು ದೂರುವುದಿಲ್ಲ. ಅವರಿಗೆ ಸರಿಯಾದ ತರಬೇತಿಯನ್ನು ಕೊಡುವಂಥ ವ್ಯವಸ್ಥೆ ತಮ್ಮ ಇಲಾಖೆಯಿಂದ ಆಗಬೇಕು ಎನ್ನುವ ಮಾತನ್ನು ಇಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇದಾದಮೇಲೆ ಇಂಧನ ಇಲಾಖೆ ಬಗ್ಗೆ ಒಂದೆರಡು ಮಾತುಗಳನ್ನು ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ, ಇದರಲ್ಲಿ ಮೊನ್ನೆ ಭಾಷಣ ಮಾಡುತ್ತಾ ಮತ್ತು ಈ ಆಯವ್ಯಯ ಪತ್ರದಲ್ಲಿ ಒಂದು ಮಾತನ್ನು ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ್ದಾರೆ. ಅದು ಈ ರೀತಿ ಇದೆ.

"1992-93ರಲ್ಲಿ ವಿವಿಧ ಖಾಸಗಿ ಕಂಪನಿಗಳೊಂದಿಗೆ ಮಾಡಿಕೊಂಡ ಒಪ್ಪಂದವನ್ನು ಪುನಃ ಪರಿಶೀಲಿಸಿದ ತರುವಾಯ ಖಾಸಗಿ ವಲಯಗಳು ಪಾಲ್ಗೊಳ್ಳುವುದರಿಂದ 96-97ರ ವೇಳೆಗೆ ವಿದ್ಯುತ್ ಉತ್ಪಾದನಾ ಸಾಮರ್ಥ್ಯವು ಸುಮಾರು 1144ಮೆಗಾವ್ಯಾಟ್‌ನಷ್ಟು ಹೆಚ್ಚುತ್ತದೆಂದು ನಿರೀಕ್ಷಿಸಲಾಗಿದೆ."

ಸನ್ಮಾನ್ಯ ಅಧ್ಯಕ್ಷರೇ, ಉಪಮುಖ್ಯಮಂತ್ರಿಗಳಿಗೆ ಒಂದು ವಿಚಾರವನ್ನು ಕೇಳುತ್ತೇನೆ. ಪ್ರೈವೇಟ್ ಕಂಪನಿಗಳ ಜೊತೆಗೆ, ಏನು ಮೆಮೊರ್‍ಯಾಂಡಂ ಆಫ್ ಅಂಡರ್‌ಸ್ಟ್ಯಾಂಡಿಂಗ್ ಆಯಿತು, ಅದು ಯಾವ

ಆಧಾರದ ಮೇಲೆ ಆಯಿತು. ಇದನ್ನು ಪುನಃ ಪರಿಶೀಲನೆ ಮಾಡಿದರೆ ಏತಕ್ಕೋಸ್ಕರ ಮಾಡಿದೆ ಎಂಬುದನ್ನು ಹೇಳಬೇಕು. ಡ್ಯಾಮ್ ಸೈಟ್‌ನಲ್ಲಿ ಬೇರೆಯವರು ಕಟ್ಟುವುದಕ್ಕೆ ಪರ್ಮಿಷನ್ ಕೊಡುವುದಿಲ್ಲ, ನಾವೇ ಮಾಡುತ್ತೇವೆ ಎನ್ನುವ ಮಾತನ್ನು ಹೇಳಿದರು. ಇದಕ್ಕೆ ಏನು ಕಾರಣ ಇದೆ ಅದು ಮೊದಲಿದ್ದ ಅಧಿಕಾರಿಗಳಿಗೆ ಅರ್ಥವಾಗಿರಲಿಲ್ಲವೇ ? ಅವರು ಅವತ್ತು ಶಿಫಾರಸ್ ಮಾಡಿರಲಿಲ್ಲವೇ ? ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ಇವತ್ತಿನ ದಿವಸ ಇದರಲ್ಲಿ ಏನೋ ಅವ್ಯವಹಾರವಾಗಿದೆ ಎಂಬುದು ಜನಜನಿತವಾಗಿದೆ. ಮಾನ್ಯ ಉಪಮುಖ್ಯಮಂತ್ರಿಗಳನ್ನು ಕೇಳುತ್ತೇನೆ. ಇವತ್ತಿನ ದಿವಸ ಮೆಮೊರ್‍ಯಾಂಡಂ ಆಫ್ ಅಂಡರ್‌ಸ್ಟಾಂಡಿಂಗ್ಸ್ ಏನಾಗಿದೆ, ಅದರ ಬಗ್ಗೆ ವಿವರವಾದ ಶ್ವೇತಪತ್ರವನ್ನು ಈ ಸಭೆಯ ಮುಂದೆ ಇಡಿ. ಯಾವ ಯಾವ ಖಾಸಗಿ ಕಂಪನಿಗಳಿಗೆ, ಯಾವಯಾವ ಯೋಜನೆಗಳ ಬಗ್ಗೆ ಮಾತುಕಥೆಯಾಯಿತು, ಯಾವ ಯಾವ ನಿಬಂಧನೆಗಳ ಆಧಾರದ ಮೇಲೆ ಆಗಿದೆ ಎಂಬ ವಿವರಗಳನ್ನು ಸಭೆಯ ಮುಂದೆ ಇಡಬೇಕು. ಅದಕ್ಕಿಂತ ಹೆಚ್ಚಾಗಿ, ಇವತ್ತಿನ ದಿವಸ ಏನು ಬದಲಾವಣೆ ಮಾಡಿದ್ದಾರೆ, ಆ ರೀತಿ ಬದಲಾವಣೆ ಮಾಡುವುದಕ್ಕೆ ಪ್ರಮುಖವಾದ ಕಾರಣ ಏನು ಎನ್ನುವುದು ಈ ಸದನಕ್ಕೆ ಗೊತ್ತಾಗಬೇಕೆಂದು ಕೇಳುವುದಕ್ಕೆ ಇಷ್ಟಪಡುತ್ತೇನೆ. ತದನಂತರ, ನಾನು ಈ ಹಿಂದೆ ಹೇಳಿದ್ದೆ. 1990–91ರಲ್ಲಿ 9 ಸಾವಿರ ಟ್ರಾನ್ಸ್‌ಫಾರ್ಮರ್‌ಗಳು ಏನು ಕೆಡುತ್ತಿದ್ದವು, ಅವು ಇದ್ದಕ್ಕಿದ್ದ ಹಾಗೆ, 1992–93ರಲ್ಲಿ 18 ಸಾವಿರ ಟ್ರಾನ್ಸ್‌ಫಾರ್ಮರ್‌ಗಳು ಕೆಡುವುದಕ್ಕೆ ಪ್ರಾರಂಭವಾಗಿದೆ. ಇವು ನಿಜವಾಗಿಯೂ, ನಿಮ್ಮ ವ್ಯವಸ್ಥೆಯಿಂದ, ಲೋಪದೋಷದಿಂದ ಅಲ್ಲ. ಅದಕ್ಕಿಂತ ಹೆಚ್ಚಾಗಿ, ಅಲ್ಲಿರುವಂಥ ಭ್ರಷ್ಟಾಚಾರದಿಂದ ಆಗಿದೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಒಂದೇ ಸಾರಿ ಒಂದಕ್ಕೆರಡರಷ್ಟು ಅಂದರೆ, 9 ಸಾವಿರ ಟ್ರಾನ್ಸ್‌ಫಾರ್ಮರ್‌ಗಳು ಕೆಡುತ್ತಾ ಇದ್ದುದು, ಈ ವರ್ಷ 18 ಸಾವಿರ ಕೆಟ್ಟಿವೆ, ಇದಕ್ಕೆ ಏನು ಕಾರಣ ? ಇದರ ಬಗ್ಗೆ ತಾವು ವಿಚಾರ ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಅದಕ್ಕಿಂತ ಹೆಚ್ಚಾಗಿ, ವಿದ್ಯುತ್ ಕಳವು. ಇದೊಂದು ದೊಡ್ಡ ಹಗರಣ. ಈ ವಿದ್ಯುತ್ ಹಗರಣ, ವಿದ್ಯುತ್ ಕಳವು ಯಾರಿಂದ ಆಗುತ್ತಿದೆ ಎಂದರೆ, ಈ ದೇಶದಲ್ಲಿ ಯಾರು ಹೆಚ್ಚು, ಹೆಚ್ಚು ವಿದ್ಯುತ್ ಉಪಯೋಗಿಸಿಕೊಳ್ಳುತ್ತಾರೆ, ದೊಡ್ಡ ದೊಡ್ಡ ಕಾರ್ಖಾನೆಗಳ ಮಾಲೀಕರು ಏನಿದ್ದಾರೆ ಅಥವಾ ಗಿರಣಿಗಳ ಮಾಲೀಕರು ಇದ್ದಾರೆ, ಅವರು ಕಳವು ಮಾಡುತ್ತಾರೆ. ಅವರು ಕಳವು ಮಾಡಬೇಕಾದರೆ, ಕೇವಲ ಬಂಡವಾಳಶಾಹಿಗಳು ಹೋಗಿ, ಕರೆಂಟ್ ಮುಟ್ಟುವಷ್ಟು ಶಕ್ತಿ ಇರುವುದಿಲ್ಲ. ಇದಕ್ಕೆ ತಮ್ಮ ಇಲಾಖೆಯ ಅನೇಕ ಮುಖ್ಯಸ್ಥರು ಅಥವಾ ನೌಕರರು ಶಾಮೀಲಾಗಿರುವುದರಿಂದ, ಈ ವಿದ್ಯುತ್ ಕಳುವಾಗುತ್ತಿದೆ ಎಂದು ಹೇಳಿದರೆ ತಪ್ಪಾಗುವುದಿಲ್ಲ. ಇದನ್ನು ತಾವು ಸರಿಯಾದ ರೀತಿಯಲ್ಲಿ ವಿಚಾರಣೆ ಮಾಡಬೇಕಾಗಿದೆ. ಏನು ವಿದ್ಯುತ್ ಕಳವು ಮಾಡುತ್ತಿದ್ದಾರೆ, ಅವರ ಮೇಲೆ ಕ್ರಮ ತೆಗೆದುಕೊಳ್ಳುವುದರ ಜೊತೆಗೆ, ಇವತ್ತಿನ ದಿವಸ ಅನೇಕ ಸಂದರ್ಭಗಳಲ್ಲಿ ವಿದ್ಯುತ್ ಕಂಬಗಳನ್ನು ಎಲ್ಲಿ ಹಾಕಿದ್ದಾರೆ ಎಂಬುದನ್ನು ತಾವು ನೋಡಿ. ಬೇಕಾದರೆ, ನಮ್ಮ ಊರಿಗೆ ತಾವು ಬಂದರೆ ನಾನು ತೋರಿಸುತ್ತೇನೆ. ಎಲ್ಲಿ ವಿದ್ಯುತ್ ಕಳವು ಮಾಡುವುದಕ್ಕೆ ಸಹಾಯವಾಗುತ್ತದೆ, ಆ ಪ್ರದೇಶದಲ್ಲಿ, ಅಂತಹ ಜನಗಳಿರುವ ಕಡೆ ಹೋಗಿ ಕಂಬ ಹಾಕುತ್ತಾರೆ.

ಈ ಶಾಮೀಲು ಎಲ್ಲಿಯವರೆಗೆ ನಡೆದಿದೆ ಎಂದರೆ, ಈ ವಿದ್ಯುತ್ ಕಳುವಿನಿಂದಲೇ ಅವರು ಸಾಹುಕಾರರಾಗಬಹುದು. ಅವನು ಯಾವುದೇ ಕಾರ್ಖಾನೆಯನ್ನು ನಡೆಸುವುದೇಬೇಕಾಗಿಲ್ಲ. ಈ ಒಂದು ಪರಿಸ್ಥಿತಿ ನಿರ್ಮಾಣವಾಗಿದೆ. ಇದರಲ್ಲಿ, ನಾನು ಅವರ ಹೆಸರನ್ನು ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಸರ್ವೇಸಾಮಾನ್ಯವಾಗಿ ಅನೇಕ ಕಾರ್ಖಾನೆಗಳಲ್ಲಿ ಈ ರೀತಿಯಾಗುತ್ತಿದೆ ಎಂದು ಹೇಳಿದರೆ ತಪ್ಪಾಗುವುದಿಲ್ಲ. ಹಾಗಾದರೆ, ಇದನ್ನು ನಿಲ್ಲಿಸುವುದಕ್ಕೆ ಸಾಧ್ಯವಿಲ್ಲವೇ, ಎಂದರೆ ಖಂಡಿತವಾಗಿಯೂ ಸಾಧ್ಯವಿದೆ. ನೀವೇನು ಆ ಕಡೆ, ಈ ಕಡೆ ಫೀಡರ್ಸ್ ಹಾಕಿದ್ದೀರಿ, ಔಟ್‌ಲೇಟ್ ಮತ್ತು ಇನ್‌ಲೇಟ್ ಫೀಡರ್ಸ್ ಏನು ಹಾಕುತ್ತೀರಿ, ಅವುಗಳನ್ನು ಸರಿಯಾಗಿ ನೋಡಿಕೊಂಡರೆ ಸಾಕು.

ಇದನ್ನೂ ಸಹ ಅವರು ಸರಿಯಾಗಿ ನೋಡಿಕೊಳ್ಳುವುದಿಲ್ಲ. ನೀವು ಕಳುಹಿಸಿದಂಥ ಟ್ರಾನ್ಸ್‌ಫಾರ್ಮರ್‌ಗಳಲ್ಲಿ ಆ ಕಡೆ, ಈ ಕಡೆ ಫೀಡರ್ಸ್ ಏನಿದೆ, ಅದನ್ನು ಸರಿಯಾಗಿ ಹಾಕುವುದಿಲ್ಲ. ಏಕೆ ಹಾಕುವುದಿಲ್ಲವೆಂದರೆ, ಅಲ್ಲಿ ಎಷ್ಟು ನಷ್ಟವಾಗುತ್ತದೆ ಎಂಬುದು ಅವರಿಗೆ ಗೊತ್ತಾಗುತ್ತದೆ. ಈ ರೀತಿ ಇಡೀ ವಿದ್ಯುತ್ ಇಲಾಖೆಯಲ್ಲಿ, ಇಂತಹ ವ್ಯವಸ್ಥೆ ಇರುವುದರಿಂದ, ನಮಗೆ ಹೆಚ್ಚು ಹೆಚ್ಚು ವಿದ್ಯುತ್ ನಷ್ಟವಾಗುತ್ತದೆ. ಇವತ್ತಿನದಿವಸ, ಟ್ರಾನ್ಸ್‌ಮಿಷನ್ ಡಿಸ್ಟ್ರಿಬ್ಯೂಷನ್ ಲಾಸ್ ಬಹಳ ಕಡಿಮೆಯಾಗಿದೆ, 18.5ಕ್ಕೆ ತರುತ್ತೇವೆಂದು ಹೇಳುತ್ತಾರೆ. ಇದನ್ನು, ಇನ್ನೂ ಕಡಿಮೆ ಮಾಡುವುದಕ್ಕೆ ಸಾಧ್ಯವಿದೆ. ಆ ರೀತಿ, ಕಡಿಮೆ ಮಾಡುವುದಕ್ಕೆ ಏಕೆ ಪ್ರಯತ್ನ ಮಾಡುತ್ತಿಲ್ಲವೆಂದು ಹೇಳಿದರೆ, ಇದನ್ನೆಲ್ಲಾ ರೈತರ ಮೇಲೆ ಹಾಕುತ್ತಾರೆ. ಶೇಕಡ 36ರಷ್ಟು ವಿದ್ಯುತ್ತನ್ನು ರೈತರಿಗೆ ಕೊಟ್ಟಿದ್ದೇವೆ, ಅವರಿಗೆ ಮೀಟರ್ ಇಲ್ಲ, ಅವರ ಅಂದಾಜು ಎಷ್ಟಾಗುತ್ತದೆ, ಆ ಅಂದಾಜು ಪ್ರಕಾರ, 36ರಷ್ಟು ಆಗುತ್ತದೆಂದು ಹೇಳುವುದಕ್ಕೆ ಏನು ಖಾಯಂ ವ್ಯವಸ್ಥೆ ಇದೆ. ನಾನು ಕೇಳುತ್ತೇನೆ, ತಮ್ಮ ವರದಿಯಲ್ಲಿ ಶೇಕಡ 36ರಷ್ಟು ವಿದ್ಯುತ್ತನ್ನು ರೈತರು ಉಪಯೋಗಿಸುತ್ತಿದ್ದಾರೆ ಎಂಬ ಮಾತನ್ನು ತಾವು ಹೇಳಿದ್ದೀರಿ. ಇದಕ್ಕೆ ಯಾವ ವೈಜ್ಞಾನಿಕ ಕಾರಣ ಇದೆ, ನಿಲುವು ಇದೆ, ಯಾವ ಆಧಾರ ಇದೆ ಎಂಬುದನ್ನು ಹೇಳಿ. ಯಾರೋ ಒಬ್ಬರು ಒಂದು ಪಂಪ್‌ಸೆಟ್ಟನ್ನು ಉಪಯೋಗಿಸಿದ್ದಕ್ಕೆ ಅಥವಾ ಒಂದು ಜಾಗದಲ್ಲಿ ಎಷ್ಟು ಕರೆಂಟನ್ನು ಉಪಯೋಗಿಸುತ್ತಾರೆ ಎಂಬುದರ ಮೇಲೆ ತಾವು ಭಾಗಾಕಾರ, ಗುಣಾಕಾರ ಮಾಡಿ ಹಾಕುವುದಾದರೆ, 36ರಷ್ಟೂ ಆಗುತ್ತದೆ, 76ಷ್ಟೂ ಆಗುತ್ತದೆ. ಈ ದಿಸೆಯಲ್ಲಿ, ಇದಕ್ಕೆ ಹೆಚ್ಚಿನ ಪರಿಶೀಲನೆ ಅಗತ್ಯ ಎನ್ನುವ ಮಾತನ್ನು ಹೇಳುತ್ತೇನೆ ಮತ್ತು ಎಲ್ಲಕ್ಕಿಂತ ಹೆಚ್ಚಾಗಿ, ಕೆಳಹಂತದಿಂದ, ಕೊನೆಯ ಹಂತದವರೆಗೆ ಭ್ರಷ್ಟಾಚಾರ ಎಷ್ಟಿದೆ ಎಂದು ಹೇಳಿದರೆ, ಕೆಲಸಕ್ಕೆ ಬಾರದ ಸಾಮಾನುಗಳನ್ನು ಕೊಳ್ಳುವುದರಲ್ಲಿ ಈ ಕೆ.ಇ.ಬಿ.ಯವರು ನಿಪುಣರು. ಸುಮಾರು ಒಂದು ನೂರು ಕೋಟಿಗಿಂತಲೂ ಹೆಚ್ಚು ಹಣವನ್ನು ಕೊಟ್ಟು ಇವತ್ತಿನ ದಿವಸ ಇನ್‌ವೆಂಟ್ರಿಗಳನ್ನು ಕೊಂಡುಕೊಂಡಿದ್ದಾರೆ. ನಾನು, ತಮಗೆ ಕೇಳುತ್ತಿದ್ದೇನೆ, ಈ ಇನ್‌ವೆಂಟ್ರಿಯಲ್ಲಿ ಎಷ್ಟು ಪಾಲು ಸಾಮಾನುಗಳನ್ನು, ಎಷ್ಟು ಪ್ರಮಾಣದಲ್ಲಿ ಉಪಯೋಗಿಸುವುದಕ್ಕೆ ಸಾಧ್ಯ ಇದೆ. ನಮ್ಮಲ್ಲಿ ಯಾರೋ ಒಬ್ಬರು, ನಾನು ಮಂತ್ರಿಯಾಗಿದ್ದಾಗ ಹೇಳುತ್ತಿದ್ದರು. ಡಿ.ಸಿ.ಸಿ. ಬ್ಯಾಂಕಿನಲ್ಲಿ ಚೆಕ್ ಪ್ರಿಂಟ್ ಮಾಡಿಸಿದ್ದರು, ಎಷ್ಟು ಮಾಡಿಸಿದ್ದರು ಎಂದರೆ, 25 ವರ್ಷಗಳ ಕಾಲ ಚೆಕ್ ಕೊಟ್ಟರೂ ಖರ್ಚಾಗುತ್ತಿರಲಿಲ್ಲ, ಆ ರೀತಿ, ಅಷ್ಟು ಸಂಖ್ಯೆಯಲ್ಲಿ ಮಾಡಿಸಿದ್ದರು.

3.20 ಪಿ.ಎಂ.

ಅಲ್ಲಿ ಬ್ಯಾಂಕ್‌ಗಳು ಇರುತ್ತವೋ ಇಲ್ಲವೋ ನನಗೆ ಗೊತ್ತಿಲ್ಲ ಅವನು ಪ್ರಿಂಟಿಂಗ್ ಪ್ರೆಸ್‌ಗೆ ಕೆಲಸ ಕೊಡಬೇಕಾಗಿತ್ತು ಕೊಟ್ಟಿದ್ದಾನೆ ಅಷ್ಟೇ. ಅನೇಕ ಸಂದರ್ಭದಲ್ಲಿ ಸಾಮಾನುಗಳನ್ನು ಅವಶ್ಯಕತೆ ಮೀರಿ ಈ ಒಂದು ಇನ್‌ವೆಂಟ್ರೀಸ್ ಮೂಲಕ ಕೊಂಡುಕೊಳ್ಳತಕ್ಕಂಥ ಪರಿಸ್ಥಿತಿ ನಮ್ಮಲ್ಲಿ ನಡೆದು ಬಂದಿದೆ. ಇನ್ನು ಗ್ರಾಮೀಣ ಪ್ರದೇಶದಲ್ಲಿ ನಮಗೆ ತೊಂದರೆ ಕೊಡುತ್ತಿದ್ದಾರೆ. ಯಾರಿಗೋ ವರ್ಕ್ ಕಂಟ್ರಾಕ್ಟ್ ಕೊಟ್ಟಿದ್ದೀರಿ, ಅವನು ಮಾಡಬೇಕು. ಅವನು ಕಂಬ ತೆಗೆದುಕೊಂಡು ಹೋಗುವುದಿಲ್ಲ, ಗುಂಡಿ ತೆಗೆಯುವುದಿಲ್ಲ, ಕಂಬ ತೆಗೆದುಕೊಂಡು ಹೋಗಿ ಗುಂಡಿ ಹೊಡೆದರೆ ನಾನು ಕೊಡುತ್ತೇನೆಂದು ಇಂಜಿನೀಯರ್ ಹೇಳುತ್ತಾನೆ. ಕಂಬ ಅವನೇ ತೆಗೆದುಕೊಂಡು ಹೋಗಬೇಕು, ಗುಂಡಿ ಅವನೇ ಹೊಡೆಯಬೇಕು. ಆದರೆ ಆ ದುಡ್ಡನ್ನು ಕಂಟ್ರಾಕ್ಟರ್ ಮತ್ತು ಇಂಜಿನೀಯರ್ ಹಂಚಿಕೊಳ್ಳುತ್ತಾರೆ. ಇದು ಹೇಗಿದೆ. ಇದು ಎಲ್ಲಾ ಕಡೆಗೂ ನಡೆಯುತ್ತಿದೆ. ದಯವಿಟ್ಟು ಇದನ್ನು ತಪ್ಪಿಸಬೇಕು. ನೀವು ಕಂಬ ಕೊಡುವುದಿಲ್ಲ ನೀವೇ ತೆಗೆದುಕೊಂಡು ಹೋಗಿ ಎಂದು ಹೇಳಿ, ಹಣ ಕೊಡುವುದಿಲ್ಲ. ಇದು ವರ್ಕ್ ಕಂಟ್ರಾಕ್ಟರ್‌ಗೆ ಕೊಡತಕ್ಕಂಥ ವ್ಯವಸ್ಥೆ ಇದೆ. ನಿಮ್ಮಲ್ಲಿರತಕ್ಕಂಥ ಸಿಬ್ಬಂದಿ ಮೇಲೆ ಸ್ವಲ್ಪ ಹಿಡಿತ ಇಟ್ಟುಕೊಳ್ಳಬೇಕು. ನಾನೂ ಸಹ ವಿನಂತಿ ಮಾಡಿಕೊಳ್ಳುತ್ತೇನೆ. ಕೈಗಾರಿಕೆಗಳಲ್ಲಿರುವ ಸಿಬ್ಬಂದಿ ಆಗಲಿ, ಸಾರ್ವಜನಿಕ ಉದ್ದಿಮೆಗಳಲ್ಲಿರುವ ಸಿಬ್ಬಂದಿ ಆಗಲಿ, ಅವರೂ ಅರ್ಥ ಮಾಡಿಕೊಳ್ಳಬೇಕಾಗುತ್ತದೆ,

ನಾವು ಈ ದೇಶದ ಜನಗಳ ಸೇವೆ ಮಾಡುವುದಕ್ಕೆ ಇದ್ದೇವೆ ಎಂದು. ಒಂದು ಪಕ್ಷ ಅದು ಕೆ.ಇ.ಬಿ. ಇರಬಹುದು, ಕೆ.ಎಸ್.ಆರ್.ಟಿ.ಸಿ. ಇರಬಹುದು, ಯಾವುದೇ ಸಾರ್ವಜನಿಕ ಉದ್ದಿಮೆ ಇರಬಹುದು. ಅವು ನಷ್ಟವಾದರೆ ಮೊಟ್ಟಮೊದಲು ತೊಂದರೆ ಆಗುವುದು ನೌಕರರಿಗೆ. ಆದ್ದರಿಂದ ನೌಕರರೂ ಸಹ ಹೊಣೆಗಾರಿಕೆಯಿಂದ ವರ್ತನೆ ಮಾಡುವುದು ಅತ್ಯಂತ ಅವಶ್ಯಕತೆ ಇದೆ ಅದನ್ನು ಅವರಿಗೆ ತಿಳಿಸಿ ಹೇಳಬೇಕು. ಈ ದೇಶ ಇರುವುದು ಕೇವಲ ನಮಗೆ ಅಲ್ಲ, ದೇಶದ ಎಲ್ಲಾ ಜನಗಳಿಗಾಗಿ ಪಾಲು ಮಾಡಬೇಕು ಎನ್ನುವ ಒಂದು ಸೇವಾ ಮನೋಭಾವೆಯಿಂದ ಕೆಲಸ ಮಾಡತಕ್ಕಂಥಾದ್ದು ಅವಶ್ಯಕ. ಆ ರೀತಿಯಲ್ಲಿ ಯೂನಿಯನ್‌ಗಳಿಗೆ ತಾವು ಬುದ್ಧಿ ಹೇಳಬೇಕಾಗುತ್ತದೆ ಮತ್ತು ಸರಿಯಾಗಿ ಕೆಲಸ ಮಾಡುವಂತಹ ರೀತಿಯಲ್ಲಿ ನೋಡಿಕೊಳ್ಳಬೇಕಾಗುತ್ತದೆ. ಇವತ್ತಿನ ದಿವಸ 5–6 ಬೇಡಿಕೆಗಳನ್ನು ಮಾನ್ಯ ಉಪಮುಖ್ಯಮಂತ್ರಿಗಳು ಮತ್ತು ಲೋಕೋಪಯೋಗಿ ಸಚಿವರು ಇಟ್ಟಿದ್ದಾರೆ, ಅದನ್ನು ನಾನು ಹೇಳಿದ ಕಾರಣಗಳಿಂದ ವಿರೋಧ ಮಾಡಿ, ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಸಿ. ಬೈರೇಗೌಡ:– ಮಾನ್ಯ ಅಧ್ಯಕ್ಷರೇ, ಮಾನ್ಯ ರಾಮಯ್ಯನವರು ನೀರಾವರಿ ಬಗ್ಗೆ ಮಾತನಾಡುತ್ತಾರೆ, ನಾನು ವಿದ್ಯುತ್ ಬಗ್ಗೆ ನಾಳೆ ಮಾತನಾಡುತ್ತೇನೆ.

† ಶ್ರೀ ಬಾಬುಗೌಡ ರುದ್ರಗೌಡ ಪಾಟೀಲ್ (ಕಿತ್ತೂರು):– ಮಾನ್ಯ ಅಧ್ಯಕ್ಷರೇ, ನಮಗೆ ರೈತರ ಬಗ್ಗೆ ಮಾತನಾಡಬೇಕೆಂದರೆ ಬೇಸರವಾಗುತ್ತದೆ. ರೈತರ ಬಗ್ಗೆ ಏನು ಹೇಳಿದರೂ ಕೂಡ ಅದನ್ನು ಲೆಕ್ಕಕ್ಕೆ ತೆಗೆದುಕೊಳ್ಳಬಾರದು ಎಂದು ಮನಸ್ಸು ಮಾಡಿದ್ದಾರೋ ಏನೋ ಗೊತ್ತಿಲ್ಲ. ರೈತರ ಮೇಲೆ ಕೇಂದ್ರ ಸರ್ಕಾರ ಪ್ರಯೋಗ ಮಾಡುತ್ತಿದೆ. ಗೊಬ್ಬರದ ಧಾರಣೆ ಏರಿಸತಕ್ಕಂಥಾದ್ದು, ಗೊಬ್ಬರದ ಸಬ್ಸಿಡಿ ವಾಪಸ್ ತೆಗೆದುಕೊಳ್ಳತಕ್ಕಂಥಾದ್ದು, 8ನೇ ಯೋಜನೆಯಲ್ಲಿ ನೀರಾವರಿಗೆ ಹೆಚ್ಚು ದುಡ್ಡು ಕೊಡದೇ ಇರತಕ್ಕಂಥಾದ್ದು. ಇಂತಹ ಪರಿಸ್ಥಿತಿಯಲ್ಲಿ ರೈತರಿಗೆ ಏನು ಮಾಡಬೇಕು ಎಂದು ತಿಳಿಯದಾಗಿದೆ. ಕೊನೆಯ ಪಕ್ಷ ನೀರಾವರಿ ಮಾಡಿ ಕೊಟ್ಟರೆ ಸ್ವಲ್ಪ ಎತ್ತು, ಎಮ್ಮೆ ಬೆಳೆಸಿಕೊಂಡು ಹೈನುಗಾರಿಕೆ ಮಾಡಿಕೊಂಡು ಬದುಕಬಹುದು ಎನ್ನುವ ಕಾರಣ ನೀರಾವರಿ ಮಾಡಿಕೊಡಿ ಎಂದು ನಾವು ವಿನಂತಿ ಮಾಡಿಕೊಳ್ಳುತ್ತೇವೆ. ಕೃಷ್ಣಾ ಕಣಿವೆ ಕೊಳ್ಳದ ಯೋಜನೆಗಳು 2 ಸಾವಿರ ಇಸವಿಯೊಳಗಾಗಿ ಮುಗಿಯಬೇಕು ಎನ್ನತಕ್ಕಂಥಾದ್ದು ಬಚಾವತ್ ಅವಾರ್ಡ್‌ನಲ್ಲಿ ನಮಗೆ ಕಟ್ಟಿಹಾಕಿದೆ. ಅದಕ್ಕೆ ಇನ್ನು 3–4 ಸಾವಿರ ಕೋಟಿ ರೂಪಾಯಿಗಳು ಬೇಕು. ದುಡ್ಡಿಲ್ಲ ಎಂಬ ನಮ್ಮ ಮಾನ್ಯ ಉಪಮುಖ್ಯಮಂತ್ರಿಗಳ ಮಾತು ನಮಗೆ ಅರ್ಥವಾಗುತ್ತದೆ. ಆದರೆ ಧೈರ್ಯ ಮಾಡಿದ್ದಾರೋ ಏನೋ ನನಗೆ ಗೊತ್ತಿಲ್ಲ. ಮೆಟ್ರೋಗೆ 2 ಸಾವಿರ ಕೋಟಿ ರೂಪಾಯಿಗಳು ಏನು ಕೊಡುತ್ತೀರಿ ಅದನ್ನು ನೀರಾವರಿಗೆ ಕೊಟ್ಟರೆ ಏನು ತಪ್ಪು ಎಂದು ರೈತರು ಕೇಳುತ್ತಾರೆ. ಈ ದೇಶದ ರೈತರು ಬದುಕಲಿ ಎಂಬ ಮನಸ್ಸು ತಮಗೆ ಇದ್ದರೆ ಯಾವುದಕ್ಕೆ ಮೊದಲು ಆದ್ಯತೆ ಕೊಡಬೇಕು ಎಂದರೆ ನೀರಾವರಿಗೆ ಮೊದಲು ಆದ್ಯತೆ ಕೊಟ್ಟು ರೈತರು ಬದುಕುವಂತೆ ಮಾಡಿ ಆಮೇಲೆ ಮೆಟ್ರೋ ಮಾಡಿ ಕೊಡಿ ಎಂದು ನಾನು ಹೇಳುತ್ತೇನೆ. 2 ಸಾವಿರ ಕೋಟಿ ರೂಪಾಯಿಗಳು ಅಂದರೆ ಅದೇನೂ ಕಡಿಮೆ ಹಣ ಅಲ್ಲ. ಯಾವುದೋ ಕಾರಣಕ್ಕೆ ಮೆಟ್ರೋ ಮಾಡಿ ನಗರದ ಜನಗಳನ್ನು ಮೆಚ್ಚಿಸಲಿಕ್ಕೆ ಮಾಡುತ್ತಿದ್ದೀರಿ. ಅದನ್ನು ಕೈಬಿಟ್ಟು ನೀರಾವರಿಗೆ ತಾವು ಗಮನ ಕೊಡಿ ಎಂದು ನಾನು ಕೇಳಿಕೊಳ್ಳುತ್ತೇನೆ. ಇದರ ಜೊತೆಗೆ ಎರಡು ಸಾವಿರದ ಇಸವಿ ಎಂದು ಗಡವು ಏನು ಇದೆ ಅದನ್ನು ಒಪ್ಪಬಾರದು ಎನ್ನುವುದು ನಮ್ಮ ರೈತರ ವಾದ. ಏಕೆಂದರೆ ಅಷ್ಟರಲ್ಲಿ ಯೋಜನೆಗಳು ಮುಗಿಯಲಿಲ್ಲವೆಂದರೆ ಹಕ್ಕು ಕಳೆದುಕೊಳ್ಳತಕ್ಕಂಥ ಪ್ರಸಂಗ ಇದೆ.

ಬರ ಬಂತು, ಕೇಂದ್ರ ಮತ್ತು ರಾಜ್ಯ ಸರಕಾರಗಳಲ್ಲಿ ಬೇರೆ ಬೇರೆ ಪಕ್ಷಗಳು ಇದ್ದ ಕಾರಣ, ಕೇಂದ್ರದಿಂದ ನಮಗೆ ಸಾಕಷ್ಟು ನೆರವು ಸಿಕ್ಕಲಿಲ್ಲ. ಆ ಕಾರಣದಿಂದಾಗಿ ಯೋಜನೆಗಳಲ್ಲಿ ನಾವು ಹಿಂದೆ ಬಿದ್ದಿದ್ದೇವೆ. ತಾವು ಸ್ವಲ್ಪ ಮನಸ್ಸು ಮಾಡಿ ಈ ಹೌಸ್‌ನಲ್ಲಿ ಒಂದು ರೆಸಲ್ಯೂಷನ್ ಪಾಸ್ ಮಾಡಿ,

2000ನೇ ಇಸವಿ ನಮಗೆ ಗಡುವು ಅಲ್ಲ, ಅದು ಯಾರೋ ಒಬ್ಬರು ಬಚಾವತ್ ಎನ್ನುವಂಥ ಜಡ್ಜ್‌ರವರು ಹೇಳಿರತಕ್ಕಂಥಾದ್ದನ್ನು ನಾವೆಲ್ಲರೂ ಒಪ್ಪಬೇಕೆಂದು ಇಲ್ಲ, ಆದ್ದರಿಂದ ಅದನ್ನು ಮುರಿದು ಹೋಗುತ್ತೇವೆ ಎನ್ನುವಂಥ ಮನಸ್ಸನ್ನು ನಾವು ರೈತರು ಮಾಡುತ್ತೇವೆ, ಅಗತ್ಯಬಿದ್ದರೆ ನಾವು ಬೀದಿಗೆ ಬರುತ್ತೇವೆ, ಅದಕ್ಕೆ ಬೇಕಾದ ಹೋರಾಟವನ್ನು ನಾವು ಮಾಡುವುದಕ್ಕೆ ತಯಾರಾಗಿದ್ದೇವೆ. ಅದಕ್ಕೆ ಸರಕಾರದವರು ಕೂಡ ಸ್ವಲ್ಪ ಕುಮ್ಮಕ್ಕು ಕೊಟ್ಟರೆ ಸಹಕಾರಿಯಾದೀತು ಎಂದು ನನ್ನ ಭಾವನೆ. ಕೇವಲ ಪುಸ್ತಕ ಜ್ಞಾನದಿಂದ ಆಡಳಿತವನ್ನು ನಡೆಸುವುದಕ್ಕೆ ಆಗುವುದಿಲ್ಲ, ಅದಕ್ಕೆ ಸಾಮಾನ್ಯ ಜ್ಞಾನವೂ ಬೇಕು. ನೀರಾವರಿಯ ವಿಚಾರದಲ್ಲಿ ಹೇಳುವುದಾದರೆ ಈಗಾಗಲೇ ಸಾಕಷ್ಟು ನೀರಾವರಿ ನಮ್ಮಲ್ಲಿದೆ. ನಮ್ಮ ಹಿರಿಯರು ಬೇಕಾದಷ್ಟು ಕೆರೆಗಳನ್ನು ಕಟ್ಟಿ ಇಟ್ಟು ಹೋಗಿದ್ದಾರೆ. ಆದರೆ ಅವರು ಮಾಡಿದ ಆ ಕೆರೆಗಳು ಇವೊತ್ತು ಹೂಳು ತುಂಬಿ ಎಲ್ಲವೂ ನಿರರ್ಥಕವಾಗಿವೆ. ಹೀಗೆ ಇರತಕ್ಕಂಥ ಹೂಳು ತೆಗೆಯತಕ್ಕಂಥಾದ್ದು ಬಹಳ ದುಬಾರಿ. ಅದಕ್ಕಾಗಿ ಹೊಸ ಕೆರೆಗಳನ್ನು ಕಟ್ಟಬೇಕೆಂದರೆ ಮತ್ತಷ್ಟು ಪ್ರದೇಶಗಳನ್ನು ಮುಳುಗಡೆ ಮಾಡಬೇಕು, ಅದಕ್ಕೆ ಸಾಕಷ್ಟು ಹಣವನ್ನು ಖರ್ಚು ಮಾಡಬೇಕು, ಇದ್ದ ಕೆರೆಗಳ ಹೂಳು ತೆಗೆಯಲು ಅದಕ್ಕಿಂತ ನಾಲ್ಕುಪಟ್ಟು ಹೆಚ್ಚು ಖರ್ಚಾಗುತ್ತದೆ ಎಂದು ಹೇಳುತ್ತಾ ಇದ್ದಾರೆ. ಪೀಪಲ್ಸ್ ಪ್ರೋಗ್ರಾಂ ಎಂದು ಹೇಳಿ ಜನರ ಸ್ವಭಾವವನ್ನು ಸ್ವಲ್ಪಮಟ್ಟಿಗೆ ಅರ್ಥ ಮಾಡಿಕೊಂಡು, ಒಂದು ಪ್ರಯೋಗವನ್ನು ತಾವುಗಳು ಬೇಕಾದರೆ ಮಾಡಬಹುದು. ಇದೊಂದು ನನ್ನ ಸಲಹೆಯಾಗಿದೆ. ಬೇಕಾದರೆ ಆ ಪ್ರಯೋಗಕ್ಕೆ ನಮ್ಮ ಜಿಲ್ಲೆಯನ್ನೇ ತೆಗೆದುಕೊಳ್ಳಿರಿ. ತಾವು ಟ್ರಾಕ್ಟರ್ ಪುಕ್ಕಟೆಯಾಗಿ ಕೊಟ್ಟರೆ ಆ ಹೂಳನ್ನೆಲ್ಲಾ ನಾವೇ ಖಾಲಿ ಮಾಡಿಬಿಡುತ್ತೇವೆ. ರೈತರಿಗೆ ಹೂಳು ಅಂದರೆ ಗೊಬ್ಬರ ಇದ್ದ ಹಾಗೆ. ಇವೊತ್ತು ಫರ್ಟಿಲೈಸರ್ಸ್ ರೇಟ್ ಬಹಳ ದುಬಾರಿಯಾಗಿದೆ. 50 ಕೆಜಿ. ಗೊಬ್ಬರ ಹಾಕುವ ಶಕ್ತಿ ಕೂಡ ರೈತರಲ್ಲಿ ಉಳಿದಿಲ್ಲ. ಸರಕಾರದವರು ಪುಕ್ಕಟೆಯಾಗಿ ಟ್ರಾಕ್ಟರ್ ಕೊಟ್ಟರೆ ಹೂಳನ್ನು ನಮ್ಮ ಹೊಲಕ್ಕೆ ಹಾಕಿಕೊಳ್ಳುವಂಥ ವ್ಯವಸ್ಥೆಯನ್ನು ನಾವು ಮಾಡಿಕೊಳ್ಳುತ್ತೇವೆ ಎಂದು ರೈತರು ಹೇಳುತ್ತಾರೆ. ಇಡೀ ರಾಜ್ಯಕ್ಕೆ ಈ ಪ್ರಯೋಗವನ್ನು ಮಾಡಲು ತಮಗೆ ಅಳುಕು ಇದ್ದರೆ, ಈ ಪ್ರಯೋಗದಲ್ಲಿ ಕೈಸುಟ್ಟು ಹೋಗುತ್ತದೆಂಬ ಭೀತಿಯು ನಿಮ್ಮಲ್ಲಿದ್ದರೆ, ಒಂದು ಜಿಲ್ಲೆಯೊಳಗೆ ಮೊದಲು ಪ್ರಯೋಗ ಮಾಡಿರಿ. ಅದನ್ನು ಬೇಕಾದರೆ ನಾವೇ ಮಾಡಿ ತೋರಿಸುತ್ತೇವೆ. ಇನ್ನೊಂದು ಉದಾಹರಣೆಯನ್ನು ತಮಗೆ ಹೇಳುವುದಾದರೆ, ನಮ್ಮಲ್ಲಿ ಒಂದು ಕೊಣ್ಣೂರ್‌ವೇರ್ ಎಂದು ಒಂದು ಸಣ್ಣ ಡ್ಯಾಮ್ ಇತ್ತು. ಅದು ಹೂಳು ತುಂಬಿಕೊಂಡು ಪೂರ್ತಿಯಾಗಿ ಮುಚ್ಚಿದೆ. ಅದಕ್ಕೆ ಕೇವಲ ಒಂದು ಸಣ್ಣ ಬ್ರಿಡ್ಜ್ ಕಟ್ಟಿಸಿಕೊಟ್ಟರೆ ಅದನ್ನು ಖಾಲಿ ಮಾಡಿಕೊಡುತ್ತೇವೆ ಎಂದು ಗೋಕಾಕ್ ಪ್ರದೇಶದ ರೈತರು ಹೇಳುತ್ತಾರೆ. ನಮ್ಮ ಮಾನ್ಯ ಅಧ್ಯಕ್ಷರು ಕೂಡ ಅದೇ ಪ್ರದೇಶದಿಂದ ಬಂದವರು ಆಗಿದ್ದಾರೆ. ಆ ಡ್ಯಾಮ್‌ನಲ್ಲಿರುವ ಪೂರ್ತಿ ಹೂಳನ್ನು ಎತ್ತಿಕೊಡುತ್ತೇವೆಂದು ಆ ಭಾಗದ ರೈತರು ಹೇಳುತ್ತಿದ್ದಾರೆ. ಅದು ಬಹಳ ಫಲವತ್ತಾದ ಮಣ್ಣು, ಅದನ್ನು ಹಾಕಿದರೆ ಗೊಬ್ಬರ ಹಾಕಬೇಕಾಗಿಲ್ಲ, ಅದನ್ನು ತೆಗೆಯಲು ಮಾತ್ರ ಒಂದು ಸಣ್ಣ ಬ್ರಿಜ್‌ನ್ನು ಕಟ್ಟಿಕೊಟ್ಟರೆ ಸಾಕು. ಉಳಿದುದನ್ನು ರೈತರುಗಳೇ ಮಾಡಿಕೊಳ್ಳುತ್ತಾರೆ. ಹೀಗೆ ಬ್ರಿಡ್ಜ್ ಕಟ್ಟಿಕೊಟ್ಟು ಹೂಳನ್ನು ತೆಗೆದುಕೊಂಡು ಹೋಗಿ ಎಂದು ಸರಕಾರದವರು ನಮಗೆ ಆದೇಶ ಕೊಟ್ಟರೆ ಒಂದೇ ವರ್ಷದಲ್ಲಿ ನಾವು ಅದನ್ನು ಖಾಲಿ ಮಾಡುತ್ತೇವೆ ಎಂದು ರೈತರು ಹೇಳುತ್ತಿದ್ದಾರೆ. ಈ ಒಂದು ಪ್ರಯೋಗವನ್ನು ಒಂದು ರೀತಿಯಲ್ಲಿ ಚಾಲೆಂಜ್ ಆಗಿ ಮಾಡುತ್ತೇವೆ ಎಂಬ ಮಾತನ್ನು ನಾನು ಮಾನ್ಯ ಅಧ್ಯಕ್ಷರ ಮೂಲಕ ಹೇಳಬಯಸುತ್ತೇನೆ. ಇದರ ಜೊತೆಗೆ ಈಗಾಗಲೇ ಬ್ರಿಡ್ಜ್ ಕಮ್ ಬ್ಯಾರೇಜ್ ಎಂದು ಬೇಕಾದಷ್ಟು ಕಟ್ಟಿದ್ದಾರೆ. ನಮ್ಮ ಜಿಲ್ಲೆಯಾದ ಬೆಳಗಾವಿಯೊಳಗೆ ಎಂತಂಥ ಇಂಜಿನೀಯರ್‌ಗಳು ಇದ್ದಾರೋ ನನಗಂತೂ ಗೊತ್ತಿಲ್ಲ, ಅವುಗಳಲ್ಲಿ ಒಂದಕ್ಕೂ ಕೂಡ ಹಲಗೆಗಳನ್ನು ಹಾಕಿಲ್ಲ. ಹಾಗಾದರೆ ಅದನ್ನು ಏತಕ್ಕಾಗಿ ಕಟ್ಟಿದ್ದೀರಿ? ಅದರಿಂದ ಆದ ಪ್ರಯೋಜನವಾದರೂ ಏನು? ಕೊನೆಯ ಪಕ್ಷ ನೀರಾವರಿಯಾಗದಿದ್ದರೂ ಕೂಡ ಅಂತರ್ಜಲ

ಹೆಚ್ಚಾಗುತ್ತಿತ್ತು, ಬೋರ್‌ವೆಲ್‌ಗಳಿಗೆ ನೀರು ಬರುತ್ತಿತ್ತು, ಇಷ್ಟು ಕೆಲಸವನ್ನು ಕೂಡ ನಮ್ಮ ಇಂಜಿನೀಯರ್‌ಗಳು ಮಾಡುವುದಕ್ಕೆ ತಯಾರಾಗಿಲ್ಲ ಅಂದರೆ ಅವರನ್ನು ಮನೆಗೆ ಕಳುಹಿಸಿಕೊಟ್ಟುಬಿಡಿ. ನಾನು ಈ ಬಗ್ಗೆ ಎರಡು ಮೂರು ಸಾರಿ ಹೇಳಿದ್ದೇನೆ. ನಮ್ಮ ಜಿಲ್ಲೆಯೊಳಗೆ ಎಷ್ಟು ಬ್ರಿಡ್ಜ್ ಕಮ್ ಬ್ಯಾರೇಜ್‌ಗಳು ಇವೆ, ಎಷ್ಟೆಷ್ಟಕ್ಕೆ ನೀವು ಹಲಗೆ ಹಾಕಿದ್ದೀರಿ, ಈ ವರ್ಷ ಎಷ್ಟು ನೀರು ತಡೆಹಿಡಿದಿದ್ದೀರಿ ಅಂದರೆ ಅದಕ್ಕೆ ಉತ್ತರವಿಲ್ಲ, ಒಂದಕ್ಕೂ ಕೂಡ ಹಲಗೆ ಹಾಕಿಲ್ಲ. ಇದು ಏಕೆ ಎನ್ನುವುದು ನನ್ನ ಪ್ರಶ್ನೆ. ನಾವು ಕೇಳಿದಾಗಲೆಲ್ಲ ಮುಂದಕ್ಕೆ, ಎಂದು ಹೇಳುವುದು. ಪ್ರತಿವರ್ಷವೂ ಕೋಟ್ಯಾಂತರ ರೂಪಾಯಿಗಳ ಹಣವನ್ನು ಖರ್ಚು ಮಾಡುವುದು, ನಾವುಗಳು ಸದನದಲ್ಲಿ ನಮಗೊಂದು ಬ್ರಿಡ್ಜ್ ಕಮ್ ಬ್ಯಾರೇಜ್ ಮಾಡಿಕೊಡಿ ಎಂದು ಆವಾಜ್ ಮಾಡುವುದು, ಈಗ ಇರುವಂಥವುಗಳನ್ನು ಹಾಳು ಮಾಡಿ ಬಿಡುವುದು. ಈ ಕೆಲಸವನ್ನು ಮಾಡುವುದು ಬೇಡ. ಈಗಾಗಲೇ ಬ್ರಿಡ್ಜ್ ಕಮ್ – ಬ್ಯಾರೇಜ್ ಏನಿದೆ, ಅವುಗಳಿಗೆ ಒಂದು ಹೊಸ ನಮೂನೆಯನ್ನು ಕೊಡುವ ಬಗ್ಗೆ ಆಲೋಚನೆ ಮಾಡಬೇಕು. ಈಗ ವಿಜ್ಞಾನವು ಬೇಕಾದಷ್ಟು ಬೆಳೆದಿದೆ. ಈಗ ಹಳೆಯ ತರಹದಲ್ಲಿ ಬೋರ್ಡ್ ಹಲಗೆ ಹಾಕಬೇಕೆನ್ನುವುದು ಏನಿದೆ, ಅದನ್ನು ಬದಲಾಯಿಸಿ, ಈಗ ಪ್ಲಾಸ್ಟಿಕ್ ಟೆಕ್ನಾಲಜಿಯು ಬಹಳ ಮುಂದುವರಿದಿದೆ, ಹಾಗೆ ಪ್ಲಾಸ್ಟಿಕ್ ಬೋರ್ಡ್‌ಗಳನ್ನು ಹಾಕಿ ತಡೆಯಲು ಸಾಧ್ಯವಿದ್ದರೆ ಅಥವಾ ಬೇರೆ ಯಾವುದೇ ಹಾರ್ಡ್ ಮೆಟಲ್‌ಶೀಟ್‌ಗಳನ್ನು ಹಾಕಿ ತಡೆಯಲು ಸಾಧ್ಯವಿದ್ದರೆ, ಬಹಳ ಅನುಕೂಲವಾಗುತ್ತದೆ. ಬಹುತೇಕ ಅದು ಬಹಳ ವರ್ಷಗಳ ಕಾಲ ಪ್ರಯೋಜನಕ್ಕೆ ಬರಬಹುದು. ಈಗಾಗಲೇ ಸಾಕಷ್ಟು ಹಣ ಖರ್ಚು ಮಾಡಿ ಕಟ್ಟಿದಂಥ ಈ ಯೋಜನೆಗಳ ಲಾಭವು ನಮ್ಮ ರೈತರಿಗೆ ಸಿಗಬೇಕು, ಸರ್ಕಾರಕ್ಕೂ ಅನುಕೂಲ ಆಗಬೇಕೆಂಬ ದೃಷ್ಟಿಯಿಂದ ಈ ಮಾತನ್ನು ತಮ್ಮ ಗಮನಕ್ಕೆ ತಂದಿದ್ದೇನೆ. ನಮ್ಮಲ್ಲಿ ಅಂತರ್ಜಲದ ಬಳಕೆಯು ಕೂಡ ಅಷ್ಟಾಗಿ ಆಗಿಲ್ಲ. ರೈತರಲ್ಲಿರುವ ಒಂದು ರೀತಿಯ ಭಯವು ಅದಕ್ಕೆ ಕಾರಣವಾಗಿರಬಹುದು. ನೀರು ಬರುತ್ತದೋ ಇಲ್ಲವೋ ಎಂಬ ಒಂದು ಭಯವಿದ್ದು, ಸಾಲಸೋಲ ಮಾಡಿ ಹಾಕಿ ನೀರು ಬರದಿದ್ದರೆ ಎಂಬ ಭಯ ಅವರಲ್ಲಿ ಸಹಜವಾಗಿಯೇ ಇದೆ. ಆದ್ದರಿಂದ ಈ ಬಗ್ಗೆ ತಾವೇ ಒಂದು ಸರ್ವೆ ಮಾಡಿಸಿ ಪುಕ್ಕಟೆ ಬೋರ್ ಹೊಡೆದು ಕೊಟ್ಟು ಅನುಕೂಲ ಮಾಡಿದರೆ ನಾವೇ ಏನಾದರೂ ಮಾಡಿ ಐಪಿ ಸೆಟ್‌ಗಳನ್ನು ತಂದು ಹಾಕಿಕೊಂಡು ನೀರಾವರಿ ಮಾಡಿಕೊಳ್ಳುತ್ತೇವೆ. ಇದು ಎಲ್ಲೆಲ್ಲಿ ಸಾಧ್ಯವಿದೆ ಅಲ್ಲಿ ಮಾಡಬಹುದು. ನೀರಾವರಿ ಪ್ರದೇಶಗಳಲ್ಲಿ ಇದು ಬೇಕಾಗಿಲ್ಲ.

ವಿಜಾಪುರ ಜಿಲ್ಲೆ, ಗುಲ್ಬರ್ಗಾ ಜಿಲ್ಲೆಯ ಕೆಲವು ಭಾಗ, ಬೆಳಗಾವಿ ಜಿಲ್ಲೆಯ ಅಥಣಿ ಮತ್ತು ರಾಮದುರ್ಗ, ಈ ಭಾಗಗಳಲ್ಲಿ ಮಾಡಬಹುದು. ಮೇಲೆ ಹೇಳಿದ ಪ್ರದೇಶಗಳಿಂದ ಜನರು ಗುಳೇ ಹೋಗುವುದನ್ನು ತಾವುಗಳು ನೋಡುತ್ತಾ ಇದ್ದೀರಿ. ಮಳೆ ಬಾರದೇ, ಬೇಸಾಯ ಮಾಡಲು ಆಗದೇ ಪ್ರತೀ ವರ್ಷವೂ ಮುಂಬಯಿ, ಗೋವ, ಮುಂತಾದ ಕಡೆಗಳಿಗೆ ವಲಸೆ ಹೋಗತಕ್ಕಂಥ ರೈತರನ್ನು ಅವರು ಊರು ಬಿಟ್ಟು ಹೋಗದ ಹಾಗೆ ಮಾಡಬೇಕೆಂಬ ಮನಸ್ಸು ಸರಕಾರದವರಲ್ಲಿದ್ದರೆ ನಾನು ಕೊಟ್ಟ ಸಲಹೆಯನ್ನಾದರೂ ತಾವುಗಳು ಜಾರಿಗೆ ತರಬೇಕು. ಆಗ ಜನರು ಕೆಲಸವನ್ನು ಹುಡುಕಿಕೊಂಡು ಹೊರ ರಾಜ್ಯಗಳಿಗೆ ಹೋಗುವುದನ್ನು ತಡೆಯಬಹುದು. ಅಂಥ ಜನರನ್ನು ಅವರ ನೆಲದಲ್ಲಿಯೇ ಬದುಕಿಸಿಕೊಳ್ಳುವ ಮನಸ್ಸು ಸರಕಾರಕ್ಕೆ ಇದ್ದರೆ, ಈ ರೀತಿಯಲ್ಲಿ ಪುಕ್ಕಟೆಯಾಗಿ ಬೋರ್‌ವೆಲ್‌ಗಳನ್ನು ಹಾಕಿಸಿಕೊಡುವ ಒಂದು ಯೋಜನೆಯನ್ನು ಕೈಗೆತ್ತಿಕೊಂಡರೆ ಬಹಳ ಅನುಕೂಲವಾಗುತ್ತದೆ ಮತ್ತು ರೈತರು ಬದುಕಲು ಒಂದು ಮಾರ್ಗ ತೋರಿಸಿದಂತಾಗುತ್ತದೆ ಎಂದು ಹೇಳಬಯಸುತ್ತೇನೆ. ನಮ್ಮ ಕೆಲವು ಇಂಜಿನೀಯರ್‌ಗಳು ಯಾವ ರೀತಿಯಾಗಿ ಯೋಜನೆಗಳನ್ನು ತಯಾರು ಮಾಡುತ್ತಾರೋ ಎಂಬುದು ನನಗಂತೂ ಅರ್ಥವಾಗುತ್ತಿಲ್ಲ. ಲಿಫ್ಟ್ ಇರಿಗೇಶನ್ ಅಂದರೆ ಇದು ನಮ್ಮ ಹಿರಿಯರು ಹಿಂದೆ ಕಟ್ಟಿದಂಥ ಕೆರೆಗಳು. ಆ ಕೆರೆಗಳಿಗೆ ಪೈಪ್‌ಲೈನ್ ಹಾಕಿಸಿ ನೀರು ಮುಟ್ಟಿಸುವ ಒಂದು

ಕಾರ್ಯಕ್ರಮ ಇದೆ. ಅದನ್ನು ಅಧಿಕಾರಿಗಳು ಸರಿಯಾಗಿ ಮಾಡಿಲ್ಲ. ನಮ್ಮ ತಾಲ್ಲೂಕಿನಲ್ಲಿ ಎಲ್ಲವನ್ನೂ ಅರ್ಧ ಮಾಡಿದ್ದಾರೆ. ಕೇಳಿದರೆ ಇರುವುದಷ್ಟೇ ಜಮೀನು ಅಕ್ವಾಯರ್ ಮಾಡಿಕೊಳ್ಳಿ ಅಂದರೆ ನಮಗೆ ಬೇಡ ಎಂದು ಹೇಳುತ್ತಾರೆ. ಇನ್ನು 500, ಫೂಟ್ ಮುಂದೆ ಹೋದರೆ ಅದು ಕೆರೆಗೆ ಹೋಗಿ ಮುಟ್ಟುತ್ತದೆ. ಕೆರೆಯಿಂದ ತನ್ನಿಂದ ತಾನೇ ನೀರಾವರಿ ಆಗುತ್ತದೆ. ಅದು ನಮ್ಮ ಹಿರಿಯರು ಮಾಡಿಟ್ಟ ವ್ಯವಸ್ಥೆ. ಅದನ್ನು ಮಾಡಿಕೊಡಿ ಎಂದರೆ ಇಲ್ಲ ಎಂದು ಹೇಳುತ್ತಾರೆ. ಹಲಗ ಎನ್ನುವಲ್ಲಿ ಒಂದು ಯೋಜನೆ ಇದೆ. ನಮ್ಮ ಖಾನಾಪುರ ತಾಲ್ಲೂಕಿನಲ್ಲಿ ಇಟಗಿಯಲ್ಲಿ ಒಂದು ಯೋಜನೆ, ಬೈಲಹೊಂಗಲದಲ್ಲಿನ ತಿಗಡೊಳ್ಳಿ, ಮಾರ್ಕಂಡಕೊಪ್ಪ ಇದೆ, ಇದೇ ರೀತಿಯಲ್ಲಿ ಹತ್ತಾರು ಯೋಜನೆಗಳು ಇವೆ. ಪೈಪ್‌ಲೈನ್ ಹಾಕಿಸಿ ಕೆರೆಗೆ ಮುಟ್ಟಿಸಿದರೆ ಅದು ಪೂರ್ತಿಯಾಗಿ ನೀರಾವರಿಯಾಗುತ್ತದೆ. ಒಂದೇ ಒಂದು ನೀರು ಬಂದರೆ ಸಾಕು ಅಲ್ಲಿ ಬೆಳೆಯುತ್ತಾರೆ. ಅದು ಫಲವತ್ತಾದ ಭೂಮಿಯಾಗಿದೆ. ಎರಡು ನೀರು ಕೊಟ್ಟರೆ ಎಕರೆಗೆ 30–40 ಟನ್ ಕಬ್ಬು ಬೆಳೆಯುತ್ತಾರೆ. ಮಳೆ ಆಧಾರಿತ ಪ್ರದೇಶಗಳಲ್ಲಿ ಕೂಡ 25–30 ಟನ್‌ಗಳಷ್ಟು ಕಬ್ಬು ಎಕರೆಗೆ ಆಗುತ್ತದೆ. ಆ ಕಾರಣದಿಂದಾಗಿ ನೀವು ಫಸ್ಟ್‌ಫೇಸ್, ಸೆಕೆಂಡ್‌ಫೇಸ್, ಥರ್ಡ್‌ಫೇಸ್ ಎನ್ನುವುದಕ್ಕಿಂತಲೂ, ಪೂರ್ತಿಯಾಗಿ ಎಲ್ಲಾ ಕೆರೆಗಳಿಗೆ ನೀರು ಬಿಟ್ಟುಬಿಡಿ. ಅರೆ ಮಲೆನಾಡು ಪ್ರದೇಶದಲ್ಲಿ ಹಳೆಯ ಕೆರೆಗಳಿಗೆ ನೀರು ಬಿಟ್ಟಬಿಡಿ, ಅಲ್ಲಿಂದ ನೀರಾವರಿ ಮಾಡಿಕೊಳ್ಳುವಂಥ ಒಂದು ವ್ಯವಸ್ಥೆಯು ಮೊದಲಿಂದಲೂ ಇದೆ, ಅದಕ್ಕೆ ಹೊಸ ಕಾಲುವೆಗಳು ಬೇಕಾಗಿಲ್ಲ, ನಾವೇ ಅದನ್ನು ಮಾಡಿಕೊಳ್ಳುತ್ತೇವೆ. ಇನ್ನು ನೀರು ಬಳಕೆಯ ವಿಧಾನವನ್ನು ಬದಲಾವಣೆ ಮಾಡಿದರೆ ಅದು ಒಳ್ಳೆಯದಾದೀತು ಎಂದು ನನ್ನ ಭಾವನೆ. ನೀರಾವರಿ ರೈತರನ್ನು ಸಂಘಟಿಸಿ ವಾಟರ್ ಮ್ಯಾನೇಜ್‌ಮೆಂಟನ್ನು ಅವರ ಮುಖಾಂತರವೇ ಮಾಡುವ ಒಂದು ಪ್ರಯೋಗವನ್ನು ಮಾಡಿದರೆ, ಒಳ್ಳೆಯದು ಎಂದು ಕಾಣುತ್ತದೆ. ನವಲಗುಂದ್ ತಾಲ್ಲೂಕ್‌ನಲ್ಲಿ ಈ ತರಹದ ಪ್ರಯೋಗವನ್ನು ನಾವು ಮಾಡಿದ್ದೇವೆ. ತಾವುಗಳು ಈ ಬಗ್ಗೆ ಗಮನ ಕೊಟ್ಟು ನವಲಗುಂದ್ ತಾಲ್ಲೂಕಿನಲ್ಲಿ ವಾಟರ್ ಯೂಸರ್ಸ್ ಅಸೋಸಿಯೇಶನ್ ಎಂಬ ಅಸೋಸಿಯೇಶನ್ ಮುಖಾಂತರ ಟೇಲ್‌ಎಂಡ್ ತನಕ ನೀರು ಕೊಡುವಂಥ ಒಂದು ಒಳ್ಳೆಯ ಪದ್ಧತಿಯನ್ನು ಅವರು ಈಗ ಬೆಳೆಸಿಕೊಂಡು ಬಂದಿದ್ದಾರೆ. ಅದೇ ರೀತಿಯಲ್ಲಿ ವಾಟರ್ ಮ್ಯಾನೇಜ್‌ಮೆಂಟ್ ವ್ಯವಸ್ಥೆಯನ್ನು ಎಲ್ಲಾ ಕಡೆಗಳಲ್ಲಿಯೂ ರೈತರಿಗೆ ಕೊಟ್ಟರೆ ಏನು ತಪ್ಪು ಎನ್ನುವ ಮಾತನ್ನು ಕೇಳಬಯಸುತ್ತೇನೆ, ಇದರಿಂದ ಖರ್ಚು ಕೂಡ ಅರ್ಧದಷ್ಟು ಕಡಿಮೆಯಾಗುತ್ತದೆ. ಇಲಾಖೆಯವರು ಒಂದು ಲಕ್ಷ ರೂಪಾಯಿಗಳಷ್ಟು ಖರ್ಚು ಮಾಡಿದರೆ ರೈತರು 20–30 ಸಾವಿರ ರೂಪಾಯಿಗಳೊಳಗೆ ನೀರಾವರಿ ಮಾಡಿಕೊಳ್ಳುತ್ತಾರೆ. ಖರ್ಚು ಕಡಿಮೆ ಮಾಡಿ ಟೇಲ್‌ಎಂಡ್ ತನಕ ನೀರು ಒದಗಿಸಲು ಸಾಧ್ಯವಾಗುತ್ತದೆ. ಆದ್ದರಿಂದ ಈ ಪ್ರಯೋಗವನ್ನು ಎಲ್ಲಾ ಕಡೆಗಳಲ್ಲಿಯೂ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ರಸ್ತೆಗಳ ಬಗ್ಗೆ ಹೇಳುವುದಾದರೆ, ಮಾನ್ಯ ಲೋಕೋಪಯೋಗಿ ಸಚಿವರು ಕೂಡ ಹಳ್ಳಿಗಾಡು ಪ್ರದೇಶದಿಂದ ಬಂದವರು. ಅವರಿಗೆ ಎಲ್ಲಾ ವಿಚಾರಗಳು ಗೊತ್ತಿದೆ. ಸಕ್ಕರೆ ಕಾರ್ಖಾನೆ ವ್ಯಾಪ್ತಿಯಲ್ಲಿ ಬರುವಂಥ ರಸ್ತೆಗಳಿಗೆ ಪ್ರತಿವರ್ಷವೂ ಮೆಟ್ಲಿಂಗ್ ಮಾಡಿಸುತ್ತಾರೆ. ಅಸ್ಫಾಲ್ಟಿಂಗ್ ಮಾಡುವುದಿಲ್ಲ. ಮೆಟ್ಲಿಂಗ್ ಮಾಡಿದರೆ ಏನು ಆಗುತ್ತದೆ. ಅಂದರೆ ಒಂದು ಚಕ್ಕಡಿಗಾಡಿಯೊಳಗೆ ಒಂದೂವರೆ ಎರಡು ಟನ್‌ಗಳಷ್ಟು ಕಬ್ಬನ್ನು ಎತ್ತುಗಳು ತೆಗೆದುಕೊಂಡು ಹೋಗುವಾಗ ಅದೆಲ್ಲಾ ಕಿತ್ತು ಹೋಗುತ್ತದೆ. ಎತ್ತುಗಳಿಗೆ ಕಾಲು ಇಡಲು ಕೂಡ ಕಷ್ಟವಾಗುತ್ತದೆ. ನಮಗೆ ಆ ಮೂಕ ಪ್ರಾಣಿಗಳ ಶಾಪ ಎಲ್ಲಿ ಹತ್ತುತ್ತದೆಯೋ ಎಂಬ ಭಯ ನಮಗಿದೆ. ಆದ್ದರಿಂದ ಮೆಟ್ಲ್ ಹಾಕಲುಹೋಗಬೇಡಿ. ನೀವು ಹಾಗೆಯೇ ಗರಸ್‌ಮಣ್ಣು ಹಾಕಿ ಮಾಡಿಕೊಡಿ, ಅಥವಾ ಅಸ್ಫಾಲ್ಟಿಂಗ್ ಮಾಡಿಕೊಡಿ. ನೀವು ಮಾಡುವ

ಮೆಟ್ಲಿಂಗ್‌ನಿಂದಾಗಿ ಎತ್ತುಗಳ ಕಾಲುಕುಂಟುವಂತಾಗಿದೆ. ಬೇಕಾದರೆ ನೀವು ಅಸ್ಫಾಲ್ಟಿಂಗ್ ಹಾಕಿ ಒಂದೇ ಕಿ.ಮೀ. ರಸ್ತೆ ಮಾಡಿಕೊಟ್ಟರೆ ಸಾಕು.

† ಟಾರ್ ಅನ್ನು ಹಾಕಿಸಿಕೊಡಿ. ಜಲ್ಲಿ ಹಾಕುವುದರಿಂದ ನಮಗೆ ಬಹಳ ತೊಂದರೆಯಾಗುತ್ತದೆ. ನಮ್ಮ ಕಾರ್ಖಾನೆಯ ವ್ಯಾಪ್ತಿಯೊಳಗೆ 1-2-3ಕಿ.ಮೀ.ಯೊಳಗೆ ಇಂತಹವು 10-20ರಸ್ತೆ ಮಾಡಬೇಕು. ಒಂದು ಟನ್‌ನಿಂದ ಸುಮಾರು 40-50 ರೂಪಾಯಿ ಪರ್ಚೇಸ್ ಟ್ಯಾಕ್ಸನ್ನು ತೆಗೆದುಕೊಳ್ಳುತ್ತೀರಿ, ಸೇಲ್ಸ್‌ಟ್ಯಾಕ್ಸ್ 80 ರೂಪಾಯಿ ತೆಗೆದುಕೊಳ್ಳುತ್ತೀರಿ. ಒಟ್ಟು 130 ರೂಪಾಯಿಯನ್ನು ತೆಗೆದುಕೊಳ್ಳುತ್ತೀರಿ. 10 ಕಿ.ಮೀ.ನೊಳಗೆ ಕಬ್ಬು ಬರುತ್ತದೆ ಎಂದರೆ ಅದರಿಂದ ಸುಮಾರು ನಿಮಗೆ ಒಂದು ಕೋಟಿ ರೂಪಾಯಿ ಟ್ಯಾಕ್ಸ್ ಬರುತ್ತದೆ. ನೀವು 10 ಲಕ್ಷ ರೂಪಾಯಿ ಖರ್ಚು ಮಾಡಲಿಕ್ಕೆ ತಯಾರಿಲ್ಲ. ಆ ಕಾರಣ ಎಲ್ಲಾ ಕಾರ್ಖಾನೆಗಳ ವ್ಯಾಪ್ತಿಯೊಳಗೆ ಈ ಚಿಕ್ಕಚಿಕ್ಕ ರಸ್ತೆಗಳು ಅಂದರೆ ಚಕ್ಕಡಿಗಾಡಿಗಳ ಮುಖಾಂತರ ಕಬ್ಬು ಸಾಗಾಣಿಕೆ ಎಲ್ಲೆಲ್ಲಿದೆ ಅಲ್ಲಿ ಅಸ್ಫಾಲ್ಟಿಂಗ್ ಮಾಡಿಕೊಡಿ. ಏಕೆಂದರೆ ದೂರದಿಂದ ಕಬ್ಬು ಬರುವುದು ಇತ್ತೆಂದರೆ ಟ್ರಕ್‌ನಲ್ಲಿ ಅವರು ತೆಗೆದುಕೊಂಡು ಬರುತ್ತಾರೆ, ಟ್ರಾಕ್ಟರ್‌ನಲ್ಲಿ ತೆಗೆದುಕೊಂಡು ಬರುತ್ತಾರೆ. 1-2-3 ಕಿ.ಮೀ. ಇದ್ದಂತಹ ಸಂದರ್ಭದಲ್ಲಿ ಚಕ್ಕಡಿ ಗಾಡಿಗಳ ಮುಖಾಂತರ ಕಬ್ಬನ್ನು ಸಾಗಾಣಿಕೆ ಮಾಡುತ್ತಾರೆ. ಇಲ್ಲಿಯ ಹಾಗೆ ನಮ್ಮ ಕಡೆ ಟೈರುಗಾಡಿಗಳು ಇಲ್ಲ. ನಮ್ಮಲ್ಲಿ ಜಲ್ಲಿ ಹಾಕಿದರೆ ಒಂದೇ ವರ್ಷದಲ್ಲಿ ಕಿತ್ತುಹೋಗುತ್ತದೆ. ಆದ್ದರಿಂದ ದಯವಿಟ್ಟು ತಾವು ಈ ವರ್ಷ ಸಕ್ಕರೆ ಕಾರ್ಖಾನೆಯ ವ್ಯಾಪ್ತಿಯಲ್ಲಿ ಬರುವಂತಹ ರೋಡುಗಳನ್ನು ಚಿಕ್ಕ ಚಿಕ್ಕ ರಸ್ತೆಗಳನ್ನು 2-3 ಕಿ.ಮೀ. ಇದ್ದಂತಹ ರಸ್ತೆಗಳಿಗೆ ಅಸ್ಫಾಲ್ಟಿಂಗ್ ಮಾಡಿಕೊಟ್ಟರೆ ಬಹಳ ಉಪಕಾರವಾಗುತ್ತದೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ನನ್ನ ಕ್ಷೇತ್ರದಲ್ಲಿ ತಿಗಡೊಳ್ಳಿ, ಉಗುರಕೋಡ್, ಹುಲಿಕಟ್ಟೆ, ವೀರಾಪುರ್ ಇವೆಲ್ಲಾ ಕೂಡಿ 10ಕಿ.ಮೀ. ಆಗುವುದಿಲ್ಲ. ಅಲ್ಲಿ ಸುಮಾರು 1.5 ಲಕ್ಷ ಟನ್ ಕಬ್ಬನ್ನು ಬೆಳೆಯುತ್ತಾರೆ. 10 ಕಿ.ಮೀ. ರಸ್ತೆ ಮಾಡಿದರೆ 1.5 ಲಕ್ಷ ಟನ್ ಕಬ್ಬು ಬರುತ್ತದೆ. ಈಗ ಅವರ ಗೋಳಂತೂ ಹೇಳತೀರದು. ಆ ಕಾರಣ ಇದೇ ರೀತಿ ಎಲ್ಲಾ ಕಾರ್ಖಾನೆ ಆಗಿದೆ. ಕೇವಲ ನಮ್ಮ ಮಲಪ್ರಭಾ ಸಹಕಾರ ಸಕ್ಕರೆ ಕಾರ್ಖಾನೆ ಮಾತ್ರ ಅಲ್ಲ. ಎಲ್ಲಾ ಕಾರ್ಖಾನೆಗಳಿಗೂ ಈ ರೀತಿ ಒಂದು ಯೋಜನೆಯನ್ನು ಸಿದ್ಧಪಡಿಸಿ ವಿಶೇಷ ಫಂಡನ್ನು ಏನಾದರೂ ಕೊಟ್ಟರೆ ಬಹಳ ಅನುಕೂಲವೆಂದು ನಾನು ತಿಳಿದುಕೊಂಡಿದ್ದೇನೆ. ಆಮೇಲೆ ಕಟ್ಟಡಗಳು. ಮಿನಿವಿಧಾನಸೌಧ ಮತ್ತು ಸರ್ಕ್ಯೂಟ್ ಹೌಸ್ ಇವಕ್ಕಿಂತ ಮೊದಲು ಶಾಲಾ ಕಾಲೇಜುಗಳಿಲ್ಲ, ಮಕ್ಕಳು ಗಿಡದ ಬುಡಕ್ಕೆ ಹೋಗಿ ಕುಳಿತುಕೊಂಡು ಕಲಿಯುವುದನ್ನು ನೋಡುತ್ತಿದ್ದೀರಿ, ನಂತರ ಸರ್ಕ್ಯೂಟ್ ಹೌಸನ್ನು ಕಟ್ಟೋಣ, ನಂತರ ಮಿನಿವಿಧಾನಸೌಧವನ್ನು ಕಟ್ಟೋಣ. ಎಲ್ಲೆಲ್ಲಿ ಮರದ ಕೆಳಗೆ ಶಾಲೆಗಳು ನಡೆಯುತ್ತಿವೆ ಅದನ್ನು ಕಣ್ಣಿನಿಂದ ನೋಡುವುದಕ್ಕೆ ಹೋಗಬೇಡಿ, ಮೊದಲು ಆದ್ಯತೆ ಕೊಟ್ಟು ಶಾಲಾ ಮಕ್ಕಳಿಗೆ ಶಾಲೆಯನ್ನು ಕಟ್ಟಿಸಿಕೊಟ್ಟು ನಂತರ ಮತ್ತೇನಾದರೂ ಮಿನಿವಿಧಾನಸೌಧವನ್ನು ಕಟ್ಟುವಂತೆ ಮಾಡಿದರೆ ಒಳ್ಳೆಯದು. ಅದಕ್ಕೆ ಸ್ವಲ್ಪ ಗಮನಹರಿಸಬೇಕೆಂದು ನಾನು ತಮ್ಮನ್ನು ಕೇಳಿಕೊಳ್ಳುತ್ತಿದ್ದೇನೆ.

ಇನ್ನು ವಿದ್ಯುಚ್ಛಕ್ತಿಯ ಬಗ್ಗೆ ನಮ್ಮ ಶಾಸಕ ಮಿತ್ರರು ತಯಾರಿಯಾಗಿದ್ದಾರೆ. ಇವತ್ತಿನ ತಯಾರಿ ಸಾಕಾಗುವುದಿಲ್ಲ ನಾನು ಹೇಳುತ್ತೇನೆ. ಮಾನ್ಯ ಬೈರೇಗೌಡರು ಈಗ ತಯಾರಿ ತೆಗೆದುಕೊಳ್ಳಬೇಕೆಂದು ಈಗ ತಯಾರಾಗುತ್ತಿದ್ದಾರೆ. ಇದರಿಂದ ನಮ್ಮ ರೈತರಿಗೆ ಬಹಳ ತೊಂದರೆಯಾಗುತ್ತಿದೆ. ಆದರೂ ನಮ್ಮ ಉಪಮುಖ್ಯಮಂತ್ರಿಗಳು ಇದರ ಬಗ್ಗೆ ಬಹಳಷ್ಟು ಕಾಳಜಿಯನ್ನುವಹಿಸಿ ಯಾವ ರೀತಿ ಸರಿಯಾದ ವೋಲ್ಟೇಜನ್ನು ಸಪ್ಲೈ ಮಾಡಬೇಕು, ಯಾವ ರೀತಿ ಹಳ್ಳಿಗಾಡಿನಲ್ಲಿ ವಿದ್ಯುತ್ ಸಪ್ಲೈ ಸುಧಾರಿಸಬೇಕೆನ್ನುವಂತಹ ಪ್ರಯತ್ನ ಮಾಡಲಿಕ್ಕೆ ಹೊರಟಿದ್ದಾರೆ. ಅವರ ಪ್ರಯತ್ನಕ್ಕೆ ನಮ್ಮ ಧನ್ಯವಾದಗಳು. ಆದರೆ ಇನ್ನೂ ಸ್ವಲ್ಪ ಪ್ರಯತ್ನವನ್ನು ಮಾಡಿ. ಏಕೆಂದರೆ ಎಲ್ಲೆಲ್ಲೂ ಎಂತೆಂಥವರು ಇರುತ್ತಾರೆ. ಎಲ್ಲರೂ ಅಂತಹವರೆ ಎಂದು ನಾನು ಅನ್ನುವುದಿಲ್ಲ. ಅಧಿಕಾರಿಗಳು ಎಂತೆಂಥವರೋ

ಇರುತ್ತಾರೆ. ಉದಾಹರಣೆಗೆ ಹೇಳಬೇಕಾದರೆ ಹುಕ್ಕೇರಿಯಲ್ಲಿ ಎಲೆಕ್ಟ್ರಿಸಿಟಿ ಕೋ-ಆಪರೇಟಿವ್ ಸೊಸೈಟಿ ಇದೆ. ಅಲ್ಲೆಲ್ಲ ಸಪ್ಲೈ ಮಾಡುತ್ತಿದ್ದರು. ಒಂದು ರಟ್ಟಿನ ಕಾರ್ಖಾನೆಗಂತೂ ಪೂರ್ತಿಯಾಗಿ ಪುಕ್ಕಟೆ ಕೊಡುತ್ತಿದ್ದರು. ಒಬ್ಬರು ಹೊಸ ಎಂ.ಡಿ. ಬಂದಮೇಲೆ 4 ಸಾವಿರ ಕಂಬಗಳನ್ನು ಹಾಕಿಸಿರುವ ಬಗ್ಗೆ ಎನ್‌ಕ್ವೈರಿಗೆ ಹಾಕಿದರು. ಆಮೇಲೆ ಕಾರ್ಖಾನೆಗಳಿಗೆ ಉಚಿತವಾಗಿ ಸಪ್ಲೈ ಮಾಡುತ್ತಿದ್ದ ಮೂರು ಜನ ಇಂಜಿನಿಯರನ್ನು ಸಸ್ಪೆಂಡ್ ಮಾಡಿದರು. ತನಿಖೆ ನಡೆಯುವಾಗ ಎಂ.ಡಿ.ಯವರನ್ನು ಹಠಾತ್ತನೆ ವರ್ಗ ಮಾಡಿದರು. ಯಾವುದೋ ರಾಜಕೀಯ ಪ್ರಭಾವದಿಂದ ಅವರನ್ನು ವರ್ಗಾವಣೆ ಮಾಡಿ ಅದನ್ನೆಲ್ಲ ಈಗ ಮುಚ್ಚಿಕೊಂಡರು. ಈ ರೀತಿ ನಡೆಯುತ್ತಿದೆ ಎನ್ನುವುದು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಆ ಕಾರಣ ಎಲ್ಲೆಲ್ಲಿ ಇಂತಹ ಕೆಲಸ ನಡೆದಿದೆ ಅದನ್ನು ಪತ್ತೆ ಹಚ್ಚಿ ನಮಗೆ ಏನು ಕಳಕಳಿಯಿಂದ ಈಗ ಎಲೆಕ್ಟ್ರಿಸಿಟಿ ಸಪ್ಲೈ ಮಾಡಬೇಕು ಅದನ್ನು ಇನ್ನು ಸ್ವಲ್ಪ ಹೆಚ್ಚಿನ ಕಾಳಜಿಯಿಂದ ಮಾಡಿಕೊಟ್ಟರೆ ಬಹಳ ಅನುಕೂಲವಾಗುತ್ತದೆಂದು ಕೇಳಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು:- ಮಾನ್ಯ ರಾಮಯ್ಯನವರೇ ತಾವು ಮಾತನಾಡಿ.

ಶ್ರೀಮತಿ ಮೋಟಮ್ಮ:- ಒಂದೇ ಕಡೆ ಕೊಡುತ್ತಿದ್ದೀರಿ, ಒಬ್ಬರು ಆ ಕಡೆಯವರನ್ನು ಮತ್ತು ಈ ಕಡೆಯವರನ್ನು ಒಬ್ಬರನ್ನು ಕರೆದರೆ ಒಳ್ಳೆಯದು.

ಅಧ್ಯಕ್ಷರು:- ತಮ್ಮ ಮುಖ್ಯ ಸಚೇತಕರು ಲಿಸ್ಟನ್ನು ಮಾಡಿಕೊಟ್ಟಿದ್ದಾರೆ ಅದರ ಪ್ರಕಾರ ನಾನು ತೆಗೆದುಕೊಳ್ಳುತ್ತಿದ್ದೇನೆ.

† ಶ್ರೀ ವೈ.ಕೆ. ರಾಮಯ್ಯ (ಕುಣಿಗಲ್):- ಮಾನ್ಯ ಅಧ್ಯಕ್ಷರೆ, ರಾಜ್ಯದ ನೀರಾವರಿ ವಿದ್ಯುಚ್ಛಕ್ತಿ ಮತ್ತು ಇತರ ಬೇಡಿಕೆಗಳನ್ನು ಕುರಿತು ಮಾತನ್ನಾಡುವಂತಹ ಸಂದರ್ಭದಲ್ಲಿ ನನಗೆ ಅವಕಾಶವನ್ನು ಕೊಟ್ಟಿದ್ದಕ್ಕಾಗಿ ತಮಗೆ ವಂದನೆಗಳು. ನನ್ನ ಮಾತನ್ನು ನೀರಾವರಿಯೊಳಗೆ ಸೀಮಿತಗೊಳಿಸುತ್ತೇನೆ. ಅದರೊಳಗೂ ಭಾರಿ ಮತ್ತು ಮಧ್ಯಮ ವರ್ಗದ ನೀರಾವರಿ ಇಷ್ಟಕ್ಕೆ ಮಾತ್ರ ನಾನು ನನ್ನ ಮಾತನ್ನು ಸೀಮಿತಗೊಳಿಸುತ್ತೇನೆ. ಕಾರಣ ಏನೆಂದರೆ ಈ ನೀರಾವರಿ ಯೋಜನೆಗಳನ್ನು ಅನುಷ್ಠಾನಕ್ಕೆ ತರುವುದಕ್ಕೆ ಇರುವಂತಹ ಪ್ರಾಮುಖ್ಯತೆ ಹಿಂದೆಂದಿಗಿಂತ ಇಂದು ಹೆಚ್ಚಿನದಾಗಿದೆ. ಅದಕ್ಕೆ ಕಾರಣ ಇಷ್ಟೆ. ನಮ್ಮ ಅಂತರ್ಜಲ ವಿರಳವಾಗುತ್ತಿದೆ. ನಮ್ಮ ಜೀವನ ಶೈಲಿ ಅಥವಾ ಕಾರ್ಯವೈಖರಿ ನಮ್ಮ ಬದುಕಿನಲ್ಲಿ ಕಂಡುಂಡ ಘಟನೆಗಳು ಬದುಕಿದ ಪರಿಸರ ಕಾರಣವಾಗಬಹುದು ಎಂದು ಕಾಣುತ್ತದೆ. ಎಂದಿಗಿಂತಲೂ ಇಂದು ಮಧ್ಯಮದ ಮತ್ತು ಭಾರಿ ನೀರಾವರಿಯ ಅನುಷ್ಠಾನದ ಪ್ರಗತಿಯನ್ನು ಜಾಸ್ತಿ ಮಾಡಬೇಕು ಅನ್ನುವಂತಹ ಪ್ರಶ್ನೆಗೆ ಪ್ರಾಮುಖ್ಯತೆ ಏತಕ್ಕೆ ಬಂದಿದೆ ಅಂದರೆ, ನನ್ನ ಕ್ಷೇತ್ರದಲ್ಲಿ ಒಂದು ಹಳ್ಳಿ ಇದೆ. ಇಡೀ ಹಳ್ಳಿಯನ್ನು ಬಂಡೆಯ ಮೇಲೆ ಕಟ್ಟಿಕೊಂಡಿದ್ದಾರೆ, ಸಂಪೂರ್ಣವಾಗಿಲ್ಲ. ಪ್ರತಿ ಸಾರಿ ಹೋದಾಗಲೂ ನಮಗೆ ರಸ್ತೆ ಮಾಡಿಸಿ ಎಂದು ನನಗೆ ಅರ್ಜಿಯನ್ನು ಕೊಡುತ್ತಿದ್ದರು. ನಾನು 60-70 ವರ್ಷದ ಒಬ್ಬ ಮುದುಕನನ್ನು ಕೇಳಿದೆ, ನಾನು ನಿಮಗೆ ಏನು ಮಲ್ಲಗರ ಬಂದಿತ್ತು ಅಲ್ಲಿ ಪಕ್ಕದಲ್ಲಿ ಅಷ್ಟೊಂದು ವಿಶಾಲವಾಗಿರುವಂತಹ ಜಾಗ ಇದೆ ಅಲ್ಲಿ ಊರು ಕಟ್ಟಿಕೊಂಡು ರಸ್ತೆ ಮಾಡಿಸಿಕೊಳ್ಳುವುದರ ಬದಲು ಈಗ ಬಂಡೆಯ ಮೇಲೆ ಏತಕ್ಕೆ ನೀವು ಊರನ್ನು ಕಟ್ಟುಕೊಂಡಿದ್ದೀರಿ ಎಂದು ನಾನು ಕೇಳಿದೆ. ಆತ ಅದಕ್ಕೆ ಹೇಳಿದಂತಹ ಉತ್ತರವನ್ನು ಕೇಳಿದಾಗ ನಾನು ನಾಚಿಕೊಂಡೆ. ಆತ ಏನು ಹೇಳಿದ ಅಂದರೆ, ನಾವು ಚಿಕ್ಕ ಹುಡುಗರಾಗಿದ್ದಾಗ ಅಲ್ಲಿ ಮನೆಯನ್ನು ಕಟ್ಟಿದರೆ ಮಳೆ ಜಾಸ್ತಿಯಾಗಿ ಶೀತ ಹೆಚ್ಚಾಗಿ ಮನೆಗಳು ಕುಸಿದುಹೋಗುತ್ತಿದ್ದವು, ಆದ್ದರಿಂದ ನಾವು ಬಂಡೆ ಮೇಲೆ ಮನೆಯನ್ನು ಕಟ್ಟಿಕೊಂಡೆವು ಎಂದು ಹೇಳಿದ. 60ವರ್ಷದ ಹಿಂದೆ ಮಳೆಯು ಎಷ್ಟೊಂದು ಬರುತ್ತಿತ್ತು. ಅಂದರೆ ಕಟ್ಟಿದ ಮನೆಗೆ ಶೀತ ಏರಿ ಕುಸಿದು ಬೀಳುವಷ್ಟು ಮಳೆ ಬರುತ್ತಿತ್ತು. ಇವತ್ತಿನ ಪರಿಸ್ಥಿತಿ ಏನಿದೆ ಅಂದರೆ ನಾವು ಶೀತವನ್ನು, ನೀರನ್ನು ಕಾಣಬೇಕಾದರೆ 200-300 ಅಡಿ ಭೂಮಿಯ ಒಳಗಡೆ

ಹೋಗಬೇಕಾಗಿದೆ. ಈ 60 ವರ್ಷದಲ್ಲಿ ಇಷ್ಟೊಂದು ಬದಲಾವಣೆ ಆಗಿದ್ದರೆ ಮುಂದಿನ ವರ್ಷ 60 ವರ್ಷ ಅಥವಾ 100 ವರ್ಷದಲ್ಲಿ ಏನು ಬದಲಾವಣೆಯನ್ನು ನಾವು ಕಾಣಬಹುದು. ಬಹುಶಃ ಇನ್ನು 100 ವರ್ಷದಲ್ಲಿ ಆ ಜನಾಂಗಕ್ಕೆ, ಆ ಸಮಾಜಕ್ಕೆ ಸಮುದಾಯಕ್ಕೆ ಕುಡಿಯುವುದಕ್ಕೂ ನೀರನ್ನು ಒದಗಿಸದೇ ಇರುವಂತಹ ಪರಿಸ್ಥಿತಿಯನ್ನು ಸೃಷ್ಟಿಸಿದಂತಹ ಪಾಪದ ಜನಾಂಗಕ್ಕೆ ಸೇರುತ್ತೇವೆಯೋ ಎನ್ನುವಂತಹ ಭಾವನೆ ನನಗೆ ಬಂತು. ಇದು ಮಳೆಯು ಕಡಿಮೆಯಾಗಿರುವುದರಿಂದ ಆಗಿರುವಂಥಾದ್ದು. ಇನ್ನು ಇರುವಂತಹ ಅಂತರ್ಜಲವನ್ನಾದರೂ ಉಪಯೋಗಿಸಿಕೊಳ್ಳೋಣ ಎಂದರೆ ವಿದ್ಯುಚ್ಛಕ್ತಿಯ ಅಭಾವ, ಅದೂ ಸಾಧ್ಯವಿಲ್ಲ.

ಇನ್ನು ಮೂರನೆಯದು, ಅನಾದಿಕಾಲದಿಂದಲೂ ನಾವು ಕಟ್ಟಿಕೊಂಡು ಬಂದಿರುವಂತಹ ಕೆರೆಗಳು. ಸ್ವಲ್ಪಮಟ್ಟಿಗೆ ಎಲ್ಲ ಕೆರೆಗಳು ಎಂದು ನಾನು ಹೇಳುತ್ತೇನೆ. ನೂರಕ್ಕೆ ತೊಂಬತ್ತೊಂಬತ್ತು ಭಾಗ ಕೆರೆಗಳು ಮುಚ್ಚಿಹೋಗಿವೆ. ಸಂಪೂರ್ಣವಾಗಿ ಎಲ್ಲಾ ಕೆರೆಗಳೂ ಹೂಳು ತುಂಬಿಕೊಂಡಿವೆ. ಸಣ್ಣ ಕೆರೆಗಳು ಹೂಳು ತುಂಬಿಕೊಂಡಿವೆ. ಅಂತರ್ಜಲ ಪಾತಾಳಕ್ಕೆ ಹೋಗುತ್ತಿದೆ. ಅಲ್ಲಿಂದಲಾದರೂ ಆ ಜಲವನ್ನು ಎತ್ತೋಣ ಎಂದರೆ ವಿದ್ಯುಚ್ಛಕ್ತಿ ಇಲ್ಲ. ಇನ್ನು ನಮಗೆ ಇರುವಂತಹ ಏಕೈಕ ಮಾರ್ಗ ಅಂದರೆ ಮಧ್ಯಮ ಮತ್ತು ಭಾರಿ ನೀರಾವರಿ ಮಾತ್ರ ಎಂದು ನನ್ನ ಭಾವನೆ ಇರುವುದರಿಂದ ನಾನು ಈ ವಿಷಯಕ್ಕೆ ಹೆಚ್ಚಿನ ಒತ್ತನ್ನು ಕೊಟ್ಟು ಇದನ್ನು ಕಾರ್ಯರೂಪಕ್ಕೆ ತರಲಿಕ್ಕೆ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ಮಧ್ಯಮ ಮತ್ತು ಭಾರಿ ನೀರಾವರಿ ಯೋಜನೆಗಳನ್ನು ಬೇಗನೆ ಅನುಷ್ಠಾನಕ್ಕೆ ತರಬೇಕೆಂದು ಸರ್ಕಾರಕ್ಕೆ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ರಾಜ್ಯದ, ಈ ಕರ್ನಾಟಕ ಮಾತೆಯ ಎರಡು ಕಣ್ಣು ಎನ್ನುವಂತಹದು ಕಾವೇರಿ ಮತ್ತು .ಕೃಷ್ಣ. ಕೃಷ್ಣ ಕಾವೇರಿ, ತುಂಗ ಕಾವೇರಿಯ ವರರಂಗ, ಶತಶತಮಾನಗಳಿಂದ, ಯುಗಯುಗಗಳಿಂದ ಕನ್ನಡ ನಾಡಿನ ಈ ಎರಡು ಕಣ್ಣುಗಳನ್ನು ರಕ್ಷಣೆ ಮಾಡುವುದರಲ್ಲಿ Governments have failed. ಯಾರಾದರೂ ನೀವು ಮಂತ್ರಿಯಾಗಿರಲಿಲ್ಲವೇ ನಿಮ್ಮ ಸರ್ಕಾರ ಇರಲಿಲ್ಲವೇ ಎನ್ನುವಂತಹ ಪ್ರಶ್ನೆಯನ್ನು ಕೇಳುತ್ತಾರೆಂದು ತಿಳಿದು ನಾನು ಅದನ್ನು ಮೊದಲೇ ಹೇಳಿಬಿಡುತ್ತೇನೆ. Not only so, they have deceived. ಈ ಎರಡು ಕಣ್ಣುಗಳು ಕೂಡ ನೀರನ್ನು ಸೋರುವಂತಹ ಪರಿಸ್ಥಿತಿಗೆ ನಾವು ತಂದಿದ್ದೇವೆ. ಅದು ಕೃಷ್ಣೆಯಾಗಿರಬಹುದು ಅಥವಾ ಕಾವೇರಿಯಾಗಿರಬಹುದು. ಈ ಎರಡು ಕಣ್ಣಿನಲ್ಲಿಯೂ ಕೂಡ ಸಂತೋಷದ ಭಾಷ್ಪ ಸುರಿಯಬೇಕಾಗಿರುವಂತಹ ಕಡೆ ಕಣ್ಣೀರನ್ನು ಸುರಿಯುವಂತಹ ಪರಿಸ್ಥಿತಿಯನ್ನು ನಾವು ಸೃಷ್ಟಿ ಮಾಡಿದ್ದೇವೆ.

ಆನಂದಭಾಷ್ಪ ಸುರಿಯಬೇಕಾದ ಕಡೆ ಹೃದಯದಲ್ಲಿ ಉಕ್ಕಿ ಬರುವಂತಹ ನೋವಿನ ಕಣ್ಣೀರನ್ನು ನಾವು ಈ ಎರಡು ಕಣ್ಣುಗಳಲ್ಲಿ ಕಾಣುತ್ತಿದ್ದೇವೆ. ಇದನ್ನು ನೋಡಿ ಈ ರಾಜ್ಯದ ಜನ ತಲ್ಲಣಿಸುತ್ತಿದ್ದಾರೆ. ಈ ಎರಡು ಯೋಜನೆಗಳು ಅಂದರೆ ಕೃಷ್ಣೆ, ಬಿಜಾಪುರ, ಗುಲ್ಬರ್ಗಾ, ರಾಯಚೂರು, ಜಿಲ್ಲೆಗಳು ರೈತರ ಭಾಗ್ಯದ ಬಾಗಿಲನ್ನು ತೆರೆಸಬೇಕಾಗಿತ್ತು. ಈ ಭಾಗದಲ್ಲಿ ಕಾವೇರಿ ಯೋಜನೆಯಿಂದ ಬರುವ ನೀರಿನಿಂದ ರೈತನ ಬದುಕು ಹಸನಾಗಿ ಅವನು ಎರಡು ಹೊತ್ತಿಗೆ ಕೂಳು ತಿನ್ನುವಂತಹ ಪರಿಸ್ಥಿತಿ ಸೃಷ್ಟಿಯಾಗಬೇಕಾಗಿತ್ತು. ಆದರೆ ಹಾಗೆ ಆಗಲಿಲ್ಲ. ಕರ್ನಾಟಕದ ನೀರಾವರಿ ಯೋಜನೆಗಳ ಬಗ್ಗೆ, ಅದರಲ್ಲೂ ಬೃಹತ್ ನೀರಾವರಿ ಯೋಜನೆಗಳ ಬಗ್ಗೆ ಅನಾದರಣೆ, ನಿರಾಸಕ್ತಿ, ಮೋಸ, ವಂಚನೆ, ದ್ರೋಹದ ಪರಂಪರೆಯನ್ನೇ ನಾವು ಕಾಣಬಹುದು. ಇದು ಒಂದಲ್ಲ, ಎರಡಲ್ಲ. ಈ ವಂಚನೆಯ ಪರಂಪರೆ, ಮೋಸದ ಪರಂಪರೆ ಮೈಸೂರು ಮಹಾರಾಜರ ಕಾಲದಿಂದ ಹಿಡಿದು ಇವತ್ತಿನವರೆಗೂ ನಡೆದುಬಂದಿದೆ. ಮೈಸೂರು ಮಹಾರಾಜರ ಕಾಲದಲ್ಲಿ ಕೆ.ಆರ್.ಎಸ್. ಕಟ್ಟಡ ಕಟ್ಟಬೇಕೆಂದಾಗ ಅವತ್ತಿನ ಮಹಾರಾಜರ ಆರ್ಥಿಕ ಕಾರ್ಯದರ್ಶಿಯವರು ಒಪ್ಪಿಗೆ ಕೊಡಲಿಲ್ಲ. ಅದು ದೊಡ್ಡ ಚರಿತ್ರೆ, ಈಗ ಅದನ್ನು ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಆ ಸಮಯದಲ್ಲಿ ದಿವಾನರಾಗಿದ್ದ ಶ್ರೀ ಆನಂದರಾಯರು

ಹೇಳುತ್ತಾರೆ, ಸರ್.ಎಂ. ವಿಶ್ವೇಶ್ವರಯ್ಯನವರು ಹೇಳುತ್ತಾರೆ. "This is a precious Goose which will lay Golden eggs and the Finance Secretary is trying to kill it. "ನಾನು ಏಕೆ ಹೇಳುತ್ತಿದ್ದೇನೆ ಎಂದರೆ, ಮೋಸದ ಪರಂಪರೆ, ವಂಚನೆಯ ಪರಂಪರೆ ಇವತ್ತಿನಿಂದ ಶುರುವಾದುದ್ದಲ್ಲ. ಅದೃಷ್ಟವಶಾತ್ ಅವತ್ತು ಶ್ರೀ ಆನಂದರಾಯರಂಥ ದಿವಾನರು. ಸರ್. ಎಂ. ವಿಶ್ವೇಶ್ವರಯ್ಯನವರಂಥ ಇಂಜಿನಿಯರ್ ಇದ್ದರೋ ಅವತ್ತು ಈ ಕಟ್ಟಡ ಕಟ್ಟುವುದಕ್ಕೆ ಸಾಧ್ಯವಾಯಿತು. ಅದಾದ ನಂತರ ಬ್ರಿಟಿಷರ ಕಾಲದಲ್ಲೂ ಸಹ 1889ನೇ ಇಸವಿಯ ಒಪ್ಪಂದ ಮತ್ತು 1924ನೇ ಇಸವಿಯ ಒಪ್ಪಂದ ಇವೆರಡರ ನಿಬಂಧನೆಯನ್ನು, ರೂಪರೇಷೆಗಳನ್ನು ನೋಡಿದಾಗ ಆಗ ಇದ್ದಂತಹ ಬ್ರಿಟಿಷರ ಸರ್ಕಾರ ಮೈಸೂರು ರಾಜ್ಯದ ರಾಜರುಗಳ ಮೇಲೆ ತಂದಂಥ ಸಂಪೂರ್ಣವಾದಂತಹ ಒಂದು ನಿರ್ಬಂಧ ಹೇರುತ್ತಿರುವಂತಹ ಒಂದು ತಂತ್ರದ ಸ್ವರೂಪವಾಗಿತ್ತು. ಇದು ರಾಜಕೀಯವಾಗಿ ನಡೆದಿದ್ದರೆ ಕೆಲಸ ಮಾಡುವುದು ಹೇಗೆ? ಈ ಕೆಲಸವನ್ನು ಪ್ರಗತಿಪಥದಲ್ಲಿ ತೆಗೆದುಕೊಂಡರೂ ಕೂಡ ನಾವು ಈ ರಾಜ್ಯದಲ್ಲಿ ನೀರಾವರಿ ಯೋಜನೆಗಳ ಬಗ್ಗೆ ಅನಾದರಣೆ, ವಂಚನೆಗಳನ್ನು ಕಾಣಬಹುದು. ನಾನು ಯಾವುದೇ ಒಂದು ಸರ್ಕಾರ, ಅದು ಇದು ಎಂದು ಹೇಳುವುದಕ್ಕೆ ಸಿದ್ಧನಿಲ್ಲ. ಈ ರಾಷ್ಟ್ರದಲ್ಲಿ ವ್ಯವಸಾಯಕ್ಕೆ ಲಭ್ಯವಿರುವಂಥ ಜಮೀನುಗಳಲ್ಲಿ ರಾಷ್ಟ್ರದ ಶೇಕಡವಾರು 32 ಅಥವಾ 33, ಈ ರಾಜ್ಯದ್ದು 13 ಇದೆ. ಮಾನ್ಯ ಮುಖ್ಯಮಂತ್ರಿಗಳು ಎದ್ದು ಹೊರಟುಹೋದರು. ಆ ರಾಜ್ಯದಲ್ಲಿ ಇಷ್ಟು ತೆರಿಗೆ ಕೊಡುತ್ತಾರೆ, ಈ ರಾಜ್ಯದಲ್ಲಿ ಇಷ್ಟೊಂದು ತೆರಿಗೆ ಕೊಡುತ್ತಾರೆ, ಈ ರಾಜ್ಯದಲ್ಲಿ ಏಕೆ ಇಷ್ಟು ತೆರಿಗೆ ಹಾಕಬಾರದು ಎಂದು ಮೊನ್ನೆ ಹೇಳಿದ್ದಾರೆ. ಆ ರಾಜ್ಯದಲ್ಲಿ ಇರುವಷ್ಟು ನೀರಾವರಿ ಸೌಕರ್ಯವನ್ನು ನಮಗೂ ಕೊಡಿ, ನಾವು ತೆರಿಗೆ ಕೊಡುತ್ತೇವೆ. ನಾವು ಸಾಲ ಮನ್ನಾ ಮಾಡಿ ಎಂದು ಹೇಳುವುದಕ್ಕೆ ಬರುವುದಿಲ್ಲ. ಆ ರಾಜ್ಯಗಳಲ್ಲಿ ಇಷ್ಟಿಷ್ಟು ತೆರಿಗೆ ಕೊಡುತ್ತಾರೆಂದು ಹೇಳುವಂಥ ಸರ್ಕಾರ ಆ ರಾಜ್ಯಕ್ಕೆ ಆ ಸರ್ಕಾರದವರು ಜನಕ್ಕೆ ಎಷ್ಟು ನೀರಾವರಿ ಒದಗಿಸಿದ್ದಾರೆಂಬ ಅಂಕಿಅಂಶಗಳನ್ನು ಕೊಟ್ಟರೆ ಆಗ ನಾನು ಒಪ್ಪುತ್ತೇನೆ. ಯಾವ ಯಾವ ರಾಜ್ಯದಲ್ಲಿ ಎಷ್ಟೆಷ್ಟು ನೀರಾವರಿ ಸೌಕರ್ಯವಿದೆ ಎಂಬುದನ್ನು ನಾನು ಮಂತ್ರಿಯವರಿಂದ ಬಯಸುತ್ತೇನೆ. ಆದರೆ ನನ್ನ ಮಟ್ಟಿಗೆ ಕರ್ನಾಟಕ ರಾಜ್ಯದಲ್ಲಿ ನೀರಾವರಿಗೆ ಲಭ್ಯವಿರುವ ಜಮೀನುಗಳು ಶೇ. 13, ರಾಷ್ಟ್ರದ ಶೇಕಡವಾರು ಸ್ವಲ್ಪ ಹೆಚ್ಚು ಕಡಿಮೆ 33 ಅಥವಾ 35 ಇರಬಹುದು. ಇದರಿಂದ ವಂಚನೆಯ ಅರಿವು ನಿಮಗೆ ಆಗುವುದಿಲ್ಲವೇ ? ಈ ರಾಜ್ಯದ ರೈತರ ಮೇಲೆ ನಡೆಯುತ್ತಿರುವಂಥ ಮೋಸದ ಅರಿವು ಆಗುವುದಿಲ್ಲವೇ ? ದ್ರೋಹದ ಅರಿವು ಆಗುವುದಿಲ್ಲವೆ ? ನಮ್ಮದು ಭಾರಿ ಸಾಧನೆ ? ನಾನು ಆಗಲೇ ಹೇಳಿದ್ದೇನೆ. ಯಾವ ಸರ್ಕಾರ ಜನತಾ ಪಕ್ಷ, ಕಾಂಗ್ರೆಸ್ ಪಕ್ಷ, ಕಮ್ಯೂನಿಸ್ಟ್ ಪಕ್ಷ ಎಂಬ ಪ್ರಶ್ನೆಗೆ ಹೋಗುವುದಿಲ್ಲ. 1985–86ರಲ್ಲಿ ಈ ರಾಜ್ಯದ ಇರಿಗೇಷನ್ ಪೊಟೆನ್ಷಿಯಲ್ 12.27 ಈ ದಶಕದಲ್ಲಿ ಈ ಕ್ಷೇತ್ರದಲ್ಲಿ ನಮ್ಮ ಮಹತ್ ಸಾಧನೆ 14.36. ಮಾನ್ಯ ಮುಖ್ಯಮಂತ್ರಿಗಳು ಒಂದು ವರ್ಷಕ್ಕೆ ಇಳಿಸುತ್ತೇನೆ ಎಂದು ಹೇಳಿದ್ದಾರೆ. ಈ ದಶಕದಲ್ಲಿ ನಮ್ಮ ಮಹತ್ ಸಾಧನೆ 12.27ರಿಂದ 14.36.

3.50 ಪಿ.ಎಂ.

ನಮ್ಮ ಸನ್ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ಸೃಜಿಸಿದ ಸಾಮರ್ಥ್ಯಕ್ಕೂ ಉಪಯುಕ್ತತೆಗೂ ಇರುವ ಅಂತರವನ್ನು ಒಂದು ವರ್ಷಕ್ಕೆ ಇಳಿಸುತ್ತೇನೆ ಎಂದು ಹೇಳಿದ್ದಾರೆ. It is impossible ಏಕೆಂದರೆ ಅವರು ಕೊಟ್ಟಿರುವಂತಹ ವರದಿಯ ಪ್ರಕಾರ ಇದು ಸಾಧ್ಯವೇ ? ಆಯವ್ಯಯ ಭಾಷಣದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಅಪ್ಪಣೆ ಕೊಡಿಸುತ್ತಾರೆ, 1994–95ರಲ್ಲಿ ಹೊಸದಾಗಿ ಸೃಜಿಸಿರುವ ನೀರಾವರಿ ಸಾಮರ್ಥ್ಯವನ್ನು ಬಳಸಿಕೊಳ್ಳಲಾಗುವುದು, ನೀರಾವರಿ ಸಾಮರ್ಥ್ಯವನ್ನು ಸೃಜಿಸಿ ಅದನ್ನು ಬಳಸಿಕೊಳ್ಳುವ ನಡುವಿನ ಅವಧಿಯ ಅಂತರವನ್ನು ಇನ್ನು ಮುಂದೆ ಗರಿಷ್ಠ ಒಂದು ವರ್ಷಕ್ಕೆ ಸೀಮಿತಗೊಳಿಸಲಾಗುವುದು. The gap between the creation of a potentiality

and its utility will come down to one year. ಬಹುಶಃ ಮುಂದಿನ ವರ್ಷದವರೆಗೆ ನಾನು ಇರುತ್ತೇನೆ. ಈ ಸದನದಲ್ಲಿ ಇರುವುದಕ್ಕೆ ಅವಕಾಶ ಸಿಗುತ್ತದೆಯೋ ಇಲ್ಲವೋ ನನಗೆ ಗೊತ್ತಿಲ್ಲ, ಆದರೆ ಹೊರಗಡೆಯಾದರೂ ಇರುತ್ತೇನೆ. ನಾನು ಇವತ್ತು ಅವರಿಗೆ 5 ವರ್ಷ ಕಾಲ ಕೊಡುತ್ತೇನೆ. ಹೊಸದಾಗಿ ಸೃಜಿಸುವ ಪೊಟೆನ್‌ಷಿಯಾಲಿಟಿ ಬೇಡ ಸನ್ಮಾನ್ಯ ಮಂತ್ರಿಗಳೇ. ಈಗ ನಮ್ಮದು ಇರುವಂತಹ ಪೊಟೆನ್‌ಷಿಯಾಲಿಟಿ ಕ್ರಿಯೇಟ್ ಆಗಿರುವಂತಾದ್ದು ಏನು ಇದೆ, ನಾವು ಏನು ಸಾಮರ್ಥ್ಯ ಸೃಜಿಸಿದ್ದೇವೆ, ಈ ಸಾಮರ್ಥ್ಯವನ್ನು ಇನ್ನು 5 ವರ್ಷಗಳಲ್ಲಿ ನೀವು ಸಂಪೂರ್ಣವಾಗಿ ಬಳಸಿಕೊಳ್ಳುವುದಾದರೆ, ನಾನು ಇವತ್ತು ನಿಮ್ಮ ಮೇಲೆ ಹಠ ಕಟ್ಟುವುದಕ್ಕೆ ಸಿದ್ಧನಿದ್ದೇನೆ. ನಾನು ರಾಜಕೀಯದಿಂದ ನಿವೃತ್ತಿಯಾಗುತ್ತೇನೆ. ಒಂದು ವರ್ಷ ಬೇಡ. It is impossible. I will give you the figures. I will show you the tragedy of the State.

ಒಂದು ವರ್ಷ ಅಲ್ಲ, ಇನ್ನು 10 ವರ್ಷಗಳಲ್ಲಿ ಕೂಡ ನೀವು ಈ ಗ್ಯಾಪನ್ನು ಫಿಲಪ್ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಕಾರಣ ಇಷ್ಟೇ ಅವರೇ ಕೊಟ್ಟಿರುವಂತಹ ಲೆಕ್ಕದ ಪ್ರಕಾರ ಅವರ ವರದಿ ಪೇಜ್ ನಂ. 66–67ರಲ್ಲಿ ಅಂತಿಮ ನೀರಿನ ಸಾಮರ್ಥ್ಯ. 21 ಲಕ್ಷದ 92 ಸಾವಿರದ 326 ಲಕ್ಷ ಹೆಕ್ಟೇರ್. ಈ ರಾಜ್ಯದ ಅಂತಿಮ ನೀರಿನ ಸಾಮರ್ಥ್ಯವನ್ನು ಕೊಟ್ಟಿದ್ದಾರೆ. ಈ ಸಾಮರ್ಥ್ಯದಲ್ಲಿ ನಾವು ಸಾಧನೆ ಮಾಡಿರುವುದು 9 ಲಕ್ಷದ 37 ಸಾವಿರದ 390 ಹೆಕ್ಟೇರ್ ಅಂದರೆ ಒಟ್ಟಾರೆ 12 ಲಕ್ಷದ 44 ಸಾವಿರದ 936 ಎಕರೆ. ಇವತ್ತು ಮಾನ್ಯ ಮುಖ್ಯಮಂತ್ರಿಗಳ ಮಾತಿನಲ್ಲಿ ಹೇಳಬೇಕು ಎನ್ನುವುದಾದರೆ ಸೃಜಿಸಿರುವ ಸಾಮರ್ಥ್ಯದಲ್ಲಿ ಉಪಯೋಗ ಮಾಡಿಕೊಳ್ಳದೆ ಇರುವಂತಹ ನೀರು ನಮ್ಮಲ್ಲಿ ಎಷ್ಟಿದೆ ಎಂದರೆ 12 ಲಕ್ಷದ 44 ಸಾವಿರದ 936 ಹೆಕ್ಟೇರ್ಸ್. ಇದರ ಅರ್ಥ ಏನು ಗೊತ್ತೇ "ಕೆರೆಯಲ್ಲಿ ನೀರು ಇದೆ, ತೂಬು ಕಟ್ ಆಗಿದೆ. ಕಂಟ್ರಾಕ್ಟರ್‌ಗೆ ಬಿಲ್ ಕೊಟ್ಟಾಗಿದೆ." ಇದು ಎಂತಹ ನೋವಿನ ಪರಿಸ್ಥಿತಿ. ಹೇಮಾವತಿಯಲ್ಲಿ ನೀರು ತುಂಬಿದೆ, ನಾರಾಯಣಪುರದಲ್ಲಿ ನೀರು ತುಂಬಿದೆ. ಆ ನೀರನ್ನು ಕಾಲುವೆ ಮುಖಾಂತರ ರೈತನ ಜಮೀನಿಗೆ ಒದಗಿಸುವುದಕ್ಕೆ ಆಗದೇ ಇರುವಂತಹ ಒಂದು ಅನ್ಯಾಯದ ಪರಂಪರೆಯನ್ನು ನಾವು ಮುಂದುವರೆಸಿಕೊಂಡು ಹೋಗುತ್ತಿದ್ದೇವೆ. ಹೆಂಗಸರು ಅಡಿಗೆ ಮಾಡಿದ್ದಾರೆ, ಘಮಘಮ ವಾಸನೆ ಬರುತ್ತಿದೆ, ಆದರೆ ತಿನ್ನುವ ಹಾಗಿಲ್ಲ. ಇಲ್ಲಿಂದ ಹೇಮಾವತಿಯವರೆಗೆ ಪ್ರವಾಸ ಮಾಡಿದರೆ ತುಮಕೂರು ಜಿಲ್ಲೆಯಲ್ಲಿ ಒಣಗಿದ ಪೈರನ್ನು ಕಾಣುತ್ತೇವೆ ಮತ್ತು ಹೇಮಾವತಿಯಲ್ಲಿ ತುಂಬಿ ತುಳುಕುವ ನೀರು ಕಾಣುತ್ತೇವೆ. ಆ ನೀರನ್ನು ಒಣಗಿದ ಭೂಮಿಗೆ ಬಿಡುವುದಕ್ಕೆ ಸಾಮರ್ಥ್ಯ ಇಲ್ಲದೆ ಇರುವಂತಹ ಆಡಳಿತ ವ್ಯವಸ್ಥೆಯನ್ನೇ ನಾನು ಕರೆದಿದ್ದು ಅನ್ಯಾಯದ, ವಂಚನೆಯ, ಮೋಸದ, ನಿರಾಸಕ್ತಿಯ ಒಂದು ಪರಂಪರೆ ಎಂದು. ಸನ್ಮಾನ್ಯ ಅಧ್ಯಕ್ಷರೇ, ಇಷ್ಟು ಎಕರೆ ಜಮೀನು ಸಾಮರ್ಥ್ಯ ಇದ್ದರೂ ಕೂಡ ಉಪಯೋಗಿಸಿಕೊಳ್ಳುವುದಕ್ಕೆ ನಮ್ಮ ಕೈಯಲ್ಲಿ ಆಗಲಿಲ್ಲ ಎಂದು ನಾವು ಹೇಳುವಾಗ ಸನ್ಮಾನ್ಯ ಮುಖ್ಯಮಂತ್ರಿಗಳ ಕಳಕಳಿಯನ್ನು ನಾನು ಒಪ್ಪಿಕೊಳ್ಳುತ್ತೇನೆ. ಅವರು "4 ಲಕ್ಷ ಹೆಕ್ಟೇರ್ ಪ್ರದೇಶವನ್ನು 1993–94ರಲ್ಲಿ ನೀರಾವರಿ ಬಳಕೆ ವ್ಯಾಪ್ತಿಗೆ ತರಲಾಗುವುದು" ಎಂದು ಹೇಳಿದ್ದಾರೆ. ಅದಕ್ಕೆ ನಾನು ಹೇಳಿದ್ದು at this rate ಈ ವರ್ಷ ನಿಮ್ಮ ಟಾರ್ಗೆಟ್ 1.4 ಲಕ್ಷ ಹೆಕ್ಟೇರ್ಸ್.

With this in order, If you want to bring, 12,44,000 Hectares under irrigation. ಅದಕ್ಕೆ ನಾನು ಹೇಳಿದ್ದು ಐದು ವರ್ಷಗಳಲ್ಲಿ ನಿಮ್ಮ ಪ್ರಕಾರವೇ ಸಾಧ್ಯವಿಲ್ಲ ಎಂದು. ಅದಕ್ಕಾಗಿ ನಾನು ಸರ್ಕಾರದಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇನೆ. ಮಾಮೂಲಿ ಕಾರ್ಯಕ್ರಮದಿಂದ ಇದು ಸಾಧ್ಯವಾಗುವುದಿಲ್ಲ. ಸಾಂಪ್ರದಾಯಿಕವಾದಂಥ ನಮ್ಮ ನೀತಿ ನಡವಳಿಕೆ, ನಮ್ಮ ಕಾರ್ಯಕ್ರಮ, ನಮ್ಮ ವ್ಯವಸ್ಥೆ ಏನಿದೆಯೋ ಸಾಂಪ್ರದಾಯಿಕವಾದುದು ಎಂದು ನಾನು ಹೇಳುತ್ತೇನೆ, ಇದರಿಂದ ನೀವು ಸಾಧಿಸುವುದಕ್ಕೆ ಸಾಧ್ಯವಿಲ್ಲ. ಇದಕ್ಕೆ ಹೊರತಾಗಿ ನೀವು ಏನಾದರೂ ಮಾಡುವುದಾದರೆ ದಯವಿಟ್ಟು ಮಾಡಿ ಎಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇನ್ನು ದುಡ್ಡನ್ನು ಒದಗಿಸುವುದು; ಕೇವಲ ಕೆಲಸ

ಮಾಡುವುದರಲ್ಲಿ ಅಷ್ಟರಲ್ಲೇ ಮೋಸ ಹೋಗಿಲ್ಲ ನಮ್ಮ ರೈತಾಪಿ ಜನರು, ಹಣವನ್ನು ಒದಗಿಸುವುದರಲ್ಲೂ ಕೂಡ ಅನೇಕ ವರ್ಷಗಳಿಂದ ಈ ಅಂಕಿಅಂಶಗಳ ಮಾಯಾಜಾಲದಲ್ಲಿ ನಮ್ಮ ಜನರನ್ನು ಸಿಕ್ಕಿಸಿ ತೊಳಲಾಡಿಸಿದರು. ಸ್ವಾಮಿ, ಇವರು ನೀರಾವರಿಗೆ 900 ಕೋಟಿ, ವಿದ್ಯುಚ್ಛಕ್ತಿಗೆ 700 ಕೋಟಿ ಕೊಡುತ್ತೇವೆ. ಈ ರಾಜ್ಯದ ಜನತೆಯ ಅಭ್ಯುದಯಕ್ಕೆ ಕೊಡುತ್ತೇವೆ ಎಂದು ಆಶ್ವಾಸನೆ ಕೊಟ್ಟಿದ್ದಾರೆ. ಎಲ್ಲಿದೆ ದುಡ್ಡು? ನಾನು ತಮ್ಮ ಮುಖಾಂತರ ಸರ್ಕಾರದ ಗಮನಕ್ಕೆ ಒಂದು ಅಂಕಿಅಂಶವನ್ನು ತಂದರೆ ಆಗ ಈ ರಾಜ್ಯದ ಜನತೆಗೆ ಗೊತ್ತಾಗುತ್ತದೆ. ಇದೆಷ್ಟು ಮೋಸದ ಅಂಕಿ ಅಂಶಗಳು, ಅಷ್ಟೇ ಅಲ್ಲ ಹಿಂದಿನಿಂದ ನಡೆದುಕೊಂಡು ಬಂದಿರುವಂಥ ಈ ಮೋಸದ ಪರಂಪರೆ, ಈ ಮೋಸದ ನಡವಳಿಕೆ ಈ ವರ್ಷ ಕೂಡ perpetuate ಆಗಿದೆ ಎನ್ನುವುದನ್ನು ನಾನು ನಿಮಗೆ ಹೇಳುತ್ತೇನೆ. ಈ ವರ್ಷ ನಿಮ್ಮ ಆಯವ್ಯಯಕ್ಕೆ ನೀವು ಇಟ್ಟಿರುವಂಥ ದುಡ್ಡು 3025 ಕೋಟಿ; ಬರೆದುಕೊಳ್ಳಿ ಸ್ವಾಮಿ. ಈ 3025 ಕೋಟಿಯಲ್ಲಿ ನಿಮಗ ಸಾಲ ಮರುಪಾವತಿ, ವೇತನ, ಸಹಾಯಧನಗಳು, ನಿವೃತ್ತಿವೇತನ ಇವಕ್ಕೆ 53.30 ಕೋಟಿ ರೂಪಾಯಿ ಹೊರಟುಹೋಗುತ್ತದೆ. This is excluding the normal maintenance and non-developmental expenditure. ಅಭಿವೃದ್ಧಿಯೇತರ ವೆಚ್ಚಗಳು ಮತ್ತು ಸಾಮಾನ್ಯ ನಿರ್ವಹಣೆ – ಈ ಎರಡನ್ನು ಹೊರತುಪಡಿಸಿದರೆ ಶೇಕಡ 53. ಇವೆರಡನ್ನೂ ಸೇರಿಸಿದರೆ ಕಳೆದ ವರ್ಷ ಅದು 67 ಪರ್ಸೆಂಟ್. ಈ ವರ್ಷಕ್ಕೆ ನನ್ನ ಪ್ರಕಾರ 73 ಪರ್ಸೆಂಟ್ ಆಗುತ್ತದೆ. ಅದು ತಪ್ಪೋ ಸರಿಯೋ ಎಂದು ಅಧಿಕಾರಿಗಳು ಲೆಕ್ಕ ಹಾಕಿ ಹೇಳಬೇಕು. 3025 ಕೋಟಿಯಲ್ಲಿ 73 ಭಾಗ ಅಭಿವೃದ್ಧಿಯೇತರ ವೆಚ್ಚಗಳಿಗೆ ಮಾಡುತ್ತೀರಿ. ನಾನು ಲೆಕ್ಕ ಮಾಡಿದೆ, ಈ 73 ಭಾಗವನ್ನು ನಿಮ್ಮ 3025 ಕೋಟಿಯಲ್ಲಿ ಕಳೆದರೆ ನಿಮಗೆ ಉಳಿದುಕೊಳ್ಳುವಂಥ ಹಣ 1009 ಕೋಟಿ ರೂಪಾಯಿ.

If this is wrong, I am prepared to take a bet. 3025ರಲ್ಲಿ 53 ಪರ್ಸೆಂಟ್ + 20 ಪರ್ಸೆಂಟ್, ಹೋದವರ್ಷ 67 ಪರ್‌ಸೆಂಟ್, ಈ ವರ್ಷದ ಗಾತ್ರ 3025, ಅದರಲ್ಲಿ 73 ಪರ್‌ಸೆಂಟ್ ಆಫ್ ದಿ 3025 ಈಸ್ 2016 ಕೋಟಿ. If you deduct 2016 crores, the amount that will be remaining is 1009 crores. ನಿಮಗೆ ಹಣ ಎಲ್ಲಿದೆ ? ಏತಕ್ಕೆ ಈ ದೇಶದ ಜನರಿಗೆ ಮೋಸ ಮಾಡುತ್ತೀರಿ ? ಏತಕ್ಕೆ ಅಂಕಿಅಂಶಗಳ ಮಾಯಾಜಾಲದಲ್ಲಿ ತೊಳಲಾಡಿಸುತ್ತಿದ್ದೀರಿ. ಅವತ್ತು ನಂಬಿಕೆ ಇಟ್ಟುಕೊಳ್ಳಬೇಕು, ಮುಗಿಸುವುದಕ್ಕಾಗುವುದಿಲ್ಲ ಎಂದು ಹೇಳಿದರು. ನಂಬಿಕೆಯನ್ನೇ ಇಟ್ಟುಕೊಂಡು ನಾವು ಬದುಕುವುದಕ್ಕೆ ಸಾಧ್ಯವಾಗುವುದಿಲ್ಲ. ಈ 1009 ಕೋಟಿ ಮಾತ್ರ ಹಣ ಉಳಿಯುವಂತಹ ಬಜೆಟನ್ನು ನಮ್ಮ ಮುಂದಿಟ್ಟುಕೊಂಡು, ಆಯವ್ಯಯವನ್ನು ಮುಂದಿಟ್ಟುಕೊಂಡು 900 ಕೋಟಿ ರೂಪಾಯಿಗಳನ್ನು ನಾವು ನೀರಾವರಿಗೆ ಒದಗಿಸುತ್ತೇವೆ ಎಂದು ಹೇಳುವಂಥ ಮಾತನ್ನು ಬಹುಶಃ ಈ ರಾಜ್ಯದ ಅತ್ಯಂತ ಆರ್ಥಿಕ ತಜ್ಞರಲ್ಲ, ಆರ್ಥಿಕ ಸಮೀಕ್ಷೆಯ ಪರಿಣಿತರಲ್ಲ, ಜನಸಾಮಾನ್ಯರು ಕೂಡ ಈ ಮಾತನ್ನು ನಂಬಲಿಕ್ಕೆ ಸಿದ್ಧರಿಲ್ಲ, ಇದರ ಜೊತೆಗೆ ಬಹುಶಃ ಹಿಂದಿನ ಅಂಕಿಅಂಶಗಳನ್ನು ನಾವು ತೆಗೆದುಕೊಂಡು ನೋಡಿದರೆ ಇತ್ತೀಚಿನ ವರ್ಷಗಳಲ್ಲಿ ಯಾವುದಾದರೂ ಒಂದು ವರ್ಷ ನೀರಾವರಿಗೆ ಒದಗಿಸಿರುವಂಥ ಹಣವನ್ನು ಸಂಪೂರ್ಣವಾಗಿ ಇವರು ಖರ್ಚು ಮಾಡಿಲ್ಲ. ಮತ್ತೆ ಇವರ ಆರ್ಥಿಕ ಅಂಕಿಅಂಶಗಳ ಮಾಯಾಜಾಲವನ್ನು ಕೂಡ ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಪೇಜ್ ನಂಬರ್ 66ರಲ್ಲಿದೆ. 1992-93ರಲ್ಲಿ ಅಂದಾಜು 60,34,447 ಲಕ್ಷ. ಇವರು ಖರ್ಚು ಮಾಡಿರುವಂಥ ಹಣ ಎಷ್ಟು ಎಂದರೆ 25,900,80 ರೂಪಾಯಿಗಳು. 60 ಲಕ್ಷದಲ್ಲಿ ಇವರು ಖರ್ಚು ಮಾಡಿರುವುದು 25 ಲಕ್ಷ. ಅದಕ್ಕಾಗಿ ನಾನು ಇದು ವಂಚನೆಯ ಪರಂಪರೆಯನ್ನು ಮುಂದುವರಿಸಿಕೊಂಡು ಬಂದಿರುವಂಥ ಸರ್ಕಾರ, ಮೋಸದ ಪರಂಪರೆಯನ್ನು ಪರ್‌ಪೆಚುಯೇಟ್ ಮಾಡಿಕೊಂಡು ಬಂದಿರುವಂಥ ಸರ್ಕಾರ ಎಂದು ಹೇಳಿದ್ದುದು. ಗುರಿ 60 ಲಕ್ಷದ 3,447 ಸಾಧನೆ

25 ಲಕ್ಷದ 9080. ಏನು ಮಾಡಬೇಕು ? ಇದು ಕಳೆದ ವರ್ಷದ ಕಥೆ. I feel this will be the worst during the next year. ಬೇರೆ ಯೋಜನೆಗಳ ರೂಪದಲ್ಲಿ ತಮಗೆ ಹೇಳಬೇಕು ಎಂದರೆ, ನೀವು ಅಲ್ಲಿ ಕುಳಿತುಕೊಳ್ಳದಿದ್ದರೆ ಚೆನ್ನಾಗಿ ಇರುತ್ತಿತ್ತು ಎಂದು ಕಾಣುತ್ತಿದೆ. ನೀವು ಇಲ್ಲಿ ಕುಳಿತು ಮಾತನಾಡುವುದಕ್ಕೆ ಚೆನ್ನಾಗಿ ಇರುತ್ತಿತ್ತು. ನಿಮಗೆ ಸ್ವಲ್ಪ ನೇರವಾದ ವಿಷಯ. ಅಂಕಿ ಅಂಶಗಳ ಮಾಯಾಜಾಲದಲ್ಲಿ ನಮ್ಮನ್ನು ಮಂತ್ರಮುಗ್ಧರನ್ನಾಗಿ ಮಾಡುತ್ತಾ ಇರುವಂತಹ ಸರ್ಕಾರದ ಮತ್ತೊಂದು ಉದಾಹರಣೆ. ಇದನ್ನು ನೋಡಿ ನಾವು ಹೊಟ್ಟೆ ತುಂಬಿಸಿಕೊಳ್ಳಬೇಕು. ಇದು ಕನ್ನಡಿಯೊಳಗಿನ ಗಂಟು. 1992–93ನೇ ಸಾಲಿನ ಆರ್ಥಿಕ ಗುರಿ ಮತ್ತು ಸಾಧನೆ: ಯೋಜನೆವಾರು ವಿವರಗಳು ಈ ಕೆಳಕಂಡಂತೆ ಇವೆ. 61ನೇ ಪುಟ ಮಾನ್ಯ ಅಧ್ಯಕ್ಷರಿಗೆ ಸಂಬಂಧಪಟ್ಟಿದ್ದು, ನನಗೆ ಸಂಬಂಧಪಟ್ಟಿದ್ದು 3ನೇ ಐಟಂ, ಹೇಮಾವತಿ ಕಾಲುವೆ ಸಾಧನೆ ಮತ್ತು ಗುರಿ ಯೋಜನೆವಾರು ವಿವರ. ತಾವು ಸ್ವಲ್ಪ ದಯಮಾಡಿ ನೋಡಿ. ಅನುದಾನ 82.83 ಲಕ್ಷ ರೂಪಾಯಿಗಳು. ವೆಚ್ಚ ನಾನು ಹೇಳಿರುವುದಲ್ಲ, ಸರ್ಕಾರವೇ ಹೇಳಿರುವುದು 17 ಲಕ್ಷ 82 ಸಾವಿರ. ನಾನು ಇದನ್ನು ಹುಟ್ಟು ಹಾಕಿಕೊಂಡು ಹೇಳುತ್ತಿಲ್ಲ. ಪುಸ್ತಕದಲ್ಲಿ ಹೇಳುತ್ತದೆ. ಇನ್ನೂ ಮುಂದಕ್ಕೆ ಹೇಳುತ್ತೇನೆ. ಅದು ಹೇಮಾವತಿ ಯೋಜನೆಗೆ ಸಂಬಂಧಪಟ್ಟಿದ್ದು. ಹೇಮಾವತಿ ತುಮಕೂರು ಕಾಲುವೆಗೆ ಎಷ್ಟು ಕೊಟ್ಟಿದ್ದಾರೆ ಎಂದು ತಮ್ಮ ಗಮನಕ್ಕೆ ತರುತ್ತೇನೆ. ಏಕೆಂದರೆ ನಿಮ್ಮ ಕ್ಷೇತ್ರಕ್ಕೆ ನೀರು ಬರಬೇಕಲ್ಲ. ಒಂದು ತಿಂಗಳ ವಿವರ ಮಾತ್ರ ಕೊಡುತ್ತೇನೆ, ಸ್ವಾರಸ್ಯವಾಗಿದೆ. ಅಕ್ಟೋಬರ್ 1992, ಅನುದಾನ 1544 ಲಕ್ಷ ರೂಪಾಯಿಗಳು. ಖರ್ಚು ಆಗಿರುವುದು 467, ಬಿಡುಗಡೆ ಆಗಿರುವುದು 2 ಲಕ್ಷದ 48 ಸಾವಿರ ರೂಪಾಯಿಗಳು. Am I lying? Can you not substantiate with me now that we are deceiving the people with this figures?

ಯಾವ ಮೂರು ಲಕ್ಷ ಎಕರೆ ತುಮಕೂರಿನ ಜಮೀನಿಗೆ ನೀರು ಬರುವಂಥ ಕೆಲಸದ ಅವಶ್ಯಕತೆ ಇದೆ ಎಂದು ಹೇಳಿ, ನಾನು ಕಾನೂನಿಗೆ ವಿರುದ್ಧವಾಗಿಯಾದರೂ ಹೋಗಿ ಚೀಫ್ ಇಂಜಿನಿಯರ್ ಆಫೀಸ್ ಬಾಗಿಲು ಹಾಕಿಸಿದ್ದೆನೋ ಅದರಿಂದಲೂ ಸಾರ್ಥಕ ಆಗಲಿಲ್ಲ. ಯಾವ ಕಾಲುವೆ ಕೆಲಸಗಳಿಗೋಸ್ಕರ ನಾನು ಕ್ರಿಮಿನಲ್ ಕೇಸ್ ಹಾಕಿಸಿಕೊಳ್ಳುವಂತಹ ಹಂತಕ್ಕೆ ಹೋದೆನೋ ಅದರಿಂದಲೂ ಸಾರ್ಥಕ ಆಗಲಿಲ್ಲ. ಒಂದು ತಿಂಗಳಿಗೆ ಎರಡು ಲಕ್ಷ ರೂಪಾಯಿ ಕೊಡುತ್ತೀರ ? ಒಂದು ವರ್ಷದಲ್ಲಿ ನಾನು ಗ್ಯಾಪನ್ನು ಕಡಿಮೆ ಮಾಡುತ್ತೇನೆ ಎಂದು ಆಶ್ವಾಸನೆ ಕೊಟ್ಟು ಅಂಧಕಾರಕ್ಕೆ ಈ ಜನರನ್ನು ತಳ್ಳುತ್ತೀರಾ ! ವರ್ಷದಲ್ಲಿ ಇವರು ಮಾಡಿರತಕ್ಕ ಅನುದಾನ 4891 ಲಕ್ಷ ರೂಪಾಯಿಗಳು. ಖರ್ಚು ಮಾಡಿರುವುದು, 4533, ಬಿಡುಗಡೆ ಮಾಡಿರುವುದು 3894 ಲಕ್ಷ ರೂಪಾಯಿಗಳು. ಇನ್ನೂ ಎಷ್ಟು ಅಂಕಿಅಂಶಗಳನ್ನು ಈ ಸರ್ಕಾರದ ಮುಂದೆ ಇಡುವುದರಿಂದ ಪ್ರಯೋಜನ ಇಲ್ಲ. I think I have convinced the Government. ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆ ಎಂದರೆ, ಅಂದಿನಿಂದ ಇಂದಿನವರೆಗೆ ಒಂದೇ ಸಮನಾಗಿ ರಾಜಕೀಯದಲ್ಲಿ ಹಣ ಒದಗಿಸುವುದರಲ್ಲಿ, ರೈತರ ಹಿತಾಸಕ್ತಿ ಕಾಪಾಡುವ ವಿಚಾರದಲ್ಲಿ ಹೇಳುತ್ತೇನೆ. ಹಣ ಒದಗಿಸುವ ವಿಚಾರ ಮೂರನೆ ಭಾಗ, ಅದಕ್ಕೆ ಅನಂತರ ಬರುತ್ತೇನೆ. ಆದ್ದರಿಂದ ಈ ಸರ್ಕಾರ ನಮ್ಮ ಜನಗಳಿಗೆ ಹಣ ಒದಗಿಸುವುದರಲ್ಲಿ ಮೋಸ ಮಾಡಿದೆ, ಕೆಲಸ ಮಾಡಿಸುವುದರಲ್ಲಿ ಮೋಸದ ಪರಂಪರೆಯನ್ನು ಸೃಷ್ಟಿ ಮಾಡಿದೆ ಎನ್ನುವುದನ್ನು ಹೇಳುತ್ತೇನೆ. ಇನ್ನು ರಾಜಕೀಯವಾಗಿ ಈ ರಾಜ್ಯದ ಎರಡೂ ಯೋಜನೆಗಳ ಕೆಳಗಡೆ ಬರತಕ್ಕ ರೈತರ ಹಿತವನ್ನು ಕಾಪಾಡುವುದರಲ್ಲಿ ಕೂಡ ನಾವು ಸತತವಾಗಿ ಸೋತಿದ್ದೇವೆ, ನಾವು ಸತತವಾಗಿ ವಿಫಲರಾಗಿದ್ದೇವೆ. ನಿಮಗೆ ಆಸಕ್ತಿಯನ್ನು ಕೆರಳಿಸುವುದಕ್ಕೆ ಒಂದು ಮಾತು ಹೇಳುತ್ತೇನೆ. 'Note on Cauvery water issue' ಅದರಲ್ಲಿ ಕಾನ್‌ಫಿಡೆನ್ಷಿಯಲ್ ಎಂದು ಅದರ ಮೇಲುಗಡೆ ಬರೆದಿದ್ದಾರೆ. ನಾನು ಕಳ್ಳತನ ಮಾಡಿದ್ದೇನೆಂದು ಬೇಕಾದರೆ ಅದಕ್ಕೂ ನನ್ನ ಮೇಲೆ ಈ ಸರ್ಕಾರ ಒಂದು ಕೇಸ್

ರಿಜಿಸ್ಟರ್ ಮಾಡುವುದಾದರೆ I have no objection. ಕಾವೇರಿ ಕಣ್ಣೀರಿನ ಕಥೆಯನ್ನು ಇದರಲ್ಲಿ ನಾವು ಓದಬೇಕಾಗುತ್ತದೆ. ಈ ಕಣ್ಣೀರಿನ ಕಥೆ ಎನ್ನುವುದು, ಕೆಲಸ ಶುರು ಆಗಿರುವುದು This relates to prior 1838.

ಅವತ್ತಿನಿಂದ ಇವತ್ತಿನವರೆಗೆ ನಡೆದುಕೊಂಡು ಬಂದಿರುವಂತಹ ವಿದ್ಯಮಾನಗಳು; ನಡವಳಿಕೆಗಳು. ನಮ್ಮ ಸೋಲು ನಮ್ಮ ವಿಫಲತೆ ಎಲ್ಲವನ್ನೂ ಕೂಡ ಇದರಲ್ಲಿ ದಾಖಲು ಮಾಡಲಾಗಿದೆ.

ಅದರ ಜೊತೆಗೆ ಸನ್ಮಾನ್ಯ ಬಂಗಾರಪ್ಪನವರು ನಮಗೆ ಒಂದು ಮಾಹಿತಿಯನ್ನು ಒದಗಿಸಿದ್ದಾರೆ. Caption is very good. ನೀರಿಗಾಗಿ ಶತಮಾನದ ತೀರದ ಬವಣೆ. ಇದನ್ನು ನೋಡಿದರೆ ಚಾಜಕೀಯವಾಗಿಯೂ ಕೂಡ ಈ ಎರಡು ಕಣಿವೆಗಳಲ್ಲಿ ಬರುವ ರೈತರ ಹಿತಾಸಕ್ತಿಯನ್ನು ನಾವು ಕಾಪಾಡುವಲ್ಲಿ ಎಲ್ಲಾ ಹಂತದಲ್ಲಿ ವಿಫಲರಾಗಿದ್ದರೆನ್ನುವುದು ನಮ್ಮ ಗಮನಕ್ಕೆ ಬರುತ್ತದೆ. ನಾನು ಆಗಲೇ ಹೇಳಿದೆ; ಬ್ರಿಟಿಷರ ಕಾಲದಲ್ಲಿಯೂ ಕೂಡ ನಮಗೆ ಅನ್ಯಾಯವಾಗಿದೆ ಎಂದು. ಈ ಒಪ್ಪಂದಗಳ ಹೇರಿಕೆ ಕರ್ನಾಟಕದ ಅಂದಿನ ಸಾಮಂತ ರಾಜರ ಮೇಲೆ ಸೇಡು ತೀರಿಸಿಕೊಳ್ಳಲು ಬ್ರಿಟಿಷ್ ಸರ್ಕಾರ ನಿಯೋಜಿಸಿದ ತಂತ್ರವೆಂದು ಸ್ಪಷ್ಟವಾಗುತ್ತದೆ; either it is 1829 agreement or 1924 agreement. ಇದು ಯಾವುದರಲ್ಲಾದರೂ ಕೂಡ ಈ ಒಂದು ಒಪ್ಪಂದದ ತಂತ್ರದಿಂದಾಗಿ ಅಂದಿನ ಮೈಸೂರು ರಾಜ್ಯದಲ್ಲಿ ಕೈಗೊಳ್ಳಬೇಕಾಗಿರುವ ಎಲ್ಲಾ ನೀರಾವರಿ ಯೋಜನೆಗಳ ಮೇಲೆ ನಿಯಂತ್ರಣ ಸಾಧಿಸಿದಂಥ ಒಂದು ಪರಂಪರೆಯನ್ನು ಇದರಲ್ಲಿ ನಾವು ಕಾಣಬಹುದು. ಈ ವಿಷಯ ಕೋರ್ಟಿನ ಮುಂದಿರುವುದರಿಂದ, ಕಾನೂನಿನ ವ್ಯಾಪ್ತಿಗೆ ನಾನು ಕೈ ಹಾಕುವುದಿಲ್ಲ. ಆದರೆ, ಒಂದು ವಿಷಯ ನಾನು ಹೇಳುತ್ತೇನೆ. 1924ರ ಒಪ್ಪಂದ ಏನಿದೆ, that is an agreement between the then British Government and the Maharaja of Mysore. I know the Constitutiona Law. The agreement between the two sovereign governments, the successive governments should accept it. But, this is not an agreement between the two soverign states. This is an agreement between the Maharaja, he was not an elected man; and it is an agreement between again another party which is the British Government. Then, why should we honour this? If it is an agreement between the two governments duly elected by the people, I can understand. ಈ ಒಂದು ನಡವಳಿಕೆಗೂ ಒಪ್ಪದಿರುವಂಥ ಒಂದು ಒಪ್ಪಂದದ ಆಧಾರದ ಮೇಲೆ ಈ ರಾಜ್ಯದ ಹಳೆಯ ಮೈಸೂರು ಪ್ರದೇಶದಲ್ಲಿ ಮೊದಲು ಮಾಡಬೇಕಾಗಿದ್ದಂಥ ನೀರಾವರಿಯ ಎಲ್ಲಾ ಕೆಲಸಗಳ ಮೇಲೆ ನಿಯಂತ್ರಣವಿಟ್ಟುಕೊಂಡಿದ್ದಾರೆ.

ಸನ್ಮಾನ್ಯ ಅಧ್ಯಕ್ಷರೆ, ತಮಗೆ ಆಗಲೇ ಹೇಳಿದೆ. ಈ ಅನ್ಯಾಯ ಎಷ್ಟರ ಮಟ್ಟಿಗೆ ಪರ್‌ಪೆಚುಯೇಟ್ ಆಗಿದೆಯೆಂಬುದರ ಬಗ್ಗೆ ತಮಗೆ ಮನವರಿಕೆ ಮಾಡಿಕೊಡಲು ಅವರೇ ಕೊಟ್ಟಿರುವ ಒಂದೇ ಒಂದು ಅಂಕಿ–ಅಂಶವನ್ನು ನಾನು ತಮ್ಮ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ಕಾವೇರಿ ನದಿ ಹರಿಯುವಂಥ ಕಡೆ ಯಾವ್ಯಾವ ರಾಜ್ಯದಿಂದ ಎಷ್ಟೆಷ್ಟು ನೀರು ಕಾಂಟ್ರಿಬ್ಯೂಷನ್ ಆಗುತ್ತಿದೆ ಎನ್ನುವುದಕ್ಕೆ ಇಲ್ಲಿ ಒಂದು ಮಾಹಿತಿ ಕೊಟ್ಟಿದ್ದಾರೆ. 700 ಟಿ.ಎಂ.ಸಿ.ಯಲ್ಲಿ ಕರ್ನಾಟಕದ ಕಾಣಿಕೆ 53.8 ಭಾಗ, ತಮಿಳುನಾಡಿನ ಕಾಣಿಕೆ 31.9 ಭಾಗ, ಕೇರಳ ರಾಜ್ಯದ ಕಾಣಿಕೆ 14.3 ಭಾಗ. ಕಾವೇರಿ ನದಿಯಲ್ಲಿ ಹರಿಯುತ್ತಿರುವಂಥ ನೀರಿಗೆ, ಅದಕ್ಕಾಗಿ ಕರ್ನಾಟಕ ರಾಜ್ಯದಲ್ಲಿ ಬೀಳುವಂಥ ನೀರಿನಿಂದ ಕೊಡುತ್ತಿರುವಂಥ ಕೊಡುಗೆ 53 ಭಾಗವಾಗಿದೆ. 1881ರಲ್ಲಿ ಬ್ರಿಟಿಷ್ ಸಂಜಾತ ಮೈಸೂರು ಪ್ರಜಾಪ್ರತಿನಿಧಿ ಸಭೆಯಲ್ಲಿ ಪ್ರತಿಪಾದನೆ

ಕೊಟ್ಟಿರತಕ್ಕ ಒಂದು ಪದವನ್ನು ನಾನು ಇಲ್ಲಿ ಓದುತ್ತೇನೆ. ಅದೇನೆಂದರೆ ಶತಶತಮಾನಗಳಿಂದ ನಡೆದಿರುವ ಕಾವೇರಿ ಕಣಿವೆಯ ಮೇಲುಭಾಗದ ರೈತರ ಶೋಷಣೆ ನಿಲ್ಲಬೇಕು, This is an official record. ಶತಶತಮಾನಗಳಿಂದ ಕಾವೇರಿ ಕೊಳ್ಳದ ಜನರು ಶೋಷಣೆಗೆ ಗುರಿಯಾಗಿದ್ದಾರೆ ಎನ್ನತಕ್ಕದ್ದನ್ನು ನಾವೆಲ್ಲರೂ ಒಪ್ಪಿಕೊಳ್ಳುತ್ತೇವೆ. ನಾನು ಈ ಸದನಕ್ಕೆ ಬಂದು 8–9 ತಿಂಗಳಾಯಿತು. ನಾನು ಸತತವಾಗಿ ಈ ಒಂದೇ ವಿಷಯದಲ್ಲಿ ಸರ್ಕಾರಕ್ಕೆ ಹೇಳುತ್ತಿದ್ದೇನೆ, ತಾವು ಏನು ಮಾಡದಿದ್ದರೂ ಪರವಾಗಿಲ್ಲ ಕೊನೆಯ ಪಕ್ಷ ಒಂದು ಸಭೆಯನ್ನು ಕರೆದು ಅದರ ಬಗ್ಗೆ ಏನಾಗಿದೆ ಎಂಬುದನ್ನು ಹೇಳಿ ಎಂದು. What is happening before the Court? What is the stand of this government? What is the special arrangement you have made to protect the interests of the state? No, they have not done. ಆದರೆ ಅದನ್ನು ಮಾಡಿಲ್ಲ, ಇದು ಕಾವೇರಿ ಕಣ್ಣೀರಿನ ಕಥೆಯಾದರೆ ಇನ್ನು ಕೃಷ್ಣೆಯದ್ದು, ನಾರಾಯಣಪುರ ಕೆರೆಯನ್ನು ಕಟ್ಟಿ 10 ವರ್ಷವಾಯಿತು, ಉಳಿದ ವಿಷಯದ ಬಗ್ಗೆ ವಿವರಣಕ್ಕೆ ಹೋಗುವುದಿಲ್ಲ. ಒಂದು ವಿಷಯದ ಬಗ್ಗೆ ಉಪಮುಖ್ಯಮಂತ್ರಿಗಳು ಕ್ಲಾರಿಫೈ ಮಾಡುತ್ತಾರೆಯೋ ಎಂಬ ಬಗ್ಗೆ ಅನುಮಾನವಿದೆ. Creation of potentiality is at what stage?

ಶ್ರೀ ಜೆ.ಸಿ. ಮಧುಸ್ವಾಮಿ:– ಇವತ್ತು ತಾವು ಉಪಮುಖ್ಯಮಂತ್ರಿ ಎಂಬ ಪದವನ್ನು ಬಳಸುತ್ತಿದ್ದೀರಲ್ಲಾ, ಒಂದು ಕಾಲದಲ್ಲಿ ಅವರು ಉಪಮುಖ್ಯಮಂತ್ರಿ ಅಲ್ಲ ಎಂದು ಚಾಲೆಂಜನ್ನು ಮಾಡಿದ್ದಿರಿ. ಆದರೆ ಇವತ್ತು ಉಪಮುಖ್ಯಮಂತ್ರಿಯೆಂದು ಹೇಳುತ್ತಿದ್ದೀರಲ್ಲ ?

ಶ್ರೀ ವೈ.ಕೆ. ರಾಮಯ್ಯ:– ಹೇಳುತ್ತೇನೆ. Nothing is static. Every thing is dynamic. ನಾನು ಇದರ ಬಗ್ಗೆ ಬಹಳ ಆಳವಾಗಿ ಆಲೋಚನೆ ಮಾಡಿರತಕ್ಕದ್ದು ನಿಜ. ಇದರ ಬಗ್ಗೆ ಎಲ್ಲಿಯವರೆಗೆ ಹೋಗಿದ್ದೆ ಎಂದರೆ, ಉಪಮುಖ್ಯಮಂತ್ರಿ ಕೃಷ್ಣ ಇರಲಿ, ರಂಗನಾಥ್‌ರವರಿರಲಿ, ರಾಜುಗೌಡರು ಇರಲಿ, ಅದು ಪ್ರಶ್ನೆಯಲ್ಲ, ನನ್ನ ಮನಸ್ಸಿಗೆ ಸಮಾಧಾನವನ್ನು ತಂದುಕೊಳ್ಳಲು, ಅದನ್ನು ಪರಿಹರಿಸಿಕೊಳ್ಳಲು ಅದನ್ನು ಕೇಳಿದೆ. ನಾನು ತಮಾಷೆಗೆ ಹೇಳುತ್ತೇನೆ, ಅದರ ಬಗ್ಗೆ ನಾನು ರಿಟ್ಟನ್ನು ಹಾಕಲೂ ಸಹ ಹೋಗಿದ್ದೆ. ನನ್ನ ಸ್ನೇಹಿತರೊಂದಿಗೆ ತಮಾಷೆಯಿಂದ ಮಾತನಾಡುತ್ತಾ ಕುಳಿತಿದ್ದಾಗ, ನನ್ನ ಅಡ್ವೋಕೇಟ್ ಫ್ರೆಂಡ್ ಒಬ್ಬರು ಒಂದು ಮಾತು ಹೇಳಿದ್ದರು. 'How did you swear as a State Minister of this State?' ಅದಕ್ಕೆ ಯಾವ ಕಾನ್‌ಸ್ಟಿಟ್ಯೂಷನ್ ಇದೆ ಎಂದು ಕೇಳಿದರು. ಏಕೆಂದರೆ ಹಿಂದೆ ನಾನು ರಾಜ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕಾರ ಮಾಡಿಕೊಳ್ಳುವ ಸಂದರ್ಭದಲ್ಲಿ ಸಂವಿಧಾನವನ್ನು ನಾನು ಓದಿದ್ದೇನೆ. ಸಂವಿಧಾನದಲ್ಲಿರುವುದು ಕೇವಲ ಮಿನಿಸ್ಟರ್ ಮತ್ತು ಚೀಫ್ ಮಿನಿಸ್ಟರ್ ಎಂದು ಮಾತು. ನಾನು ರಾಜ್ಯಮಂತ್ರಿ ಎಂದು ಕೆಲಸ ಮಾಡಿದ್ದೇನೆ. ಆದ್ದರಿಂದ ಇದರ ಬಗ್ಗೆ ಹೆಚ್ಚು ಚರ್ಚೆ ಬೇಡ. ಉಪಮಂತ್ರಿ ಎಂಬುದು ಇಲ್ಲದಿದ್ದರೂ ಕೂಡ ನಾವು ಅದನ್ನು ನಮ್ಮ ಪದ್ಧತಿಯಲ್ಲಿ ಅಳವಡಿಸಿಕೊಂಡು ಬಂದಿದ್ದೇವೆ. We accept that he can be sworn as a Deputy Chief Minister.

ಶ್ರೀ ಪಾಟಾಳ್ ನಾಗರಾಜ್:– ನ್ಯಾಯಾಲಯಕ್ಕೆ ಹೋಗುವುದಿಲ್ಲವೆ.....

ಶ್ರೀ ವೈ.ಕೆ. ರಾಮಯ್ಯ:– ಇಲ್ಲ; ನ್ಯಾಯಾಲಯಕ್ಕೆ ಹೋಗುವುದು ಅಷ್ಟೇ ಅಲ್ಲ. ಬಹುಶಃ ಅವತ್ತು ನನ್ನದು ತಪ್ಪು ಭಾವನೆಯಾಗಿತ್ತೇನೋ. ನಾನು ಇದನ್ನು ಚರ್ಚೆ ಮಾಡಿದ ಮೇಲೆ ಅವರು ಉಪಮುಖ್ಯಮಂತ್ರಿ ಎಂದು ಪ್ರಮಾಣ ವಚನ ಸ್ವೀಕಾರ ಮಾಡತಕ್ಕದ್ದು ಸಂವಿಧಾನದ ಅಪಚಾರವಾಗುವುದಾದರೆ, ಅವತ್ತು ನಾನು ಮಾಡಿಕೊಂಡಿದ್ದೂ ಕೂಡ ಅಪಚಾರವೇನೋ ಎಂದು

ನಾನು ಅದನ್ನು ತಿದ್ದಿಕೊಂಡಿದ್ದೇನೆ. ಈಗ ಇದನ್ನು ಇಲ್ಲಿಗೇ ಬಿಡೋಣ. ನನಗೆ ಸ್ವಲ್ಪ ಮಟ್ಟಿಗೆ ಅವಕಾಶ ಬೇಕು. Nothing is static. Everything is dynamic.

ಶ್ರೀ ಪಟಾಳ್ ನಾಗರಾಜ್:- ಉಪಮುಖ್ಯಮಂತ್ರಿಗಳೆಂದು ನೀವು ಒಪ್ಪಿಕೊಳ್ಳಬೇಕೆಂದು ನಾವು ಅವತ್ತು ತಮಗೆ ಹೇಳಿದ್ದೆವು. ನಾನು ಇವರನ್ನು ಉಪಮುಖ್ಯಮಂತ್ರಿ ಎಂದು ಕರೆಯುವುದಿಲ್ಲವೆಂದು ಈ ಸದನದಲ್ಲಿ ಹೇಳಿದ್ದರು. ಆದರೆ ಇವತ್ತು ಇವರು ಹಾಗೆ ಕರೆದರಲ್ಲಾ ಎಂದು ನಮಗೆ ಸಂತೋಷವಾಯಿತು. ಈ ವಿಚಾರದಲ್ಲಿ ಮಾನ್ಯ ರಾಮಯ್ಯನವರು ಬದಲಾವಣೆ ಆದರಲ್ಲಾ ಎಂದು ನಮಗೆ ಸಂತೋಷ.

ಶ್ರೀ ವೈ.ಕೆ. ರಾಮಯ್ಯ:- ಹಾಗೆ ಕರೆಯಬೇಕೆ, ಬೇಡವೇ ಎಂದು ಅನುಮಾನ ಇದೆ ಎಂದು ನಾನು ಅವತ್ತು ಹೇಳಿದ್ದೆ. ಈಗ ಅದರ ಪರಿಹಾರವಾಯಿತು. ಈಗ ಆ ಚರ್ಚೆ ಬೇಡ. ಇನ್ನು ಕೃಷ್ಣಾ ನೀರಿನ ಬಗ್ಗೆ ವಿಧಾನ ಪರಿಷತ್ತಿನಲ್ಲಿ ಮಾನ್ಯ ಮಂತ್ರಿಗಳು ಅಪ್ಪಣೆ ಕೊಡಿಸಿದ್ದಾರೆ, ಕೃಷ್ಣಾ ನೀರಿನ ರಾಜ್ಯದ ಪಾಲಿನ ಪೂರ್ಣ ಬಳಕೆಯ ಭರವಸೆ ಎಂದು. ಇದನ್ನು ನೀವು ಮಾಡುತ್ತೀರಾ ? "ರಾಜ್ಯದ ಕೃಷ್ಣಾ ನದಿಯ ನೀರನ್ನು 2000ನೇ ಇಸವಿಯೊಳಗೆ ಸಂಪೂರ್ಣವಾಗಿ ಬಳಸಿಕೊಳ್ಳಲು ಸರ್ಕಾರ ಪ್ರಾಮಾಣಿಕ ಪ್ರಯತ್ನ ನಡೆಸಿದ್ದು, ಇದರ ಬಗ್ಗೆ ಯಾವುದೇ ಅನುಮಾನ ಬೇಡ" ಎಂದು ಹೇಳಿದ್ದಾರೆ.

Again I should say, ಇದು ಸಾಧ್ಯವಿಲ್ಲ. ಮಾನ್ಯ ಅಧ್ಯಕ್ಷರ ಮುಖಾಂತರ ಮಾನ್ಯ ಉಪಮುಖ್ಯಮಂತ್ರಿಗಳ ಗಮನಕ್ಕೆ ತರಬಯಸುತ್ತೇನೆ. ನೀವು ಮಾತ್ರವಲ್ಲ, ನಾನು ಮಾತ್ರವಲ್ಲ ಯಾರೇ ಮಂತ್ರಿ, ಉಪಮುಖ್ಯಮಂತ್ರಿ, ಮುಖ್ಯಮಂತ್ರಿಯಾದರೂ ಕೂಡ 2000ನೇ ಇಸವಿಯೊಳಗೆ ಕೃಷ್ಣಾ ಕೊಳ್ಳದ ಎಲ್ಲಾ ನೀರನ್ನೂ ಉಪಯೋಗ ಮಾಡಿಕೊಳ್ಳಲು ಸಾಧ್ಯವಿಲ್ಲ. By the way in which you have formulate the programmes for all these days, I don't believe that this is possible. 2000ನೇ ಇಸವಿಯೊಳಗೆ ನೀರನ್ನು ಪೂರ್ತಿಯಾಗಿ ಉಪಯೋಗ ಮಾಡಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ನಾನಾದರೂ ಹೇಳುತ್ತೇನೆ. ಇನ್ನೂ ಮೂರು ವರ್ಷ ಇದೆ. ಏತಕ್ಕೆ ಸಾಧ್ಯವಿಲ್ಲ ಎಂದರೆ, ಮೊನ್ನೆ ಅಂದರೆ ಕಳೆದ 3 ದಿವಸದ ಹಿಂದೆ ಮಾನ್ಯ ಉಪಮುಖ್ಯಮಂತ್ರಿಗಳು ದೂರದರ್ಶನದಲ್ಲಿ ಒಂದು ಸಂದರ್ಶನವನ್ನು ಕೊಟ್ಟರು. The greatest touch is the finance. This is the statistics that I have submitted before the House and I am expecting Rs. 4,000 crores of expenditure. How can you dare enough to declare that you are going to complete this project within 2000 A.D? ಇದು ನನಗಂತೂ ಸಾಧ್ಯವೆಂದು ಅನಿಸುವುದಿಲ್ಲ. ತಮ್ಮ ಹತ್ತಿರ ಯಾವುದಾದರೂ ಮಂತ್ರದಂಡ ಇದ್ದು ಒಂದು ಸಾರಿ ತಿರುಗಿಸಿದರೆ ಏರಿ ಆಗಬೇಕು, ಇನ್ನೊಂದು ಸಾರಿ ತಿರುಗಿಸಿದರೆ ಕಾಲುವೆ ಆಗಬೇಕು ಮತ್ತೊಂದು ಸಾರಿ ತಿರುಗಿಸಿದರೆ ತೂಬು ಆಗಬೇಕು ಎನ್ನುವ ರೀತಿಯಲ್ಲಿ ತಾವೇನಾದರೂ ಶ್ರೀಕೃಷ್ಣ ಪರಮಾತ್ಮನ ರೂಪದಲ್ಲಿ ಬಂದು ತಮ್ಮ ಚಕ್ರವನ್ನು ಬಿಟ್ಟು ಮಾಡಿದರೆ ಸಾಧ್ಯ ಆಗಬಹುದೇನೋ ನನಗೆ ಗೊತ್ತಿಲ್ಲ. ಆದರೆ ವಾಸ್ತವ ಸ್ಥಿತಿಗೆ ತಾವು ಇಳಿದುಬಂದರೆ, ನಿಜಸ್ಥಿತಿಯನ್ನು ವಿಶ್ಲೇಷಣೆ ಮಾಡಿದರೆ ನಿಮ್ಮ ಆರ್ಥಿಕ ಪರಿಸ್ಥಿತಿಯನ್ನು ನೀವೇ ಮತ್ತೊಂದು ಸಾರಿ ಪುನರಾಲೋಚನೆ ಮಾಡಿದರೆ ಈ ಕೆಲಸವನ್ನು ನಿಮ್ಮಿಂದ ಮಾಡುವುದಕ್ಕೆ ಸಾಧ್ಯವಿಲ್ಲ. ನಾನು ಈಗಾಗಲೇ ಹೇಳಿದೆ. Firstly, even from the outlay of this year's budget, ನಿಮಗೆ ಅಭಿವೃದ್ಧಿ ಕೆಲಸಗಳಿಗೆ ಉಳಿದುಕೊಳ್ಳುವುದೇ 1009 ಕೋಟಿ ರೂಪಾಯಿಗಳು. ಇದರಲ್ಲಿ ಇನ್ನೂ ಬೇರೆ ಬೇರೆ ಕೊರತೆ ಇರುತ್ತದೆ. ಮುಂದಿನ ವರ್ಷ ಮಾನ್ಯ ವೀರಪ್ಪಮೊಯ್ಲಿಯವರ ಸರ್ಕಾರದ ಅವಧಿ 1 ವರ್ಷ ಮುಗಿಯುತ್ತದೆ. ಅವರ ಸಾಧನೆಯ ಸಮಾವೇಶಕ್ಕೆ ಹಣ ಬೇಕಾಗುತ್ತದೆ. ಈಗಾಗಲೇ ರಾಜಕೀಯದ

ಅಸ್ಥಿರತೆ ಶುರುವಾಗಿದೆ. ನೀವು ಹೋಗಿ ಯಾವ ಸ್ವಾಮಿಗೆ ಇನ್ನೂ ಒಂದು ಕೋಟಿ ರೂಪಾಯಿ ಕಾಣಿಕೆ ಕೊಡಬೇಕೋ ಅದರ ಲೆಕ್ಕವನ್ನು ಹಾಕಿಲ್ಲ. ನಾನು ಇದು ಸಾಧ್ಯವಿಲ್ಲವೆಂದು ಏತಕ್ಕೆ ಹೇಳುತ್ತಿದ್ದೇನೆಂದರೆ, ಮೊನ್ನೆ ನನ್ನ ಪ್ರಶ್ನೆಗೆ ಉತ್ತರ ಕೊಡುವಾಗ ಮುಖ್ಯಮಂತ್ರಿಗಳು ಹೇಳಿರುವ ಒಂದೇ ಕಾರಣದಿಂದ ಇವರು ಇದನ್ನು ಕಾರ್ಯರೂಪಕ್ಕೆ ತರುವುದಕ್ಕಾಗುವುದಿಲ್ಲವೆಂಬುದಕ್ಕೆ ಸಾಕ್ಷ್ಯ.

ಛೇರ್ಮನ್:– ಮಾನ್ಯ ರಾಮಯ್ಯನವರೇ, ತಮಗೆ ಇನ್ನೂ ಎಷ್ಟು ಹೊತ್ತು ಬೇಕಾಗಬಹುದು.

ಶ್ರೀ ವೈ.ಕೆ. ರಾಮಯ್ಯ:– ಮಾನ್ಯ ಅಧ್ಯಕ್ಷರೇ, ನಾನು ನಿಯಮ 68ರ ಕೆಳಗಡೆ ಇದರ ಬಗ್ಗೆ ಚರ್ಚೆ ಮಾಡಬೇಕೆಂದು ಕೇಳಿದಾಗ ಆಯವ್ಯಯದ ಮೇಲೆ ಭಾಷಣ ಮಾಡುವಾಗ ಹೇಳಿ ಎಂದು ಹೇಳಿದರು. ಮತ್ತೆ ಬೆಳಿಗ್ಗೆ ಪ್ರಶ್ನೆಗೆ ಮತ್ತೊಂದು ಪೂರಕವಾದ ಪ್ರಶ್ನೆಯನ್ನು ಕೇಳುತ್ತೇನೆಂದಾಗ ಆಯವ್ಯಯದ ಮೇಲೆ ಮಾತನಾಡುವಾಗ ಹೇಳಿ ಎಂದು ಹೇಳಿದರು. ಇದು ತಮಗೆ ಬಿಟ್ಟದ್ದು.

ಛೇರ್ಮನ್:– ಇಲ್ಲಿ ಇನ್ನು ಮಾತನಾಡುವವರು 26 ಜನರು ಇದ್ದಾರೆ. ತಮಗೆ 40 ನಿಮಿಷಗಳಾಗಿರುತ್ತದೆ.

ಶ್ರೀ ವೈ.ಕೆ. ರಾಮಯ್ಯ:– ದಯವಿಟ್ಟು ಏನಾದರೂ ಪ್ರಯೋಜನವಾಗುತ್ತದೆಂದರೆ ನಾನು ಮುಂದುವರಿಸುತ್ತೇನೆ.

ಅಧ್ಯಕ್ಷರು:– ಅದು ತಮಗ ಬಿಟ್ಟದ್ದುದು.

ಶ್ರೀ ಎಸ್.ಎಂ.ಕೃಷ್ಣ:– ನನ್ನದು ಸ್ವಲ್ಪ ಕಾಲ ಅವರಿಗೆ ಕೊಟ್ಟು ಬಿಡಿ.

ಶ್ರೀ ವೈ.ಕೆ. ರಾಮಯ್ಯ:– ಮಾನ್ಯ ಅಧ್ಯಕ್ಷರೇ, ಮೊದಲನೆ ಅಡ್ಡಿ ಮೊದಲನೆ ತೊಂದರೆ 2000ನೇ ಇಸವಿಯೊಳಗಾಗಿ ಇದನ್ನು ಸಂಪೂರ್ಣ ಮಾಡಲಿಕ್ಕೆ ಸಾಧ್ಯ ಇದೆಯೇ ಎನ್ನುವುದು. crux is money... ಇದನ್ನು ಮಾನ್ಯ ಮುಖ್ಯಮಂತ್ರಿಗಳು ಒಪ್ಪಿಕೊಂಡಿರುತ್ತಾರೆ. ನಾನು ಅಂಕಿಅಂಶಗಳನ್ನು ತೋರಿಸುತ್ತೇನೆ. ಬಹುಶಃ ಈ ಮಾತನ್ನು ತಾವು ಹೇಳಿದ ಮೇಲೆ ಎಲ್ಲರೂ ಒಪ್ಪಿಕೊಳ್ಳುತ್ತಾರೆ. atleast to that extent your credibility will not be shakened, will not be questioned or suspected... ಅದನ್ನು ಬಿಟ್ಟುಬಿಟ್ಟು 900 ಕೋಟಿ ರೂಪಾಯಿಗಳನ್ನು ಇಟ್ಟಿದ್ದೇವೆ ಎಂದರೆ crux is finance .... ಇದರಲ್ಲಿ ಮತ್ತೊಂದು ತೊಂದರೆ ಏನಿದೆ ಎಂದರೆ, ಬೃಹತ್ ನೀರಾವರಿ ಯೋಜನೆಗಳನ್ನು ಅನುಷ್ಠಾನಕ್ಕೆ ತರುವಂಥ ಸಂದರ್ಭದಲ್ಲಿ ಆಗುತ್ತಿರುವಂಥ ಹಣದ ದುರುಪಯೋಗದ ಮೇಳ. ರಾಜ್ಯದ ಮುಖ್ಯಮಂತ್ರಿಗಳು ಅಪ್ಪಣೆ ಕೊಡುತ್ತಾರೆ, ಇದನ್ನು ಕಾರ್ಯರೂಪಕ್ಕೆ ತರುವಂಥ ಅಧಿಕಾರಿಗಳು ಮತ್ತು ಗುತ್ತಿಗೆದಾರರ ಮಧ್ಯದಲ್ಲಿ ದುರುಪಯೋಗದ ಮೇಳ ನಡೆಯುತ್ತಿದೆ ಎಂದು. ಏತಕ್ಕೆಂದರೆ ಅವರು ಕವಿಗಳು, ಅವರ ಪದ ಪ್ರಯೋಗ ನಮಗೆ ಒಂದೊಂದು ಸಾರಿ ಅರ್ಥವಾಗುವುದಿಲ್ಲ. ಅವರು ಹೇಳುತ್ತಾರೆ. "ನೀರಾವರಿ ಇಲಾಖೆಯಲ್ಲಿ ಕಂಟ್ರಾಕ್ಟರ್ಸ್ ಹಾಗೂ ಅಧಿಕಾರಿಗಳು ಶಾಮೀಲಾಗಿ ಹಣ ದುರುಪಯೋಗದ ಮೇಳಗಳು ನಡೆಯುತ್ತಿವೆ...." ಮತ್ತೆ ಹೇಳುತ್ತಾರೆ, "ಈ ನೀರಾವರಿ ಯೋಜನೆಗಳಿಂದ ಈ ರೀತಿ 1 – 2 ಕೋಟಿ ರೂಪಾಯಿಗಳ ದುರುಪಯೋಗ ಮಾಡಿಕೊಂಡಿರುವ ದೂರಿನ ಒಂದು ಪ್ರಕರಣದ ಬಗ್ಗೆ ವಿಚಾರಣೆ ನಡೆಸುವಂತೆ ನಿನ್ನೆ ಅದರ ಬಗ್ಗೆ ತಾವು ಒಂದು ಆಜ್ಞೆಯನ್ನು ಮಾಡಿರುವುದಾಗಿಯೂ ಕೂಡ ತಿಳಿಸಿದ್ದಾರೆ" ದಯವಿಟ್ಟು ತಾವು ಉತ್ತರವನ್ನು ಕೊಡುವಾಗ ಯಾವುದು ಈ ಇನ್‌ಸ್ಟೆನ್ಸ್ ಎನ್ನುವುದನ್ನು ಗಮನಕ್ಕೆ ತರಬೇಕು. 1–2 ಕೋಟಿ ರೂಪಾಯಿಗಳು ದುರುಪಯೋಗ ಆಗಿರತಕ್ಕಂಥದ್ದು ನಮ್ಮ ಗಮನಕ್ಕೂ ಸಾಕಷ್ಟು ಬಂದಿದೆ. ಆದರೆ ಅದನ್ನೇ ಹೇಳುತ್ತಾ ಕುಳಿತುಕೊಂಡರೆ ಆಗುವುದಿಲ್ಲ. ಮಾನ್ಯ ಏಕಾಂತಯ್ಯನವರೂ ಹಣದ ದುರುಪಯೋಗದ ಬಗ್ಗೆ, ಸೋರಿಕೆಯ ಬಗ್ಗೆ ಎರಡು ವಿಷಯಗಳನ್ನು

ಹೇಳಿದ್ದಾರೆ. ಈ ಹಣದ ಸೋರ್ಸ್‌ನಲ್ಲಿ ಡಿಡಕ್ಟ್ ಆಗುತ್ತದೆ. ಮೊನ್ನೆ ನಡೆದ ಚುನಾವಣೆಯಲ್ಲೂ ಡಿಡಕ್ಟ್ ಆಯಿತು, ಪಾರ್ಲಿಮೆಂಟ್ ಚುನಾವಣೆಯಲ್ಲಿ ಡಿಡಕ್ಟ್ ಆಯಿತು. ನಮ್ಮ ಜಿಲ್ಲೆಯಲ್ಲಿ ನಾಲ್ಕನೇ ಮಂತ್ರಿಗಳಿಗೆ ಇದೇ ಕೆಲಸ. ಇಲ್ಲಿ ಮೂರು ಜನ ಮಂತ್ರಿಗಳು ಕುಳಿತುಕೊಳ್ಳುತ್ತಾರೆ. ಇನ್ನೊಬ್ಬರು ಮಂತ್ರಿಗಳು ಸೋರ್ಸ್‌ನಲ್ಲಿ ಡಿಡಕ್ಟ್ ಮಾಡಿಕೊಳ್ಳುವುದಕ್ಕೆ ಹೇಮಾವತಿ ಪ್ರಾಜೆಕ್ಟ್‌ನಲ್ಲಿ ಅಲ್ಲಿಯೇ ಒಬ್ಬರನ್ನು ಬಿಟ್ಟಿದ್ದಾರೆ. ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳದಿರುವುದನ್ನು ಹೇಳಿಬಿಟ್ಟಿದ್ದೇನೆ. ಅದರಿಂದ ನನಗೆ ಸ್ವಲ್ಪ ಕಷ್ಟವಾಗುತ್ತದೆಯೋ ಏನೋ. ರಾಮಯ್ಯನವರೇ ಯಾರು ನಿಮಗೆ ಹೇಳಿದ್ದುದು ಅಂಥದ್ದು ಏನೂ ನಡೆಯುತ್ತಿಲ್ಲವೆಂದು ಹೇಳಬಹುದು.

ಶ್ರೀ ಶಫಿ ಅಹಮದ್:- ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ವೈ.ಕೆ.ರಾಮಯ್ಯನವರು ಮೂರು ಜನ ಮಂತ್ರಿಗಳು ನಮ್ಮ ಜಿಲ್ಲೆಯವರು ಎಂದು ಹೇಳಿದರು. ನಾಲ್ಕನೆಯವರನ್ನು ಯಾವಾಗ ಸೃಷ್ಟಿ ಮಾಡಿದರೋ ಗೊತ್ತಾಗಲಿಲ್ಲ.

ಶ್ರೀ ಬಸವರಾಜ ರಾಯರೆಡ್ಡಿ:- ಮಾನ್ಯ ಶಫಿ ಅಹಮದ್‌ರವರೇ, ನಾಮಿನೇಟ್ ಮಾಡಿದ್ದುದು, ನಾಲ್ಕನೆಯವರು ಯಾರು ಎಂದು ಅವರೇ ಹೇಳಬೇಕು.

ಶ್ರೀ ವೈ.ಕೆ. ರಾಮಯ್ಯ:- ಮಾನ್ಯ ಅಧ್ಯಕ್ಷರೇ, ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ಮೊದಲನೆ ತೊಂದರೆ ಎಂದರೆ ಹಣದ ಕೊರತೆ. ಈ ಕೊರತೆಯಲ್ಲಿ ಸೋರುವಿಕೆ ಬೇರೆ. ನಮ್ಮ ಸಿದ್ದ ಗಂಗಾಸ್ವಾಮಿಗಳು ಒಂದು ಸಣ್ಣ ಉದಾಹರಣೆ ಕೊಟ್ಟರು. ಯಾರೋ ಒಬ್ಬ ಮಹಾರಾಜನಿಗೆ ದೇವಸ್ಥಾನದ ಅರ್ಚಕರು ಒಂದು ಕಾಗದವನ್ನು ಬರೆದು ನನಗೆ 100 ಸೇರು ಎಣ್ಣೆ ಕಳುಹಿಸಿಕೊಡಿ, ಒಂದು ವರ್ಷಕ್ಕೆಲ್ಲ ದೀಪಕ್ಕೆ ಬೇಕಾಗುತ್ತದೆಂದು. ಮಹಾರಾಜರು 1000 ಲೀಟರ್ ಸ್ಯಾಂಕ್ಷನ್ ಮಾಡಿದರಂತೆ. ಅದಕ್ಕೆ ಪಕ್ಕದಲ್ಲೇ ಇರುವವರು ಕೇಳಿದರು, ಅವನು ಕೇಳಿರುವುದು 100 ಲೀಟರ್ ಮಾತ್ರ, ನೀವು ಏತಕ್ಕೆ ಸಾವಿರ ಲೀಟರ್ ಕಳುಹಿಸಿಕೊಡುತ್ತಿದ್ದೀರಿ ಎಂದು. ಇಲ್ಲಪ್ಪ ಅದು ತಲುಪುವಷ್ಟು ಹೊತಿಗೆ 100 ಲೀಟರ್ ಆಗುವುದು, ಏತಕ್ಕೆ ನೀವು ಯೋಚನೆ ಮಾಡುತ್ತೀರಿ ಎಂದು ಹೇಳಿದರಂತೆ. ಆದ್ದರಿಂದ ಈ 900 ಕೋಟಿ ಒಳಗೆ ನಮಗೆ ನಿಮ್ಮ ಕೆಪಾಸಿಟಿ ಗೊತ್ತು. ಸರ್ಕಾರದ ಯೋಗ್ಯತೆ ಗೊತ್ತು. ಏತಕ್ಕೆಂದರೆ ಹೋದ ವರ್ಷ ಎಷ್ಟು ಹಣವನ್ನು ಖರ್ಚು ಮಾಡಿದ್ದೀರಿ ಎನ್ನುವುದನ್ನು ನೋಡಿದರೆ ''ಹಾರುವಾಗಲೇ ಕಾಣುತ್ತದೆ ಕಾಗೆ ಪುಕ್ಕ'' ಎಂದು ನಮ್ಮ ಹಳ್ಳಿಯ ಕಡೆ ಹೇಳುತ್ತಾರೆ. ಮುಂದಿನ ವರ್ಷಕ್ಕೆ ನಿಮ್ಮ ಶಕ್ತಿ ಎಷ್ಟಿದೆ ಎನ್ನುವುದನ್ನು ನಿರೀಕ್ಷೆ ಮಾಡಬಹುದು. ಈ ರೀತಿ ನಿರೀಕ್ಷೆ ಮಾಡಿಕೊಂಡ ಆಧಾರದ ಮೇಲೆ ಅಂಕಿಅಂಶಗಳನ್ನು ತೆಗೆದುಕೊಂಡರೆ ನಿಮಗೆ ಕೃಷ್ಣಾ ಕಣಿವೆಯ ಕೆಲಸ ಮಾಡಲಿಕ್ಕೆ ಹಣ ಸಿಕ್ಕುವುದಿಲ್ಲ. ಈ ಸೋರಿಕೆಯಿಂದ ನಿಮ್ಮ ಕೆಲಸ ಕಡಿಮೆಯಾಗುತ್ತದೆ. ಆದರೆ ಮಾನ್ಯ ಮುಖ್ಯಮಂತ್ರಿಗಳು ಈ ಮಾತನ್ನು ಹೇಳುವ ಸಂದರ್ಭದಲ್ಲಿ ಒಂದು ವಿಚಾರವನ್ನು ಗಮನಕ್ಕೆ ತರುತ್ತೇನೆ. ಸೋರಿಕೆ ಆಗುತ್ತಿದೆ, ಮಿಸ್‌ಅಪ್ರಾಪ್ರಿಯೇಷನ್ ಆಗುತ್ತಿದೆ; ಕಂಟ್ರಾಕ್ಟರ್‌ಗಳು ದುಡ್ಡು ತಿಂದು ಹಾಕಿಬಿಟ್ಟಿದ್ದಾರೆನ್ನುವ ನೆಪದಲ್ಲಿ ಮಾನ್ಯ ಮಂತ್ರಿಗಳೇ ನಿಮ್ಮ ಕಾರ್ಯದರ್ಶಿಗಳು ಹೇಳಬಹುದು, ಅವರಿಗೆ ಗೊತ್ತಿದೆ, ಬಾಗೂರು ನವಿಲೆ ಕೆಲಸಗಳನ್ನು ನಿಲ್ಲಿಸಿದ ಹಾಗೆ ಈ ಕೆಲಸವನ್ನು ನಿಲ್ಲಿಸುವುದಕ್ಕೆ ಹೋಗಬೇಡಿ.

ಹಣ ಸೋರಿಕೆಯಾಗುತ್ತಿದ್ದರೆ, ಕಂಟ್ರಾಕ್ಟರ್, ಅಧಿಕಾರಿಗಳು ಹಣ ತಿನ್ನುವಂಥ ಮೇಳ ಮಾಡುತ್ತಿದ್ದರೆ ಅಂಥವರನ್ನು ನೀವು ಶಿಕ್ಷಿಸಿ. ಅಂಥವರನ್ನು, ನೀವು ಕಾನೂನಿನಲ್ಲಿ ಅವಕಾಶ ಇದ್ದರೆ ವೃತ್ತದಲ್ಲಿ ಕಂಬಕ್ಕೆ ಕಟ್ಟಿ ಛಾಟಿಯಿಂದ ಹೊಡೆಯಿರಿ; ನೇಣುಗಂಬಕ್ಕೆ ಏರಿಸಿ; ನಾವು ಯಾರೂ ಅಡ್ಡಿ ಬರುವುದಿಲ್ಲ. ಆದರೆ ಈ ಕುಂಟು ನೆಪ ಇಟ್ಟುಕೊಂಡು ಅಲ್ಲಿ ಅವ್ಯವಹಾರ ನಡೆಯುತ್ತಿದೆ ಎಂಬ ಒಂದು ನೆಪ ಒಡ್ಡಿ ಕೆಲಸ ನಿಲ್ಲಿಸುವಂತಹ ಕೆಲಸ ಮಾಡಬೇಡಿ. You can order for the enquiry. I have no objection but at the same time I request you not to stop the work. You can conduct any enquiry. You enquire it, you suspend the culprit - I have no objection. I request you at this stage with past experience... ಹಿಂದೆ ಒಂದು ಸಾರಿ ನಮಗೆ ಹೀಗೆ ಮಾಡಿದ್ದರು. ನಾವೆಲ್ಲ ಸದಸ್ಯರಲ್ಲದಿದ್ದರೂ ಕೌನ್ಸಿಲ್‌ನಲ್ಲಿ ಹೋಗಿ ಕುಳಿತುಕೊಂಡೆವು. ಅಲ್ಲಿ ಹೇಳಿದರು ಏಕ್‌ದಂ ಎನ್‌ಕ್ವೈರಿ ಮಾಡುತ್ತೇವೆ, ಕೆಲಸ ನಿಲ್ಲಿಸುತ್ತೇವೆ ಎಂದು. ಕೆಲಸ ನಿಲ್ಲಿಸುವುದಿಲ್ಲವೆಂದು ಹೇಳಿಸಬೇಕಾದರೆ ಪುನಃ ಒಂದು ತಾಯಿ ಹೊಟ್ಟೆಯಲ್ಲಿ ಹುಟ್ಟಿ ಬಂದ ಹಾಗೆ ಆಯಿತು. ಆ ಒಂದು ಪರಿಸ್ಥಿತಿ ಸೃಷ್ಟಿಯಾಗುವುದು ಬೇಡ. ಆಗುವಂತಹ ಅವ್ಯವಹಾರದ ಬಗ್ಗೆ ತಾವು ಮಾಡುವಂಥ ಯಾವುದೇ ಒಂದು ವಿಚಾರಣೆಗೆ ನಮ್ಮ ಅಭ್ಯಂತರವಿಲ್ಲ. ಆದರೆ ನಿಲ್ಲಿಸಿರುವ ಕೆಲಸವನ್ನು ಮಾಡಬೇಕೆಂದು ನಾನು ಪ್ರಾರ್ಥಿಸುತ್ತೇನೆ. ಅದರ ಜೊತೆಗೆ ಈ ಕೆಲಸ ಆಗದೆ ಇರಲಿಕ್ಕೆ ಇವರು ಕೊಡುವಂಥ ಜುಜುಬಿ ಹಣದಲ್ಲಿ ಈ ವರ್ಷ ತೀರ್ಮಾನವಾಗುವ ಪಂಚಾಯಿತಿಯದು ಮುಂದಿನ ವರ್ಷ ಕೊಡಬೇಕಾಗುತ್ತದೆ. ಹಳೆಯ ಬಿಲ್ಲುಗಳು ಪೆಂಡಿಂಗ್ ಇವೆ. ಎರಡನೆಯದಾಗಿ, ಪಂಚಾಯತಿ ವಿವಾದಗಲ್ಲಿ ತೀರ್ಮಾನಗಳು ಬರುತ್ತವೆ. ಅದಕ್ಕೆ ಕೋಟ್ಯಾಂತರ ರೂಪಾಯಿಗಳನ್ನು ಕೊಡಬೇಕಾಗುತ್ತದೆ. ಸಂಬಳ ಸಾರಿಗೆಗೆ ಕೊಡಬೇಕಾಗುತ್ತದೆ. ಹೊಸ ಯಂತ್ರಗಳ ಖರೀದಿಗೆ ಕೊಡಬೇಕಾಗುತ್ತದೆ. ದರಗಳು ಈಗಾಗಲೇ ಏರಿವೆ. ಡಿಡಕ್ಷನ್ ಅಟ್ ಸೋರ್ಸ್ ಕೂಡ ಹೋಗುತ್ತದೆ. ಇಷ್ಟೆಲ್ಲ ಹೋಗುವುದರಿಂದ ಇವರು ಎಷ್ಟು ಹಣ ಖರ್ಚು ಮಾಡಿ ಈ ಕಾರ್ಯವನ್ನು ಅನುಷ್ಠಾನಕ್ಕೆ ತರುತ್ತೇವೆಂದು ಹೇಳುತ್ತಾರೋ ಅದನ್ನು ತರುವುದಕ್ಕೆ ಸಾಧ್ಯವಾಗುವುದಿಲ್ಲ. ನಾನು ಕೇವಲ ಸರ್ಕಾರವನ್ನು ಅಥವಾ ಈ ಕಾರ್ಯಕ್ರಮವನ್ನು ಅನುಷ್ಠಾನ ಮಾಡುತ್ತಿರುವವನ್ನು ಹೊಣೆ ಮಾಡುವುದಕ್ಕೆ ಅಷ್ಟಾಗಿ ಸಾಧ್ಯವಿಲ್ಲ. ಈ ಕೆಲಸಗಳನ್ನು ಕಾರ್ಯರೂಪಕ್ಕೆ ತರಬೇಕಾದರೆ ನಿರೀಕ್ಷೆ ಮಟ್ಟಕ್ಕಿಂತ ಹೆಚ್ಚಿಗೆ ಕೆಲಸ ಆಗಬೇಕಾದರೆ ಏನು ಮಾಡಬೇಕು ? ಮತ್ತೊಂದು ವಿಷಯ ಏನೆಂದರೆ, ರಾಷ್ಟ್ರದ ಎಲ್ಲಾ ಬೊಕ್ಕಸದ ಹಣವನ್ನು ನೀರಾವರಿಗೆ ಖರ್ಚು ಮಾಡಿದರೆ ಬೇರೆ ಕಾರ್ಯಕ್ರಮಗಳಿಗೆ ಅಡ್ಡಿಯಾಗುತ್ತದೆ ಎನ್ನುವ ಒಂದು ಪ್ರತಿಪಾದನೆ ಇದೆ. ಈ ಪ್ರತಿಪಾದನೆ ಇವತ್ತು ಹುಟ್ಟಿದ್ದು ಅಲ್ಲ. ದಿವಾನ್ ಆನಂದರಾಯರ ಕಾಲದಲ್ಲಿ ಯಾರು ಸೆಕ್ರೆಟರಿ ಇದ್ದರು ಅವರು ಬರೆದರು. ಇತ್ತೀಚೆಗೆ 1980ರ ದಶಕದಲ್ಲಿ ಕೂಡ ಒಂದು ಇದೆ, ಅದನ್ನು ತಾವು ತರಿಸಿ ನೋಡಬೇಕು. ಒಬ್ಬ ಆರ್ಥಿಕ ಕಾರ್ಯದರ್ಶಿ ಬರೆಯುತ್ತಾರೆ; This Government will become Diwali ಎಂದು. ಇದೇ ರೀತಿ ನೀರಾವರಿಗೆ ರಾಜ್ಯ ಸರ್ಕಾರ ಹಣ ಖರ್ಚು ಮಾಡುವುದಾದರೆ ರಾಜ್ಯದ ಬೊಕ್ಕಸ ಬರಿದಾಗಿ ದಿವಾಳಿಯಾಗಬೇಕಾಗುತ್ತದೆ. The attitude of the bureaucracy is not changed even after a century I believe..... ಅವತ್ತು ಏನು ನರಸಿಂಹರಾವ್ ಅವರು ಕನ್‌ಸರ್ವೇಟೀವ್ ಎಂಬ ಪದವನ್ನು ಬರೆದರೋ ಅದೇ ಪದವನ್ನು 1980ರ ದಶಕದಲ್ಲೂ ಬರೆಯುತ್ತಾರೆ. ಈ ಆಟಿಟ್ಯೂಡ್ 1993ಕ್ಕೆ ಏನಾದರೂ ಬದಲಾವಣೆಯಾಗಿದೆಯೋ ಏನೋ ಗೊತ್ತಿಲ್ಲ. ಕೇವಲ ನೀರಾವರಿಗೆ ದುಡ್ಡು ಖರ್ಚು ಮಾಡಿದರೆ ಈ ದೇಶದ ಬೊಕ್ಕಸ ಬರಿದಾಗುತ್ತದೆಂದು ಏನು ನೀರಾವರಿ ಇಲಾಖೆಯ ಬಗ್ಗೆ ಆರ್ಥಿಕ ಇಲಾಖೆ ಅಭಿಪ್ರಾಯ ಪಡುತ್ತದೆ ಈ ಅಭಿಪ್ರಾಯಗಳು ಇತ್ತೀಚಿನ ವರ್ಷದಲ್ಲಿ ಬದಲಾವಣೆಯಾಗಿದೆಯೋ ಎಂದು ತಮ್ಮ ಮೂಲಕ ಉತ್ತರ ಬಯಸುತ್ತೇನೆ. ಏಕೆಂದರೆ, ಈ ರಾಜ್ಯದಲ್ಲಿ

ಜಮೀನು ಇರುವವರು 67 ಲಕ್ಷ ಜನರಿದ್ದಾರೆ. ಆದರಲ್ಲಿ 15 ಲಕ್ಷ ಜನ ಸಾಲಗಾರರಾಗಿದ್ದಾರೆ. ಅವರು ಯಾರು ಎಂದರೆ ಸೊಸೈಟಿಗಳಿಂದ ಸಾಲ ತೆಗೆದುಕೊಂಡಿರುವವರು. ಬೇರೆ ಕಡೆ ಮಾರ್ವಾಡಿಗಳಿಂದ, ಅಣ್ಣ ತಮ್ಮಂದಿರ ಹತ್ತಿರ ಸಾಲ ತೆಗೆದುಕೊಂಡಿರುವವರೆಲ್ಲರನ್ನೂ ಲೆಕ್ಕಕ್ಕೆ ತೆಗೆದುಕೊಂಡರೆ 67 ಲಕ್ಷದಲ್ಲಿ 50 ಲಕ್ಷ ಜನ ಸಾಲಗಾರರಾಗುತ್ತಾರೆ. ನಾವು 900 ಕೋಟಿ ರೂಪಾಯಿಗಳನ್ನು ಬರೀ 67 ಲಕ್ಷ ಜನರಿಗೆ ಖರ್ಚು ಮಾಡುತ್ತೇವೆಂದು ವಾದ ಮಾಡಿದವರು ಈಗಲೂ ಈ ಸದನದಲ್ಲಿದ್ದಾರೆ, ಇದು ಒಳ್ಳೆಯದಲ್ಲ. ಈ ತೊಂದರೆ ಕೂಡ ತಮಗೆ ಇದೆ. ನೀರಾವರಿಗೇ ಹಣ ಖರ್ಚು ಮಾಡಿದರೆ ಹಾಸ್ಟೆಲ್ ಕಟ್ಟುವುದು ಬೇಡವೆ? ಸ್ಕಾಲರ್‌ಷಿಫ್ ಕೊಡುವುದು ಬೇಡವೆ? ತಾಳಿ ಭಾಗ್ಯ ಮಾಡುವುದು ಬೇಡವೆ? ಆಶಾಕಿರಣ ಮಾಡುವುದು ಬೇಡವೆ? ಆಶ್ರಯ ಮಾಡಬಾರದೆ? ಗಂಡ ಸತ್ತ ಮುಂಡೆಯರಿಗೆ ಮಾಸಾಶನ ಕೊಡಬಾರದೆ? ಅದನ್ನೆಲ್ಲ ಮಾಡದೆ ಇದೊಂದಕ್ಕೆ ಖರ್ಚು ಮಾಡಿದರೆ ಒಂದೇ ವರ್ಗದ ಜನರಿಗೆ ಅನುಕೂಲವಾಗುತ್ತದೆ; ಆದುದರಿಂದ ಸಾಧ್ಯವಾಗುವುದಿಲ್ಲವೆಂದು ವಾದ ಮಾಡುವವರೂ ಇದ್ದಾರೆ. ನನ್ನ ಪ್ರಾರ್ಥನೆ ಇಷ್ಟೇ. ಇದನ್ನು ನಾನು ಸ್ವಲ್ಪ ಮಟ್ಟಿಗೆ ಒಪ್ಪಿಕೊಳ್ಳುತ್ತೇನೆ. ರಾಷ್ಟ್ರದ ಜನಸಂಖ್ಯೆಯಲ್ಲಿ ಶೇಕಡ 30 ಭಾಗದ ಜನಕ್ಕೆ ಸತ್ತರೆ ಹೂಳಲು ಬೇಕಾದ 3 ಅಡಿ X 6 ಅಡಿ ಜಾಗ ಇಲ್ಲದೇ ಇರುವವರೂ ಇದ್ದಾರೆ. ಇವರ ಹಿತವನ್ನೂ ನಾವು ಕಡೆಗಾಣಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಅವರಿಗೂ ಕಾರ್ಯಕ್ರಮ ಹಾಕಿಕೊಳ್ಳಬೇಕು. ಆದರೆ ಒಂದು ಉದಾಹರಣೆ ಕೊಡುವುದಾದರೆ, ಪಾವಗಡದಲ್ಲಿ ಒಬ್ಬ ಆಳಿನ ಕೂಲಿ 8 ರೂಪಾಯಿ. 8 ರೂಪಾಯಿಗೆ ಬರುತ್ತಾನೆ. ಅದೇ ಬೆಸಗರ ಹಳ್ಳಿಯಲ್ಲಿ ಅದೇ ಗದ್ದೆ ತವಡೆ ಎತ್ತುವವನಿಗೆ 55 ರೂಪಾಯಿ ಕೂಲಿ. ಕಾರಣ ಏನು? ಕಾರಣ ಎಂದರೆ, ರೈತನ ಉತ್ಪಾದನಾ ಶಕ್ತಿ, ಆರ್ಥಿಕಾ ಸಾಮರ್ಥ್ಯ ಮಂಡ್ಯದಲ್ಲಿ ಜಾಸ್ತಿ ಇದೆ. because of the KRS water he is able to pay increased wage, because of the dearth of water that cannot be done in Pavagada... ಯಾರು ನನ್ನ ಸ್ನೇಹಿತರು ಈ ಸದನದಲ್ಲಿ ಇರಬಹುದು, ಹೊರಗಡೆ ಇರಬಹುದು, ನೀರಾವರಿ ಯೋಜನೆಗಳಿಗೆ ಹಣ ಖರ್ಚು ಮಾಡುವುದು ವ್ಯರ್ಥ, ಅದು ಕೇವಲ ಒಂದೇ ವರ್ಗದ ಜನರಿಗೆ ಅನುಕೂಲವಾಗುತ್ತದೆ, ಕೇವಲ 67 ಲಕ್ಷ ಜನರಿಗೆ ಅನುಕೂಲವಾಗುತ್ತದೆಯೆಂದು ಏನು ವಾದ ಮುಂದೆ ಇಡುತ್ತಾರೋ ಅವರು ಅರ್ಥ ಮಾಡಿಕೊಳ್ಳಬೇಕಾಗುತ್ತದೆ, ಜಮೀನಿಗೆ ನೀರನ್ನು ಕೊಡುವುದರಿಂದ ಆ ರೈತನ ಆರ್ಥಿಕ ಶಕ್ತಿ ವೃದ್ಧಿಯಾಗುತ್ತದೆ. ಆ ರೈತನ ಆರ್ಥಿಕ ಶಕ್ತಿ ವೃದ್ಧಿಯಾದ ಕಾರಣದಿಂದಲೇ ಮಂಡ್ಯ ಜಿಲ್ಲೆಯಲ್ಲಿ ಕೃಷಿ ಕಾರ್ಮಿಕರಿಗೆ 50–60 ರೂಪಾಯಿ ಕೂಲಿ ಸಿಗುತ್ತದೆ. ನನ್ನ ಜಿಲ್ಲೆಯ ಪಾವಗಡದ ಒಣಭೂಮಿಯಲ್ಲಿ 8 –10 ರೂಪಾಯಿ ಕೂಲಿ ಸಿಗುತ್ತದೆ. ಆದುದರಿಂದ ನೀರಾವರಿಗೆ ಹಣವನ್ನು ಖರ್ಚು ಮಾಡುವುದರಿಂದ ಕೇವಲ ಕೆಲವರಿಗೆ ಅನುಕೂಲವಾಗುತ್ತದೆ ಎನ್ನುವ ವಾದ ಏನಿದೆಯೋ ಅದು ಸಮರ್ಥನೀಯವಾದುದಲ್ಲ ಎನ್ನುವ ಭಾವನೆಯನ್ನು ತಮ್ಮ ಮುಂದೆ ತರುವುದಕ್ಕೆ ಇಷ್ಟ ಪಡುತ್ತೇನೆ.

ಶ್ರೀ ಡಿ ಹಲಗೇಗೌಡ:– ಆ ವರ್ಗ ಉತ್ಪಾದನೆ ಮಾಡಿದ್ದನ್ನು ಅವರೇ ತಿನ್ನುತ್ತಾರೆಯೇ? ಬೇರೆಯವರಿಗೆ ಅವರು ಕೊಡುವುದಿಲ್ಲವೇ?

ಶ್ರೀ ವೈ.ಕೆ. ರಾಮಯ್ಯ:– ನಾನು ಮಾನ್ಯ ಸದಸ್ಯರಿಗೆ ಕೃತಜ್ಞನಾಗಿದ್ದೇನೆ. ನಾನು ಅದನ್ನು ಹೇಳಬೇಕಾಗಿತ್ತು. ಕೃಷಿ ಕ್ಷೇತ್ರದಲ್ಲಿ ಆಗುವ ಉತ್ಪಾದನೆಯನ್ನು ಬೆಳೆದವನೊಬ್ಬನೇ ತಿನ್ನುವುದಿಲ್ಲ, ಬೇರೆ ವರ್ಗದವರೂ ತಿನ್ನುತ್ತಾರೆ. ಅಷ್ಟೇ ಅಲ್ಲ, ಅಲ್ಲಿ ನಿಂತರೆ ಎಲ್ಲವೂ ನಿಂತು ಹೋಗುತ್ತದೆ. ರೈತರದ್ದು ನಿಂತು ಹೋದರೆ ಎಲ್ಲವೂ ನಿಂತು ಹೋಗುತ್ತದೆ. ಉತ್ತುಳುವುದನ್ನು ಬಿಟ್ಟರೆ ನಿಮ್ಮದೆಲ್ಲವೂ ನಿಂತು ಹೋಗುತ್ತದೆ. ಆದುದರಿಂದ ನಾನು ಇದನ್ನು ಒತ್ತಾಯಪೂರ್ವಕವಾಗಿ ಹೇಳುವುದಕ್ಕೆ ಅರ್ಥ ಇದೆ. ಹಿಂದೆ ಇದರ ಬಗ್ಗೆ ಚರ್ಚೆ ನಡೆದಿದೆ. ಇವರ ಬಗ್ಗೆ ನಮ್ಮನ್ನು ಬ್ರಾಂಡ್ ಮಾಡಿದ್ದಾರೆ. ಅದಕ್ಕೆ ನಾನು ಒತ್ತಾಯ ಪೂರ್ವಕವಾಗಿ ಈ ಮಾತನ್ನು ಹೇಳುತ್ತಿದ್ದೇನೆ.

ಛೇರ್ಮನ್:- 50 ನಿಮಿಷ ಆಯಿತು. ಬೇಗ ಮುಗಿಸಿ.

ಶ್ರೀ ವೈ.ಕೆ. ರಾಮಯ್ಯ:- ಸನ್ಮಾನ್ಯ ಅಧ್ಯಕ್ಷರೇ, ನಾನು ಇಷ್ಟೆಲ್ಲಾ ಹೇಳಿ ಹೇಮಾವತಿ ಕೆಲಸದ ಅನುಷ್ಠಾನದ ಬಗ್ಗೆ, ನೀರಾವರಿ ಕಾರ್ಯವನ್ನು ಅನುಷ್ಠಾನಕ್ಕೆ ತರುವುದರಲ್ಲಿ ನಮ್ಮನ್ನು ಮೋಸಗೊಳಿಸಿದ್ದಾರೆ ಎನ್ನುವುದನ್ನು ಸಬ್‌ಸ್ಟ್ಯಾನ್ಷಿಯೇಟ್ ಮಾಡುವುದಕ್ಕೆ ಮತ್ತೊಂದು ಸಂದರ್ಭವನ್ನು ತಮ್ಮ ಗಮನಕ್ಕೆ ತರುತ್ತೇನೆ. 1988-89 amount earmarked was 20 crores. Please verify it. On 27-5-1988 this 20 crores was reduced to 10 crores. On 27-5-1988, that has been reduced to 10 crores, out of this 10 crores - 2 1/2 crores was earmarked for the work, out of this 2 1/2 crores, 1 crore 70 lakhs was earmarked for canal works.... ಗುರ್ತು ಹಾಕಿಕೊಂಡು ನೋಡಿ. if my figures are wrong you are very liberty to deny it. only I crore 70 lakhs was earmarked for construction of canals in your constituency and my constitutency. Out of this I crore 70 lakhs 60 lakhs is paid for this work. ಅದಕ್ಕೇ ನಾನು ಹೇಳಿದ್ದುದು ಅಂಕಿ ಅಂಶಗಳ ಮಾಯಾಜಾಲದಲ್ಲಿ ನಮ್ಮನ್ನು ಎತ್ತಿಕೊಂಡು ಹೋಗಿ ಮೇಲೆ ಬಿಡುತ್ತಿದ್ದಾರೆ ಎಂದು. Out of this 20 crores officially in the bills only 60 lakhs is paid.

ಈಗ ತಾವು ಹೇಳಬೇಕು, ಈ ಅಂಕಿ ಅಂಶಗಳ ಮುಖಾಂತರ ನಮ್ಮನ್ನು ಮೋಸ ಮಾಡುತ್ತಿದ್ದೀರೋ ನಿಜವಾದ ಪರಿಸ್ಥಿತಿಗೆ ನಮ್ಮನ್ನು ತೆಗೆದುಕೊಂಡು ಹೋಗುತ್ತಿದ್ದೀರೋ ಎಂದು. ಅಂತಿಮವಾಗಿ ತಮ್ಮ ಮೂಲಕ ಸರ್ಕಾರಕ್ಕೆ ಪ್ರಾರ್ಥನೆ ಅಷ್ಟೆ, ಕಾವೇರಿ ಕೊಳ್ಳದಲ್ಲಿ ನಮಗೆ ಎಷ್ಟು ನೀರು ದಕ್ಕಬೇಕೋ ಆ ನೀರನ್ನು ದಕ್ಕಿಸಿಕೊಳ್ಳುವುದಕ್ಕೆ ನಿಮಗೆ ಸಾಧ್ಯತೆಯಿದೆ. ಅದಕ್ಕೆ ಕಾರಣ, ಮತ್ತೆ ನಾನು ಮುಖ್ಯಮಂತ್ರಿಗಳ ಹೇಳಿಕೆಗೆ ಮೊರೆ ಹೋಗುತ್ತೇನೆ. ಏಕೆಂದರೆ ನಾವೇ ಹೇಳಿದ್ದೇವೆಂದರೆ ಸ್ವಲ್ಪ ಕಷ್ಟವಾಗುತ್ತದೆ. ''ಕೆಲವು ವಿಶಿಷ್ಟ ಹಿತಾಸಕ್ತಿಗಳು ರಾಜ್ಯದ ಹಿತಕ್ಕೆ ಮಾರಕವಾಗಿ ಕೆಲಸ ಮಾಡುತ್ತಿವೆಯೆಂದು ಮಾನ್ಯ ವೀರಪ್ಪ ಮೊಯಿಲಿಯವರು ವಿಧಾನಸಭೆಯಲ್ಲಿ ತಿಳಿಸಿದರು.'' ಯಾವುದು ಸ್ವಾಮಿ ಈ ಹಿತಾಸಕ್ತಿಗಳು ? ನನ್ನ ಪ್ರಕಾರ ನಾನು ಈಗಾಗಲೇ ವಾದ ಮಾಡಿದ ಹಾಗೆ ಇವು ಒಳಗಿನ ಹಿತಾಸಕ್ತಿಗಳು. ಇನ್ನು ಹೊರಗಿನ ಹಿತಾಸಕ್ತಿಗಳು ಬೇರೆ ಇವೆ. ಕಾವೇರಿ ಕೊಳ್ಳದ ನೀರಿನ ಹಂಚಿಕೆಯ ವಿವಾದದ ಬಗ್ಗೆ ಈ ರಾಜ್ಯದ ಮುಖ್ಯಮಂತ್ರಿಗಳು ತೆಗೆದುಕೊಂಡ ಸುಗ್ರೀವಾಜ್ಞೆ ಅದು ಒಳ್ಳೆಯದೋ ಕೆಟ್ಟದೋ, ಸಿಂಧುವೋ ಅಸಿಂಧುವೋ ಕಾನ್ಸ್‌ಟಿಟ್ಯೂಷನ್ನೋ ಅನ್‌ಕಾನ್ಸ್‌ಟಿಟ್ಯುಷನ್ನೋ ಲೀಗಲ್ಲೋ ಇಲ್‌ಲೀಗಲ್ಲೋ that is immaterial. That is why I congratulated Mr. Bangarappa on that day... ಈ ಸುಗ್ರೀವಾಜ್ಞೆಯ ಸಿಂಧುತ್ವವನ್ನು ಪರೀಕ್ಷೆ ಮಾಡುವುದಕ್ಕೆ ಸುಪ್ರೀಂಕೋರ್ಟ್‌ಗೆ ಕಳುಹಿಸಿದವರು ಯಾರು ಸ್ವಾಮಿ ? Can you tell me any precedent, any parallel to this action of the then President of India.... ಅವೊತ್ತು ನಾನು ಈ ಸದನದಲ್ಲಿ ಇರಲಿಲ್ಲ. ನೀವೆಲ್ಲರೂ ಯುನಾನಿಮಸ್ ರೆಸುಲ್ಯೂಷನ್ ಮುಖಾಂತರ ಬಾಯ್‌ಕಾಟ್ ಮಾಡಬೇಕೆಂದು ಹೇಳಿದರು. ಅವೊತ್ತಿನ ಮುಖ್ಯಮಂತ್ರಿಗಳು ತಮ್ಮದೇ ಆದಂತಹ ಸರ್ಕಾರ ತೆಗೆದುಕೊಂಡಂತಹ ನಿಲುವಿನ ವಿರುದ್ಧವಾಗಿ ಸುಗ್ರೀವಾಜ್ಞೆಯನ್ನು ಹೊರಡಿಸಿದರು. I should congratulate the Chief Minister and others for the courage in the Ruling Party. I should not shirk ನಾನು ಅದನ್ನು ಹೇಳದಿದ್ದರೆ ದ್ರೋಹ ಮಾಡಿದಂತಾಗುತ್ತದೆ. ಅಂತಹ ಒಂದು ಸುಗ್ರೀವಾಜ್ಞೆಯ ಸಿಂಧುತ್ವವನ್ನು ಪರೀಕ್ಷೆ ಮಾಡಬೇಕಾದವರು ಯಾರು ಸ್ವಾಮಿ ? Any party aggrieved. Is

your then President of India - an aggrieved party? Why he referred to the Supreme Court? That is the only solitary case in the history of India....

ಈ ರಾಷ್ಟ್ರದ ಸಾರ್ವಭೌಮತ್ವ ಇಲ್ಲದಿದ್ದರೂ ಕೂಡ ತನ್ನದೇ ಆದಂತಹ ಸಂವಿಧಾನದ ಚೌಕಟ್ಟಿನಲ್ಲಿ ಅಧಿಕಾರವನ್ನು ಹೊಂದಿರುವಂತಹ ಒಂದು ರಾಜ್ಯದ ಸುಗ್ರೀವಾಜ್ಞೆಯ ಸಿಂಧುತ್ವವನ್ನು ಇದು ಸರಿಯೋ ತಪ್ಪೋ ಎಂದು ಪರೀಕ್ಷೆ ಮಾಡಲಿಕ್ಕೆ ಅವೊತ್ತಿನ ರಾಷ್ಟ್ರಪತಿಗಳು ಸರ್ವೋಚ್ಚ ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟರು. I don't know whether it is etiquitte or not. I don't want to mention the name.... ನಾನು ಇವತ್ತು ಹೇಳುತ್ತಿದ್ದೇನೆ. ಆವೊತ್ತಿನ ರಾಷ್ಟ್ರಪತಿಗಳಿಂದ ನಮ್ಮ ರಾಜ್ಯಕ್ಕೆ ಅನ್ಯಾಯವಾಯಿತು. In order to protect the interest of the farmers of Tamil Nadu the then President of India has referred that Ordinance to the Supreme Court to test its veracity and find out whether it could withstand and can be implemented.....

ಛೇರ್ಮನ್:- ಮಾನ್ಯ ಸದಸ್ಯರು ಕನ್‌ಕ್ಲೂಡ್ ಮಾಡಿ, ತಾವು ಮಾತನಾಡಲಿಕ್ಕೆ ಶುರು ಮಾಡಿ ಒಂದು ಗಂಟೆಯಾಯಿತು.

ಶ್ರೀ ವೈ.ಕೆ. ರಾಮಯ್ಯ:- ಅದು ಇಲ್ಲಿಗೆ ನಿಲ್ಲಲಿಲ್ಲ. ಇಲ್ಲಿಗೆ ನಿಂತಿದ್ದರೆ ನಾನು ಸುಮ್ಮನಿರುತ್ತಿದ್ದೆ. ಅವರ ಅಧ್ಯಕ್ಷ ಗಿರಿ ಹೋಯಿತು he is today an ordinary man like me. ಅದು ಇಲ್ಲಿಗೆ ನಿಲ್ಲಲಿಲ್ಲ. That is why I am telling deceptive attitude is being perpetuated and continued. Why and how? ಮುಖ್ಯಮಂತ್ರಿಗಳ ಹೇಳಿಕೆಯಲ್ಲಿ ಯಾವುದೋ ಶಕ್ತಿಯ ಕೈವಾಡ ಇದೆಯೆಂದು ಹೇಳಿರುವುದನ್ನು ಇಲ್ಲಿ ದುರುಪಯೋಗ ಮಾಡಿಕೊಳ್ಳುವುದಕ್ಕೆ ನನಗೆ ಇಷ್ಟವಿಲ್ಲ. ಈ ಹಿಂದೆ ಹೇಳಿದ್ದೇನೆ. ಇವತ್ತು ಕೃಷ್ಣ ಕೊಳ್ಳದ ನೀರಿನ ವಿಷಯದಲ್ಲಿ ಇಂತಹದ್ದೇ ಅನ್ಯಾಯ, ದ್ರೋಹದ ಪರಂಪರೆ ಮುಂದುವರೆಯುತ್ತಿದೆ. ನಾನು ಇವತ್ತು ಬೆಳಿಗ್ಗೆ ಮಾನ್ಯ ಮಂತ್ರಿಗಳನ್ನು ಪ್ರಶ್ನೆ ಕೇಳಿದ್ದೇ. ಕೃಷ್ಣ ಕೊಳ್ಳದೊಳಗಿರುವ ಎರಡು ಪ್ರಮುಖ ಜಲಾಶಯಗಳಾದ ಶ್ರೀಶೈಲ ಮತ್ತು ನಾಗಾರ್ಜುನ ಸಾಗರ ನನಗೆ ತಿಳಿದಿರುವ ಪ್ರಕಾರ ಈ ಎರಡೂ ಜಲಾಶಯಗಳಿಂದ ಆಂಧ್ರ ಪ್ರದೇಶದ ಶೇಕಡ 40 ಭಾಗಕ್ಕೆ ನೀರನ್ನು ಹೊರಗಡೆ ತೆಗೆದುಕೊಂಡು ಹೋಗಿದೆ. 40% of water is taken out of the basin. ಮಾನ್ಯ ಉಪಮುಖ್ಯಮಂತ್ರಿಗಳು, ನಾವು ಪ್ರೊಟೆಸ್ಟ್ ಮಾಡಿದ್ದೇವೆ. ಕೇಂದ್ರ ಸರ್ಕಾರದಲ್ಲಿ ವಿರೋಧ ಮಾಡಿದ್ದೇವೆಂದು ಉತ್ತರ ಕೊಡುತ್ತಾರೆ. Is it sufficient ಲಕ್ಷಾಂತರ ಜನಗಳು ನೀರು ಬರುತ್ತದೆಂದು ಜಾತಕ ಪಕ್ಷಿಗಳಂತೆ ಕಾಯುತ್ತಾ ಕುಳಿತಿದ್ದಾರೆ. ಆ ಕೊಳ್ಳದಲ್ಲೂ ಕಾಯುತ್ತಿದ್ದಾರೆ, ಈ ಕೊಳ್ಳದಲ್ಲೂ ಕಾಯುತ್ತಿದ್ದಾರೆ. ತೆಲುಗುಗಂಗಾ ಯೋಜನೆ ಕಾರ್ಯರೂಪಕ್ಕೆ ಬರುವಾಗ, ಇಲ್ಲಿ ಮುಖ್ಯಮಂತ್ರಿಗಳು ಹಾಜರಿದ್ದರೆ ಚೆನ್ನಾಗಿತ್ತು. ಅವರು ಇಲ್ಲಿ ಕುಳಿತು ಆಡಿದ ಎಲ್ಲಾ ಮಾತುಗಳನ್ನು ಓದಬೇಕೆಂದು ತೆಗೆದುಕೊಂಡು ಬಂದಿದ್ದೇನೆ. I came prepared to read the whole thing what he has said on the floor of this House when Sri Ramakrishna Hegde was the Chief Minister.

ಅವರು ಅವತ್ತು ಎಲ್ಲಿಯವರೆಗೆ ಹೋಗುತ್ತಾರೆ ಎಂದರೆ, ಎನ್.ಟಿ. ರಾಮರಾವ್ ಅವರ ಸ್ನೇಹವನ್ನು ಬೆಳೆಸುವುದಕ್ಕಾಗಿ, ರಾಷ್ಟ್ರ ರಾಜಕಾರಣದ ಉತ್ತುಂಗ ಶಿಖರವನ್ನು ಏರುವುದಕ್ಕಾಗಿ ಈ ರಾಜ್ಯದ ಹಿತವನ್ನು ನೀವು ಮಾರುತ್ತಾ ಇದ್ದೀರಿ ಎನ್ನುವ ಮಾತನ್ನು ಇಲ್ಲಿ ಉಪಯೋಗಿಸಿದ್ದಾರೆ. You are selling the interest of the State in order to become a national leader and in

order to safeguard the friendship between you and Mr. N.T. Rama Rao. He tried to draw distinction between him and Mr H.D. Devegowda.

ಶ್ರೀ ವೀರಪ್ಪ ಮೊಯಿಲಿಯವರು ಈಗ ಆಗಮಿಸಿದ್ದಾರೆ. ಇದು 26.7.1985ರದ್ದು, ತಮಗೆ ಆಸಕ್ತಿ ಇದ್ದರೆ ತರಿಸಿಕೊಂಡು ಓದಬಹುದು, ಬಹಳ ಚೆನ್ನಾಗಿದೆ. ಒಂದು ತಮಾಷೆ ಎಂದರೆ, ಇಲ್ಲಿ ಕುಳಿತುಕೊಂಡು ಮಾತನಾಡಿದವರು ಅಲ್ಲಿ ಹೋಗಿದ್ದಾರೆ. ಪಾತ್ರ ಬದಲಾವಣೆಯಾಗಿದೆ. ಪಾರ್ಟು ಬದಲಾವಣೆಯಾಗುತ್ತದೆ, ಇಲ್ಲಿ ರಾಮನ ಪಾರ್ಟು, ಕೃಷ್ಣನ ಪಾರ್ಟು, ಧರ್ಮರಾಯನ ಪಾರ್ಟು ಹೀಗೆ ಏನೆಲ್ಲ ಹಾಕಿಕೊಂಡು ಇರುತ್ತೇವೆ. ಆ ಕಡೆಗೆ ಹೋಗುತ್ತಿದ್ದ ಹಾಗೆ ಪಾತ್ರಗಳು ಬದಲಾವಣೆಯಾಗಿ ಬಿಡುತ್ತವೆ. ಸನ್ಮಾನ್ಯ ಅಧ್ಯಕ್ಷರೇ, ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆ ಎಂದರೆ, ತೆಲುಗು ಗಂಗಾ ಯೋಜನೆ ಕಾರ್ಯರೂಪಕ್ಕೆ ಬರುವಾಗ ನಿಜ, ಬೆಳಿಗ್ಗೆ ಕೂಡ ಅವರು ಒಪ್ಪಿಕೊಂಡಿದ್ದಾರೆ. There is a violation of the terms. ಆವತ್ತಿನ ಮುಖ್ಯಮಂತ್ರಿಗಳಿಗೆ ಇವತ್ತಿನ ಮುಖ್ಯಮಂತ್ರಿಗಳು ಹೇಳಿದರು –

''... ನಿಮ್ಮ ರಾಷ್ಟ್ರ ರಾಜಕಾರಣದ ತೆವಲು ತೀರಿಸಿಕೊಳ್ಳುವ ಉದ್ದೇಶಕ್ಕಾಗಿ ಈ ರಾಜ್ಯದ ಜನರನ್ನು ಕೊಲ್ಲುತ್ತಿದ್ದೀರಿ. ಹಿತವನ್ನು ಮಾರುತ್ತಿದ್ದೀರಿ'' ಎಂದು. ಇವತ್ತು ಬೆಳಿಗ್ಗೆ ಈ ಸರ್ಕಾರ ನನಗೆ ಉತ್ತರ ಕೊಟ್ಟಿದೆ. ಆಂಧ್ರಪ್ರದೇಶದ ಸರ್ಕಾರ ಕೃಷ್ಣಾ ಕೊಳ್ಳದ ನೀರನ್ನು ಅಕ್ರಮವಾಗಿ ಉಪಯೋಗಿಸಿಕೊಳ್ಳುತ್ತಿದೆ ಎನ್ನುವುದನ್ನು ಅವರೇ ಒಪ್ಪಿಕೊಂಡಿದ್ದಾರೆ. ಅದನ್ನು ಓದುವ ಅವಶ್ಯಕತೆ ಇಲ್ಲ. ಈ ಆಕ್ರಮ ಉಪಯೋಗವನ್ನು ತಡೆಯುವುದರಲ್ಲಿ ಸರ್ಕಾರ ಸಾಕಷ್ಟು ಕೆಲಸ ಮಾಡಿಲ್ಲ, ಕಾರ್ಯಕ್ರಮ ತೆಗೆದುಕೊಂಡಿಲ್ಲ ಎಂದರೆ, ಇವತ್ತಿನ ಮುಖ್ಯಮಂತ್ರಿಗಳು ಪ್ರಧಾನಿಗಳ ಹಿತವನ್ನು ಕಾಪಾಡಲಿಕ್ಕೆ ಅಥವಾ ಪ್ರಧಾನಿಗಳ ಜೊತೆಯಲ್ಲೇ ಕೇಂದ್ರಸರ್ಕಾರದ ಜೊತೆಯಲ್ಲಿ ಕರ್ನಾಟಕದ ಹಿತವನ್ನು ರಕ್ಷಣೆ ಮಾಡುವಂಥ ಪ್ರಯತ್ನದಲ್ಲಿ ವಿಫಲರಾಗಿದ್ದಾರೆ. ಸೋತಿದ್ದಾರೆ. ಇನ್ನೂ ಮುಂದೆ ಹೋಗಬೇಕು ಎಂದರೆ, ಆಂಧ್ರಪ್ರದೇಶದ ಪ್ರಧಾನಿಯವರನ್ನು ವಿರೋಧ ಮಾಡಿಕೊಳ್ಳುವಂಥ ಪ್ರಯತ್ನಕ್ಕೆ ಅವರು ಕೈಹಾಕುತ್ತಿಲ್ಲ. I should charge. ಈ ರಾಷ್ಟ್ರದ ಪ್ರಧಾನಿಗಳು ಆಂಧ್ರದವರು. ಆ ಪ್ರಧಾನಿಯವರ ಕೃಪಾಕಟಾಕ್ಷದಿಂದ ಇವರು ಮುಖ್ಯಮಂತ್ರಿಯಾದರು. ಯಾವ ಪ್ರಧಾನಮಂತ್ರಿಯವರ ಕೃಪಾಕಟಾಕ್ಷದಿಂದ ಏನು ಮುಖ್ಯಮಂತ್ರಿ ಸ್ಥಾನವನ್ನು ಆಕ್ರಮಿಸಿಕೊಂಡಿದ್ದಾರೋ, ಆ ಸ್ಥಾನವನ್ನು ಉಳಿಸಿಕೊಳ್ಳುವುದಕ್ಕೋಸ್ಕರ ಕರ್ನಾಟಕದ ಜನತೆಯ ಹಿತವನ್ನು ಬಲಿ ಕೊಡುತ್ತಿದ್ದಾರೆ ಎಂದು ನಾನು ಹೇಳಬೇಕಾಗುತ್ತದೆ.

ಛೇರ್ಮನ್:– ಕ್ಲೋಸ್ ಮಾಡಿ.

SRI Y.K. RAMAIAH:– I have no other alternative. Tell me what is the other reason for keeping quiet for all these 3 months. What is the other reason? Have you called a meeting of the Cauvery and Krishna Basin legislators? Have you consulted them? You are going in a normal course. ಸನ್ಮಾನ್ಯ ಅಧ್ಯಕ್ಷರೇ, ಎರಡು ಸಾವಿರ ಇಸವಿಯೊಳಗೆ ಆ ನೀರನ್ನು ಉಪಯೋಗಿಸಿಕೊಳ್ಳಬೇಕು ಎನ್ನುವ ಆ ಕತ್ತಿ ನಮ್ಮ ತಲೆಯ ಮೇಲೆ ತೂಗಾಡುತ್ತಿದೆ. ಇನ್ನು ಕಾವೇರಿಯ ಕಥೆ. 11 ಲಕ್ಷ 20 ಸಾವಿರ ಎಕರೆಗೆ ನೀರನ್ನು ಉಪಯೋಗಿಸಿಕೊಳ್ಳುವುದಕ್ಕೆ ಸೀಮಿತಗೊಳಿಸಬೇಕು ಎಂದು ಅವರು ಹೇಳುತ್ತಿದ್ದಾರೆ. Why this Government has not taken anything with all seriousness? ನಾನು ಅದಕ್ಕೇ ನನ್ನ ಭಾಷಣವನ್ನು ಪ್ರಾರಂಭ ಮಾಡುವಾಗಲೇ ಹೇಳಿದ್ದೆ. ಕರ್ನಾಟಕದ ಈ ಎರಡೂ ಕಣ್ಣುಗಳಲ್ಲೂ ನೀರು ಬರುತ್ತಿದೆ. ಅದು ಆನಂದಭಾಷ್ಪ ಅಲ್ಲ. ನೋವು, ಅನ್ಯಾಯ, ಮೋಸ, ವಂಚನೆಯಿಂದ ಬಂದ

ಕಣ್ಣೀರು. ಏನು ಮಾಡಿದ್ದೀರಿ ಸ್ವಾಮಿ? ಪ್ರತಿ ವರ್ಷ ಅಂದಾಜು ತರುತ್ತೀರಿ, ನಾವು ಭಾಷಣ ಮಾಡುತ್ತಿದ್ದೇವೆ. ಇಂತಹ ಒಂದು ಗಂಭೀರ ಪರಿಸ್ಥಿತಿ ಇರುವಾಗ, ಇಂತಹ ಒಂದು ವೈವಿಧ್ಯಮಯ ಪರಿಸ್ಥಿತಿ ಇರುವಾಗ, ಇಂತಹ ಸಂಕಷ್ಟ ನಮ್ಮ ತಲೆಯ ಮೇಲೆ ತೂಗಾಡುತ್ತಿರುವಾಗ, ದಯವಿಟ್ಟು ನಿಮ್ಮ ಎದೆ ಮುಟ್ಟಿಕೊಂಡು ಹೇಳಿ. ಅದಕ್ಕಾಗಿ ಯಾವ ವಿಶೇಷವಾದ ಕಾರ್ಯಕ್ರಮವನ್ನು ನೀವು ಹಾಕಿಕೊಂಡಿದ್ದೀರಿ? ಮಾನ್ಯ ಉಪಮುಖ್ಯಮಂತ್ರಿಗಳೇ, ಎಷ್ಟು ದಿವಸ ನೀವು ಆ ನಾರಿಮನ್ ಹಿಂದುಗಡೆ ಓಡಾಡುತ್ತೀರಿ?

ನೀವು ಎಷ್ಟು ದಿವಸ ಬಚಾವತ್ ಕಮೀಷನ್‌ನ್ನು ಪ್ರಶ್ನೆ ಮಾಡುತ್ತೀರಿ? I am not wasting the time, I want to tell this Government. ನೀವು ಕೃಷ್ಣಾ ನೀರಿನ ಹಂಚಿಕೆ ಬಗ್ಗೆ ಇರುವ ವ್ಯಾಜ್ಯವನ್ನು ಮುಂದುವರಿಸುವುದರ ಜೊತೆಗೆ, ಕಾವೇರಿ ನೀರಿನ ವ್ಯಾಜ್ಯ ಏನು ಸರ್ವೋಚ್ಚ ನ್ಯಾಯದಲ್ಲಿವೆ. ಅದನ್ನು ಮುಂದುವರಿಸುವುದರ ಜೊತೆಗೆ, ಈ ರಾಜ್ಯದಲ್ಲಿ ಆಗಬೇಕಾಗಿರುವಂಥ ನೀರಾವರಿ ಕೆಲಸಗಳ ಅನುಷ್ಠಾನದ ವೇಗವನ್ನೂ ಜಾಸ್ತಿ ಮಾಡಬೇಕು.

ಡಾ।। ಎನ್.ಬಿ. ನಂಜಪ್ಪ:- ಅಧ್ಯಕ್ಷರೇ, ಮಾನ್ಯ ಸದಸ್ಯರು ಬಹಳ ಚೆನ್ನಾಗಿ, ಇಲ್ಲಿಯವರೆಗೂ ಅಂಕಿಅಂಶ ಕೊಟ್ಟು ಬಹಳ ನೆಗ್ಲೆಟ್ ಮಾಡಿದ್ದೀರಿ ಎಂಬ ಮಾತನ್ನು ಹೇಳಿದರು. ಅವರೂ ಕೂಡ 6-7 ವರ್ಷಗಳು ಅಧಿಕಾರದಲ್ಲಿದ್ದರು, ಆ ಸಂದರ್ಭದಲ್ಲಿ ಎಷ್ಟೆಷ್ಟು ಹಣವನ್ನು ಅಲಾಟ್‌ಮೆಂಟ್ ಮಾಡಿ, ಏನು ಪ್ರೋಗ್ರೆಸ್ ಮಾಡಿದ್ದರು, ವಿದ್ಯುಚ್ಛಕ್ತಿ ಬಗ್ಗೆ ಅಥವಾ ನೀರಾವರಿ ಬಗ್ಗೆ ಏನು ಮಾಡಿದ್ದರು ಎಂಬುದನ್ನೂ ಸ್ವಲ್ಪ ಹೇಳಿದರೆ, ಎರಡಕ್ಕೂ ಹೋಲಿಕೆ ಗೊತ್ತಾಗುತ್ತದೆ.

ಶ್ರೀ ವೈ.ಕೆ. ರಾಮಯ್ಯ:- ಸನ್ಮಾನ್ಯ ಅಧ್ಯಕ್ಷರೇ, ಅವರು ಬಹಳ ತಡವಾಗಿ ಬಂದರೆಂದು ಕಾಣುತ್ತದೆ. ನಾನು ಭಾಷಣ ಶುರು ಮಾಡುವಾಗಲೇ ಹೇಳಿದೆ. ನಾವೂ ಸೋತಿದ್ದೇವೆ ಎಂಬ ಮಾತನ್ನು ಹೇಳಿದ್ದೇನೆ. ಈ ಸದನದ ಮುಖಾಂತರವಾಗಿ ಹಾಗೂ ತಮ್ಮ ಮುಖಾಂತರ ನನ್ನ ಕಳಕಳಿ ಇಷ್ಟೆ. ಸ್ವಲ್ಪ ಹೆಚ್ಚು ಕಡಿಮೆ ಇಲ್ಲಿರುವವರಲ್ಲಿ ನೂರಕ್ಕೆ 90 ಭಾಗ ಬೇಸಾಯಗಾರರಿದ್ದೇವೆ, ಬೇಸಾಯಗಾರರ ಮಕ್ಕಳಿದ್ದೇವೆ. ಒಂದು ವೇಳೆ ಬೇಸಾಯಗಾರರು ಅಲ್ಲದಿದ್ದರೂ, ಅವರ ಮಕ್ಕಳು ಇದ್ದೇವೆ ಅಥವಾ ಬೇಸಾಯದಿಂದ ಅನ್ನ ತಿನ್ನುವವರು ಇದ್ದೇವೆ. ಅವರೆಲ್ಲರ ಪರವಾಗಿ, ಈ ಸರ್ಕಾರಕ್ಕೆ ಅತ್ಯಂತ ಗಂಭೀರವಾಗಿ ಮತ್ತು ಅತ್ಯಂತ ವಿನಯವಾಗಿ ಪ್ರಾರ್ಥನೆ ಮಾಡಿಕೊಳ್ಳುವುದಿಷ್ಟೆ. ನಿಮ್ಮ ಈ ಎರಡು ಯೋಜನೆಗಳ ಅನುಷ್ಠಾನದ ವೇಗವನ್ನು ಹೆಚ್ಚು ಮಾಡಬೇಕು. ಇದಕ್ಕೆ ಏನು ಮಾಡಬೇಕು. ಸಾಂಪ್ರದಾಯಿಕವಾದ ಪದ್ಧತಿಯಿಂದ ಸಾಧ್ಯವಿಲ್ಲ. ಇವತ್ತೇನು ನಿಮ್ಮ ಹಣಕಾಸಿನ ಪರಿಸ್ಥಿತಿ ಇದೆಯೋ, ನಿಮ್ಮ ಆಡಳಿತದ ವ್ಯವಸ್ಥೆ ಇದೆಯೋ, ನಿಮ್ಮ ಮನೋಭೂಮಿಕೆ ಇದೆಯೋ, ಅದರಿಂದ ಇದು ಸಾಧ್ಯವಾಗುವುದಿಲ್ಲ. ನಿಮಗೆ ಎರಡು ಸಾವಿರ ವರ್ಷದೊಳಗಾಗಿ, ಕೊನೆಯ ಪಕ್ಷ ಈ ಯೋಜನೆಯಿಂದ ಕ್ರಿಯೇಟ್ ಆಗಿರತಕ್ಕ ಪೊಟೆನ್‌ಷಿಯಾಲಿಟಿ I am not asking you to create new potentialities - ಇರುವಂಥ ಸಾಮರ್ಥ್ಯವನ್ನಾದರೂ ಉಪಯೋಗಿಸಿಕೊಳ್ಳಬೇಕು ಎನ್ನುವಂಥ ಪ್ರಾಮಾಣಿಕವಾದ ಆಸಕ್ತಿ ಇದ್ದರೆ, ಈ ಸಾಂಪ್ರದಾಯಿಕವಾದ ನಡವಳಿಕೆಗಳಿಂದ ಹೊರತಾದ ಕಾರ್ಯಕ್ರಮಗಳನ್ನು ನೀವು ಹಾಕಿಕೊಳ್ಳಬೇಕು. Cry halt for all these popular schemes. ವೋಟಿನ ಬೇಟೆಗಾಗಿ ನಾವೂ ಮಾಡಿದೆವು. ನಾನು ಅದಕ್ಕಾಗಿಯೇ ಮಾನ್ಯ ನಂಜಪ್ಪನವರಿಗೆ ಹೇಳಿದೆ. ವೋಟಿನ ಬೇಟೆಗಾಗಿ ನಾವು ತಾಳಿ ಭಾಗ್ಯ ತಂದೆವು. ಹಿಂದೆ, ಇಲ್ಲಿ ಮಾನ್ಯ ಕೆ. ಹೆಚ್. ಪಾಟೀಲರು ಕುಳಿತಿದ್ದರು, ಅವರು ಒಂದು ಮಾತು ಬಹಳ ತಮಾಷೆಯಾಗಿ ಹೇಳಿದರು. ನಿಮ್ಮ ಸರ್ಕಾರ ಎಲ್ಲಾ ಕಾರ್ಯಕ್ರಮಗಳನ್ನೂ ತಂದಿದೆ, ವೆಡ್ಡಿಂಗ್ ಸೆರಮನಿಗಾಗಿ, ಸಾಮಾನು ಕೊಡಿಸುವ ಕಾರ್ಯಕ್ರಮ ತರುವುದಿಲ್ಲವೇ ಎಂದು ತಮಾಷೆಯಾಗಿ ಕೇಳಿದರು. ಇವತ್ತು ಅವರು ದಿವಂಗತರಾಗಿದ್ದಾರೆ. ತಾಳಿ ಕೊಟ್ಟಿರಿ, ಸೀರೆ ಕೊಟ್ಟಿರಿ,

ಪಂಚೆ ಕೊಟ್ಟಿರಿ, ಎಲ್ಲಾ ಕೊಟ್ಟಿರಿ. ಇವತ್ತು ವೆಡ್ಡಿಂಗ್ ಸೆರಮನಿ ಸಾಮಾನು ಕೊಡುವುದಿಲ್ಲವೇ ಎಂದು ಕೇಳಿದರು. ಆದ್ದರಿಂದ ಈ ನೀರಾವರಿಗಾಗಿ ಹಣವನ್ನು ಖರ್ಚು ಮಾಡುವುದಕ್ಕಾಗಿ, ಎಲ್ಲಾ ಯೋಜನೆಗಳನ್ನೂ, ಎಲ್ಲಾ ಕಾಲಕ್ಕೂ ಸ್ಥಗಿತಗೊಳಿಸಬೇಕೆಂಬುದು ನನ್ನ ವಾದ. At least, for sometime, for some period cry halt for all these popular schemes. ವೋಟಿನ ಬೇಟೆಗಾಗಿ, ಜನರನ್ನು ಮೆಚ್ಚಿಸಲಿಕ್ಕಾಗಿ ನಾವು ಯಾವ ಯೋಜನೆಗಳಿಗೆ ಹಣವನ್ನು ಖರ್ಚು ಮಾಡುತ್ತಿದ್ದೇವೆಯೋ, ಈ ರೀತಿ ಖರ್ಚು ಮಾಡುವಂಥ ಹಣವನ್ನು, ವೆಚ್ಚವನ್ನು ದಯಮಾಡಿ ಕಡಿಮೆ ಮಾಡಿ. ಎರಡನೆಯದಾಗಿ, ನಾವು ಕೇವಲ ಸಮಸ್ಯೆಗಳನ್ನು ಸೃಷ್ಟಿಸುವುದು ಸುಲಭ, ಇದಕ್ಕೆ ಪರಿಹಾರ ಕೊಡುವುದನ್ನೂ ಕೂಡ ಅವರ ಗಮನಕ್ಕೆ ತರಬೇಕು. ನೀರಾವರಿ ಯೋಜನೆಗಳಲ್ಲಿ ಸೋರಿಕೆ ಏನಾಗುತ್ತಿದೆ ಎಂದು ಹೇಳುತ್ತಿದ್ದಾರೋ, ಈ ಸೋರಿಕೆಯನ್ನು ತಡೆಗಟ್ಟುವುದರ ಜೊತೆಗೆ, ನಾನು ಈಗಾಗಲೇ ಹೇಳಿದ್ದೇನೆ; ಅದರ ನೆಪದಲ್ಲಿ ಈ ಅನುಷ್ಠಾನದ ಪ್ರಗತಿಯ ವೇಗ ಕುಂಠಿತವಾಗುವುದು ಬೇಡ. ಇಷ್ಟನ್ನು ಹೇಳಿ, ಕೊನೆಯದಾಗಿ ನಾನು ಒಂದು ಮಾತನ್ನು ಸರ್ಕಾರಕ್ಕೆ ಹೇಳಲೇಬೇಕಾಗುತ್ತದೆ. ಎಲ್ಲಾ ಕಾಲಕ್ಕೆ, ಎಲ್ಲಾ ವಿಷಯಗಳಲ್ಲಿ, ಎಲ್ಲರನ್ನೂ, ಯಾವಾಗಲೂ ಮೋಸ ಮಾಡುವುದಕ್ಕೆ ಸಾಧ್ಯವಿಲ್ಲ. 1988ನೇ ಇಸವಿಯ ಅಕ್ಟೋಬರ್ 10ನೇ ತಾರೀಖು ಈ ಸದನದಲ್ಲಿ, ನಾನು ಆ ಕಡೆ, ಆಡಳಿತ ಪಕ್ಷದಲ್ಲಿ ಕುಳಿತು ಒಂದು ಮಾತು ಹೇಳಿದ್ದೆ.

4.50 ಪಿ.ಎಂ.

ರೈತನ ಸಂಯಮಕ್ಕೆ ಒಂದು ಮಿತಿ ಇದೆ. ಅವನು ಅನುಭವಿಸುವ ಕಷ್ಟಕಾರ್ಪಣ್ಯಗಳು ನೀರು ಇಲ್ಲದೆ ಭೂಮಿಯಲ್ಲಿ ಬೆಳೆ ಕಳೆದುಕೊಳ್ಳುವುದಕ್ಕೆ, ತಗುಲಿದ ರೋಗವನ್ನು ನಾಶ ಮಾಡುವುದಕ್ಕೂ ಸಾಧ್ಯವಿಲ್ಲವಾಗಿದೆ. ನೀವು ಏನಾದರೂ ಪ್ರಾಮಾಣಿಕ ಪ್ರಯತ್ನವನ್ನು ಮಾಡಿ ಕಾವೇರಿ ಕೊಳ್ಳದ ನೀರಾವರಿ ಯೋಜನೆಗಳನ್ನು ಅನುಷ್ಠಾನಕ್ಕೆ ತರುವುದಕ್ಕೆ ಸೋತರೆ ಕಾವೇರಿ ಕೊಳ್ಳದ ಜನರು ರೊಚ್ಚಿಗೆದ್ದಾರು ಎಚ್ಚರಿಕೆ. ಈ ಮಾತನ್ನು ನಾನು ದಿನಾಂಕ 13–10–1988ರಲ್ಲಿ ಹೇಳಿದೆ. ನೀವು ಈ ರೀತಿ ನಡೆದುಕೊಳ್ಳದಿದ್ದರೆ ಕಾವೇರಿ ಕೊಳ್ಳದ ಜನರು ರೊಚ್ಚಿಗೆದ್ದಾರು ಎನ್ನುವ ಎಚ್ಚರಿಕೆಯ ಮಾತನ್ನು ನಾನು ಆಡಳಿತ ಪಕ್ಷದಲ್ಲಿದ್ದುಕೊಂಡು ಆಡಳಿತ ಮಾಡತಕ್ಕಂಥ ಜನರಿಗೆ ನಾನು ಹೇಳಿದೆ. ಅವರು ನನ್ನ ಮಾತನ್ನು ಕೇಳಲಿಲ್ಲ. ನಾನು ಆಡಳಿತ ಪಕ್ಷದಲ್ಲಿದ್ದುಕೊಂಡು ಹೇಳಿದೆ. ಅವರೂ ಕೇಳಲಿಲ್ಲ. ಅದರ ಫಲ ಏನಾಯಿತು ಸ್ವಾಮಿ. ಕಾವೇರಿ ಕೊಳ್ಳದ ಜನರು ರೊಚ್ಚಿಗೆದ್ದು ಹತ್ತಾರು ಜನಗಳ ಪ್ರಾಣ ನಾಶವಾಯಿತು, ಕೋಟ್ಯಾಂತರ ರೂಪಾಯಿಗಳ ಆಸ್ತಿ ನಷ್ಟವಾಯಿತು. ಮತ್ತೆ ಈ ಸದನದ ಮೂಲಕ ತಮಗೆ ಅದೇ ಮಾತನ್ನು ಪುನರುಚ್ಚಾರ ಮಾಡುತ್ತೇನೆ. ನಮಗೆ ನೀರು ಎಲ್ಲಿ ಸಿಗುತ್ತದೆ. ಬೋರ್‌ವೆಲ್‌ಗಳ ಮೂಲಕ ನೀರು ಹಾಯಿಸಿಕೊಳ್ಳೋಣ ಎಂದರೆ ಕರೆಂಟ್ ಇಲ್ಲ. ಸಣ್ಣ ಕೆರೆಗಳು ಎಲ್ಲಾ ಇಂಗಿ ಹೋಗಿವೆ. ನಮಗೆ ಇರುವುದು ಇದೊಂದೇ ಮಾರ್ಗ. ನೀವು ಇದನ್ನು ಮಾಡದಿದ್ದರೆ ರೈತರ ಕೆಂಗಣ್ಣಿಗೆ ಅನುತಾಪದ, ಕಷ್ಟ ಕಾರ್ಪಣ್ಯಗಳ ಬೆಂಕಿಗೆ ಬಿದ್ದು ನೀವೂ ಕೂಡ ನಮ್ಮ ಪರಿಸ್ಥಿತಿಯನ್ನೇ ಅನುಭವಿಸಬೇಕಾಗುತ್ತದೆ. There is a limitation. ಅದಕ್ಕೆ ಸರ್ಕಾರಕ್ಕೆ ಮತ್ತೊಮ್ಮೆ ಎಚ್ಚರಿಕೆ ಕೊಡುವುದರ ಮೂಲಕ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ದಯಮಾಡಿ ಈ ಎರಡೂ ಯೋಜನೆಗಳನ್ನು ಕಾರ್ಯರೂಪಕ್ಕೆ ತರುವಂತಹ ಪ್ರಾಮಾಣಿಕ ಪ್ರಯತ್ನವನ್ನು ಮಾಡಬೇಕು. ಮಾಡದಿದ್ದರೆ ರೈತರಿಗೆ ದ್ರೋಹ ಮಾಡುವಂತಹ, ಹಿಂದಿನಿಂದಲೂ ನಡೆದುಕೊಂಡು ಬಂದಂತಹ ದ್ರೋಹ, ಮೋಸ ಮತ್ತು ಅಂಕಿ ಅಂಶಗಳ ಮಾಯಾಜಾಲ ಮುಂದುವರಿಸಿಕೊಂಡು ಹೋದಂಥ ಪರಂಪರೆಯ ಜನಾಂಗಕ್ಕೆ ನೀವೂ ಕೂಡ ಸೇರಬೇಕಾಗುತ್ತದೆ ಎನ್ನುವುದನ್ನು ಹೇಳಿ ಸನ್ಮಾನ್ಯ ಉಪ ಮುಖ್ಯಮಂತ್ರಿಗಳಿಗೆ ಅತ್ಯಂತ ಕಠಿಣವಾದ ಎರಡು ಮಾತುಗಳನ್ನು ಹೇಳಬೇಕಾಗಿದೆ. ನೀರಾವರಿ ಅಷ್ಟೇ ವಿದ್ಯುಚ್ಛಕ್ತಿ ಕೂಡ ಅಷ್ಟೇ. ಅವರು ಈಗ ತೆಗೆದುಕೊಂಡಿರುವ ಆ ಆಸಕ್ತಿ ಸಾಲದೇನೋ ಎನ್ನುವುದು ನನ್ನ ಪ್ರಾಮಾಣಿಕವಾದ

ಅನಿಸಿಕೆ. I do not now , whether I am right or wrong. ಇನ್ನೂ ಸ್ವಲ್ಪ ಹೆಚ್ಚು ಆಸಕ್ತಿ ವಹಿಸಬೇಕಾಗಿದೆ. ಅದರ ಜೊತೆಗೆ ಒಂದು ಮಾತನ್ನು ನಾನು ಕೊನೆಯದಾಗಿ ಹೇಳಬೇಕಾಗಿದೆ. ಮೊನ್ನೆ ಟಿ.ವಿ.ಯಲ್ಲಿ ಅವರು ಹೇಳಿದ ಮೇಲೆ ನಾನು ಹೇಳಬೇಕಾಗಿದೆ. The greatest threat is the finance. ದುಡ್ಡು ಖರ್ಚು ಮಾಡಬೇಕು, ಉಳಿದದ್ದು ಏನಾದರೂ ಮಾಡಿಕೊಳ್ಳುತ್ತಾರೆ. ಅವರು ಮೇಸ್ತ್ರಿ ಕೆಲಸ ಮಾಡಿಸುತ್ತಾರೆ. ದುಡ್ಡು ಕೊಡುವವರು ಯಜಮಾನರು. ಯಜಮಾನರು ದುಡ್ಡು ಕೊಡಬೇಕಲ್ಲ. ಅದಕ್ಕಾಗಿ ಒಂದು ಮಾತು ಹೇಳುತ್ತೇನೆ. ಈ ಯೋಜನೆಗಳಿಗೆ ಹಣ ತೊಡಗಿಸುವುದು ಮುಖ್ಯ ಅಲ್ಲ. ನೀವು ಹಣ ಖರ್ಚು ಮಾಡಬೇಕಾಗುತ್ತದೆ. ಸನ್ಮಾನ್ಯ ಸಚಿವರು ಬ್ಯೂರೋಕ್ರಟ್ಸ್ ಮೇಲೆ, ಮುಖ್ಯಮಂತ್ರಿಗಳ ಮೇಲೆ, ಫೈನಾನ್ಸ್ ಮಿನಿಸ್ಟರ್ ಮೇಲೆ, ಫೈನಾನ್ಸ್ ಸೆಕ್ರೆಟರಿ ಮೇಲೆ ಹಾಕುವುದಕ್ಕೆ ಹೋದರೆ ಅದು ನಮಗೆ ಹಿಡಿಸುವುದಿಲ್ಲ. ನೀವು ನಿಮ್ಮ ರಾಜಕೀಯ ಮಾಡಿಕೊಳ್ಳುವಾಗ ಬಜೆಟ್‌ನಲ್ಲಿ ಏನು ಆಶ್ವಾಸನೆ ಕೊಟ್ಟಿದ್ದೀರಿ ಆ ಪ್ರಕಾರ ನೀರಾವರಿ ಯೋಜನೆಗಳನ್ನು ಕಾರ್ಯರೂಪಕ್ಕೆ ತನ್ನಿ. ಅವಕ್ಕೆ ಬೇಕಾದ ಹಣ ಒದಗಿಸಿ. First you spend the money which is earmarked in the Budget. ಸನ್ಮಾನ್ಯ ಹಾಲಿ ಮುಖ್ಯಮಂತ್ರಿಗಳು ಈ ಸದನದಲ್ಲಿ ದಿನಾಂಕ 13ನೇ ಅಕ್ಟೋಬರ್ 1988ರಲ್ಲಿ ಆಡಿದಂತಹ ಅಮೃತ ನುಡಿಗಳು. First you spend your money which is earmarked for Irrigation in the Budget. ಮಾನ್ಯ ಮುಖ್ಯಮಂತ್ರಿಗಳು ಆಗ ಯಾವ ಅಮೃತ ನುಡಿಗಳನ್ನು ನುಡಿದಿದ್ದಾರೋ ಅದನ್ನು ಈಗ ಅನುಷ್ಠಾನಕ್ಕೆ ತರುವಂತಹ ಶಕ್ತಿ ದೇವರು ಅವರಿಗೆ ಕೊಟ್ಟಿದ್ದಾನೆ. ಅದನ್ನು ತಾವು ಮಾಡಬೇಕು. I request the Hon. chief Minister. I repeat his own words. Spend first the money for Irrigation purpose'.

ಅದು ಇಲ್ಲದಿದ್ದರೆ ಏನೂ ಆಗುವುದಿಲ್ಲ. ನೀರಾವರಿಗಾಗಿ ಹೆಚ್ಚು ಹಣ ಖರ್ಚು ಮಾಡಿ ಎಂದು ನಾನು ಒತ್ತಾಯ ಮಾಡುತ್ತೇನೆ ಎಂದು ಹೇಳಿದ್ದಾರೆ. ಬೇರೆ ವಿಷಯಗಳನ್ನೂ ಹೇಳಿದ್ದಾರೆ. ಅದನ್ನು ಹೇಳುವುದಕ್ಕೆ ಕಾಲಾವಕಾಶವಿಲ್ಲ. ಈ ನೀರಾವರಿಗೆ ಹಣ ಖರ್ಚು ಮಾಡದಿದ್ದರೆ, ನಾನು ಆಗಲೇ ಹೇಳಿದಂತೆ ಇದು ಕೇವಲ ಕನ್ನಡಿಯ ಗಂಟು ಆಗುತ್ತದೆ. ಮಾನ್ಯ ಮುಖ್ಯಮಂತ್ರಿಗಳು ಮತ್ತೂ ಒಂದು ಮಾತು ಹೇಳಿದ್ದಾರೆ. ನೀರಾವರಿಯನ್ನು ಒಂದು ಅನಾಥ ಶಿಶುವನ್ನಾಗಿ ಈ ರಾಜ್ಯದಲ್ಲಿ ಈ ಸರ್ಕಾರ ಮಾಡಿದೆ ಎಂದು ಹೇಳಿದ್ದಾರೆ. ಮಾನ್ಯ ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿಗಳಾಗಿದ್ದಾಗ ಅವರು ಆಡಿದಂತಹ ಒಂದೊಂದು ಮಾತನ್ನೂ ನಾನು ಓದುತ್ತಿದ್ದರೆ ಇದನ್ನು ಅವರೇ ಹೇಳಿದಾರೋ ಅಥವಾ ಬೇರೆಯವರು ಹೇಳಿದಾರೋ ಎನ್ನುವ ಅನುಮಾನ ಬರುತ್ತದೆ.

ಇದು ಮಾನ್ಯ ವೀರಪ್ಪ ಮೊಯಿಲಿಯವರು ಹೇಳಿದ ಮಾತು. ''ಇದು ಅತ್ಯಂತ ಪ್ರಮುಖವಾದಂಥ ನೀರಾವರಿ ವಿಷಯ. ಆದರೆ ಈ ಅನಾಥ ಶಿಶುವನ್ನು ದೇವೇಗೌಡರ ಕೈಯಲ್ಲಿ ಕೊಟ್ಟು ನೀವ್ಯಾರು ನಿದ್ರೆ ಮಾಡಬೇಡಿ''. ಅದೇ ಮಾತನ್ನು ನಾನು ಇವೊತ್ತಿನ ಸರಕಾರಕ್ಕೆ ಹೇಳುತ್ತೇನೆ. ಈ ಅನಾಥ ಶಿಶುವನ್ನು ಸನ್ಮಾನ್ಯ ಕೃಷ್ಣರವರ ಕೈಯಲ್ಲಿ ಕೊಟ್ಟು ನೀವ್ಯಾರು ನಿದ್ದೆ ಮಾಡಬೇಡಿ. ವಾದ ಮಾಡಬೇಡಿ, ಅಡ್ಡಿ ಮಾಡಬೇಡಿ ಅವರಿಗೆ ಹಣವನ್ನು ಒದಗಿಸಿಕೊಡಿ. ಅವೊತ್ತು ಬಜೆಟ್‌ನಲ್ಲಿ ಕೊಟ್ಟಿರುವಂಥ ಹಣವನ್ನು ಖರ್ಚು ಮಾಡುವಂಥ ಶಕ್ತಿ ನಿಮಗಿಲ್ಲ, ಮನಸ್ಸು ನಿಮಗಿಲ್ಲ, ಯೋಗ್ಯತೆ ನಿಮಗಿಲ್ಲ ಎಂದು ನಿಮ್ಮ ಮುಖ್ಯಮಂತ್ರಿಗಳು ಏನು ಹೇಳಿದ್ದರೋ ಆ ಮಾತನ್ನು ಇವೊತ್ತು ನಾನು ಅವರಿಗೆ ಇಷ್ಟು ಬೇಗನೇ ಹೇಳಲು ಇಷ್ಟ ಪಡುವುದಿಲ್ಲ. ಈಗ ತಾನೇ ಅವರು ಬಂದಿದ್ದಾರೆ. ಮುಂದಿನ ವರ್ಷದ ಬಜೆಟ್‌ನಲ್ಲಿ ಹೇಳೋಣ. ಈಗ ನಾನು ಅವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ, ನೀವು ಹೇಳಿದಂಥ ಮಾತುಗಳನ್ನು ದಯಮಾಡಿ ಕಾರ್ಯರೂಪಕ್ಕೆ ತನ್ನಿ. ಹಾಗೆ ಕಾರ್ಯರೂಪಕ್ಕೆ ತರುವ ಸಂದರ್ಭದಲ್ಲಿ ಆ ಅನಾಥ ಶಿಶುವನ್ನು ಅವರ ಕೈಯಲ್ಲಿ ಕೊಟ್ಟು ನೀವು ಸುಮ್ಮನೆ ಕುಳಿತುಕೊಳ್ಳಬೇಡಿ ಎಂದು

ಹೇಳಬಯಸುತ್ತೇನೆ. ಇಷ್ಟು ಹೊತ್ತು ನನಗೆ ನೀರಾವರಿ ವಿಷಯದಲ್ಲಿ ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಜಿ. ರಾಜೂಗೌಡ (ಹನೂರು):– ಮಾನ್ಯ ಸಭಾಧ್ಯಕ್ಷರೇ, ಈ ಸದನದ ಮುಂದೆ ಮಂಡಿಸಿರತಕ್ಕಂಥ ಲೋಕೋಪಯೋಗಿ ಇಲಾಖೆ, ಮಧ್ಯಮ ಭಾರಿ ನೀರಾವರಿ ಇಲಾಖೆ ಹಾಗೂ ಸಣ್ಣ ನೀರಾವರಿ ಇಲಾಖೆಗಳ ಬೇಡಿಕೆಗಳನ್ನು ಬೆಂಬಲಿಸುತ್ತಾ, ಕೆಲವು ಸಲಹೆಗಳನ್ನು ಕೊಡಲು ಇಷ್ಟ ಪಡುತ್ತೇನೆ. ಮೊಟ್ಟ ಮೊದಲನೆಯದಾಗಿ ಲೋಕೋಪಯೋಗಿ ಇಲಾಖೆಯ ಬಗ್ಗೆ ಹೇಳುವುದಾದರೆ, 1956ರಲ್ಲಿ ಪ್ರತಿ 100 ಚದರ ಕಿ.ಮೀ. ವಿಸ್ತೀರ್ಣಕ್ಕೆ ರಸ್ತೆಯ ಉದ್ದ ಸುಮಾರು 22 ಕಿ.ಮೀ. ಇತ್ತು. ಇವೊತ್ತಿನ ದಿವಸ ಅಂದರೆ 1992ರ ಮಾರ್ಚ್ ಅಂತ್ಯಕ್ಕೆ 63 ಕಿ.ಮೀ.ವರೆಗೆ ತಾವುಗಳು ಪರಿಸಿದ್ದೀರಿ. ತಾವು ಪ್ರಾದೇಶಿಕ ಅಸಮಾನತೆಯನ್ನು ಹೋಗಲಾಡಿಸತಕ್ಕಂಥ ದೃಷ್ಟಿಯಿಂದ ಪ್ರತಿಯೊಂದು ಜಿಲ್ಲೆಯಲ್ಲಿಯೂ ಕೂಡ 100 ಚದರ ಕಿ.ಮೀ.ವಿಸ್ತೀರ್ಣಕ್ಕೆ ಎಷ್ಟು ಉದ್ದದ ರಸ್ತೆಯನ್ನು ಮಾಡುತ್ತೀರಿ ಎಂಬುದನ್ನು ವಿಶ್ಲೇಷಣೆ ಮಾಡಿದ್ದರೆ, ಎಲ್ಲಿ ಈ ಹಣವನ್ನು ಖರ್ಚು ಮಾಡಿದ್ದೀರಿ, ಎಲ್ಲಿ ಮಾಡಲಿಲ್ಲ ಎಂಬ ಬಗ್ಗೆ ನಾವು ಚಿಂತನೆ ಮಾಡಬಹುದಾಗಿತ್ತು. ತಾವು ಇಡೀ ರಾಜ್ಯವನ್ನು ಒಂದು ಘಟಕವನ್ನಾಗಿ ತೆಗೆದುಕೊಂಡು, 1956ರಲ್ಲಿ ಇದರ ಪ್ರಮಾಣ ಇಷ್ಟು ಇತ್ತು, 1992ರ ಮಾರ್ಚ್ ಅಂತ್ಯಕ್ಕೆ ಇಷ್ಟು ಆಗಿದೆ, ಎಂದು ಹೇಳಿದ್ದರೆ ಎಲ್ಲಿ ತಾವುಗಳು ಆಸಕ್ತಿಗಳನ್ನು ತೋರಿಸಿದ್ದೀರಿ, ಎಲ್ಲಿ ತೋರಿಸಿಲ್ಲ ಎಂಬುದನ್ನು ನೋಡಬಹುದಾಗಿತ್ತು. ತಮ್ಮ ಉತ್ತರದಲ್ಲಿ ಇದನ್ನು ಸ್ಪಷ್ಟಪಡಿಸಬೇಕೆಂದು ಕೇಳಿಕೊಳ್ಳುತ್ತೇನೆ.

ತಾವುಗಳು 1997 ಕಿ.ಮೀ. ಉದ್ದಕ್ಕೆ ಮಾತ್ರ ರಾಷ್ಟ್ರೀಯ ಹೆದ್ದಾರಿ ಮಾಡಿದ್ದೀರಿ. ಪಕ್ಕದ ರಾಜ್ಯಗಳಲ್ಲಿನ ರಾಷ್ಟ್ರೀಯ ಹೆದ್ದಾರಿಗಳ ಉದ್ದವನ್ನು ಹೋಲಿಸಿ ನೋಡಿದಾಗ ನಮ್ಮ ರಾಜ್ಯದಲ್ಲಿ ಬಹಳ ಕಡಿಮೆ ಇದೆ. ನಮ್ಮ ರಾಜ್ಯ ಸರಕಾರವು ಈ ಬಗ್ಗೆ ಅನೇಕ ಸಾರಿ ಕೇಂದ್ರ ಸರಕಾರಕ್ಕೆ ಪ್ರಸ್ತಾವನೆಯನ್ನು ಕಳುಹಿಸಿದ್ದರೂ ಕೂಡ ಅದಕ್ಕೆ ಪುರಸ್ಕಾರ ದೊರೆತಿಲ್ಲ. ಅಥವಾ ಅವರ ಮನಸ್ಸನ್ನು ಗೆಲ್ಲಲು ತಾವುಗಳು ಸೂಕ್ತ ಪ್ರಭಾವ ಬೀರಲಿಲ್ಲ, ಮತ್ತು ಆ ದಿಶೆಯಲ್ಲಿ ತಾವುಗಳು ವಿಫಲರಾಗಿದ್ದೀರಿ ಎಂದು ಹೇಳಬೇಕಾಗುತ್ತದೆ. 1,20,600 ಕಿ.ಮೀ. ರಸ್ತೆಯಲ್ಲಿ ತಾವುಗಳು ಕೇವಲ 1997 ಕಿ.ಮೀ. ಉದ್ದದ ರಸ್ತೆಯನ್ನು ಮಾತ್ರ ಮಾಡಿಕೊಳ್ಳುವಲ್ಲಿ ಸಾಧನೆ ತೋರಿದ್ದನ್ನು ನೋಡಿದಾಗ ಕೇವಲ ಪ್ರತಿಶತ 0.5 ರಷ್ಟು ಕೂಡ ಸಾಧನೆಯಾಗಿಲ್ಲ ಎಂದು ಹೇಳಲು ವಿಷಾದವಾಗುತ್ತದೆ. ಆದ್ದರಿಂದ ತಾವುಗಳು ರಾಜ್ಯದಲ್ಲಿ ಹೊಸದಾಗಿ ಒಂದು ಹೊಸ ರಾಷ್ಟ್ರೀಯ ಹೆದ್ದಾರಿಯನ್ನು ನಿರ್ಮಾಣ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಅದು ಬೆಂಗಳೂರಿನಿಂದ ಕನಕಪುರ ಮಾರ್ಗವಾಗಿ ಮಳವಳ್ಳಿಗೆ ಬಂದು ಕೊಳ್ಳೆಗಾಲದ ಮುಖಾಂತರ ನರಸೀಪುರದ ಮೇಲೆ ಮೈಸೂರಿಗೆ ಹೋಗಬೇಕು, ಎಂಬ ಒಂದು ಪ್ರಸ್ತಾವನೆಯನ್ನು ಕಳುಹಿಸಿದ್ದಾರೆ ಎಂದು ತಿಳಿದುಬಂದಿದೆ, ದಯಮಾಡಿ ತಮ್ಮ ಪ್ರಭಾವವನ್ನು ಕೇಂದ್ರದಲ್ಲಿ ಉಪಯೋಗಿಸಿ 1993–94ರ ಸಾಲಿನಲ್ಲಿ ಆ ರಾಷ್ಟ್ರೀಯ ಹೆದ್ದಾರಿಯ ಕಾಮಗಾರಿಯನ್ನು ಕೈಗೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಲೋಕೋಪಯೋಗಿ ಇಲಾಖೆಯಡಿಯಲ್ಲಿರತಕ್ಕಂಥ ರಸ್ತೆಗಳ ದುರಸ್ತಿಗಾಗಿ ತಾವುಗಳು ಹಣವನ್ನು ಒದಗಿಸಿದ್ದೀರಿ. ಆದರೆ ಆ ಹಣವು ಎಲ್ಲಿ ಹೋಗುತ್ತದೆ, ಯಾವ ರೀತಿಯಲ್ಲಿ ಖರ್ಚಾಗುತ್ತದೆ ಎಂಬುದು ನಮಗೆ ಗೊತ್ತಾಗುವುದಿಲ್ಲ. ಒಂದು ಕಿ.ಮೀ. ರಸ್ತೆಯನ್ನು ಅಭಿವೃದ್ಧಿಪಡಿಸಲಿಕ್ಕೆ ಸುಮಾರು 12 ಲಕ್ಷ ರೂಪಾಯಿಗಳು ಬೇಕಾಗುತ್ತದೆ ಎಂದು ತಾವುಗಳು ಹೇಳುತ್ತೀರಿ. 150 ಕಿ.ಮೀ. ರಸ್ತೆಯಿರತಕ್ಕಂಥ ನನ್ನ ತಾಲ್ಲೂಕಿನಲ್ಲಿ ಆ ಹಣ ಬಂದಾಗ ಅದು ಯಾವ ರೀತಿಯಲ್ಲಿ ಖರ್ಚಾಯಿತು, ಎಲ್ಲಿ ಹೋಯಿತು ಎಂದು ಗೊತ್ತಾಗಲಿಲ್ಲ. ತಮ್ಮ ಲೋಕೋಪಯೋಗಿ ಇಲಾಖೆಯ ಸುಪರ್ದಿಗೆ ಎಷ್ಟು ರಸ್ತೆಗಳು ಬಂದಿವೆ, ಆ ರಸ್ತೆಯ ಉದ್ದವನ್ನು ಪರಿಗಣಿಸಿ ಅವುಗಳಿಗೆ ತಾವುಗಳು ಕೊಡತಕ್ಕಂಥ ಅನುದಾನವನ್ನು ಒಂದುಕಡೆಯಿಂದ ಮಾಡತಕ್ಕಂಥಾದ್ದು ಹೀಗೆ ಐದಾರು

ವರ್ಷಗಳಲ್ಲಿ ಪೂರ್ಣವಾಗಿ ರಸ್ತೆ ರಿಪೇರಿ ಮಾಡತಕ್ಕಂಥ ವ್ಯವಸ್ಥೆಯನ್ನು ಮಾಡಿಕೊಂಡರೆ ಎಲ್ಲಿ ಹೇಗೆ ಹಣ ಖರ್ಚಾಗುತ್ತದೆ ಎಂಬುದು ನಮಗೆ ಗೊತ್ತಾಗುತ್ತದೆ. ಈ ವಿಚಾರವಾಗಿ ತಾಲ್ಲೂಕು ಪಂಚಾಯತಿಯವರನ್ನು ಕೇಳಿದಾಗ ಸಮರ್ಪಕವಾದ ಉತ್ತರವು ಅವರಿಂದ ಬರುವುದಿಲ್ಲ. ಹೀಗಾಗಿ ಹಣ ಪೋಲಾಗುವುದಕ್ಕೆ ಅವಕಾಶವಾಗುತ್ತದೆ. ಬಂದಿರತಕ್ಕಂಥ ಹಣ ಖರ್ಚಾಯಿತು, ಸಾಕಷ್ಟು ರಸ್ತೆಗಳ ದುರಸ್ತಿಯನ್ನು ನಾವು ಮಾಡಿದ್ದೇವೆ ಎಂದು ಹೇಳುತ್ತಾರೆ. ಎಲ್ಲಿ ದುರಸ್ತಿ ಮಾಡುತ್ತಾರೆ? ಎಲ್ಲೋ ಒಂದು ಕಡೆ ಪ್ಯಾಚ್ ಹಾಕಿ ಸರಿಪಡಿಸುವುದು, ಮಣ್ಣು ಹಾಕುವುದು, ಇತ್ಯಾದಿಗಳನ್ನು ಮಾಡಿ ಖರ್ಚನ್ನು ಮಾತ್ರ ದೊಡ್ಡದಾಗಿ ತೋರಿಸುತ್ತಾರೆ. ಹೀಗೆ ಆಗಬಾರದು. ಪ್ರತಿಯೊಂದು ಪೈಸೆಯು ಸದ್ಬಳಕೆಯಾಗಬೇಕಾದರೆ ಒಂದು ತಾಲ್ಲೂಕಿನಲ್ಲಿ ಎಷ್ಟು ರಸ್ತೆ ಇದೆಯೋ ಅದನ್ನು ಒಂದು ಕಡೆಯಿಂದ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ನಮ್ಮ ರಾಜ್ಯದಲ್ಲಿ ಸಂಪನ್ಮೂಲಗಳು ಕಡಿಮೆ ಇದೆ. ಆದರೆ ನಮ್ಮ ಕೆಟ್ಟಿರುವ ರಸ್ತೆಗಳ ದುರಸ್ತಿಯೂ ಆಗಬೇಕಾಗಿದೆ. ಎಲ್ಲಾ ಕಡೆಗಳಲ್ಲಿ ನಮ್ಮ ರಸ್ತೆಗಳು ಕೆಟ್ಟಿವೆ.

ಹೀಗಾಗಿ ಒಂದೇ ಸಾರಿ ಎಲ್ಲಾ ರಸ್ತೆಗಳ ದುರಸ್ತಿ ಕಾರ್ಯಗಳನ್ನು ಮಾಡಲು ಹಣದ ವ್ಯವಸ್ಥೆ ಇಲ್ಲ ಮತ್ತು ಅದನ್ನು ಮಾಡಲು ಕೂಡ ಸಾಧ್ಯವಿಲ್ಲ. ನನ್ನ ಸಲಹೆ ಏನೆಂದರೆ 20–30 ಕಿ.ಮೀ. ಉದ್ದದ ರಸ್ತೆಯನ್ನು ತಾವು ಟೆಂಡರ್ ಮೂಲಕ ಕರೆದು, ಕರ ವಸೂಲು 5–6ವರ್ಷಗಳ ತನಕ ಮಾಡಬಹುದು. ಆದ್ದರಿಂದ ಹಣವು ಒದಗುತ್ತದೆ. ನಾವು ಹಾಗೆ ಕೊಡುವುದಕ್ಕೆ ತಯಾರಾಗಿದ್ದೇವೆ. ಏಕೆಂದರೆ ಕಾರ್‌ನಲ್ಲಿನ ಒಂದು ಸ್ಪ್ರಿಂಗ್ ಹೋದರೆ 2000ರೂಪಾಯಿಗಳ ಖರ್ಚು ಬರುತ್ತದೆ. ಹಾಳಾದ ರಸ್ತೆಯಲ್ಲಿ ಹೋಗಿ ಸ್ಪೇರ್‌ಪಾರ್ಟ್ಸ್‌ಗೆ ಹಣ ಕೊಡುವ ಬದಲು ಸಂಚಾರ ಮಾಡುವ ವಾಹನಗಳು ಕರವನ್ನು ಕೊಟ್ಟರೆ ಅದರಿಂದ ಲಾಭವಿದೆ. ಹೀಗೆ ವಾಹನಗಳು 2 –3 ರೂಪಾಯಿಗಳನ್ನು ಸಂಚಾರ ಕಾಲದಲ್ಲಿ ಕೊಟ್ಟೇ ಕೊಡುತ್ತಾರೆ. ಇದರ ಬಗ್ಗೆ ಚಿಂತನೆ ಮಾಡಬೇಕು, ಆದ್ದರಿಂದ ಟೆಂಡರ್ ಕರೆದು ರಸ್ತೆಯನ್ನು ಮಾಡಬೇಕು. ಟೋಲ್‌ಗೇಟ್ ಇಡಬೇಕು, ಕರ ವಸೂಲು ಮಾಡಬೇಕು, ಹೀಗೆ ರಾಜ್ಯದ ರಸ್ತೆಗಳನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಹರಿಜನವಾಡ, ಹಳ್ಳಿ ಹೆದ್ದಾರಿ, ಸೇತುಬಂಧನ ಇವುಗಳ ಬಗ್ಗೆ ತಾವು ಹೆಚ್ಚಿನ ಗಮನವನ್ನು ಕೊಟ್ಟಿಲ್ಲ. ದಯಮಾಡಿ ಆ ಬಗ್ಗೆ ಹೆಚ್ಚಿನ ಗಮನವನ್ನು ಕೊಡಬೇಕು. ನಾವೀಗ 1993ರಲ್ಲಿದ್ದರೂ ಕೂಡ ರಾಜ್ಯದಲ್ಲಿನ ಅನೇಕ ಹಳ್ಳಿಗಳಿಗೆ ಸಂಪರ್ಕವನ್ನು ಕಲ್ಪಿಸತಕ್ಕಂಥ ಕೆಲಸವನ್ನು ಮಾಡಿಲ್ಲ. ಇರುವ ರಸ್ತೆಗಳ ದುರಸ್ತಿಯೂ ಆಗಿಲ್ಲ. ಈ ಬಗ್ಗೆ ಹೆಚ್ಚಿನ ಗಮನ ಕೊಟ್ಟು ನಿಗಾ ವಹಿಸಿ ಕೆಲಸ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ರಸ್ತೆಯನ್ನು ಗುತ್ತಿಗೆದಾರರಿಗೆ ಕೊಡುತ್ತೀರಿ. ಅವನು ಜೆಲ್ಲಿಕಲ್ಲು ಹೊಡೆದು ಶೇಖರಣೆ ಮಾಡಿದ ತಕ್ಷಣ ಅವನಿಗೆ ಹಣವನ್ನು ಪಾವತಿ ಮಾಡುತ್ತೀರಿ. ದಯ ಮಾಡಿ ಹಾಗೆ ಮಾಡಬೇಡಿ. ಏಕೆಂದರೆ, ಅದೇ ಕಲ್ಲನ್ನು ಇನ್ನೊಂದು ಕಡೆ ತೆಗೆದುಕೊಂಡು ಹೋಗಿ ಹಾಕಿ ನಮಗೆ ತೋರಿಸಿ ಬಿಲ್‌ನ್ನು ತೆಗೆದುಕೊಂಡು ವಂಚನೆ ಮಾಡುತ್ತಾ ಇರುತ್ತಾರೆ. ಆದ್ದರಿಂದ ಆ ಕಲ್ಲನ್ನು ರಸ್ತೆಗೆ ಉಪಯೋಗಿಸಿದ ನಂತರ ತಾವು ಹಣವನ್ನು ಕೊಡಬೇಕೇ ಹೊರತು ಜೆಲ್ಲಿಕಲ್ಲನ್ನು ನೋಡಿ ಹಣ ಪಾವತಿ ಮಾಡಬಾರದು. ಇದನ್ನು ದಯಮಾಡಿ ಗಮನಿಸಬೇಕು. ಯಾವ ಕಾಮಗಾರಿಯಾಗಿದ್ದರೂ ಕೂಡ ಅದಕ್ಕೆ ಪೂರ್ಣ ಹಣವನ್ನು ಕೊಡದೇ ಶೇಕಡ 15ರಷ್ಟು ಹಿಡಿದಿಟ್ಟುಕೊಂಡು, ಕೆಲಸ ಸಮರ್ಪಕವೆಂದು ಕಂಡು ಪೂರ್ಣವಾದ ನಂತರವೇ ಕೊಡತಕ್ಕಂಥ ವ್ಯವಸ್ಥೆಯನ್ನು ಮಾಡಬೇಕು. ಯಾವ ರಸ್ತೆಗಳನ್ನು ಗುತ್ತಿಗೆದಾರರಿಗೆ ಕೊಡುತ್ತೀರಿ, ಆ ರಸ್ತೆಗಳನ್ನು ಎರಡು ವರ್ಷಗಳವರೆಗೆ ಯಾವ ದುರಸ್ತಿಯನ್ನೂ ಮಾಡಬಾರದು. ಹಾಗೆ ದುರಸ್ತಿಗೆ ಬಂದರೆ ಕಂಟ್ರಾಕ್ಟರ್‌ನಿಂದ ಹಿಡಿದುಕೊಂಡ ಹಣದಿಂದ ಅದನ್ನು ಮಾಡಿಸಬೇಕು. ಹಾಗೆಯೇ ಯಾವುದೇ ಒಂದು ಅಂದಾಜು ಪಟ್ಟಿಯನ್ನು ತಯಾರು ಮಾಡತಕ್ಕಂಥ ಕಾಲದಲ್ಲಿ, ಎಸ್ಟಿಮೇಟ್ ಮಾಡತಕ್ಕಂಥ ಕಾಲದಲ್ಲಿ ತಮಗೆ ಅನುಕೂಲವಾಗುವ ರೀತಿಯಲ್ಲಿ ಕಂಟ್ರಾಕ್ಟರ್ ಮಾಡಿಸಿಕೊಳ್ಳುತ್ತಾನೆ ಎಂಬ ಒಂದು ಕೆಟ್ಟ ಶಬ್ದ ಎಲ್ಲ ಕಡೆಗಳಲ್ಲಿ ಬರುತ್ತಾ ಇದೆ. ಆತನು ಹಣ ಕೊಟ್ಟು ತನಗೆ ಬೇಕಾದ ಹಾಗೆ ಎಸ್ಟಿಮೇಟ್

ಮಾಡಿಸಿಕೊಳ್ಳುತ್ತಾನೆ ಎಂದು ಅಪವಾದ ಇದೆ. ಆದರೆ ಹಣವನ್ನು ಪಾವತಿ ಮಾಡತಕ್ಕಂಥ ಕಾಲದಲ್ಲಿ ಯಾವ ಅಧೀಕ್ಷಕ ಅಭಿಯಂತರ ಕೈಕೆಳಗೆ ಬರತಕ್ಕಂಥ ಬೇರೆ ಇಂಜಿನಿಯರುಗಳಿದ್ದಾರೋ, ಎಸ್ಟಿಮೇಟ್ ತಯಾರು ಮಾಡತಕ್ಕಂಥ ಇಂಜಿನಿಯರನ್ನು ಬಿಟ್ಟು ಬೇರೆ ಇಂಜನಿಯರ್ ಕಡೆಯಿಂದ ಆ ಕಾಮಗಾರಿ ಬಗ್ಗೆ ತಾವು ಬಿಲ್ ಮಾಡಿಸತಕ್ಕ ವ್ಯವಸ್ಥೆಯನ್ನು ತರಬೇಕೆಂದು ಒತ್ತಾಯಪೂರ್ವಕವಾಗಿ ಕೇಳಿಕೊಳ್ಳುತ್ತೇನೆ. ತಾವು 1993–94, ಮತ್ತು 1994–95ರಲ್ಲಿ ಪ್ರತಿಯೊಂದು ವಿಧಾನಸಭಾ ಕ್ಷೇತ್ರಕ್ಕೂ ಕೂಡ 20 ಲಕ್ಷ ರೂಪಾಯಿಗಳ ಲೋಕೋಪಯೋಗಿ ಕಾಮಗಾರಿಗಳನ್ನು ಕೊಡುತ್ತೇವೆ ಎಂದು ಮಾನ್ಯ ಮುಖ್ಯಮಂತ್ರಿಗಳು ತಿಳಿಸಿದ್ದಾರೆ. ಈ ಬಗ್ಗೆ ನನ್ನ ಅರಿಕೆ ಇಷ್ಟೆ.

ಸೇತುವೆಯನ್ನು ಕಟ್ಟುವುದಕ್ಕೆ ಇಷ್ಟು ಉಪಯೋಗಿಸಿ, ರಸ್ತೆಯನ್ನು ರಿಪೇರಿ ಮಾಡಲು ಇಷ್ಟು ಉಪಯೋಗಿಸಿ ಎನ್ನತಕ್ಕ ನಿರ್ಬಂಧದ ಮಾತನ್ನು ಹೇಳಬೇಡಿ. ನಮಗೆ ಆದ್ಯತೆ ಕೊಡಿ. ನಾವು 20 ಲಕ್ಷ ರೂಪಾಯಿಗಳನ್ನು ರಸ್ತೆಗಾದರೂ ಉಪಯೋಗಿಸಿಕೊಳ್ಳುತ್ತೇವೆ ಅಥವಾ ಸೇತುವೆಯನ್ನು ಕಟ್ಟುವುದಕ್ಕಾದರೂ ಉಪಯೋಗಿಸುತ್ತೇವೆ ಅಥವಾ ಬೇರೆ ಯಾವುದಕ್ಕಾದರೂ ಉಪಯೋಗಿಸಿಕೊಳ್ಳುತ್ತೇವೆ. ದಯಮಾಡಿ ತಾವು ರಿಸ್ಟ್ರಿಕ್ಷನ್ ಮಾಡುವುದು ಬೇಡ. ಸೇತುವೆಗೆ ಇಷ್ಟು ಮಾಡು ಮತ್ತು ಬಿಲ್ಡಿಂಗ್‌ಗೆ ಇಷ್ಟು ಮಾಡು, ರಸ್ತೆಗೆ ಇಷ್ಟು ಮಾಡು ಎನ್ನುವುದು ಬೇಡ. ಏಕೆಂದರೆ ನಮ್ಮ ತಾಲ್ಲೂಕಿನಲ್ಲಿ ಬಹಳ ರಸ್ತೆಗಳು ಕಿತ್ತು ಹಾಳಾಗಿವೆ ಎಂದು ಇಟ್ಟುಕೊಳ್ಳೋಣ. ಜನ ಅದರ ಬಗ್ಗೆ, ನನ್ನ ಬಗ್ಗೆ ಮತ್ತು ನಮ್ಮ ಸರ್ಕಾರದ ಬಗ್ಗೆ ಮಾತನಾಡುತ್ತಿದ್ದಾರೆ. ಅದನ್ನು ತಪ್ಪಿಸಿಕೊಳ್ಳತಕ್ಕಂಥ ಉದ್ದೇಶದಿಂದ ಪೂರ್ತಿ 40 ಲಕ್ಷ ರೂಪಾಯಿಗಳನ್ನು ಉಪಯೋಗಿಸಿಕೊಂಡು ರಸ್ತೆಯನ್ನು ಮಾಡಬೇಕೆನ್ನತಕ್ಕ ಉದ್ದೇಶ ಬಂದಾಗ ತಾವು ಮುಕ್ತವಾದ ಅವಕಾಶ ಕೊಡಬೇಕು; ನಿರ್ಬಂಧವನ್ನು ಹೇರಬಾರದು. ಇದರ ಬಗ್ಗೆ ತಮಗೆ ನಾನು ಒಂದು ಸಲಹೆಯನ್ನು ಕೊಡುವುದಕ್ಕೆ ಇಚ್ಛೆಪಡುತ್ತೇನೆ. ರಾಜ್ಯದಲ್ಲಿ ಪಿ.ಡಬ್ಲ್ಯೂ.ಡಿ. ರಸ್ತೆ ಸರ್ಕಾರಕ್ಕೆ ಇದೆಯೋ ಇಲ್ಲವೋ ಎನ್ನತಕ್ಕಂಥದ್ದು ಆಗುತ್ತದೆ. ರಸ್ತೆಯಲ್ಲಿ ರಾಗಿ ಭತ್ತವನ್ನು ಹೊಕ್ಕಣೆಯನ್ನು ಮಾಡುತ್ತಾರೆ. ಎರಡು ಚಕ್ರದ ಮತ್ತು ನಾಲ್ಕು ಚಕ್ರಗಳ ವಾಹನಗಳು ಓಡಾಡಲು ತುಂಬಾ ತೊಂದರೆಯಾಗುತ್ತದೆ. ನಾನು ಇದರ ಬಗ್ಗೆ ಒಂದು ಪ್ರಸ್ತಾಪವನ್ನು ನಿಯಮ 334ರ ಕೆಳಗೆ ಈ ಸದನದ ಗಮನಕ್ಕೆ ತಂದಿದ್ದೆ. ಅವತ್ತು ಇದ್ದಂಥ ಲೋಕೋಪಯೋಗಿ ಸಚಿವರು ಇದನ್ನು ಸುತ್ತೋಲೆ ಮೂಲಕ ತಿಳಿಸುತ್ತೇವೆ ಎನ್ನತಕ್ಕ ಮಾತನ್ನು ಹೇಳಿದರು. ಆದರೂ ಇದುವರೆಗೂ ಏನೂ ತಿಳಿಸಲಿಲ್ಲ, ಏನೂ ಕೆಲಸ ಆಗಲಿಲ್ಲ. ಅನೇಕರು ಕೆಳಗಡೆ ಬಿದ್ದು, ಮಂಡಿಯನ್ನು ಮುರಿದುಕೊಂಡಿದ್ದಾರೆ, ಕೆಲವರು ಸತ್ತು ಹೋಗಿದ್ದಾರೆ. ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳೂ ಕೂಡ ಜೀಪು ಅನ್ನು ಓಡಿಸಿಕೊಂಡು ಅದರ ಮೇಲೆಯೇ ಹೋಗುತ್ತಾರೆ. ಅವರಿಗಾದರೂ ಹೇಳಬೇಕೆಂಬ ಅರಿವು ಬೇಡವೇ? ಅವರೂ ಮಾಡುವುದಿಲ್ಲ. ಆಮೇಲೆ ಹಂಪ್ಸ್ ಎಂದು ರಸ್ತೆಯಲ್ಲಿ ಹಾಕಿಬಿಡುತ್ತಾರೆ. ಒಂದು ಫರ್ಲಾಂಗ್‌ನಲ್ಲಿ 3 – 4 ಹಂಪ್ಸ್ ಇರುತ್ತದೆ. ನಾವು ಎಲ್ಲಿ ಹೋಗತಕ್ಕಂಥದ್ದು? ಅದರ ಬಗ್ಗೆಯೂ ನಿಮ್ಮ ಅಧಿಕಾರಿಗಳು ಗಮನವನ್ನು ಕೊಡುತ್ತಿಲ್ಲ. ಸರ್ಕಾರ ಹಾಕಿರತಕ್ಕಂಥ ಹಂಪ್ಸ್ ಅನ್ನು ಬಿಟ್ಟು ಖಾಸಗಿಯವರು ಯಾರು ಹಂಪ್ಸ್‌ನ್ನು ಹಾಕಿದ್ದಾರೋ ಅದನ್ನು ತೆಗೆಸತಕ್ಕಂಥ ವ್ಯವಸ್ಥೆಯನ್ನು ಮಾಡಬೇಕೆಂದು ತಮ್ಮನ್ನು ಕೇಳಿಕೊಳ್ಳುವುದಕ್ಕೆ ಇಷ್ಟ ಪಡುತ್ತೇನೆ. ನನ್ನ ತಾಲ್ಲೂಕಿನಲ್ಲಿರುವ ಸತ್ಯಗಾಲ ಸೇತುವೆ, ಕಾವೇರಿಗೆ ಅಡ್ಡಲಾಗಿ ಕಟ್ಟಿರುವ ಸೇತುವೆ ಅದು ಹಳೆ ಕಾಲದ ಸೇತುವೆ. ಅದಕ್ಕೆ ರಂಧ್ರ ಬಿದ್ದಿದೆ. ಅಲ್ಲಿ ಪ್ರತಿ ದಿವಸ ನೂರಾರು ವಾಹನಗಳು ಓಡಾಡುತ್ತಿವೆ. ಇದರ ಬಗ್ಗೆ ಗಮನ ಕೊಡಬೇಕೆಂದು ಹೇಳುತ್ತೇನೆ.

ಇನ್ನು ವಿದ್ಯುಚ್ಛಕ್ತಿಯ ಬಗ್ಗೆ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಇಷ್ಟ ಪಡುತ್ತಿದ್ದೇನೆ. ಮಾನ್ಯ ಉಪ ಮುಖ್ಯಮಂತ್ರಿಗಳು ಒಂದು ಸಂದರ್ಭದಲ್ಲಿ ಮಾತನಾಡುತ್ತಾ ಒಂದು ಮಾತನ್ನಾಡಿದ್ದಾರೆ. ಅದು ನನಗೆ ಬಹಳ ಜ್ಞಾಪಕದಲ್ಲಿದೆ. ನೀರಾವರಿ ಮತ್ತು ವಿದ್ಯುತ್ ಇಲಾಖೆಗೆ ಮಾನವೀಯ ಚುಚ್ಚುಮದ್ದನ್ನು

ನೀಡಬೇಕಾಗಿದೆ. ಜನರಿಗೆ ಒಳ್ಳೆಯದ್ದನ್ನು ಮಾಡುವ ಪ್ರಜ್ಞೆ ಬರಬೇಕಾಗಿದೆ. ಸಧ್ಯದ ಪರಿಸ್ಥಿತಿಯಲ್ಲಿ ನನಗೆ ವಿಶ್ವಾಸ ಇಲ್ಲ ಎಂದು ಹೇಳಿದ್ದಾರೆ. ಅಂದರೆ ಈಗ ಇರತಕ್ಕಂಥ ಪರಿಸ್ಥಿತಿಯಲ್ಲಿ ಆ ಇಲಾಖೆಯಲ್ಲಿ ಇರತಕ್ಕಂಥ ಅಧಿಕಾರಿಗಳ ಬಗ್ಗೆ, ಅವರ ಕಾರ್ಯ ವೈಖರಿಯ ಬಗ್ಗೆ ನನಗೆ ವಿಶ್ವಾಸ ಇಲ್ಲ ಎನ್ನತಕ್ಕ ಮಾತನ್ನು ಹೇಳಿಕೊಂಡಿದ್ದಾರೆ. ಈ ದಿಕ್ಕಿನಲ್ಲಿ ನಾನು ಸಾಗಬೇಕಾಗಿದೆ. ನನ್ನ ಇಲಾಖೆಗಳ ಬಗ್ಗೆ ಒಳ್ಳೆಯದು ಕೆಡಕುಗಳ ವಿಮರ್ಶೆಯನ್ನು ಮಾಡುತ್ತಿದ್ದೇನೆ, ನಾನು ಮೊದಲನೇ ನೀರುಗಂಟಿಯಾಗಿ ಕೆಲಸ ಮಾಡಬೇಕಾಗಿದೆ ಎನ್ನುವಂತಹ ಮಾತನ್ನು ಹೇಳಿದ್ದಾರೆ. ಅವರು ಬಹಳ ಒಳ್ಳೆಯ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ನಾನು ಮೊಟ್ಟ ಮೊದಲು ನೀರುಗಂಟಿಯಾಗಬೇಕು. ''ಆಳಾಗುವವ ಅರಸಾಗಬಲ್ಲ'' ಎಂಬ ಗಾದೆಗೆ ಅನುಗುಣವಾಗಿ ಅವರು ಕೆಲಸ ಮಾಡಬೇಕು ಎನ್ನುವಂತಹ ದೃಷ್ಟಿಯಲ್ಲಿ ಇದ್ದಾರೆ. ಮತ್ತು ಆ ಇಲಾಖೆಗಳನ್ನು ಅವರೇ ಆರಿಸಿಕೊಂಡಿದ್ದಾರೆ. ಇದು ರೈತನಿಗೆ ಬಹಳ ಹತ್ತಿರವಾಗಿರತಕ್ಕಂಥ ಇಲಾಖೆಯಾಗಿದೆ. ಈ ಇಲಾಖೆಯನ್ನು ನಾನು ಕೈಗೆತ್ತಿಕೊಳ್ಳಬೇಕು. ಬಹಳ ಚಾಕಚಕ್ಯತೆಯಿಂದ ಅವುಗಳಿಗೆ ಒಳ್ಳೆಯದು ಮಾಡಬೇಕು ಎನ್ನತಕ್ಕ ದೃಷ್ಟಿಯಿಂದ ಆ ಇಲಾಖೆಯನ್ನು ಕೈಗೆತ್ತಿಕೊಂಡಿದ್ದಾರೆ. ಇದು ಬಹಳ ಸಂತೋಷ. ದಯಮಾಡಿ ತಾವು ಏನು ಚುಚ್ಚುಮದ್ದನ್ನು ಕೊಡಬೇಕು ಎಂದು ಇದ್ದೀರೋ ಅದನ್ನು ಮಾಡಬೇಕು ಎನ್ನತಕ್ಕಂಥ ವಿಷಯವನ್ನು ಕೇಳಿಕೊಳ್ಳುತ್ತೇನೆ. ಇನ್ನು ವೋಲ್ಟೇಜ್ ಬಗ್ಗೆ ಅನೇಕ ಸಾರಿ ಈ ಸದನದಲ್ಲಿ ಪ್ರಸ್ತಾಪವಾಗಿದೆ. ಮಾನ್ಯ ಉಪಮುಖ್ಯಮಂತ್ರಿಗಳು ಈ ಇಲಾಖೆಯನ್ನು ಕೈಗೆತ್ತಿಕೊಂಡ ಮೇಲೆ, ವಿದ್ಯುತ್ ಸರಬರಾಜಿನಲ್ಲಿ ಉಂಟಾಗತಕ್ಕಂಥ ಲೋಪದೋಷಗಳನ್ನು ತಿದ್ದಲಿಕ್ಕೆ 167 ಕೋಟಿ ರೂಪಾಯಿಯನ್ನು ನಾವು ಮೀಸಲಾಗಿ ಇಟ್ಟಿದ್ದೇವೆ ಎನ್ನತಕ್ಕ ಮಾತನ್ನು ಹೇಳಿದರು. ಇದು ಬಹಳ ಒಳ್ಳೆಯದು ಸ್ವಾಮಿ. ಈಗ ವಿದ್ಯುತ್ ಸರಬರಾಜು ಆಗುತ್ತಿರುವ ತಂತಿಯಲ್ಲಿ ವಿದ್ಯುತ್ತನ್ನು ತಡೆದುಕೊಳ್ಳುವಂತಹ ಶಕ್ತಿ ಅದಕ್ಕೆ ಇಲ್ಲ. ಅದನ್ನು ಬದಲಾವಣೆ ಮಾಡತಕ್ಕದ್ದು ತುಂಬ ಶ್ರೇಯಸ್ಸು ಎನ್ನತಕ್ಕ ಮಾತನ್ನು ಹೇಳುತ್ತೇನೆ. ವೋಲ್ಟೇಜ್ ಪ್ರಾಬ್ಲಮ್ ಅನ್ನು ಕಡಿಮೆ ಮಾಡಬೇಕಾದರೆ ಈಗ ಇರತಕ್ಕಂಥ ಉಪಕರಣಗಳನ್ನು ಹೆಚ್ಚಿಗೆ ಮಾಡತಕ್ಕಂಥ ಕೆಲಸವನ್ನು ಅವರು ಮಾಡಬೇಕು. ತುಂಬಾ ದೂರವಿದ್ದಾಗ, ವಿದ್ಯುತ್ ರವಾನೆಯಾಗದೆ ಇರುವಾಗ, ಹೋಗುತ್ತಾ ಹೋಗುತ್ತಾ ಬಹಳ ಕಡಿಮೆಯಾಗಿ, ಕೊನೆಯ ಹಂತದಲ್ಲಿ ಬಹಳ ಕಡಿಮೆಯಾಗುವುದರಿಂದ ವೋಲ್ಟೇಜ್ ಪ್ರಾಬ್ಲಮ್ ಜಾಸ್ತಿ ಬರುತ್ತದೆ. ಆದ್ದರಿಂದ ದಯಮಾಡಿ ತಾವು ಅನೇಕ ಉಪಕೇಂದ್ರಗಳನ್ನು ಪ್ರಾರಂಭ ಮಾಡುವಂತಹ ಕೆಲಸವನ್ನು ಮಾಡಬೇಕೆಂದು ಹೇಳಲಿಕ್ಕೆ ಇಷ್ಟಪಡುತ್ತೇನೆ. ಈಗ ಅನೇಕ ಖಾಸಗಿ ವಲಯಕ್ಕೆ ತಾವೇನು ವಿದ್ಯುತ್ ಉತ್ಪಾದನೆಯನ್ನು ಕೊಡಬೇಕೆಂದು ಹೇಳಿದ್ದೀರಿ, ಅದು ಬಹಳ ಒಳ್ಳೆಯ ಕೆಲಸವಾಗಿದೆ. ಆದಷ್ಟು ಬೇಗ ಅದನ್ನು ಮಾಡಬೇಕು. ಕಳೆದ ವರ್ಷಕ್ಕಿಂತ ಈ ವರ್ಷ ಕೇವಲ 32 ಮೆಗೋವ್ಯಾಟ್ ವಿದ್ಯುತ್ ಮಾತ್ರ ತಾವು ಹೆಚ್ಚು ಮಾಡಿದ್ದೀರಿ, ಈ ರೀತಿ ಮಾಡುವುದರಿಂದ ಏನೂ ಸಾಕಾಗುವುದಿಲ್ಲ. ಈಗ ಉತ್ಪಾದನೆಗೂ ವಿತರಣೆಗೂ ಅಂತರ ಬಹಳ ಜಾಸ್ತಿ ಇದೆ. ಈ ಅಂತರವನ್ನು ತಾವು ಕಡಿಮೆ ಮಾಡಬೇಕು. ತಾವು ಇಷ್ಟೆಲ್ಲಾ ಉತ್ಪತ್ತಿ ಮಾಡಿದರೂ ಸಹ ನೀರಾವರಿ ವಲಯ ಅಂದರೆ ಕೃಷಿ ಕ್ಷೇತ್ರಕ್ಕೆ ವಿದ್ಯುತ್ ಶೇಕಡ 19.2 ಮಾತ್ರ ಕೊಡುತ್ತಿದ್ದೀರಿ. ಅದನ್ನು ಜಾಸ್ತಿ ಮಾಡಬೇಕೆಂದು ಕೇಳುತ್ತೇನೆ. ವಿದ್ಯುತ್ ಬಳಕೆ ಮಾಡತಕ್ಕಂಥ ರೈತರಿಗೆ ಪ್ರತಿ ಯೂನಿಟ್‌ಗೆ 50 ಪೈಸೆ ಕೊಡಬೇಕೆಂದು ಕೇಂದ್ರ ಸರ್ಕಾರ ಏನು ನಿಗದಿ ಮಾಡಿದೆ. ದಯಮಾಡಿ ಅದನ್ನು ಮಾಡುವುದಕ್ಕೆ ಹೋಗಬೇಡಿ, ಖಂಡಿತ ತಾವು ಮಾಡುವುದು ಬೇಡ, ಸರ್ಕಾರ ತುಂಬತಕ್ಕಂಥ ವ್ಯವಸ್ಥೆ ಮಾಡಬೇಕು. ಒಂದು ವೇಳೆ ಆಗಲಿಲ್ಲ ಎಂದು ಹೇಳಿದಾಗ ಫ್ಲಾಟ್‌ರೇಟ್ 150–200, 500 ರೂಪಾಯಿಗೆ ಗೊತ್ತು ಮಾಡಿ. 10 ಲಕ್ಷ ಪಂಪ್‌ಸೆಟ್ಟು, ಒಂದು ಪಂಪ್‌ಸೆಟ್ಟಿಗೆ ತಾವು 250–500 ಗೊತ್ತು ಪಡಿಸಿದ್ದರೆ ಬೇಕಾದಷ್ಟು ದುಡ್ಡು ಉತ್ಪತ್ತಿಯಾಗುತ್ತದೆ. ವಿದ್ಯುತ್ ದರವನ್ನು ಯೂನಿಟ್‌ಗೆ ಇಷ್ಟೆಂದು ತಾವು ಗೊತ್ತು ಮಾಡಿದಾಗ ರೈತರು ಬಹಳ

ರೊಚ್ಚಿಗೇಳಬೇಕಾಗುತ್ತದೆ. ಇವತ್ತು ವೋಲ್ಟೇಜ್ ಪ್ರಭಾವ ಜಾಸ್ತಿ ಇದೆ. ದಯಮಾಡಿ ಅದನ್ನು ಮುಗಿಸಬೇಕೆನ್ನತಕ್ಕ ಮಾತನ್ನು ಹೇಳುತ್ತೇನೆ.

ಅಧ್ಯಕ್ಷರು:– ಮಾನ್ಯ ರಾಜೂಗೌಡರೇ ಬೇಗ ಮುಗಿಸಿ.

ಶ್ರೀ ಜಿ.ರಾಜೂಗೌಡ:– ನಾನು ಹೇಳಬೇಕಾದದ್ದು ಬಹಳ ಇದೆ. ಮಾತನಾಡತಕ್ಕಂಥವರು ಗುತ್ತಿಗೆ ತೆಗೆದುಕೊಂಡವರು ಬೇಕಾದಷ್ಟು ಜನ ಇದ್ದಾರೆ. ನಾವು ಎಲ್ಲೋ ಅಪರೂಪಕ್ಕೆ ಮಾತನಾಡುತ್ತೇವೆ. ಈ ರಾಜ್ಯದ ಸರ್ವತೋಮುಖ ಅಭಿವೃದ್ಧಿಗೆ ನೀರಾವರಿ ಮತ್ತು ವಿದ್ಯುಚ್ಛಕ್ತಿಯೇ ಭದ್ರ ಬುನಾದಿಯಾಗಿದೆ. ನೀರಾವರಿ, ವಿದ್ಯುತ್ತಿನ ಉತ್ಪಾದನೆ ಯೋಜನೆಗಳಿಗೆ ರಾಜ್ಯ ಸರ್ಕಾರ ಅಗ್ರ ಪ್ರಾಶಸ್ತ್ಯವನ್ನು ಕೊಡುತ್ತಾ ಬಂದರೂ ಕೂಡ ಅದರ ಯೋಜನೆಯ ಅನುಷ್ಠಾನದಲ್ಲಿ ನಿರೀಕ್ಷಿಸಿದ ವೇಗದಲ್ಲಿ ನಡೆದಿಲ್ಲ ಎನ್ನುವುದು ವಾಸ್ತವಾಂಶವಾಗಿದೆ. ಮುಖ್ಯವಾಗಿ ನೀರಾವರಿ ಯೋಜನೆಗಳು ಕುಂಟುತ್ತಾ ಸಾಗುತ್ತಿರುವಂತಹ ಬಗ್ಗೆ ವಿಧಾನ–ಮಂಡಲದೊಳಗೆ ಮತ್ತು ಹೊರಗೆ ಅನೇಕ ಬಾರಿ ಪ್ರಸ್ತಾಪವಾಗಿದೆ. ಕಾವೇರಿ ಮತ್ತು ಕೃಷ್ಣ ಮೇಲ್ದಂಡೆ ಯೋಜನೆಯ ವಿಚಾರಕ್ಕಾಗಿ ತಾವು ಏನು ಹೇಳಿದ್ದೀರಿ ಎಂದರೆ, ''ಅಗತ್ಯ ಬಿದ್ದರೆ ಅಡೆತಡೆಗಳನ್ನು ಕಾಯ್ದಿಡತಕ್ಕ ದೋಷಗಳನ್ನು ಮುರಿಯುವುದರಲ್ಲಿ ನಾವು ಹಿಂಜರಿಯುವುದಿಲ್ಲ ಎನ್ನತಕ್ಕ ಮಾತನ್ನಾಡಿದ್ದೀರಿ. ಇದು ಬಹಳ ಸಂತೋಷವಾಗಿರತಕ್ಕಂಥ ವಿಷಯ. ಅಂದ ಮೇಲೆ ತಾವು ಆದಷ್ಟು ಬೇಗನೆ ಈ ಕೆಲಸವನ್ನು ಪ್ರಗತಿ ಪಥದಲ್ಲಿ ಕೊಂಡುಹೋಗಬೇಕೆನ್ನುವ ತಮ್ಮ ಕಳಕಳಿ ಏನಿದೆ ಆ ಕಳಕಳಿ' ತಮ್ಮ ಮಾತಿನಲ್ಲಿ ಅರ್ಥವಾಗುತ್ತದೆ.

ದಯಮಾಡಿ ಆ ಕೆಲಸವನ್ನು ತಾವು ಮಾಡಬೇಕು. ಒಂದು ವಿಷಾದದ ಸಂಗತಿಯೆಂದರೆ, ಕಳೆದ ವರ್ಷ ಕೃಷ್ಣಾ ಮೇಲ್ದಂಡೆ ಯೋಜನೆಗೆ ಒದಗಿಸಿರತಕ್ಕಂಥ ಹಣದಲ್ಲಿ 35 ಕೋಟಿ ರೂಪಾಯಿ ಬಳಕೆಯಾಗಿಲ್ಲ. 35 ಕೋಟಿ ರೂಪಾಯಿಯನ್ನು ತಾವು ಖರ್ಚು ಮಾಡಲಿಲ್ಲ. ಈ ಸಾರಿಯ ಬಜೆಟ್ ಅನ್ನು ನೋಡಿದಾಗ ವಿದ್ಯುತ್ ಮತ್ತು ನೀರಾವರಿಗೆ 1500 ಕೋಟಿ ರೂಪಾಯಿಯನ್ನು ಇಟ್ಟಿದ್ದೀರಿ. 230 ಕೋಟಿ ರೂಪಾಯಿಗಳು ಸಂಭಾವನೆ, ವೆಚ್ಚಕ್ಕೆ ಸಾದಿಲ್ವಾರ್ ಮತ್ತು ಕಣ್ಣಿಗೆ ಕಾಣದ್ದಕ್ಕೆ ಖರ್ಚಾದರೂ ಕೂಡ ಇನ್ನು 1000 ಕೋಟಿ ರೂಪಾಯಿಗಳನ್ನು ತಾವು ಖರ್ಚು ಮಾಡಬೇಕಾದರೆ ಪ್ರತಿನಿತ್ಯ 3.5 ಕೋಟಿ ರೂಪಾಯಿಗಳನ್ನು ತಾವು ಖರ್ಚು ಮಾಡಬೇಕು. ಈ ರೀತಿ ಮಾಡಲಿಕ್ಕೆ ಸಾಮರ್ಥ್ಯ ಇದೆಯೇ? ಅದಕ್ಕೆ ಸಾಧನ ಸಲಕರಣೆಗಳು ಇದೆಯೇ? ಖರ್ಚು ಮಾಡುವುದಕ್ಕೆ ಆಗುತ್ತದೆಯೇ ಎನ್ನುವುದನ್ನು ಯೋಜನೆ ಮಾಡಬೇಕು. ಖರ್ಚು ಮಾಡಬೇಕಾದರೆ ಯಾವ ರೀತಿ ಖರ್ಚು ಮಾಡಬೇಕೆಂದು ಚಿಂತನೆ ಮಾಡಿ ಅನಂತರ ಖರ್ಚು ಮಾಡಿದರೆ ಮಾತ್ರ ಆ ಕೆಲಸ ಆಗುತ್ತದೆ. ಸಾಮಾನ್ಯವಾಗಿ ಆರ್ಥಿಕ ವರ್ಷದ ಪ್ರಾರಂಭದಲ್ಲಿ ಮಾತ್ರ ಕೆಲಸ ನಡೆಯುತ್ತದೆ. ಡಿಸೆಂಬರ್ ತಿಂಗಳಲ್ಲಿ, ಆಗಸ್ಟ್ ತಿಂಗಳಲ್ಲಿ, ಅಕ್ಟೋಬರ್ ತಿಂಗಳಲ್ಲಿ ಹಣ ಕೊಟ್ಟರೆ ಏನು ಕೆಲಸ ಮಾಡಲಿಕ್ಕೆ ಆಗುತ್ತದೆ. ಯಾವುದೇ ಇಲಾಖೆಯಾಗಲಿ, ಲೋಕೋಪಯೋಗಿ ಇಲಾಖೆಯಾಗಲಿ, ಸಣ್ಣ ನೀರಾವರಿ ಇಲಾಖೆಯಾಗಲಿ ಯಾವುದೇ ಆಗಲಿ, ಆರ್ಥಿಕ ವರ್ಷದ ಪ್ರಾರಂಭದಲ್ಲಿ ನಿಗದಿ ಮಾಡಿದ ಹಣವನ್ನು ತಾವು ಕೊಟ್ಟಾಗ ಆ ಹಣ ಸದುಪಯೋಗವಾಗುತ್ತದೆ. ದಯಮಾಡಿ ಅಂತಹ ಕೆಲಸವನ್ನು ತಾವು ಏಪ್ರಿಲ್ ಒಂದನೇ ತಾರೀಖಿನಿಂದ ತಾವು ಶುರು ಮಾಡಬೇಕೆಂದು ನಾನು ಹೇಳಲಿಕ್ಕೆ ಇಷ್ಟ ಪಡುತ್ತಿದ್ದೇನೆ. ಕರ್ನಾಟಕ ನದಿ ನೀರಿನ ಬಗ್ಗೆ ಅವರು ಸಾಕಷ್ಟು ಮಾತನಾಡಿದ್ದಾರೆ. ಸರ್ಕಾರ ಒದಗಿಸತಕ್ಕಂಥ ಹಣ ಪೂರ್ಣವಾಗಿ ಬಳಕೆಯಾಗಬೇಕಾದರೆ ತಮ್ಮ ಕಛೇರಿಯನ್ನು ಕೃಷ್ಣಾ ಮೇಲ್ದಂಡೆಗೆ ವರ್ಗಾಯಿಸುವುದು ಒಳ್ಳೆಯದು ಎಂದು ನನಗೆ ಅನ್ನಿಸುತ್ತದೆ. ನಾವು ಅನೇಕ ಜನ ಶಾಸಕರುಗಳು ತಮ್ಮ ಪ್ರಭಾವವನ್ನು ಉಪಯೋಗಿಸಿ ಕೃಷ್ಣ ಮೇಲ್ದಂಡೆಗೆ ಹಾಕಿರತಕ್ಕಂಥ ಅಧಿಕಾರಿಗಳ

ವರ್ಗಾವಣೆಯನ್ನು ರದ್ದು ಮಾಡತಕ್ಕಂಥ ಕೆಲಸವನ್ನು ಮಾಡುತ್ತಾರೆ. ಅದು ಹಿತಕರವಲ್ಲ. ಅದು ಯೋಜನೆಯ ಮೇಲೆ ದುಷ್ಪರಿಣಾಮ ಬೀರುವುದರಿಂದ ದಯಮಾಡಿ ನಾವು ಯಾರೂ ಕೂಡ ಅಂತಹ ಕೆಲಸಕ್ಕೆ ಕೈಹಾಕಬಾರದು. ಎನ್ನತಕ್ಕಂಥ ಮಾತನ್ನು ಹೇಳುತ್ತಾ, ಆ ಅಧಿಕಾರಿಗಳು ಅಲ್ಲಿಗೆ ಹೋಗಿ ಕೆಲಸ ಮಾಡಲಿಕ್ಕೆ ಸೂಕ್ತ ರೀತಿಯಲ್ಲಿ ವ್ಯವಸ್ಥೆಯನ್ನು ಮಾಡಿಕೊಡಬೇಕು. ಇವರಿಗೆ ಇನ್‌ಸೆಂಟಿವ್ ಅನ್ನು ತಾವು ಕೊಟ್ಟರೆ ಒಳ್ಳೆಯದು ಎನ್ನತಕ್ಕ ಮಾತನ್ನು ಹೇಳುತ್ತೇನೆ. ನಮ್ಮ ಸರ್ಕಾರ ಅಗತ್ಯ ಪ್ರಮಾಣದಲ್ಲಿ ಸಂಪನ್ಮೂಲವನ್ನು ರೂಢಿಸಿಕೊಳ್ಳದೆ, ಇಷ್ಟನೇ ಇಸವಿಯೊಳಗೆ ಆ ಯೋಜನೆಯನ್ನು ಪೂರ್ಣ ಮಾಡುತ್ತೇವೆ ಎನ್ನತಕ್ಕಂಥದ್ದು ಜನ ಮೆಚ್ಚುವ ವಿಷಯವಾಗಿದೆ. ಈ ವಿಷಯವನ್ನು ನಾನು ಒಪ್ಪುವುದಿಲ್ಲ. ಹಿಂದಿನ ಸರ್ಕಾರ ನೀರಾವರಿ ಬಾಂಡ್‌ನ ಮೂಲಕ ಚಂದಾವನ್ನು ಎತ್ತಬೇಕೆಂದು ಹೇಳಿ ಆ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿತ್ತು. ಆ ಪ್ರಸ್ತಾವನೆ ಏನಾಯಿತು? ಆ ಪ್ರಸ್ತಾವನೆಯನ್ನು ಕೇಂದ್ರ ಅಂಗೀಕಾರ ಮಾಡಿದರೆ ತಾವು ನೀರಾವರಿಯ ಬಾಂಡ್ ಮುಖಾಂತರ ಚಂದಾ ಹಣವನ್ನು ಎತ್ತಬಹುದು ಮತ್ತು ಈ ನೀರಾವರಿ ಕಾಮಗಾರಿಗಳನ್ನು ಪೂರ್ಣಗೊಳಿಸಬಹುದು ಎನ್ನತಕ್ಕಂಥ ಒಂದು ಸಲಹೆಯನ್ನು ಕೊಡುತ್ತಾ, ಇನ್ನೂ ಅನೇಕ ವಿಷಯಗಳ ಬಗ್ಗೆ ನಾನು ಮಾತನಾಡಬೇಕಾಗಿದೆ. ಆದರೆ ಅವಕಾಶವಿಲ್ಲ, ಇಷ್ಟು ಮಾತನ್ನು ಹೇಳುತ್ತೇನೆ. ಆಂಧ್ರಪ್ರದೇಶ ಸರ್ಕಾರ ನಾಗಾರ್ಜುನ ಸಾಗರವನ್ನು ಮಾಡುವಾಗ ಎಲ್ಲಾ ಅನುತ್ಪಾದನಾ ಕಾರ್ಯಕ್ರಮಗಳಿಗೆ ತಡೆಯೊಡ್ಡಿ ಹೆಚ್ಚಿನ ಸಂಪನ್ಮೂಲಗಳನ್ನು ನೀರಾವರಿ ಕೆಲಸಕ್ಕೆ ಉಪಯೋಗಿಸಿ ಅವರು ಯಾವ ರೀತಿ ನಾಗಾರ್ಜುನ ಸಾಗರವನ್ನು ಮಾಡಿದರೋ ಅದೇ ರೀತಿ ತಾವು ಒಂದು ಚಿಂತನೆಯನ್ನು ಮಾಡಿ ಅನುತ್ಪಾದನಾ ಬಾಬುಗಳಿಗೆ ವೆಚ್ಚವನ್ನು ಕಡಿಮೆ ಮಾಡಿ, ಈ ಕೆಲಸವನ್ನು ಮಾಡತಕ್ಕದ್ದು ಒಳ್ಳೆಯದು ಎಂದು ಹೇಳುತ್ತೇನೆ. ಸಣ್ಣ ನೀರಾವರಿಯ ಬಗ್ಗೆ ಹೇಳುವುದಾದರೆ.

ಮಾನ್ಯ ಸಚಿವರೇ ಹೊಸ ಕಾಮಗಾರಿಗಳು ಏನೂ ಬೇಕಾಗಿಲ್ಲ. ಇರುವಂತಹ ಸಣ್ಣ ಕೆರೆಗಳಲ್ಲಿ ಹೂಳು ತೆಗೆಸಿ ನೀರಿನ ಸಂಗ್ರಹಣೆಯ ಸಾಮರ್ಥ್ಯವನ್ನು ಜಾಸ್ತಿ ಮಾಡಿದರೆ ಹೊಸ ಕೆರೆಗಳನ್ನು ಮಾಡಿದ ಹಾಗೆ ಆಗುತ್ತದೆ. ಇದರಿಂದ ರೈತರಿಗೆ ಬಹಳ ಅನುಕೂಲ ಆಗುತ್ತದೆ. ಹೊಲಕ್ಕೆ ಗೊಬ್ಬರವಾಗುತ್ತದೆ. ನೀರಿನ ಶೇಖರಣೆ ಜಾಸ್ತಿಯಾಗುತ್ತದೆ. ತನ್ಮೂಲಕ ನೀರಾವರಿ ಸಾಮರ್ಥ್ಯ ಜಾಸ್ತಿಯಾಗುತ್ತದೆ. ದಯಮಾಡಿ ಈ ಒಂದು ಕೆಲಸಕ್ಕೆ ವಿಶ್ವಬ್ಯಾಂಕಿನ ಜೊತೆ ಒಪ್ಪಂದ ಮಾಡಿಕೊಂಡು ನಮ್ಮ ರಾಜ್ಯದಲ್ಲಿ ಹೆಚ್ಚು ಕೆರೆಗಳ ಹೂಳು ತೆಗೆಯುವಂಥ ಅವಶ್ಯಕತೆ ಇದೆ ಎಂದು ಹೇಳುತ್ತೇನೆ. ಸುಮಾರು 12 ತಿಂಗಳುಗಳ ಕಾಲವೂ ನೀರನ್ನು ಶೇಖರಣೆ ಮಾಡುವಂತಹ ಒಂದು ಸಾಮರ್ಥ್ಯ ನಮ್ಮ ಕೆರೆಗಳು ಪಡೆಯುವಂತಹ ಒಂದು ವ್ಯವಸ್ಥೆಯನ್ನು ಮಾಡಬೇಕೆಂದು ಹೇಳಿ, ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಜೆ.ಸಿ. ಮಧುಸ್ವಾಮಿ (ಚಿಕ್ಕನಾಯಕನಹಳ್ಳಿ):- ಮಾನ್ಯ ಅಧ್ಯಕ್ಷರೇ, ಬೇಡಿಕೆಗಳ ಪೈಕಿ ವಿದ್ಯುತ್ ಬೇಡಿಕೆ ಬಗ್ಗೆ ನಾನು ಮಾತನಾಡುವುದಕ್ಕೆ ಬಯಸುತ್ತೇನೆ. ತಾವು ನನಗೆ ಹೆಚ್ಚು ಕಾಲವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಈ ವಿದ್ಯುತ್ ಇಲಾಖೆಯವರೇ ಕೊಟ್ಟ ವರದಿಯಂತೆ ಅವರ ಇಲಾಖೆಯನ್ನು ಮೂರು ಭಾಗಗಳನ್ನು ಮಾಡಿಕೊಂಡಿದ್ದಾರೆ. ಈ ಮೂರು ಭಾಗಗಳು ಬಹುಶಃ ಯಾವುದೇ ಗುರಿಯನ್ನು ಇಟ್ಟುಕೊಳ್ಳದೆ, ನಿರೀಕ್ಷಣೆ ಇಟ್ಟುಕೊಳ್ಳದೆ, ತನ್ಮೂಲಕ ಕೆಲಸ ಕೂಡ ಅಷ್ಟೇ ಉದಾಸೀನ ಮಾಡಿ ರಾಜ್ಯದಲ್ಲಿ ಕೆ.ಇ.ಬಿ. ಅಥವಾ ವಿದ್ಯುತ್ ಸರಬರಾಜನ್ನು ಅತ್ಯಂತ ದುಸ್ಥಿತಿಗೆ ತಂದು ನಿಲ್ಲಿಸಿದ್ದಾರೆ. ಇವತ್ತು ವಿದ್ಯುಚ್ಛಕ್ತಿ ಎಲ್ಲಾ ಕಾರ್ಯಕ್ರಮಗಳಿಗೆ ಪೂರಕವಾದ ಅಂಶವಾಗಿದ್ದು, ಈ ವಿದ್ಯುತ್ ವಿಫಲತೆಯಿಂದಾಗಿ ಎಲ್ಲಾ ಕಾರ್ಯಕ್ರಮಗಳಲ್ಲಿ ನಾವು ಹಿಂದೆ ಹೋಗಿದ್ದೇವೆ. ಅದು ಕೃಷಿ ಇರಬಹುದು, ಕೈಗಾರಿಕೆ ಇರಬಹುದು; ಮತ್ತೊಂದು ಇರಬಹುದು. ವಿದ್ಯುತ್ ಮಂಡಳಿಯವರೇನೋ ಒಂದು ನಿಗದಿತ ಕಾಲಕ್ಕೆ ಕೆಲಸಗಳನ್ನು ಮುಗಿಸಲಿಲ್ಲ. ಇದರ ಪರಿಣಾಮ ಎಲ್ಲರ ಮೇಲೂ

ಆಗಿರುವುದರಿಂದ ಈಗಲಾದರೂ ಅವರು ಚುರುಕಾಗಬೇಕೆಂದು ಕೇಳಿಕೊಂಡು, ಈ ಬೇಡಿಕೆಯನ್ನು ವಿರೋಧ ಮಾಡುತ್ತಾ ನಾನು ಮಾತನಾಡುತ್ತೇನೆ. ಮೂಲಭೂತವಾಗಿ ಕೆ.ಪಿ.ಸಿ. ಬಗ್ಗೆ ಮಾತನಾಡುವುದಾದರೆ, ಕರ್ನಾಟಕ ಪವರ್ ಕಾರ್ಪೋರೇಷನ್‌ನವರಿಗೆ ಯಾವುದೇ ಜವಾಬ್ದಾರಿ ಇವತ್ತಿನವರೆಗೆ ಇದೆಯೆಂದು ನಾನು ಭಾವಿಸುವುದಕ್ಕೆ ಸಾಧ್ಯವಿಲ್ಲ. ಏಕೆಂದರೆ ಅವರು ಯಾವತ್ತೂ ಜವಾಬ್ದಾರಿಯುತವಾಗಿ ವರ್ತಿಸಿಲ್ಲ; ಯಾವತ್ತು ಕನ್‌ಸ್ಯೂಮರ್ ಲೆವಲ್‌ನಲ್ಲಿ ಉತ್ತರ ಹೇಳುವ ಸ್ಥಿತಿಯಲ್ಲಿ ನಿರ್ಮಾಣವಾಗಲಿಲ್ಲ. ಅವರು ಏನು ಮಾಡಿದರು ಎಂದರೆ ಕೆ.ಇ.ಬಿ.ಯವರಿಗೆ ಮಾರಿದರು.

ಅವರ ಬ್ಯಾಲೆನ್ಸ್ ಶೀಟ್‌ನಲ್ಲಿ ಪ್ರಾಜೆಕ್ಟ್‌ಗೆ ದುಡ್ಡು ಕೊಟ್ಟಿದ್ದು ಲಾಭವನ್ನು ತೋರಿಸಿಕೊಂಡು ಇವತ್ತು ಕೆ.ಇ.ಬಿ.ಯವರನ್ನು ಅಷ್ಟು ಸಮಸ್ಯೆಗಳಿಗೆ ಗುರಿ ಮಾಡಿ ಕುಳಿತಿದ್ದಾರೆ. ಇವರೇನು ಇಂಗ್ಲೀಷ್‌ನವರೇ ಅಥವಾ ಹೊರಗಡೆಯಿಂದ ಬಂದವರೇ ? ಹಾಗೆ ಏನೂ ಇಲ್ಲ. ಅವರೂ ನಮ್ಮವರೆ. ಕೆ.ಇ.ಬಿ.ಯಲ್ಲಿದ್ದವರನ್ನೇ ಅಲ್ಲಿಗೆ ಡೆಪ್ಯೂಟೇಷನ್ ಮಾಡಿದ್ದೀರಿ.

ಪ್ರಾಜೆಕ್ಟ್‌ನ್ನು ಸರಿಯಾದ ಕಾಲಕ್ಕೆ ಮುಗಿಸಿ ಎಂದು ಹೇಳಿದ್ದೆವು. ಆದರೆ. ಅದನ್ನು ಮಾಡಲಿಲ್ಲ. ನಾನು ಒಂದು ಉದಾಹರಣೆಯನ್ನು ತಮಗೆ ಹೇಳಬೇಕಾಗುತ್ತದೆ. ಶರಾವತಿಯಲ್ಲಿ ನಮಗೆ ಹತ್ತು ಯೂನಿಟ್‌ಗಳು ಸಿಕ್ಕಿತು, ಸಕಾಲದಲ್ಲಿ ಸರಿಯಾಗಿ ಏಳೂ ಕೂಡ ಕೆಲಸ ಮಾಡಲಿಲ್ಲ. ಅದರ ಕೆಪಾಸಿಟಿಯನ್ನು ಅನೌನ್ಸ್ ಮಾಡಬೇಕಾಗಿತ್ತು. ಅದರ ಕೆಪಾಸಿಟಿ 89 ಮೆಗಾವಾಟ್‌ನಿಂದ 103 ಮೆಗಾವ್ಯಾಟ್‌ಗೆ ಹೋಗಬೇಕಾಗಿತ್ತೆಂದು ಹೇಳಿದ್ದಾರೆ. ಆದರೆ ಇವರು ಎರಡನ್ನು ಮಾತ್ರ ತಯಾರಿ ಮಾಡಿದ್ದಾರೆ. ಇನ್ನಷ್ಟು ಅಲ್ಲಿ ಹಾಗೆಯೇ ಉಳಿದಿದೆ. ಅದೇ ರೀತಿ ರಾಯಚೂರಿನಲ್ಲಿ ಥರ್ಮಲ್ ಯೂನಿಟ್ ಮೂರು ಯೂನಿಟ್ ಕೂಡ ಕಾಲಕ್ಕೆ ಸರಿಯಾಗಿ ಒಂದೇ ಸಮನಾಗಿ ಕೆಲಸ ಮಾಡಲಿಲ್ಲ. ಯಾವುದಾದರೂ ಒಂದು ಯೂನಿಟ್ ಫೈಲ್ಯೂರ್ ಆಗಿರುತ್ತದೆ. ಈ ಸ್ಥಿತಿ ಇಡೀ ರಾಜ್ಯದಲ್ಲಿ ಇದ್ದುದ್ದರಿಂದ ನಿಮಗೆ ಏನು ಅನುಕೂಲವಾಯಿತು ? ಒಂದು ಕಡೆ ಪ್ರಕೃತಿ ವಿಕೋಪ ಆಯಿತು. ಮತ್ತೊಂದು ಕಡೆ ನಿಮ್ಮದೇ ಆದ ತೊಂದರೆಗಳಿಂದ ಜನರನ್ನು ಸಂಕಷ್ಟಕ್ಕೆ ಗುರಿ ಮಾಡಿದ್ದೀರಿ. ಇವತ್ತು ವಿದ್ಯುತ್ ಎಷ್ಟು ರಿಕ್ವೈರ್‌ಮೆಂಟ್ ಇದೆ ಮತ್ತು ಎಷ್ಟು ಪೂರೈಕೆ ಮಾಡುತ್ತಿದ್ದೇವೆ ಎಂಬುದನ್ನು ಇವತ್ತಿನವರೆಗೂ ತಾಳೆ ಮಾಡಿಲ್ಲ. ಏನೋ ಮಕ್ಕಿಕಾಮಕ್ಕಿ ನಡೆಸಿಕೊಂಡು ಹೋಯಿತು.

ಅವರೇ ಹೇಳುವ ಪ್ರಕಾರ ಹೈಡಲ್ ಯೂನಿಟ್ ಅನ್ನು ಪವರ್ ಜನರೇಟ್ ಮಾಡುವುದಕ್ಕೆ ಕಮಿಷನ್ ಮಾಡುವುದಕ್ಕೆ ನಮಗೆ ಏಳು ವರ್ಷಗಳು ಬೇಕು. ಥರ್ಮಲ್. ಯೂನಿಟ್ ಆದರೆ ಮೂರು ವರ್ಷಗಳು ಬೇಕು, ಡೀಸಲ್ ಯೂನಿಟ್ ಆದರೆ ಒಂದು ವರ್ಷ ಬೇಕು. ಈ ಸಮಸ್ಯೆ ಆರಂಭ ಆದ ಮೇಲೆ ಎಷ್ಟು ಡೀಸಲ್ ಯೂನಿಟ್‌ಅನ್ನು ಕಮೀಷನ್ ಮಾಡಿದ್ದೀರಿ ಎಂಬ ಪ್ರಶ್ನೆಯನ್ನು ಕೇಳಬೇಕಾಗುತ್ತದೆ. ಹೈಡಲ್ ಯೂನಿಟ್ ಅಥವಾ ನೀರಿನಿಂದ ಬರುವ ವಿದ್ಯುಚ್ಛಕ್ತಿಯನ್ನು ತಂದು ಇವರು ಕಾರ್ಯಾರಂಭ ಮಾಡಬೇಕು ಎಂದರೆ ಏಳು ವರ್ಷಗಳು ಬೇಕಾಗುತ್ತದೆ. ಇವತ್ತು ಈ ಯೋಜನೆಯನ್ನು ಪ್ರಾರಂಭಿಸಿದರೆ ಇನ್ನು ಏಳು ವರ್ಷಕ್ಕೆ ಅದರಿಂದ ವಿದ್ಯುಚ್ಛಕ್ತಿ ಸರಬರಾಜು ಆರಂಭ ಮಾಡಬಹುದು. ಥರ್ಮಲ್ ಯೂನಿಟ್‌ಗೆ ಮೂರು ವರ್ಷಗಳು ಬೇಕು. ಡೀಸಲ್ ಯೂನಿಟ್ ಬಗ್ಗೆ 1983 –84 ರಿಂದ ಮಾತನಾಡಿಕೊಂಡು ಬಂದಿದ್ದೀರಿ, ಯಾವುದೂ ಜನರೇಟ್ ಮಾಡುತ್ತಿಲ್ಲ. ಯಲಹಂಕದ್ದು ಮಾಡುತ್ತಿಲ್ಲ ಮತ್ತು ಕೋಲಾರದ್ದು ಸತ್ತು ಹೋಗಿದೆ. ಬೇರೆ ಯಾವ ಭಾಗದಲ್ಲೂ ನೀವು ಇದುವರೆಗೂ ಕೆಲಸ ಆರಂಭ ಮಾಡಿಲ್ಲ. ಇದರಿಂದ ಏನಾಯಿತು ಎಂದರೆ ಆಂಟಿಸಿಪೇಟ್ ಮಾಡಿದ ಪವರನ್ನು ನೀವು ತೆಗೆದುಕೊಳ್ಳುವುದಕ್ಕೆ ಆಗಲೇ ಇಲ್ಲ. ಪ್ರತಿ ದಿವಸ, ಪ್ರತಿ ಗಂಟೆ ಮೂರು ಸಾವಿರ ಮಿಲಿಯನ್ ಯೂನಿಟ್ ಕಡಿಮೆ ಇದೆ. ಇದನ್ನು ಎಲ್ಲಿಂದ ತಂದುಕೊಡುತ್ತೀರಿ. ಅಷ್ಟು ತಂದು

ಕೊಡುವುದಕ್ಕೆ ನಿಮಗೆ ಬೇರೆ ಯಾರೂ ರೆಡಿಯಾಗಿಲ್ಲ. ಯಾರೂ ಭಾರಿ ಶ್ರೀಮಂತರು ಪವರ್ ಜನರೇಷನ್‌ನಲ್ಲಿ ಈ ರಾಷ್ಟ್ರದಲ್ಲಿ ಇಲ್ಲ. ಈ ಮಾತನ್ನು ನಾನು ಏಕೆ ಹೇಳುತ್ತಿದ್ದೇನೆ ಎಂದರೆ, ಇದರ ಬಗ್ಗೆ ನಾವು ಕಾರ್ಯಕ್ರಮವನ್ನು ರೂಪಿಸಿಕೊಂಡು ಬಂದಿದ್ದೇವೆ, ಅದರ ರಿಪೋರ್ಟ್‌ನ್ನು ತಮ್ಮ ಮುಂದೆ ಹೇಳಬೇಕಾಗುತ್ತದೆ.

ಇವರು ನಿರೀಕ್ಷೆ ಮಾಡಿದ್ದಕ್ಕಿಂತ ಹೆಚ್ಚು ಸಹಕಾರಿಯಾಗಿ ಕಳೆದ ವರ್ಷ ಹೈಡಲ್ ಯೂನಿಟ್ಸ್‌ನಿಂದ ಜನರೇಷನ್ ಆಗಿದೆ. ಥರ್ಮಲ್ ಮತ್ತು ಬೇರೆ ಮಾರ್ಗದಿಂದ ನೀವು ನಿರೀಕ್ಷಿಸಿದಕ್ಕಿಂತ ಕಡಿಮೆ ಜನರೇಷನ್ ಆಗಿದೆ. ಏಕೆ ಹೀಗಾಯಿತು ಎಂದು ಯಾರೂ ಕೇಳಲಿಲ್ಲ. 2.8 ಪರ್ಸೆಂಟ್ ಕಡಿಮೆಯಾಯಿತು. 3.2 ಪರ್ಸೆಂಟ್ ಕಡಿಮೆಯಾಯಿತು, ನಮಗೆ ಬೇರೆ ನಿರೀಕ್ಷಣೆ ಮಾಡಿದ ಮೋಡ್ ಆಫ್ ಪವರ್ ಜನರೇಷನ್‌ನಿಂದ ಎಂದು ತಾವೇ ಹೇಳಿಕೊಂಡಿದ್ದೀರಿ. ಇದನ್ನು ಏಕೆ ರೆಕ್ಟಿಫೈ ಮಾಡಲಿಲ್ಲ, ಯಾರೂ ಜವಾಬ್ದಾರರು ಆಗಲೇ ಇಲ್ಲ. ನೀವು ಕೇಳಲಿಲ್ಲ. ಏಕೆಂದರೆ ಈ ದೇಶದಲ್ಲಿ ಕೆಪಿಸಿಯವರನ್ನು ಕೇಳುವವರು ಯಾರೂ ಹುಟ್ಟಿಲ್ಲ. ಅವರಿಗೆ ಇದಕ್ಕೆ ಸಂಬಂಧವೇ ಇಲ್ಲ. ಅವರ ಪಾಡಿಗೆ ಅವರು ಏನು ಮಾಡಬೇಕೋ ಅದನ್ನು ಮಾಡಿಕೊಳ್ಳುತ್ತಾರೆ, ಅವರು ಹೇಗೆ ಇರಬೇಕೋ ಹಾಗೆ ಇರುತ್ತಾರೆ. ಸನ್ಮಾನ್ಯ ಉಪಮುಖ್ಯಮಂತ್ರಿಗಳು ಇದನ್ನು ಏನಾದರೂ ಸರಿ ಮಾಡದೇ ಹೋದರೆ ನಾವು ಎಷ್ಟು ಹೊತ್ತು ಭಾಷಣ ಮಾಡಿದರೂ ಕೂಡ ಪ್ರಯೋಜನ ಆಗುತ್ತದೆ ಎಂದು ನಾನು ಭಾವಿಸಿಲ್ಲ. ತಾವು ಜನರೇಷನ್‌ನಲ್ಲಿ ಕೈಹಾಕಿ, ಸಕಾಲಕ್ಕೆ ಅವರಿಗೆ ತಾವೇನಾದರೂ ಟೈಂ ಬೌಂಡ್ ಪ್ರೋಗ್ರಾಮ್ ಅನ್ನು ಫಿಕ್ಸ್ ಮಾಡಿ ಇಂತಿಂತಹ ಕಾಲಕ್ಕೆ ಇಂತಹ ಯೂನಿಟ್ ಕಾರ್ಯಾರಂಭ ಮಾಡಲೇಬೇಕು ಎಂದು ನಿಗದಿ ಮಾಡದೇ ಹೋದರೆ, ನಾವು ಕೆಇಬಿಯನ್ನು ಒಂದನ್ನೇ ದೂಷಿಸುತ್ತಾ ನಿಂತುಕೊಂಡು ಮಾತನಾಡುವುದರಲ್ಲಿ ಯಾವುದೇ ಪರಿಸ್ಥಿತಿ ಉತ್ತಮ ಆಗುತ್ತದೆ ಎಂದು ನಾನು ಭಾವಿಸುವುದಿಲ್ಲ. ಇದರ ಜೊತೆಗೆ ನಮಗೆ ಭಾರತ ಸರ್ಕಾರದವರ ವತಿಯಿಂದ ಆಗಬೇಕಾಗಿರುವ ಜನರೇಷನ್ ಯುನಿಟ್ಸ್‌ನಿಂದ ಜಾಸ್ತಿ ಶೇರ್‌ಅನ್ನು ಡಿಮ್ಯಾಂಡ್ ಮಾಡದೇ ಹೋದರೂ ಕೂಡ ನಮ್ಮ ಕಷ್ಟ ಅಲ್ಲೇ ಉಳಿಯುತ್ತದೆ. ದುಡ್ಡು ಕೊಟ್ಟು ಪವರ್‌ಅನ್ನು ಹೊರಗಡೆಯಿಂದ ತೆಗೆದುಕೊಂಡು ಬಂದರೆ ಅದು ಈ ಕಾಲದಲ್ಲಿ ಎಕಾನಾಮಿಕಲಿ ವಯಬಲ್ ಎಂದು ನಾನು ಭಾವಿಸುವುದಿಲ್ಲ. ಏಕೆಂದರೆ ರಾಜ್ಯದ ಹಿತಾಸಕ್ತಿಯಲ್ಲಿ ಶೇರ್‌ಅನ್ನು ಜಾಸ್ತಿ ಡಿಮ್ಯಾಂಡ್ ಮಾಡಬೇಕಾಗುತ್ತದೆ. ಇವತ್ತು ಏನು ನಿಮಗೆ ಶೇರ್ ಕೊಡುತ್ತಿದ್ದಾರೆ, ಅದು ಸಾಕಾಗುವುದಿಲ್ಲ. ಇನ್ನು ಜಾಸ್ತಿ ಕೊಡಿ ಎಂದು ಕೇಳಬೇಕಾಗುತ್ತದೆ. ತಾವು ಮೂರು ಯೂನಿಟ್ಸ್‌ನಿಂದ ಜಾಸ್ತಿ ಶೇರ್‌ಅನ್ನು ಕೇಳುವುದಕ್ಕೆ ಏನಾದರೂ ಒಂದು ಕಾರ್ಯಕ್ರಮ ಹಾಕಿಕೊಳ್ಳಬೇಕಾಗುತ್ತದೆ. ಜೊತೆಗೆ ಈ ಇಂಪೋರ್ಟ್ ಆಫ್ ಎನರ್ಜಿ ಬಗ್ಗೆ, ಕೊಂಡುಕೊಳ್ಳುವ ಬಗ್ಗೆ ಈ ರಾಜ್ಯ ಸರ್ಕಾರ ತೆಗೆದುಕೊಂಡಿರುವ ತೀರ್ಮಾನ ಸರಿ, ಅದರಲ್ಲೇನೂ ಎರಡು ಮಾತಿಲ್ಲ. ನೀವು ಕೊಂಡುಕೊಳ್ಳುವುದಕ್ಕೆ ಹೋದರೆ ನಿಮ್ಮ ದುಡ್ಡು ಎಲ್ಲಾ ಅವರಿಗೆ ಕೊಡಬೇಕಾಗುತ್ತದೆ. ಶೇರ್‌ಅನ್ನು ಮತ್ತು ಕಾಂಟ್ರಿಬ್ಯೂಷನ್‌ನ್ನು ಜಾಸ್ತಿ ಮಾಡಿಸಿಕೊಳ್ಳಬೇಕು ಎಂದು ಹೇಳಿ ನೀವು ಈವರೆಗೆ ಮಾಡಿರುವ ಕಾರ್ಯಕ್ರಮ ಅಲ್ಲಿ ಸಾಲದು, ಸಾಲದು ಅಲ್ಲ ಏನೇನೂ ಇಲ್ಲ ಎಂದು ಹೇಳುತ್ತಾ, ತಕ್ಷಣ ನೀವು ಶರಾವತಿಯಲ್ಲಿ ಇರುವ ಕ್ಯಾಪಾಸಿಟಿ ಎನ್‌ಹ್ಯಾನ್ಸ್‌ಮೆಂಟ್ ಪ್ರೋಗ್ರಾಂ ಏನು ಇದೆ ಆ ಕಡೆ ಕೈ ಹಾಕಬೇಕು. ಸಣ್ಣ ಕಾರಣಗಳು ಯಾವುವೆಂದರೆ, ಆಲ್ಟರ್‌ನೇಟ್ ಟ್ರಾನ್ಸ್‌ಫಾರ್ಮರ್ಸ್ ಇಲ್ಲ, ನಮಗೆ ಅದನ್ನು ರಿಪ್ಲೇಸ್ ಮಾಡುವುದಕ್ಕೆ ಡಿಸ್ಪೈನ್ ಇಲ್ಲ – ಈ ಕತೆಯೆಲ್ಲಾ ಸನ್ಮಾನ್ಯ ಉಪಮುಖ್ಯಮಂತ್ರಿಗಳೇ ಈ ಶತಮಾನದಲ್ಲಿ ಕೇಳುತ್ತಾ ಕುಳಿತರೆ ಈ ರಾಜ್ಯವಂತೂ ಉಳಿಯುವುದಿಲ್ಲ ಎಂದು ನಾನು ಭಾವಿಸುತ್ತೇನೆ. ಎರಡನೆಯದಾಗಿ ಟ್ರಾನ್ಸ್‌ಮಿಷನ್ ಆ್ಯಂಡ್ ಡಿಸ್ಟ್ರಿಬ್ಯೂಷನ್‌ಗೆ ಕೆಇಬಿ ಕೆಲಸಗಳಿಗೆ ನಾವು ಬರಬೇಕಾಗುತ್ತದೆ. ನೀವು ಕೆಪಿಸಿ ಬಗ್ಗೆ ಏನಾದರೂ ಕಾರ್ಯಕ್ರಮ ಹಾಕಿಕೊಂಡರೆ ಕೆಇಬಿ ಏನು ಮಾಡಬಹುದಾಗಿತ್ತು.

ಎಂದು ಕೂಡ ನಾನು ಮಾತನಾಡುತ್ತೇನೆ. ಇವತ್ತಿನವರೆಗೂ ಕೆಇಬಿಯಲ್ಲಿ ನಿದ್ದೆ ಹೊಡೆಯುತ್ತಿದ್ದಾರೆ. ಯಾರಾದರೂ ಲೈನನ್ನು ಮುಟ್ಟಿ ಸೂಯಿಸೈಡ್ ಮಾಡಿಕೊಂಡಿದ್ದಾನೆ ಎಂದು ಕೇಳಿದರೆ ಅದು ಸೂಯಿಸೈಡ್ ಆಗಿದೆ ಎಂದು ಕೇಸ್ ಆಗುವುದಿಲ್ಲ, ಅಟೆಂಪ್ಟ್ ಟು ಸೂಯಿಸೈಡ್ ಕೇಸ್ ಮಾತ್ರ ಆಗಬಹುದು. ಆ ಲೈನನ್ನು ಹಿಡಿದುಕೊಂಡರೆ ಯಾರೂ ಸಾಯುವುದಿಲ್ಲ, ಅಷ್ಟು ವೋಲ್ಟೇಜ್‌ನ್ನು ತಾವು ಫೀಡರ್ಸ್ ಮೇಲೆ ಪಾಸ್ ಮಾಡುತ್ತಿದ್ದೀರಿ. ಇದನ್ನು ಎಲ್ಲಾದರೂ ನೀವು ನಿಗ್ರಹಿಸುತ್ತೀರ ಎಂದರೆ ಏನು ಮಾಡುತ್ತೀರಿ ಎಂದು ಅವರಿಗೆ ಗೊತ್ತಿಲ್ಲ. ನಾನು ಸನ್ಮಾನ್ಯ ಬಂಗಾರಪ್ಪನವರು ಇಲ್ಲಿ ಮಾತು ಆಡಿದ್ದನ್ನು ತೆಗೆದುಕೊಂಡು ಮೊದಲೆ ಆರಂಭ ಮಾಡುತ್ತೇನೆ. ಹ್ಯಾಟ್ಸ್ ಆಫ್ ಟು ದಟ್ ಕೆಇಬಿ ಛೇರ್‌ಮನ್. ನಮಗೆ ಹೋದ ವರ್ಷ 70 ಸಾವಿರ ಐಪಿ ಸೆಟ್ಸ್‌ನ್ನು ಎನರ್ಜಲೈಸ್ ಮಾಡಿದರು ಎಂದರು. ಬೇರೆ ಕಡೆ ತಾವು ನೋಡಿದ್ದೀರಿ ? ಹರಿಜನ ಕಾಲೋನಿಯಲ್ಲಿ ಎಷ್ಟು ಕಡಿಮೆ ಮಾಡಿದ್ದಾರೆ, ತಾಂಡಗಳಲ್ಲಿ ಎಷ್ಟು ಕಡಿಮೆ ಮಾಡಿದ್ದಾರೆ, ಸ್ಟ್ರೀಟ್ ಲೈಟ್ ಎಲೆಕ್ಟ್ರಿಫಿಕೇಷನ್ ಎಷ್ಟು ಕಡಿಮೆ ಮಾಡಿದ್ದಾರೆ. ನೀವು ಅದನ್ನೆಲ್ಲಾ ನೋಡಲೇ ಇಲ್ಲ. ಒಂದು ಕಡೆ 60 ಸಾವಿರ ಬದಲು 70 ಸಾವಿರ ಐಪಿ ಸೆಟ್ಸ್‌ನ್ನು ನಾವು ಮಾಡಿಕೊಂಡು ಹೋದೆವು. 60 ಸಾವಿರದ ಬದಲು 70 ಸಾವಿರ ಮಾಡಿದ್ದಕ್ಕೆ ಏನಾಯಿತು ಎಂದರೆ ಸಿಸ್ಟಂನ್ನು ಓವರ್ ಲೋಡ್ ಮಾಡಿದರು. ಸ್ವಾಮಿ, ಕಳೆದ ವರ್ಷ ಪೂರ್ತಿ ಇವರು ಸಿಸ್ಟಂ ಇಂಪ್ರೂವ್‌ಮೆಂಟ್‌ಗೆ ಖರ್ಚು ಮಾಡಿರುವುದು 20 ಕೋಟಿ ಅಥವಾ 23 ಕೋಟಿ ರೂಪಾಯಿ.

ಕಳೆದ ಒಂದು ವರ್ಷದಲ್ಲಿ 16 ರಿಂದ 18 ಸಾವಿರ ಟ್ರಾನ್ಸ್‌ಫಾರ್ಮರ್‌ಗಳು ಫೇಲ್ ಆಗಿವೆ. ಹೊಸ ಟ್ರಾನ್ಸ್‌ಫಾರ್ಮರ್ ಎಲ್ಲಿ ಹಾಕುವುದಕ್ಕೆ ಆಗುತ್ತದೆ, ನಿಮಗೆ ಸಾಧ್ಯವೇ ಇಲ್ಲ. ಈ ಪ್ರಪಂಚದ ಮೇಲೆ ಯಾರೊ ಬಂದು ಹೊಸ ಟ್ರಾನ್ಸ್‌ಫಾರ್ಮರ್ ಹಾಕಿದ್ದಾರೆ ಎಂದರೆ ನಂಬುವುದಕ್ಕೆ ಸಾಧ್ಯವೇ ಇಲ್ಲ. ಏಕೆಂದರೆ ಅದನ್ನು ಹೇಳುವುದಕ್ಕೂ ಸೀನಿಯಾರಿಟಿ ಫಿಕ್ಸ್ ಆಗಿದೆ. ಸುಟ್ಟು ಹೋಗಿರುವ ಟ್ರಾನ್ಸ್‌ಫಾರ್ಮರ್‌ನ್ನು ನೀವು ಏನು 24 ಗಂಟೆಯೊಳಗೆ ರಿಪ್ಲೇಸ್ ಮಾಡಬೇಕಾಗಿತ್ತು ಅದನ್ನು ಹೇಳುವುದಕ್ಕೂ ಸೀನಿಯಾರಿಟಿ ಇದೆ. ಇವತ್ತು ಬೆಳಿಗ್ಗೆ ನಾನು ಫೋನ್ ಮಾಡಿ ಕೇಳಿದೆ, ತುರುವೇಕೆರೆ ತಾಲ್ಲೂಕಿನಲ್ಲಿ 12 ಟ್ರಾನ್ಸ್‌ಫಾರ್ಮರ್ಸ್ 63 ಕೆವಿಎದು ಹಾಕಬೇಕು. ಇವತ್ತು ವಿಧಾನಸಭೆಯಲ್ಲಿ ಅನೇಕರು ಭಾಷಣ ಮಾಡಿ ಈ ಡೇಟ್‌ನಲ್ಲಿ ಯಾವುದೂ ಇಲ್ಲ, ಅದು ಕಟ್ ಆಫ್ ಡೇಟ್ ಎಂದು ನಾವು ಕೆಇಬಿಯವರು ಇಟ್ಟುಕೊಂಡಿದ್ದೆವು ಎಂದು ಹೇಳಿದ ಮೇಲೂ ಟ್ರಾನ್ಸ್‌ಫಾರ್ಮರ್ಸ್ ಫೇಲ್ ಆಗಿದೆ. ಮಳೆ ಬರದೇ ಇದ್ದರೆ ಏಪ್ರಿಲ್, ಮೇ, ಜೂನ್ ತಿಂಗಳಲ್ಲಿ ನಿಮ್ಮ ಸ್ಥಿತಿಯಂತೂ ಹೇಳುವುದಕ್ಕೆ ಬರುವುದಿಲ್ಲ. ಏಕೆ ಹೀಗೆ ಆಯಿತು ? ನೀವು ಸರ್ವೀಸ್ ಮೈನ್ ಕನೆಕ್ಷನ್ ತೆಗೆದುಕೊಳ್ಳಿ, ನಾವು ಸೀನಿಯಾರಿಟಿ ಫಿಕ್ಸ್ ಮಾಡುವುದಿಲ್ಲ ಎಂದು ಹೇಳಿದಿರಿ. ನೀವು 2–3 ಕಂಬದವರೆಗೆ ಸೀನಿಯಾರಿಟಿ ಫಿಕ್ಸ್ ಮಾಡುವುದಿಲ್ಲ ಎಂದು ಹೇಳಿದಿರಿ. ಆಗ ಟ್ರಾನ್ಸ್‌ಫಾರ್ಮರ್ ಮೇಲೆ ಕ್ಯಾಪಸಿಟಿ ಇಷ್ಟು ಇತ್ತು ಎಂದು ಆಗ ಕೇಳಲಿಲ್ಲ. ನಿಮ್ಮ ಇಲಾಖೆಯವರು ಏನು ಮಾಡಿದರು ಎಂದರೆ, 1:1 ರೇಶಿಯೋದಲ್ಲಿ ಏನು ಪವರ್ ಸಪ್ಲೈ ಕೊಡಬೇಕಾಗಿತ್ತು, 20 ಕೆವಿಎ ಟ್ರಾನ್ಸ್‌ಫಾರ್ಮರ್ ಇದ್ದರೆ 20 ಹೆಚ್‌ಪಿ ಪವರ್ ಕೊಡಬೇಕಾಗಿತ್ತು. ಅದನ್ನು 1:1.5 ಮಾಡಿದರು . ಉಪಮುಖ್ಯಮಂತ್ರಿಗಳೇ, ಏಕೆ ಮಾಡಿದರು ಎಂದು ಗೊತ್ತಿಲ್ಲ. ಮತ್ತು ಟ್ರಾನ್ಸ್‌ಫಾರ್ಮರ್‌ಗಳ ವಿಚಾರ ಏನು ಆಯಿತು, ಕಾಪರ್ ವೈರ್‌ನಲ್ಲಿ ಕಾಪರ್ ಕಾಯಲ್‌ನಲ್ಲಿ ಬರುತ್ತಿದ್ದ ಟ್ರಾನ್ಸ್‌ಫಾರ್ಮರ್ಸ್ ಅಲ್ಯುಮಿನಿಯಂ ಕಾಯಲ್, ಅಲ್ಯೂಮಿನಿಯಂ ವೈಂಡಿಂಗ್‌ನಲ್ಲಿ ಬಂದಾಗ ಟ್ರಾನ್ಸ್‌ಫಾರ್ಮರ್ ಜಾಸ್ತಿ ಕ್ಯಾಪಿಸಿಟಿ ಕೊಡುತ್ತದೆ ಎಂದು ತಾವು ಭಾವಿಸಬಾರದಾಗಿತ್ತು. ಅದು ಸಾಮರ್ಥ್ಯ ಕಡಿಮೆ ಕೊಡುತ್ತಿತ್ತು. ನಿಮಗೆ ಇಡೀ ರಾಷ್ಟ್ರದ ಕೆಇಬಿ ಇನ್‌ಸ್ಟಾಲ್ ಕ್ಯಾಪಿಸಿಟಿಯಲ್ಲಿ ಇವತ್ತಿನವರೆಗೆ ತೆಗೆದುಕೊಂಡು ಹೋಗುವುದಕ್ಕೆ ಆಗಿರುವುದು 58 ಪರ್ಸೆಂಟ್ ಮಾತ್ರ. ಅದಕ್ಕಿಂತ ಜಾಸ್ತಿ ಇಡೀ ಇಂಡಿಯಾ ದೇಶದಲ್ಲಿ ಯಾರೂ ಪವರ್ ಜನರೇಷನ್

ಆಗಲಿ, ಪವರ್ ಡಿಸ್ಟ್ರಿಬ್ಯೂಷನ್‌ಗೆ ಆಗಲಿ, ಸಿಸ್ಟಂ ಇಂಪ್ರೂವ್‌ಮೆಂಟ್‌ಗೆ ಆಗಲಿ ಮಾಡುವುದಕ್ಕೆ ಆಗಲಿಲ್ಲ. ಅಂತಹ ಪರಿಸ್ಥಿತಿಯಲ್ಲಿ ನೀವು ಈ ಟ್ರಾನ್ಸ್‌ಫಾರ್ಮರ್ಸ್ ಮೇಲೆ ಏಕೆ ಅಷ್ಟೊಂದು ಲೋಡ್ ಹಾಕಿದಿರಿ. ಅದಕ್ಕೆ ಮಾಜಿ ಕೆಇಬಿ ಅಧ್ಯಕ್ಷರೇ ಉತ್ತರ ಹೇಳಬೇಕು. ಬಹುಶಃ ತಾವು ಕೂಡ ಹೇಳುತ್ತೀರಿ ಅಥವಾ ನಾನು ಕೂಡ ಕೇಳುತ್ತೇನೆ ಎಂದು ಭಾವಿಸುವುದಕ್ಕೆ ಆಗುವುದಿಲ್ಲ. ಇದು ಬಿಟ್ಟರೆ ತಾವು ಲೈನ್‌ಗಳ ಬಗ್ಗೆ ಯೋಚನೆ ಮಾಡಬೇಕಾಗಿತ್ತು. ಈ ಕೆಇಬಿ ಲೈನ್‌ಗಳಲ್ಲಿ 490, 220, 110, 66, 33 ಎಂದು ಬರುತ್ತದೆ. 400 ಕೊಟ್ಟರೆ ನೀವು ಎಷ್ಟು ವೋಲ್ಟೇಜ್ ಫೀಡ್ ಮಾಡುತ್ತೀರಿ ಅಥವಾ ಎಷ್ಟು ಆಂಪ್ಸ್ ಪವರ್ ಹೋಗುತ್ತದೆ. 220ರ ಮೇಲೆ ಎಷ್ಟು ಆಂಪ್ಸ್ ಹೋಗುತ್ತದೆ ಎಂದು. ಎಂದಾದರೂ ಒಂದು ದಿವಸ ಕುಳಿತುಕೊಂಡು ಮಂತ್ರಿಯಾಗಲಿ, ಕೆಇಬಿ ಛೇರ್‌ಮನ್ ಆಗಲಿ ಕೇಳಬೇಕಾಗಿತ್ತು. ಆದರೆ ಕೇಳಲಿಲ್ಲ. ಸ್ವಾಮಿ ಮಾನ್ಯ ಶಿವಾನಂದ ಕೌಜಲಗಿಯವರು ನನ್ನ ಭಾಗದ್ದು ಸ್ವಲ್ಪ ಮಾತನಾಡಿ ನನಗೆ ಸಹಾಯ ಮಾಡಿ ಎಂದು ಹೇಳುತ್ತಿದ್ದರು. ಒಂದು ಮಾತನ್ನು ತಮಗೆ ಹೇಳುತ್ತೇನೆ. ಇಡೀ ಉತ್ತರ ಕರ್ನಾಟಕದಲ್ಲಿ ಹುಬ್ಬಳ್ಳಿಯಿಂದ ಬಿಟ್ಟರೆ 33 x 110 ಲೈನನ್ನೇ ಇವರು ಹಾಕಿರುವುದು. ಎಷ್ಟು ಮ್ಯಾಗ್ನಿಮಂ ಪವರ್‌ಅನ್ನು ತಾವು ಫ್ಲೋ ಮಾಡಬಹುದು ಎಂದರೆ 5 ಎಂಎ ಪವರ್, ವಿತ್ 5 ಪರ್ಸೆಂಟ್ ಲಾಸ್, 5 ಪರ್ಸೆಂಟ್ ವೋಲ್ಟೇಜ್ ಡ್ರಾಪ್.

ಎಷ್ಟು ರೀಚ್ ಆಗುತ್ತದೆ ಎಂದರೆ ಯಾರಿಗೂ 11 ಕೆ.ವಿ.ಎ. ಪವರ್ ಹೋಗಿಲ್ಲ, ಟ್ರಾನ್ಸ್‌ಫಾರ್ಮರ್‌ಗೆ ನಿಮ್ಮ ಸ್ಟೇಷನ್‌ಗಳಿಗೆ ನಿಮ್ಮ ಎಂ.ಯು.ಎಸ್.ಎಸ್.ಗಳಿಗೆ. ಇಡೀ ಉತ್ತರ ಕರ್ನಾಟಕದಲ್ಲಿ 340ಕ್ಕಿಂತ ಜಾಸ್ತಿ ವೋಲ್ಟೇಜ್ ಬರುವುದಕ್ಕೆ ಸಾಧ್ಯವೇ ಇಲ್ಲ. ವೈಜ್ಞಾನಿಕವಾಗಿ ಸಾಧ್ಯ ಇಲ್ಲ. ಇನ್ನು ಅದು ಲಾಂಗ್ ಡಿಸ್ಟೆನ್ಸ್ ಅಥವಾ ಲಾಂಗ್ Feeders ಮೇಲೆ ನಿಮ್ಮ ಸ್ಥಿತಿ ಏನಾಗಿದೆ ಎಂದು ನಾವು ನಿಂತುಕೊಂಡು ಕೇಳಿದರೆ 180-200 ಇರುತ್ತದೆ. ತಮ್ಮ ಇಲಾಖೆಯಲ್ಲಿ ಯಾರನ್ನಾದರೂ ಕರೆಯಿಸಿ ತಾವು ಕೇಳಬೇಕು. ಕೆ.ಇ.ಬಿ ಕಾನೂನು ಎಲೆಕ್ಟ್ರಿಸಿಟಿ ಆ್ಯಕ್ಟ್ ಏನು ಹೇಳುತ್ತದೆ ಎಂದು ತಾವು ಕೇಳಬೇಕು. 5 ಪರ್ಸೆಂಟ್‌ಗಿಂತ ಜಾಸ್ತಿ ವೋಲ್ಟೇಜ್ ಡ್ರಾಪ್ ಆಗುವ ಹಾಗೆ ಇಲ್ಲ. 5% is the only allowed limit of voltage drop or voltage loss. ಅದಕ್ಕಿಂತ ಜಾಸ್ತಿ ಮಾಡುವುದಕ್ಕೆ ಏನಾದರೂ ತಮಗೆ sue ಮಾಡಿದರೆ ಕಾನೂನು ಕೆಳಗೆ ಇವತ್ತು ರೈತನಾಗಲಿ, ಕನ್‌ಸ್ಯೂಮರಾಗಲಿ ಹೋಗಿದ್ದರೆ ನಿಮ್ಮ ಕೆ.ಇ.ಬಿ. ಬರೀ ಕಾಂಪೆನ್‌ಸೇಷನ್‌ಗೆ ಇಡೀ ರಾಜ್ಯದ ಆಯವ್ಯಯ ಏನು ಮಂಡಿಸಿದ್ದೀರಿ, ಅಷ್ಟು ಹಣ ಕೊಡಬೇಕಾಗಿತ್ತು. ಇಡೀ ರಾಜ್ಯದ ಆಯವ್ಯಯದಷ್ಟು ಹಣವನ್ನು ತಾವು ಕೊಡಬೇಕಾಗಿತ್ತು. ಆ ಕಡೆ ನೋಡಲಿಲ್ಲ. ಇನ್ನು ನಾನು ರೈತರ ವಿಷಯಕ್ಕೆ ಬರುತ್ತೇನೆ.

ಸ್ವಾಮಿ ನಮಗೆ ಏತಕ್ಕೆ ಈ ಸ್ಥಿತಿಯಾಗಿದೆ ಎನ್ನುವುದನ್ನು ಯೋಚನೆ ಮಾಡಿದ್ದೀರಾ ? ನಿಮ್ಮ ಮೂರು ಡಿಸ್ಟ್ರಿಬ್ಯೂಷನ್ ಕಂಡಕ್ಟರ್ಸ್‌ನಲ್ಲಿ ಮೂರು ರೀತಿ ಇದೆ. ರ್‍ಯಾಬಿಟ್ four ACSR, two ACSR ಎಂದು ಅವರು ಕರೆಯುತ್ತಾರೆ. ನಾನು ತಮಗೆ ಹೇಳುತ್ತಿದ್ದೇನೆ. ಇಡೀ ರಾಜ್ಯದಲ್ಲಿ ರ್‍ಯಾಬಿಟ್ ಕಂಡಕ್ಟರ್ಸ್ ಹಾಕಿಕೊಂಡಿರುವುದು ಬಹಳ ಕಡಿಮೆ. ಎಂದೋ 20 ವರ್ಷ, 30 ವರ್ಷಗಳ ಹಿಂದೆ ಏನು ಕಂಡಕ್ಟರ್ಸ್ ತಾವು ಹಾಕಿದ್ದೀರಿ, ಅದರ ಮೇಲೆ ಪವರ್ ಫ್ಲೋ ಮಾಡುತ್ತಿದ್ದೇವೆ. ನೀವು ಎಷ್ಟೇ ಸ್ಟೇಷನ್ಸ್ ಮಾಡಿ, ಎಷ್ಟೇ ಎಂ.ಯು.ಎಸ್.ಎಸ್. ಮಾಡಿದರೂ ಕರೆಂಟ್ ಜಾಸ್ತಿ ಫ್ಲೋ ಮಾಡುವುದಕ್ಕೆ ಆಗುವ ಹಾಗೆ ಇಲ್ಲ; ಪವರ್ ಫ್ಲೋ ಮಾಡುವುದಕ್ಕೆ ಸಾಧ್ಯವೇ ಇಲ್ಲದಂಥ ಸ್ಥಿತಿ ಇದೆ. ಇದನ್ನು ಕೆ.ಇ.ಬಿ. ಛೇರ್ಮನ್‌ರು ಏತಕ್ಕೆ ಯೋಚನೆ ಮಾಡಲಿಲ್ಲ ಎಂದರೆ ಇನ್‌ವೆಂಟ್ರಿಯಲ್ಲಿ ಆ ಕಂಡಕ್ಟರ್ಸ್ ಹಾಕಿಕೊಂಡಿದ್ದರೆ ಅವರಿಗೇನೂ ಆದಾಯ ಬರುತ್ತಿರಲಿಲ್ಲ. ಭಾರಿ ದೊಡ್ಡ ಗೇಜಿನ ವೈರನ್ನು ಕೊಂಡು ಕೆ.ಇ.ಬಿ. ಸ್ಟಾಕ್‌ನಲ್ಲಿ ತುಂಬಿ ಹೋಗಿದ್ದಾರೆ. ಇನ್‌ವೆಂಟ್ರಿ 106 ಕೋಟಿ ಆಗಿದೆ ಎಂದು ನಾವು ಕೇಳಿದ್ದೇವೆ. ಇನ್‌ವೆಂಟ್ರಿ 106 ಕೋಟಿ ಆಗಿದ್ದರೆ I would have been the very happiest man ಆದರೆ ಯಾವುದನ್ನು ಕೊಳ್ಳಬೇಕಾಗಿತ್ತೋ ಅದನ್ನು ಕೊಂಡಿಲ್ಲ. ಯಾವುದನ್ನು

ಕೊಳ್ಳಬಾರದಿತ್ತೋ ನಿಮ್ಮ ಕೆ.ಇ.ಬಿ. ಛೇರ್ಮನ್ ಕೊಂಡು ಹೋಗಿದ್ದಾರೆ. ನಿಮ್ಮ ಕೆಇಬಿ ಛೇರ್ಮನ್ ಏನಾದರೂ 25 ಕೆ.ವಿ.ಎ. 63 ಕೆ.ವಿ.ಎ. ಟ್ರಾನ್ಸ್‌ಫಾರ್ಮರ್ಸ್ ಕೊಂಡುಕೊಂಡಿದ್ದರೆ, ನಿಮ್ಮ ಕೆ.ಇ.ಬಿ. ಛೇರ್ಮನ್ ಏನಾದರೂ ರ್‍ಯಾಬಿಟ್ ಕಂಡಕ್ಟರ್ಸ್ ಕೊಂಡಿದ್ದರೆ ನಾನು ಹೇಳುತ್ತಿದ್ದೆ ಬಂಗಾರಪ್ಪನವರಲ್ಲ, Hats of to Mr. Narasimha Murthy ಎಂದು. ಆ ರೀತಿ ಮಾಡಲಿಲ್ಲ.

ಇವರ ಅಂಡರ್‌ಗ್ರೌಂಡ್ ಕೇಬಲ್‌ಗೆ ಏನು ಬೇಕಾಗಿತ್ತೋ ಅದನ್ನು ತೆಗೆದುಕೊಂಡರು. ಇವರಿಗೆ ಭಾರಿ ಹೈ ಟೆನ್‌ಷನ್ ವೈರ್ಸ್ ಏನು ಬೇಕಾಗಿತ್ತು, ಅದನ್ನು ಕೊಂಡು ಇಟ್ಟಿದ್ದಾರೆ. ಎಷ್ಟು ಮಾಡಿಕೊಂಡು ಹೋಗುತ್ತಿದ್ದೀರಿ. ಸ್ವಾಮಿ, ಹೋದ ವರ್ಷ ನಮ್ಮ ಎನ್‌ಹ್ಯಾನ್ಸ್‌ಮೆಂಟ್ ಪ್ರೋಗ್ರಾಮ್‌ನಲ್ಲಿ 20 ಕಿಲೋ ಮೀಟರ್, 25 ಕಿಲೋಮೀಟರ್ ಸರ್ಕ್ಯೂಟ್ಸ್‌ನ್ನು ಜಾಸ್ತಿ ಮಾಡಿದಿರಿ. ಏತಕ್ಕೆ ಮಾಡಲಿಲ್ಲ? ಇವರಿಗೆ ಬೇಕೆ ಇರಲಿಲ್ಲ. ಈ ಕಾರ್ಯಕ್ರಮವನ್ನು ಮನುಷ್ಯರು ಕುಳಿತುಕೊಂಡು ಸ್ವಲ್ಪ ಸುಧಾರಿಸಬಹುದಾಗಿತ್ತು. ಮನುಷ್ಯನ ಸುಧಾರಣೆಗೆ ಮೀರಿದಷ್ಟು ವಿಕೃತವಾಗಿರಲಿಲ್ಲ. ಕೆ.ಇ.ಬಿ. ಸ್ಥಿತಿ. ಅವರಿಗೆ ಬೇಕಿರಲಿಲ್ಲ. ಮತ್ತೆ ಇರಿಗೇಷನ್ ಪಂಪ್‌ಸೆಟ್ಸ್ ಅವರಿಗೆ ವರವಾಗಿ ಬಿಟ್ಟಿತು. ನಾನು ತಮಗೆ ಹೇಳುತ್ತಿದ್ದೇನೆ, ಅಷ್ಟು ಟ್ರಾನ್ಸ್‌ಮಿಷನ್ ಅಂಡ್ ಲೈನ್ ಲಾಸನ್ನು ಇರಿಗೇಷನ್ ಪಂಪ್‌ಸೆಟ್ಟಿಗೆ ತೋರಿಸಿ ಕುಳಿತುಬಿಟ್ಟರು. ಇದರಲ್ಲಿ ಥೆಫ್ಟ್ ಏನು, ನಮ್ಮ ಇಲಾಖೆಯವರು ಬಳಸಿದ್ದು ಏನು, ಥೆಫ್ಟ್ ಮೇಜರ್ ಇಂಡಸ್ಟ್ರೀಸ್‌ನಲ್ಲಿ ಎಷ್ಟು ಆಗುತ್ತಿದೆ? ಬೇರೆ Core Sector ಎಷ್ಟು ಕೊಂಡಿದ್ದಾರೆ? ಇದರಲ್ಲಿ ಇಲಾಖೆಯವರು ಶಾಮೀಲಾಗಿದ್ದಾರೆ ಎಂದು ಏಂದಾದರೂ ಒಂದು ದಿವಸ ಕುಳಿತುಕೊಂಡು ಅವರು ಚೆಕ್ ಮಾಡಿದ್ದಾರೆಯೇ? ಬಂದಿದ್ದ ಪವರ್ ಲಾಸ್ ಅಷ್ಟೂ ಅಥವಾ ಲೈನ್ ಲಾಸ್ ಅಷ್ಟು ಐ.ಪಿ. ಸೆಟ್ಸ್ ಏಕೆಂದರೆ, ಮೀಟರ್ ಇಲ್ಲ ಅವರದು ಲೆಕ್ಕ ಇಡುವುದಕ್ಕಾಗಲಿಲ್ಲ ಎಂದು ಲೆಕ್ಕ ಮಾಡಿದ್ದು ಏನು? 1:5, ಒಂದು ಐ.ಪಿ. ಸೆಟ್ಟಿಗೆ ಐದರಂತೆ ಎಂಟು ಲಕ್ಷದ ಐವತ್ತು ಸಾವಿರ ಐ.ಪಿ. ಸೆಟ್ಸ್‌ಗೆ ಇಷ್ಟು ಹೆಚ್.ಪಿ. ಪವರ್ ಕನ್‌ಸ್ಯೂಮ್ ಆಗಿಬಿಟ್ಟಿದೆ ಕರ್ನಾಟಕದಲ್ಲಿ ಎಂದು ಹೇಳುತ್ತಾರೆ. ಆದರೆ ಎಲ್ಲಾ ಎಂಟು ಲಕ್ಷದ ಐವತ್ತು ಸಾವಿರ ಐ.ಪಿ. ಸೆಟ್ಸ್ ಓಡಿತೇ? ನನಗೆ ಗೊತ್ತಿಲ್ಲ. ನಾನಂತೂ ನಂಬುವುದಿಲ್ಲ. ನಿಮ್ಮ ಆಫೀಸ್‌ನಲ್ಲಿ ಏನು ಎಂಟು ಲಕ್ಷದ ಐವತ್ತು ಸಾವಿರ ಐ.ಪಿ ಸೆಟ್ಸ್ ಎನರ್ಜೈಸ್ ಮಾಡಿದ್ದೇವೆ ಎಂದು ಲಿಸ್ಟ್ ಕೊಟ್ಟಿದ್ದಾರೆ, ಅಷ್ಟು ಎಲ್ಲಾ ಕಾಲದಲ್ಲೂ ಓಡುವುದಿಲ್ಲ, ಓಡುವುದಕ್ಕೆ ಸಾಧ್ಯವಿಲ್ಲ. ನನ್ನದೇನೆ ಏಳು ಪಂಪ್‌ಸೆಟ್ಸ್‌ನಲ್ಲಿ ನಾಲ್ಕೂ ಪಂಪ್ ಸೆಟ್ಸ್ ಫೇಲ್ ಆಗಿವೆ. ಆದರೆ ನಿಮ್ಮ ಇಲಾಖೆಯ ದೃಷ್ಟಿಯಲ್ಲಿ ಏಳು ಪಂಪ್ ಸೆಟ್‌ಗಳು ನನ್ನವು ಓಡುತ್ತಿವೆ. ಈ ಸ್ಥಿತಿ ಏನಾಯಿತು ಎಂದು ಕೆ.ಇ.ಬಿ ಛೇರ್ಮನ್‌ರು ಗಮನಿಸಲಿಲ್ಲ. ಇಲಾಖೆಯಲ್ಲಿ ಎಲ್ಲರನ್ನು ಸಪ್ರೆಸ್ ಮಾಡಿದರು.

ನಾನು ಸ್ಪಷ್ಟವಾಗಿ ಹೇಳುತ್ತೇನೆ, ಯಾವುದೇ ಕೆಳಗಡೆ ಹಂತದ ಅಧಿಕಾರಿ ಕೆಲಸ ಮಾಡುವುದಕ್ಕೆ ನಿಮ್ಮ ಮಾಜಿ ಅಧ್ಯಕ್ಷರು ಬಿಟ್ಟಿಲ್ಲ. ಅವರು ಹೇಳಿದ ಕಡೆ ಟ್ರಾನ್ಸ್‌ಫಾರ್ಮರ್ಸ್ ಕೊಳ್ಳಬೇಕು, ಅವರು ಹೇಳಿದ ಕಡೆ ಕಂಬ ಕೊಳ್ಳಬೇಕು, ಅವರು ಹೇಳಿದ ಕಡೆ ಕಂಡಕ್ಟರ್ಸ್ ಕೊಳ್ಳಬೇಕು. ನಾನು ತಮಗೆ ಪಣ ತೊಟ್ಟು ಹೇಳುತ್ತಿದ್ದೇನೆ. ಇವತ್ತು ಕಂಬಗಳನ್ನು ಹಾಕಿದ್ದಾರೆ, ತೆಗೆದುಕೊಂಡು ಹೋಗಿ ಎರೆಕ್ಟ್ ಮಾಡಿದರೆ ರಾಡ್ ನಿಂತಿರುತ್ತದೆ, ಸಿಮೆಂಟ್ ಬಿದ್ದು ಹೋಗುತ್ತದೆ ನಿಮ್ಮ ಆರ್.ಸಿ.ಸಿ. ಪೋಲ್ಸ್‌ನಲ್ಲಿ. ಅವರು ಕರ್ನಾಟಕದಲ್ಲಿ ಯಾವ ಸ್ಥಿತಿ ನಿರ್ಮಾಣ ಮಾಡಿ ಹೋಗಿದ್ದಾರೆಂದು ತಾವು ಯೋಚನೆ ಮಾಡಬೇಕಾಗಿದೆ. ಇನ್ನು ನಾನು ಎಂ.ಯು.ಎಸ್.ಎಸ್.ಗಳ ಬಗ್ಗೆ ಮಾತನಾಡಬೇಕಾಗಿದೆ. ಎಂ.ಯು.ಎಸ್.ಎಸ್. ಅನ್ನು ಇವರು ಪ್ಲಾನ್‌ನಲ್ಲಿ ಮಾಡಿರುವುದೇ ಕಡಿಮೆ. ಏಕೆಂದರೆ ನಾನು ತಮಗೆ ಒಂದು ಉದಾಹರಣೆ ಕೊಟ್ಟು ಕೇಳುತ್ತೇನೆ. ಕಿಬ್ಬನಹಳ್ಳಿಯಲ್ಲಿ ಒಂದು ರಿಸೀವಿಂಗ್ ಸ್ಟೇಷನ್ ಆದರೆ ನಾವೆಲ್ಲ ಭಾರಿ ಸಂತೃಪ್ತರಾಗುತ್ತೇವೆ ಎಂದು ಭಾವಿಸಿದ್ದೆವು. ಸ್ವಾಮಿ, ಕಿಬ್ಬನಹಳ್ಳಿ ರಿಸೀವಿಂಗ್ ಸ್ಟೇಷನ್ ಆಯಿತು. ಛಾರ್ಜ್ ಮಾಡಿಸಿಬಿಟ್ಟೆವು. ಛಾರ್ಜ್ ಮಾಡಿದ ತಕ್ಷಣ ಏನು ಸ್ಥಿತಿ ನಿರ್ಮಾಣವಾಯಿತು ಎಂದರೆ, ಚಿಕ್ಕನಾಯಕನ ಹಳ್ಳಿಯಲ್ಲಿರುವುದು ಹತ್ತು ಎಂ.ವಿ.ಎ. ಸ್ಟೇಷನ್, ಚಿಕ್ಕನಾಯಕನಹಳ್ಳಿ

ಸ್ಟೇಷನ್‌ಗೆ 11 ಕೆ.ವಿ.ಎ. ಪವರನ್ನು ರಿಸೀವ್ ಮಾಡುವ ಕೆಪಾಸಿಟಿ ಇದೆ. ಕನ್‌ಸಮ್‌ಷನ್ ಲಿಮಿಟ್ ಜಾಸ್ತಿ ಇತ್ತು.

ಪವರ್ ವೋಲ್ಟೇಜ್ ಇಂಪ್ರೂವ್ ಆಗಿದ್ದರಿಂದ ಏನಾಯಿತು ಎಂದರೆ, ಓಡದೇ ಇದ್ದ ಐಪಿ ಸೆಟ್ಸ್ ಎಲ್ಲಾ ಓಡುವುದಕ್ಕೆ ಸ್ಟಾರ್ಟ್ ಆಯಿತು. ಹತ್ತಿಕೊಳ್ಳದೇ ಇದ್ದ ಟ್ಯೂಬ್‌ಲೈಟ್‌ಗಳು ಹತ್ತುವುದಕ್ಕೆ ಸ್ಟಾರ್ಟ್ ಆಯಿತು. ಫ್ಲೋರ್ ಮಿಲ್‌ಗಳು ಎಲ್ಲಾ ಓಡುವುದಕ್ಕೆ ಸ್ಟಾರ್ಟ್ ಆಯಿತು. ನಿಮ್ಮ ಫೀಡರ್‌ಗಳ ಮೇಲೆ ಹೆವಿ ಲೋಡ್ ಬಿತ್ತು. ಎವೆರಿ ಹಾಫ್ ಆನ್ ಅವರ್‌ಗೆ ಇಂಟರಪ್‌ಷನ್. ನಿಮ್ಮ ಲೈನ್ ಟ್ರಿಪ್ ಆಗುತ್ತದೆ. ಇವತ್ತು ಯಾರಾದರೂ ಇಟ್ಟುಕೊಂಡು ಕುಳಿತರೆ ಅದು ತಡೆಯುವುದಿಲ್ಲ; ಟ್ರಿಪ್ ಆಗುತ್ತಾ ಇದೆ. ಇದನ್ನು ಏನಾದರೂ ತಪ್ಪಿಸಬೇಕಾಗಿತ್ತು ಎಂದರೆ ಡಬಲ್ ಸರ್ಕ್ಯೂಟ್ ಮಾಡಬೇಕಿತ್ತು. ಡಬಲ್ ಸರ್ಕ್ಯೂಟ್ ಮಾಡಲಿಲ್ಲ. ಪ್ಯಾರಲಲ್ ಆಗಿ ಸ್ಟೇಷನ್ ಮಾಡಲಿಲ್ಲ. ನಿರೀಕ್ಷಣೆ ಮಾಡಲಿಲ್ಲ. ಹಾಗಾದರೆ ನಿಮ್ಮ ಇಲಾಖೆಯವರಿಗೆ ಗೊತ್ತಿರಲಿಲ್ಲವೇ ? ಒಂದು ರಿಸೀವಿಂಗ್ ಸ್ಟೇಷನ್ ಆದರೆ ಆ ಸುತ್ತ ಮೂರು ತಾಲ್ಲೂಕು ನಾಲ್ಕು ತಾಲ್ಲೂಕಿಗೆ ಇಂಪ್ರೂವ್ ಮಾಡಬೇಕು ಎಂದರೆ ಅದರ ಕಾಲದಲ್ಲೇ ಇನ್ನೊಂದು ಎಂಯು ಎಸ್‌ಎಸ್ ಹಾಕಿಕೊಳ್ಳಬೇಕು ಎಂದು ಗೊತ್ತಿರಲಿಲ್ಲವೇ ? ಅವರಿಗೆ ಗೊತ್ತಿತ್ತು. ಆದರೆ ಅವರಿಗೆ ಬೇಕಿರಲಿಲ್ಲ. ಅವರು ಗೊತ್ತಿರಲಿಲ್ಲ ಎಂದು ಇವತ್ತು ಹೇಳಲಿಕ್ಕೆ ಸಾಧ್ಯವೇ ಇಲ್ಲ. ಇವತ್ತು ಕಿಬ್ಬನ ಹಳ್ಳಿ ಕ್ರಾಸ್‌ಗೆ ಸಿಮೆಂಟ್ ಫ್ಯಾಕ್ಟರಿ, ಅಮ್ಮಸಂದ್ರದಿಂದ ವಾಪಸ್ ಪವರ್ ಅನ್ನು, ಫೀಡ್ ಮಾಡಬೇಕು. ಟೂ ಎಸ್.ಎಸ್.ಆರ್. ಲೈನ್ ಮೇಲೆ ಹಾಫ್ ಲೋಡ್ ಸಿಸ್ಟಂ ಆಫ್ ಟ್ರಾನ್ಸ್‌ಫಾರ್ಮರ್ ಎಂದ ನಾವು ಕರೆಯುತ್ತೇವೆ. ಅದನ್ನೇನೂ ತಾವು ಛೇಂಜ್ ಮಾಡುವುದಕ್ಕೆ ಬರುವುದಿಲ್ಲ. ಏನಿದೆ ಅದು ಫಿಕ್ಸೆಡ್ ಲೋಡ್. ಅಷ್ಟೇ ಅದು ವಾಪಸ್ ಕೊಡುವುದಕ್ಕೆ ಸಾಧ್ಯ. ಕಿಬ್ಬನಹಳ್ಳಿ ನಿಮ್ಮ ಸ್ಟೇಷನ್‌ಗೆ 320, 340 ಪವರ್ ವಾಪಸ್ ಬರುತ್ತಿದೆ. ತಾವೇನು ರಿಸೀವಿಂಗ್ ಸ್ಟೇಷನ್ ಎಂದು ಮಾಡಿದ್ದೀರಿ. ಅದು ಅಲ್ಲಿಗೆ ಬಂದು ನಿಲ್ಲುತ್ತದೆ. ಇದನ್ನು ಏನಾದರೂ ಮಾಡಿ ಇಂಪ್ರೂವ್ ಮಾಡಬಹುದಿತ್ತಾ ಎಂದರೆ ಮಾಡಬಹುದಿತ್ತು. ನಾನು ಹೇಳಿದ್ವೆ, ಇದು ನನ್ನ ಕಾನ್‌ಸ್ಟಿಟ್ಯೂಯೆನ್ಸಿ, ಆ ಸ್ಟೇಷನ್‌ನಿಂದ ಒಂದು ರ್‍ಯಾಬಿಟ್ ಕಂಡಕ್ಟರ್ ಎಳೆಯಿರಿ. ಇನ್ನೊಂದು 20–30 ಪವರ್ ವೋಲ್ಟ್ಸ್ ನಮಗೆ ಜಾಸ್ತಿ ಆಗುತ್ತದೆ ಎಂದು ಹೇಳಿದ್ದೆ. ಅವರು ಎಳೆಯಲಿಲ್ಲ. ಅವರಿಗೆ ಇಂಪ್ರೂವ್‌ಮೆಂಟ್ ಬೇಕಿಲ್ಲ. ಹೋದ ವರ್ಷವೆಲ್ಲಾ ನಾನು ಅವರಿಗೆ ಕೇಳಿಕೊಂಡೆ. ನೀವು ಈ ಸೆಂಟ್ರಲೈಸೇಷನ್ ಅನ್ನು ತಪ್ಪಿಸಬೇಕು: 63 ಕೆಮಿ ಟ್ರಾನ್ಸ್‌ಫಾರ್ಮರ್ಸ್, 100 ಕೆವಿಎ ಟ್ರಾನ್ಸ್‌ಫಾರ್ಮರ್ಸ್‌ಗೆ ಪ್ರಾಬ್ಲೆಮ್ ತೋರಿಸಿಕೊಂಡು ಸಿಸ್ಟಂ ಇಂಪ್ರೂವ್‌ಮೆಂಟ್ ಕೆಲಸ ನಿಲ್ಲಿಸಿದ್ದೀರಿ. ನಮಗೆ ಎನ್‌ಹ್ಯಾನ್ಸ್‌ಮೆಂಟ್ ಆಫ್ ಕೆಪಾಸಿಟಿ ಬೇಕಿಲ್ಲ. ಅಡೀಷನಲ್ ಟ್ರಾನ್ಸ್‌ಫಾರ್ಮರ್ಸ್ ಹಾಕಿಕೊಂಡು ಹೋಗಿ 63 ಹಾಕುವುದರ ಬದಲು ಎರಡು ಇಪ್ಪತ್ತೈದು ಹಾಕಿ; 100 ಹಾಕುವುದರ ಬದಲು ನಾಲ್ಕು ಇಪ್ಪತ್ತೈದು ಹಾಕಿ, 5 –5 ಪಂಪುಸೆಟ್ಟು, ಆರಾರು ಪಂಪುಸೆಟ್ಟುಗಳಿಗೆ ತಾವು ಎನರ್ಜೈಸ್ ಮಾಡಿಕೊಂಡು ಹೋಗಬಹುದು ಎಂದು ಹೇಳಿದೆ. ಅದನ್ನು ಮಾಡಲಿಲ್ಲ. ಅವತ್ತು 25 ಕೆ.ವಿ.ಎ. ಟ್ರಾನ್ಸ್‌ಫಾರ್ಮರ್ಸ್ ತಮ್ಮ ಹತ್ತಿರ ಇತ್ತು, ಕಂಡಕ್ಟರ್ ಇತ್ತು, ಕೆಲಸ ಮಾಡುವುದಕ್ಕೆ ಒಂದು ಡೈರೆಕ್ಷನ್ ಹೋಗಲಿಲ್ಲ. ಅವರು ಕೆಲಸ ಮಾಡಿಲ್ಲ. ಪ್ರೈಮರಿ ಲಾಸ್ ಆಗುತ್ತದೆ. ಅಷ್ಟು ದೂರ ಕಂಡಕ್ಟರ್ ಎಳೆದುಕೊಂಡು ಕುಳಿತರೆ ಆಗುವ ಹಾಗೆ ಇಲ್ಲ. ಕಂಬ ಹಾಕಬೇಕಾಗುತ್ತದೆ ಮತ್ತು ಎಸ್ಟಿಮೇಟ್ಸ್ ಮಾಡಬೇಕಾಗುತ್ತದೆ ಎಂದರು. ಇರುವ ಎಸ್ಟಿಮೇಟ್ ಅಥವಾ ಟ್ರಾನ್ಸ್‌ಫಾರ್ಮರ್ ಎನ್‌ಹ್ಯಾನ್ಸ್ ಮಾಡುವುದು ಅಂದರೂ ಒಂದೆ. ಅದರ ಮೇಲೆ ಎಷ್ಟು ಲೋಡ್ ಬೀಳುತ್ತದೆ, ಎಷ್ಟು ಜಾಸ್ತಿ ಮಾಡಬೇಕು, ಇಷ್ಟು ಐಪಿ ಸೆಟ್ ಬಗ್ಗೆ ಎಸ್ಟಿಮೇಟ್ ಮಾಡಿದ್ದೇನೆ, ನಿಲ್ಲಿಸಿದ್ದೇನೆ ಎಂದು ಇಷ್ಟು ಮಾಡಿ ಕುಳಿತುಬಿಟ್ಟರು. ತಾವು ಏನಾದರೂ ಈ ಇಲಾಖೆಯನ್ನು ಹೀಗೆಯೇ ಬಿಟ್ಟರೆ ಏಪ್ರಿಲ್, ಮೇ, ಜೂನ್ ತಿಂಗಳಲ್ಲಿ ನಾವಂತೂ ಈ ದೇಶದಲ್ಲಿ ಇರುವುದಕ್ಕೆ ಆಗುವುದಿಲ್ಲ. ಗ್ರಾಮೀಣ ಪ್ರದೇಶಗಳಲ್ಲಿ ಬದುಕುವುದಕ್ಕೂ ಆಗುವುದಿಲ್ಲ. ಇವತ್ತು ಇಡೀ ನಮ್ಮ ಭಾಗದ ಬೆಳೆಗಳು

ನಾಶ ಆಗಿ ಹೋಗುತ್ತಿದೆ. ನಾನು ಅವತ್ತು ತಮಗೆ ಒಂದು ಸಭೆಯಲ್ಲಿ ಕೂಡ ಹೇಳಿದೆ. ಹಾರ್ಟಿಕಲ್ಚರಲ್ ಕ್ರಾಪ್ ಏನು ನಷ್ಟ ಆಗುತ್ತಿದೆ, ನಮಗೆ ಚೇತರಿಸಿಕೊಳ್ಳುವುದಕ್ಕೆ 20 ವರ್ಷಗಳು ಬೇಕು. ಹೊಸ ಅಡಿಕೆ ಗಿಡ, ತೆಂಗಿನ ಗಿಡ ಬೆಳೆಯಬೇಕು ಎಂದರೆ 10–20 ವರ್ಷ ಬೇಕು. ಬೇರೆಯದು ಬಿಟ್ಟು ಬಿಡಿ. ತೋಟಗಳು ಒಣಗುತ್ತಿವೆ. ಒಂದು ಸ್ವಲ್ಪ ಪ್ರಿಯಾರಿಟಿ ಕೊಟ್ಟು ನೋಡಿ ಎಂದರೆ ನಿಮ್ಮ ಇಲಾಖೆಯವರು ನೋಡಲಿಲ್ಲ. ಎಲ್ಲರಿಗೂ ಒಂದೇ ದಂಡ. ಇದರ ಜೊತೆಗೆ ಈ ವರ್ಷ ಏನು ಮಾಡಿದ್ದಾರೆಂದು ದಾಖಲೆಗಳನ್ನು ತೆಗೆದು ನೋಡಬೇಕು. ಇಡೀ ರಾಜ್ಯದಲ್ಲಿ pumpset energisation is not above 58 percent. 60 ಸಾವಿರ ಮಾಡಲಿಲ್ಲ. 34–35 ಸಾವಿರಕ್ಕೆ ನಿಂತು ಹೋಗಿದೆ. ಏಕೆ ಮಾಡಲಿಲ್ಲ? ಈಗ ಅರ್ಥ ಆಗುವುದಕ್ಕೆ ಸ್ಟಾರ್ಟ್ ಆಗಿದೆ system is overloaded ಹೆಚ್ಚು ಮಾಡುವುದಕ್ಕೆ ಆಗುವುದಿಲ್ಲ ಎಂದು. ಈಗ ಅರ್ಥ ಆದರೆ ನಿಮ್ಮನ್ನು ನಂಬಿಕೊಂಡು ಬೋರ್‌ವೆಲ್ ಹಾಕಿಸಿದವನ ಗತಿ ಏನು? ತಾವು ಆಗಲೇ ಅವನಿಗೆ ರಿಜಿಸ್ಟರ್ ಮಾಡಿಕೊಂಡಿದ್ದೀರಿ, ಕೊಡಿ ಎಂದರೆ ಕೊಡಲಿಲ್ಲ. ಹೀಗಾಗಿ ಇವತ್ತು ಕೆಇಬಿ ಜನರನ್ನು ಏನು ತೀರಾ ದುಸ್ಥಿತಿಗೆ ತಂದಿದೆ, ಇದರಿಂದ ನಾಳೆ ರಾಜ್ಯ ಸರ್ಕಾರ ತಲೆತಗ್ಗಿಸಬೇಕಾದಂತಹ ಸ್ಥಿತಿ ಬರುತ್ತದೆ. ಏಕೆಂದರೆ ಎಲ್ಲರಿಗೂ ಇವತ್ತು ಒಂದೇ ಕಾರಣ ಹೇಳುತ್ತಾರೆ. ನಾನು ಮುಖ್ಯಮಂತ್ರಿಗಳು ಸಭೆ ಕರೆದಾಗ ಒಂದು ಮಾತು ಹೇಳಿದೆ. ಅವರು ನಿಮ್ಮ ಕಾನ್‌ಸ್ಟಿಟ್ಯುಯೆನ್ಸಿಗೆ ಏನು ಮಾಡಬೇಕು ಎಂದು ಕೇಳಿದಾಗ ಹೇಳಿದೆ. ನೀವು ಏನೂ ಮಾಡಬೇಡಿ. ನಮಗೆ ಕೆಇಬಿ ಇಂಪ್ರೂವ್ ಮಾಡಿಕೊಡಿ ಆರು ಗಂಟೆ ಪವರ್‌ಕಟ್ ಹೋಗುತ್ತಿದೆ, ಇದ್ದ ಕಾಲದಲ್ಲಿ ಫೀಡರ್ ಮೇಲೆ ಪವರ್ ಇರುವ ಹಾಗೆ ಮಾಡಿ ಸಾಕು ನಮ್ಮಷ್ಟಕ್ಕೆ ರೈತರು ಬದುಕಿಕೊಳ್ಳುತ್ತೇವೆ ಎಂದು ಹೇಳಿದೆ. ಆದರೆ ಅದು ಆಗಲಿಲ್ಲ. ಇದರ ಜೊತೆಗೆ ಹೊಸ ಟ್ರಾನ್ಸ್‌ಫಾರ್ಮರ್‌ಗಳನ್ನು ತಾವು ಇಡೀ ವರ್ಷ ಹಾಕಲಿಲ್ಲ, ಈಗ ಏನಾದರೂ ವಾರ್ ಫುಟಿಂಗ್ ದಿಸೆಯಲ್ಲಿ ತೆಗೆದುಕೊಂಡರೆ ಮಾಡುವುದಕ್ಕೆ ಸಾಧ್ಯ. ತಮ್ಮ ಕೆಇಬಿ ಟ್ರಾನ್ಸ್‌ಫಾರ್ಮರ್ಸ್ ಪರ್ಚೇಸ್ ಬಗ್ಗೆ ಸ್ವಲ್ಪ ಗಮನ ಹರಿಸಬೇಕು. ಇಡೀ ಟ್ರಾನ್ಸ್‌ಫಾರ್ಮರ್‌ಗಳನ್ನು ಏನು ಕೊಂಡು ಕೊಂಡರು 60 ಪರ್ಸೆಂಟ್ ಗ್ಯಾರಂಟಿ ಪಿರಿಯಡ್‌ನಲ್ಲೇ ಫೇಲ್ ಆಗಿವೆ. ಇವತ್ತು ತೆಗೆದುಕೊಂಡು ಹೋಗಿ ಇಟ್ಟು ಛಾರ್ಜ್ ಮಾಡಿದ ತಕ್ಷಣ ಆಫ್ ಆಗಿದೆ ಅಥವಾ ಬರ್ಸ್ಟ್ ಆಗಿದೆ. ನಾಳೆ ದಿವಸ ಕೆಲಸ ಮಾಡುವ ಸ್ಥಿತಿಯಲ್ಲಿರುವುದಿಲ್ಲ. ಯಾರು ಕೊಂಡಿದ್ದು ಅಂದರೆ ವಾಪಸ್ ಕಳಿಸಿಬಿಡಿ ಎಂದರು. ವಾಪಸ್ ಕಳಿಸಿದರೆ ಅಲ್ಲಿರುವವನಿಗೆ ಸೀನಿಯಾರಿಟಿ ಹೋಯಿತು. ಅದು ಬರಲಿಕ್ಕೆ ಇನ್ನು ಎರಡು ತಿಂಗಳು ತೆಗೆದುಕೊಳ್ಳುತ್ತದೆ. ಇಲ್ಲಿ ಇನ್ಸ್‌ಪೆಕ್ಟೋರೇಟ್ ಕೆಲಸ ಮಾಡಬೇಕಾಗಿದೆ. ಇನ್ಸ್‌ಪೆಕ್ಟೋರೇಟ್‌ನವರು ಬಂದು ಯಾವುದೇ ಹೊಸ ಟ್ರಾನ್ಸ್‌ಫಾರ್ಮರ್ ಅನ್ನು ಕೊಡಿಸಿದ ಮೇಲೆ ಅದನ್ನು ಇನ್ಸ್‌ಪೆಕ್ಟ್ ಮಾಡಿ ಸರ್ಟಿಫೈ ಮಾಡಬೇಕಾಗಿತ್ತು. ತಮ್ಮ ಅಧ್ಯಕ್ಷರು ಒಂದು ಸರ್ಕುಲರ್ ಕಳಿಸಿ ಬಿಟ್ಟರು, ಅವರಿಗೆ ಹಣ ಕಟ್ಟಿ ಹತ್ತು ದಿವಸ ಕಾಯಿರಿ, ಎಂದು. ಅವರು ಬಂದು ಮಾಡದೇ ಹೋದರೆ you charge yourself ಎಂದು ಹೇಳಿದರು. Local KEB officer was authorised to charge ಎಂದು ನನ್ನ ಎದುರಿಗೇ ಹೇಳಿದರು. ನೀವೇ ಛಾರ್ಜ್ ಮಾಡಿ ಎಂದು ಹೇಳಿದರು. ಅದು ಸಮರ್ಪಕವಾಗಿ ಇದೆಯೋ ಇಲ್ಲವೋ ಎಂದು ಇನ್ನೊಬ್ಬರು ಬಂದು ನೋಡಬಾರದೇ ಎಂದರೆ ನೋಡಲಿಲ್ಲ. ಎರಡನೆಯದಾಗಿ ನಿಮ್ಮ ಇನ್ಸ್‌ಪೆಕ್ಟೊರೇಟ್‌ನವರು ಏನು ಕೆಲಸ ಮಾಡಬೇಕಾಗಿತ್ತು ಅದನ್ನು ಮಾಡಲಿಲ್ಲ. ಒಂದು ಕಷ್ಟ ನಮಗೆ ತಂದು ಇಟ್ಟಿದ್ದಾರೆ. ನನ್ನ ಐಪಿ ಸೆಟ್ ಸುಟ್ಟು ಹೋದರೆ ಅದನ್ನು ತೆಗೆದುಕೊಂಡು ರಿವೈಂಡ್ ಮಾಡಿಸಿಕೊಂಡು ಬಂದರೆ ಅದು 5 ಹೆಚ್‌ಪಿ ಅಥವಾ ಆರು ಹೆಚ್‌ಪಿ ಆಗಿರುತ್ತದೆಯೋ ಎಂದು ನನಗೆ ಗೊತ್ತಿರುವುದಿಲ್ಲ. ಮಾನ್ಯ ರಂಗನಾಥ್ ಅವರೇ ಯಾರೋ ರಿವೈಂಡ್ ಮಾಡಿಕೊಟ್ಟಿರುತ್ತಾರೆ. ಅದು ನನ್ನ ಪಂಪ್‌ಸೆಟ್ ಎಂದು ನಾನು ತೆಗೆದುಕೊಂಡು ಬಂದು ಹಾಕಿರುತ್ತೇನೆ.

ಇವರು ಬಂದು ಮೆಗ್ಗರ್ ನೋಡಿದರೆ ಅದು 6ಹೆಚ್.ಪಿ.ಯಾಗಿರುತ್ತದೆ. 7ಹೆಚ್.ಪಿ.ಯಾಗಿರುತ್ತದೆ.

ಆಗ ಆಪ್ ೨ ಜನ ರೈತರ ಮೇಲೆ ಕೇಸ್ ಹಾಕುತ್ತಾರೆ. ಇದು ಯಾವುದೇ ಉದ್ದೇಶವಿಟ್ಟು ಕೊಂಡು ಮಾಡಿ ್ಲ್ಲ. ನೀವು ಯಾರಿಗೇ ಒಂದು ಲೈಸೆನ್ಸ್ ಕೊಡಬೇಕಾಗಿದ್ದರೆ, ಇಂತಹವನು ಮಾತ್ರ ರಿಪ್ಲೆಂಡ್ ಮಾಡಬೇಕೆಂದು ಆತನ ಮೇಲೆ ಏನಾದರೂ ಕ್ರಮ ಕೈಗೊಳ್ಳಬೇಕು. ರಿಪೇರಿ ಮಾಡಿ ಎಂದು ನಾನು ಹೋಗುತ್ತೇನೆಯೇ ಹೊರತು ವೈಜ್ಞಾನಿಕವಾಗಿ ಮೆಗ್ಗರ್ ಇಟ್ಟುಕೊಂಡು ಹೋಗುವುದಕ್ಕಾಗುವುದಿಲ್ಲ. 5 ಹೆಚ್.ಪಿ.ಯಾಗಿಯೇ ವಾಪಸ್ಸು ಬಂದಿದೆಯೇ, 6 ಹೆಚ್.ಪಿ. ಯಾಗಿದೆಯೇ ? ಆತ ಹಾಕಿರುವ ವೈರಿನ ಗೇಜು ಸರಿಯಾಗಿದೆಯೇ ? ಎಂಬುದನ್ನು ನೋಡುವುದಕ್ಕಾಗುವುದಿಲ್ಲ. ಇನ್ಸ್‌ಪೆಕ್ಟೊರೇಟ್ ಮತ್ತು ಸ್ಕ್ವಾಡ್‌ನವರದು ಒಂದೇ ಕೆಲಸವಾಗಿದೆ. ಏನೆಂದರೆ, ರೈತರ ಮೇಲೆ ಏನಾದರೂ ಹಾಕಲು ಹುಡುಕುತ್ತಿರುವುದು. ಎರಡನೆಯ ಕೆಲಸ, ನಿಮ್ಮ ಲೈನ್‌ಮನ್‌ಗಳು ಎಲ್ಲಿದ್ದಾರೆಂದು ನಮಗೆ ಗೊತ್ತಿಲ್ಲ. ಅವರನ್ನು ಹುಡುಕಿಸಬೇಕಾಗಿದೆ. ಇದರ ಜೊತೆಗೆ ತಾವು ಗೃಹ ಖಾತೆಯನ್ನು ಸಹ ತೆಗೆದುಕೊಂಡು ಬಿಡಿ. ಆಗ "Line–man is missing; J.E. is missing" ಎಂದು ನಿಮಗೇ ಕಂಪ್ಲೆಂಟ್ ಲಾಜ್ ಮಾಡುತ್ತಾ ಹೋಗುತ್ತೇವೆ. ಅದನ್ನು ಏನಾದರೂ ತಾವು ತಪ್ಪಿಸಬೇಕಾಗುತ್ತದೆ. ಮೂರನೆಯದಾಗಿ, ತಮಗೆ ಹೇಳಬೇಕೆಂದರೆ, ಹೋದ ವರ್ಷ ಸೆಕ್ಷನ್ ಆಫೀಸ್‌ಗಳನ್ನು ಭಾರಿ ಪ್ರಮಾಣದಲ್ಲಿ ಗ್ರಾಂಟ್ ಮಾಡಿದಿರಿ. ಆದರೆ, ಯಾವುದೇ ಸೆಕ್ಷನ್ ಆಫೀಸಿಗೆ ಸ್ಟಾಫ್ ಅನ್ನು ಕ್ರಿಯೇಟ್ ಮಾಡಲಿಲ್ಲ. ಎಲ್ಲಾ ಸೆಕ್ಷನ್ ಆಫೀಸ್‌ಗಳು ಕಾಗದದ ಮೇಲೆ ಉಳಿದುಬಿಟ್ಟಿತು. ಚಿಕ್ಕನಾಯಕನಹಳ್ಳಿಯಿಂದ ಹಂದನಕೆರೆಯ ಟೈಲ್‌ಎಂಡ್‌ವರೆಗೆ ಹಾಗೂ ಬೊಮ್ಮನಹಳ್ಳಿಯಿಂದ ಪಂಚನಹಳ್ಳಿವರೆಗೆ ಒಂದೇ ಫೀಡರ್ ಮೇಲೆ ಪವರ್ ಹೋಗುತ್ತಿರುವುದು ಸನ್ಮಾನ್ಯ ರಂಗನಾಥ್‌ರವರಿಗೆ ಗೊತ್ತಿದೆ. ಹಂದನಕೆರೆಗೆ ಒಂದು ಸೆಕ್ಷನ್ ಆಫೀಸ್ ಅಗತ್ಯವಾಗಿ ಬೇಕಾಗಿತ್ತು. ಅಲ್ಲಿಗೆ ಕೊಟ್ಟರು, ಆದರೆ ಸ್ಟಾಫ್ ಕೊಟ್ಟಿಲ್ಲ. ಅಲ್ಲಿಗೆ ಅಸಿಸ್ಟೆಂಟ್ ಇಂಜಿನಿಯರ್‌ರವರ ಮಟ್ಟದವರು ಬರಬೇಕಾಗಿತ್ತು. ಇವೊತ್ತು ಸ್ಟಾಫ್ ಇಲ್ಲದೆ, ಒಂದು ಫೀಡರ್ ಸುಮಾರು 50–60 ಕಿಲೋಮೀಟರ್ ದೂರದವರೆವಿಗೂ ಹೋಗುತ್ತಿದೆ. ತಮಗೆ ಒಂದು ಉದಾಹರಣೆ ಕೊಡುವುದಾದರೆ, ಇದು ನಲ್ಲಿ ನೀರು ಹೋದಂತೆ, ಬೇರೆ ರೀತಿ ಅಲ್ಲ. ಎಲ್ಲೆಲ್ಲಿ ಟ್ಯಾಪ್ ಮಾಡುತ್ತೀರೋ, ಅಲ್ಲಿಗೆ ಹೋಗುತ್ತದೆ, ಪ್ರೆಶರ್ ರೆಡ್ಯೂಸ್ ಆಗುತ್ತಾ ಹೋಗುತ್ತದೆ. ಟೈಲ್ ಎಂಡ್‌ನವರು ಬರುತ್ತದೆಯೇ ಎಂದು ನೋಡಬೇಕಾಗುತ್ತದೆ. ವಿದ್ಯುಚ್ಛಕ್ತಿಯೂ ಅಷ್ಟೆ. ಬಹಳಷ್ಟು ಉದ್ದದ ಫೀಡರ್‌ಗಳನ್ನು ಸುಮಾರು 60–70 ಕಿಲೋಮೀಟರ್ ಇಟ್ಟುಕೊಂಡು ತಾವು ಎಂಇಎಸ್‌ಎಸ್‌ನಿಂದ ಎಷ್ಟು ಪವರ್‌ಅನ್ನು ಫೀಡರ್ ಮಾಡುವುದಕ್ಕಾಗುತ್ತದೆ ? ಮತ್ತು ಕಂಪ್ಲೆಂಟ್ಸ್ ಏನು ಮಾಡುತ್ತೀರಿ, ಅದು ಕೂಡ ಅರ್ಥವಾಗಿಲ್ಲ. ಆದುದರಿಂದ, ಇದರ ಬಗ್ಗೆ ತಾವು ಸ್ವಲ್ಪ ಗಮನ ಕೊಡಬೇಕು. ಇದನ್ನೇನಾದರೂ ಕಟ್ ಮಾಡಬೇಕು. ಸಣ್ಣ ಕೆಲಸಗಳನ್ನು ಕೆಇಬಿಯವರು ಮಾಡಿಲ್ಲ. ಸ್ವಲ್ಪ ಬೈಪಾಸ್ ಮಾಡಿ DOLOಗಳನ್ನು ಹಾಕಿ, ಕಟ್–ಔಟ್ಸ್ ಇಡಿ. ಅನಂತರ, ಟ್ರಾನ್ಸ್‌ಫಾರ್ಮರ್‌ಗಳನ್ನು ಸಹ ಸರಬರಾಜು ಮಾಡುವುದಿಲ್ಲ. ಸನ್ಮಾನ್ಯ ಏಕಾಂತಯ್ಯನವರು ಮಾತನಾಡುವಾಗ ಹೇಳಿದ್ದು ಸರಿಯಾಗಿದೆ. ಒಂದು ಗುಂಡಿ ತೋಡಿ ಕಂಬ ನೆಡುವುದಕ್ಕೆ 60ರೂಪಾಯಿ ರೇಟ್ ತಮ್ಮಲ್ಲಿದೆ. ಆದರೆ, ಈ ಕೆಲಸವನ್ನು ಯಾವ ಕಂಟ್ರಾಕ್ಟರ್ ಕೂಡ ಮಾಡುತ್ತಿಲ್ಲ. ಕಂಬ ತೆಗೆದುಕೊಂಡು ಹೋಗುವುದಕ್ಕೆ ಗಾಡಿಯಲ್ಲಿ ಹಾಕಿಕೊಂಡು ಹೋಗಬೇಕಾಗುತ್ತದೆ, ಟ್ರಾಕ್ಟರ್‌ನಲ್ಲಿ ಹಾಕಿಕೊಂಡು ಹೋಗುವುದಕ್ಕಾಗುವುದಿಲ್ಲ. ಕಂಬ ಹಾಕಿಸಿಕೊಳ್ಳುವವನು ತನ್ನ ಆಳನ್ನು ಬಿಟ್ಟು ಗುಂಡಿ ತೆಗೆಸಬೇಕು. ಕಂಬ ನೆಟ್ಟ ನಂತರ ಕೆಇಬಿಯವರು ಬಂದು ಲೈನ್ ಎಳೆಯುವುದು, ಛಾರ್ಜ್ ಮಾಡುವುದು ಇವಿಷ್ಟು ಕೆಲಸ ಮಾಡುವುದಕ್ಕೆ ಎಷ್ಟು ಹಣ ಕೊಡುತ್ತಿದ್ದಾರೆಂದು ತಾವು ನೋಡಬೇಕು. ಒಂದು ವಿಷಯದಲ್ಲಿ ನಿಮ್ಮ ಇಲಾಖೆಯವರನ್ನು ನಾನು ಕಾಂಪ್ಲಿಮೆಂಟ್ ಮಾಡಬೇಕಾಗುತ್ತದೆ. ಈ ಹಿಂದೆ ಲೈನ್‌ಗಳ ಕೆಲಸ ಮಾಡುವವರು ಬಹಳ ಚೆನ್ನಾಗಿ ಮಾಡುತ್ತಿದ್ದರು. ವೈರ್ ಅನ್ನು ಟೆನ್ಷನ್ ಆಗಿ ಎಳೆಯುತ್ತಿದ್ದರು. ಇವೊತ್ತು ತಾವು ನಿಂತುಕೊಂಡು ನೋಡಿದರೆ ವೈರ್‌ಗಳು ನೇತಾಡುತ್ತಿರುತ್ತವೆ.

ಯಾವಾಗ ಒಂದಕ್ಕೊಂದು ಎರಡು ವೈರ್‌ಗಳು ಬಡಿಯುತ್ತವೆಯೋ ಯಾವಾಗ ಶಾರ್ಟ್ ಸರ್ಕ್ಯೂಟ್ ಆಗುತ್ತದೆಯೋ, ಯಾವಾಗ ನಿಮ್ಮ ಟಿ.ಸಿ. ಫೇಲ್ ಆಗುತ್ತದೆಯೋ ಇದನ್ನೆಲ್ಲಾ ನೀವು ಗಮನಿಸಬೇಕು. ಇವೊತ್ತು ಕಂಟ್ರಾಕ್ಟರ್‌ಗೆ ಕೆಲಸವನ್ನು ವಹಿಸಿದ್ದೀರಿ. ಅದನ್ನು ಇನ್ಸ್ಪೆಕ್ಟರು ಇನ್ಸ್‌ಪೆಕ್ಟ್ ಮಾಡುತ್ತಿಲ್ಲ. ಬಿಲ್ ಮಾಡಿದ್ದಾರೆ. ಹೋಗಿ ನೋಡುತ್ತಿಲ್ಲ. ಎಲ್ಲಿಯುವರೆಗೆ ನೋಡುತ್ತಿಲ್ಲವೆಂದರೆ, ಕಛೇರಿಯಲ್ಲಿ ಕುಳಿತುಕೊಂಡು ಸರ್ವೀಸ್ ನಂಬರ್ R R ನಂಬರ್ ಅಸೈನ್ ಮಾಡುತ್ತಾರೆ. ಇದನ್ನು ನಾನು ನೋಡಿದ್ದೇನೆ. ಇದನ್ನು ತಾವು ಸ್ವಲ್ಪ ಗಮನದಲ್ಲಿಟ್ಟುಕೊಳ್ಳಬೇಕು. ಮತ್ತು ಪವರ್ ಲಾಸ್ ಆಗುತ್ತಿರುವುದನ್ನು ಕಡಿಮೆ ಮಾಡಬೇಕು. ಇವೊತ್ತು 18 ಪರ್ಸೆಂಟ್ ಎಂದರೆ ವಾಸ್ತವವಾಗಿ 20 ಪರ್ಸೆಂಟ್ ಇದೆ. 18 ಪರ್ಸೆಂಟ್‌ಗೆ ತರುವುದಕ್ಕೆ ಇವರ ಕೈಯಿಂದ ಆಗುವುದಿಲ್ಲ. ಅದನ್ನೇನಾದರೂ ಒಂದು ಪರ್ಸೆಂಟ್ ರೆಡ್ಯೂಸ್ ಮಾಡಿದರೆ ನನಗೆ ಗೊತ್ತಿರುವ ಮಾಹಿತಿ ಪ್ರಕಾರ ಒಂದು ಗಂಟೆಗೆ ಒಂದು ಪರ್ಸೆಂಟ್‌ನಷ್ಟು ರೆಡ್ಯೂಸ್ ಮಾಡಿದರೆ ಕೆಇಬಿಗೆ 11 ಕೋಟಿ ರೂಪಾಯಿಗಳಷ್ಟು ದುಡ್ಡು ಉಳಿತಾಯವಾಗುತ್ತದೆ. ಇದನ್ನು ಏಕೆ ಮಾಡಿಲ್ಲ ? ಈ ಸಿಸ್ಟಮ್ ಇಂಪ್ರೂವ್ ಮಾಡುವುದಕ್ಕೆ ತಾವು ಏಕೆ ಗಮನ ಕೊಟ್ಟಿಲ್ಲ ? ಇಷ್ಟೂ ಕೆಲಸ ಮಳೆಗಾಲದಲ್ಲಿ ಆಗಬೇಕಾಗಿತ್ತು. ಆಗ ಪವರ್‌ಗೆ ಡಿಮ್ಯಾಂಡ್ ಕಡಿಮೆ ಇತ್ತು. 2–3ದಿವಸಗಳ ಕಾಲ ಪವರ್ ಅನ್ನು ಡಿಸ್–ಕನೆಕ್ಟ್ ಮಾಡಿದ್ದರೂ ಹಳ್ಳಿಗಾಡಿನಲ್ಲಿರತಕ್ಕ, ನಾವುಗಳು ತಡೆದುಕೊಳ್ಳುತ್ತಿದ್ದೆವು. ಆಗ ಪವರ್ ಇಲ್ಲದೆ ಹೋಗಿದ್ದರೂ ತೋಟ – ಹೊಲ – ಗದ್ದೆಗಳಿದ್ದು, ಮಳೆ ಚೆನ್ನಾಗಿ ಬರುತ್ತಿದ್ದುದರಿಂದ ತಡೆದುಕೊಳ್ಳುತ್ತಿದ್ದೆವು. ಇಡೀ ವರ್ಷದಲ್ಲಿ ಏನೂ ಕೆಲಸ ಮಾಡಿಲ್ಲ. ತಮ್ಮ ಹೆಗಲ ಮೇಲೆ ಇವೊತ್ತು ಜವಾಬ್ದಾರಿ ಬಿದ್ದಿದೆ. Flush ಸೀಜನ್‌ನಲ್ಲಿ ತಾವು ಎಷ್ಟು ಕೆಲಸ ಮಾಡಬೇಕಾಗಿದೆಯೆಂದರೆ ಈ ವರ್ಷದ್ದು ಹಾಗೂ ಮುಂದಿನ ವರ್ಷದ್ದು ಕೆಲಸ ಮಾಡಿದರೆ ಮಾತ್ರ ಏನಾದರೂ ಉದ್ಧಾರವಾಗಬಹುದು. ತಮ್ಮಲ್ಲಿ ನಾನು ಕೇಳಿಕೊಳ್ಳುವುದೇನೆಂದರೆ, ಉತ್ತರ ಕರ್ನಾಟಕದಲ್ಲಿರುವ ಎಲ್ಲಾ 33 ಕೆವಿಎ ಲೈನ್‌ಗಳನ್ನು ತಾವು ಮೊದಲು ರೀಪ್ಲೇಸ್ ಮಾಡಿಸಬೇಕು. ಈಗ ಇರುವುದರಲ್ಲಿ ಯಾವ ಅರ್ಥವೂ ಉಳಿದಿಲ್ಲ. ಆ ಕಾಲಕ್ಕೆ ಬಂದು 110:33 ಮಾಡುವುದು, ಅದು 110 ಆಗಿ ಉಳಿಯಬೇಕು, ಮತ್ತೆ 66ಕ್ಕೆ ಹೆಚ್ಚು ಮಾಡಿ ಎಂದು ನಿಮ್ಮ ಇಲಾಖೆಯುವರು ಬರೆದುಕೊಳ್ಳುತ್ತಾರೆ ಅಥವಾ ಡಬ್ಬಲ್ ಸರ್ಕ್ಯೂಟ್ ಎಂದು ಹೇಳುತ್ತಾರೆ. ಪವರ್ ಫ್ಲೋ ಮಾಡುವುದಕ್ಕಾಗುವುದಿಲ್ಲ. ಎರಡನೆಯದಾಗಿ, ಇನ್‌ವೆಂಟರಿ ಪ್ಲಾನ್ ಮಾಡಬೇಕು. ಕಂಬ ಕೊಟ್ಟರೆ ತಂತಿ ಇಲ್ಲ, ತಂತಿ ಕೊಟ್ಟರೆ ಕಂಬ ಕೊಡುವುದಿಲ್ಲ, ಎರಡೂ ಕೊಟ್ಟರೆ ಟ್ರಾನ್ಸ್‌ಫಾರ್ಮರ್ ಇಲ್ಲ, ವೈರ್ ಇಲ್ಲವೆನ್ನುವ ಪರಿಸ್ಥಿತಿಯನ್ನು ಕೆಇಬಿಯಲ್ಲಿ ನಿರ್ಮಾಣ ಮಾಡಿದ್ದಾರೆ. ಇದನ್ನು ತಾವು ತಪ್ಪಿಸಬೇಕು. ಎಷ್ಟು ಕಂಬಗಳನ್ನು ನೀವು ತರುತ್ತೀರಿ, ಅಷ್ಟಕ್ಕೂ ತಕ್ಕದಾಗಿ ಅಷ್ಟು ಕಿಲೋಮೀಟರ್‌ಗಳವರೆಗೆ ಕಂಡಕ್ಟರ್‌ಗಳನ್ನು ಕೊಡುವ ಸ್ಥಿತಿಯಲ್ಲಿ ಇಲಾಖೆ ಇರಬೇಕು. ನಿಮಗೆ ಏನಾಗಿದೆಯೆಂದರೆ, ಇಡೀ ಕೆಇಬಿ ಇಲಾಖೆಯಲ್ಲಿ ಕಂಬ ಕೊಟ್ಟು ತಂತಿ ಇಲ್ಲವೆಂದು ಕುಳಿತಿದ್ದಾರೆ. ನನ್ನ ಕ್ಷೇತ್ರವೊಂದರಲ್ಲೇ 110 ಪಂಪುಸೆಟ್‌ಗಳನ್ನು ಕೊಡಬಹುದಾಗಿತ್ತು, ನೀವು ಬರಿ ಕಂಡಕ್ಟರ್‌ಗಳನ್ನು ಮಾತ್ರ ಸರಬರಾಜು ಮಾಡಿದ್ದೀರಿ. ಆದುದರಿಂದ, ಇದನ್ನು ತಾವು ಆದ್ಯತೆ ಮೇಲೆ ತೆಗೆದುಕೊಳ್ಳಬೇಕೆಂದು ತಮ್ಮಲ್ಲಿ ಕೇಳಿಕೊಂಡು ಇನ್ಸ್‌ಪೆಕ್ಟೊರೇಟ್ ಬಗ್ಗೆ ತಾವು ಸ್ವಲ್ಪ ಗಮನಹರಿಸಬೇಕು.

ತಾವು ಏನು ನಿರೀಕ್ಷಣೆ ಮಾಡಿದ್ದೀರಿ ಮತ್ತು ತಾವು ಏನು ಪುಸ್ತಕದಲ್ಲಿ ಬರೆದುಕೊಂಡಿದ್ದೀರಿ ಆ ಕೆಲಸವನ್ನು ಅವರು ಮಾಡುತ್ತಿಲ್ಲ, ಭಾರಿ ಮ್ಯೆಕ್ಯಾನಿಕಲ್ ಆಗಿ ಪವರ್ ಥೆಫ್ಟ್ ನಡೆಯುತ್ತಿದೆ. ಇವತ್ತು ಪವರ್ ಥೆಫ್ಟ್ ಅಥವಾ ಇಂಡಸ್ಟ್ರಿಯಲ್ ಪವರ್ ಥೆಫ್ಟ್ ಏನು ಆಗುತ್ತಿದೆ ಅದು ನಿಮ್ಮವರಿಗಾರಿಗೂ ಗೊತ್ತಿಲ್ಲದೇ ಆಗುವುದಿಲ್ಲ. ಕೆ.ಇ.ಬಿ. ಅಧಿಕಾರಿಗಳು ಶಾಮೀಲಾಗದಿದ್ದರೆ ವಿದ್ಯುತ್ ಕಳ್ಳತನವನ್ನು ಕೈಗಾರಿಕೆಯವರು ಮಾಡುವುದಕ್ಕೆ ಸಾಧ್ಯವಿಲ್ಲ. ಇವರಿಗೆ ಎಷ್ಟು ಆ್ಯಂಪ್ಸ್ ಉಪಯೋಗವಾಗಿದೆ

ಎಂಬುದಕ್ಕೆ ಒಂದು ರೆಕಾರ್ಡ್ ಇರುತ್ತದೆ. ನೀವು ಚಾಲೆಂಜ್ ಮಾಡಿ ಅವರಿಗೆ ಕೇಳಿ,ಮೂರು ಶಿಫ್ಟ್‌ನಲ್ಲಿ ಎಷ್ಟು ಆ್ಯಂಪ್ಸ್ ಉಪಯೋಗವಾಗಿದೆ ಎಂಬುದನ್ನು ಬಂದು ಮುಂದೆ ನಿಂತುಕೊಂಡು ಲೆಕ್ಕ ಕೊಡಲಿ. ಆದರೆ ಯಾರೂ ಕೂಡ ಮುಂದೆ ನಿಂತು ಲೆಕ್ಕ ಕೊಡುವುದಿಲ್ಲ. ಏಕೆಂದರೆ, ಅವರೆಲ್ಲರೂ ಸಹ ಅದರಲ್ಲಿ ಶಾಮೀಲಾಗಿದ್ದಾರೆ. ಇವರಿಗೆ 5–10 ಸಾವಿರ ರೂಪಾಯಿ ಬಹಳ ಆರಾಮವಾಗಿ ಬರುತ್ತದೆ, ಆ ಕೈಗಾರಿಕೆಯವರಿಗೆ ಲಕ್ಷಗಟ್ಟಲೆ ಉಳಿಯುತ್ತದೆ. ಕೋಲ್ಡ್ ಸ್ಟೊರೇಜ್‌ನವರು, ಸ್ಟೀಲ್ ಇಂಡಸ್ಟ್ರೀಸ್‌ನವರು Roller flour mills ನವರು ನೀವು ಏನಾದರೂ ಪವರ್‌ನ್ನು ಥೆಫ್ಟ್ ಮಾಡಲು ಅವಕಾಶ ಕೊಡದಿದ್ದರೆ ಅವರು ಬದುಕಲು ಆಗುವುದಿಲ್ಲ. ಅವರೆಲ್ಲರೂ ಇವತ್ತು ಚೆನ್ನಾಗಿ ಲಾಭ ಮಾಡಬೇಕಾದರೆ ಕೆ.ಇ.ಬಿ.ಯನ್ನು ಮಟ್ಟ ಮಾಡಿಯೇ ಮಡಬೇಕಾಗುತ್ತದೆ. ಅಲ್ಲಿ ಇಲಾಖೆಯವರು ಶಾಮೀಲಾಗಿದ್ದಾರೆ, ಅದರಲ್ಲಿ ಅನುಮಾನವೇ ಇಲ್ಲ. ಮತ್ತೆ ಪವರನ್ನು ಕೊಡಬೇಕಾದರೆ ಸ್ವಲ್ಪ MVSS ಜಾಸ್ತಿ ಮಾಡಬೇಕೆಂದು ಹೇಳಿದೆ. ಇದರ ಬಗ್ಗೆ ಯಾರಾದರೂ ಸ್ವಲ್ಪ ಕುಳಿತು ಮಾನಿಟರ್ ಮಾಡಬೇಕಾಗುತ್ತೆ. ಈಗ ಏನಾಗಿದೆ ಎಂದರೆ, ನಿಮ್ಮ 6 ಗಂಟೆ ಪವರ್ ಕಟ್ ಜೊತೆಗೆ ನಮ್ಮಲ್ಲಿ 2 ಗಂಟೆ ಸಿಂಗಲ್ ಫೇಸ್ ಎಂದು ಕೊಡಿಸಿದ್ದಾರೆ. ಗ್ರಾಮಾಂತರ ಪ್ರದೇಶದಲ್ಲಿ 2 ಗಂಟೆ ಈ ರೀತಿಯಾದರೆ ಒಟ್ಟು 8 ಗಂಟೆ ಪವರ್ ಕಟ್‌ಆಯಿತು. ನಿಮ್ಮ ಸರ್ಕಾರದ ಲೆಕ್ಕದಲ್ಲಿ 6 ಗಂಟೆ ಪವರ್ ಕಟ್ ಆದರೆ ನಮಗೆ 8 ರಿಂದ 10 ಗಂಟೆ ಕಟ್ ಆಗುತ್ತದೆ, ಅದು ಏಕೋ ನನಗೆ ಗೊತ್ತಿಲ್ಲ. ಪೀಕ್ ಅವರ್ ಲೋಡ್ ಜಾಸ್ತಿ ಇದೆ ಎಂದರೆ, ಬೆಂಗಳೂರಿಗೆ 19 ಗಂಟೆ ಇದೆ, ನಿಮ್ಮ ಇಲಾಖೆಯವರನ್ನು ಕರೆಯಿಸಿ 19 ಗಂಟೆಗಳ ಕಾಲ ಪೀಕ್ ಅವರ್ ಲೋಡ್ ತೆಗೆದುಕೊಳ್ಳಲು ಇರತಕ್ಕದನ್ನು ಏಕೆ ರೆಡ್ಯೂಸ್ ಮಾಡಲಿಲ್ಲವೆಂದು ಕೇಳಬೇಕಾಗುತ್ತದೆ. ನಮ್ಮ ಗ್ರಾಮಾಂತರ ಪ್ರದೇಶಗಳಲ್ಲಿ 2 ಗಂಟೆ ಪೀಕ್ ಅವರ್ ಎಂದು ಸಿಂಗಲ್ ಫೇಸ್ ಮಾಡಿ ಎರಡು ಗಂಟೆಗಳ ಕಾಲ ಐ.ಪಿ. ಸೆಟ್ಸ್ ಓಡಿಸುವುದನ್ನು ನಿಲ್ಲಿಸಿದ್ದೀರಿ. ಅದನ್ನು ತಪ್ಪಿಸಬೇಕು ಮತ್ತು ತಕ್ಷಣ ಪವರ್ ಜನರೇಷನ್‌ಗಾಗಿ ಏನು ಡೀಸೆಲ್ ಜನರೇಟರ್ ಹಾಕಬೇಕಾಗಿತ್ತು ಆ ಕಮೀಷನ್‌ನನ್ನು ಮಾಡಬೇಕು. ಅದರ ಯೂನಿಟ್ ಕಾಸ್ಟ್ ದುಬಾರಿಯಾಗುತ್ತದೆ, ಆದರೂ ಅದನ್ನು ಮಾಡಬೇಕಾಗಿದೆ.

ಇವತ್ತು ನಾವು ನಿರ್ನಾಮವಾಗತಕ್ಕ ಸ್ಥಿತಿಯನ್ನು ತಲುಪಿದ್ದೇವೆ, ಅದಕ್ಕೆ ಮೊದಲೇ ಒಂದು ವರ್ಷದಲ್ಲಿ ಇದನ್ನು ಮಾಡಬೇಕಾಗಿದೆ. ಇದರ ಜೊತೆಗೆ non–conventional powers tap ಮಾಡಬೇಕಾಗುತ್ತದೆ. ಅದು ಸೋಲಾರ್ ಇರಲಿ, ಗೋಬರ್ ಗ್ಯಾಸ್ ಪ್ಲಾಂಟ್ಸ್ ಇರಲಿ. ಅದರ ಬಗ್ಗೆ ಸ್ವಲ್ಪ ಪ್ರಚಾರ ಮಾಡಬೇಕಾಗುತ್ತದೆ. ತಮಗೆ ಗೊತ್ತಿಲ್ಲ, ಸೋಲಾರ್ ಪದ್ಧತಿಯನ್ನು ಯಾರಾದರೂ ಅಳವಡಿಸಿಕೊಂಡು ವಿದ್ಯುತ್‌ನ್ನು ಪಡೆಯುವುದಾದರೆ ಭಾರತ ಸರ್ಕಾರದಿಂದ 75 ಪರ್ಸೆಂಟ್ ಸಬ್ಸಿಡಿ ಬರುತ್ತದೆ. ನಾನು ಬೆಂಗಳೂರು ಡೈರಿಯಲ್ಲಿ ಸೋಲಾರ್ ಪದ್ಧತಿಯನ್ನು ಅಳವಡಿಸಿದ ದಿನದಂದು ನೂರು ಪರ್ಸೆಂಟ್ ಸಬ್ಸಿಡಿ ಇತ್ತು. ಆದರೆ ಈಗ ಅದನ್ನು 20 ಪರ್ಸೆಂಟ್‌ಗೆ ತಂದು ಇಟ್ಟಿದ್ದಾರೆ. ಆ 20 ಪರ್ಸೆಂಟ್‌ಗೆ ತಂದು ಇಟ್ಟಿದ್ದಾರೆ. ಆ 20 ಪರ್ಸೆಂಟನ್ನು ಸಹ ಗುತ್ತಿಗೇದಾರರು ಮೊದಲೇ ತಿಂದುಬಿಡುತ್ತಾರೆ. ನಾವು ಏನು ಬೆಳಗಿನ ಹೊತ್ತು ಸೋಲಾರ್ ಪದ್ಧತಿಯನ್ನು ಅಳವಡಿಸಿ ಪವರ್‌ನ್ನು ಉಪಯೋಗ ಮಾಡಿಕೊಳ್ಳಬಹುದಾಗಿತ್ತೋ ಅಷ್ಟು ಪವರನ್ನು ಬೇರೆ ಕೈಗಾರಿಕೆಗಳಿಗೆ ತಾವು ಕೊಡಬಹುದಾಗಿತ್ತು, ಇದರ ಬಗ್ಗೆ ಪ್ರಚಾರವನ್ನೇ ಮಾಡಲಿಲ್ಲ. ತಮಗೆ ಗೊತ್ತಿಲ್ಲದ ಒಂದು ಮಾತನ್ನು ಹೇಳುತ್ತೇನೆ. ಅದೇನೆಂದರೆ, ಹರಿಯಾಣದಲ್ಲಿ ಕಮ್ಯುನಿಟಿ ಗೋಬರ್ ಗ್ಯಾಸ್ ಪ್ಲಾಂಟ್‌ನ್ನು ಮಾಡಿದ್ದಾರೆ. Harayana is in the lead ಇಡೀ ಗ್ರಾಮಕ್ಕೆ ಒಂದು ದೊಡ್ಡ ಗೋಬರ್ ಗ್ಯಾಸ್‌ನ್ನು ಮಾಡಿ ಅದನ್ನು ನೋಡಿಕೊಳ್ಳಲು ಯಾರೋ ಒಬ್ಬರೋ ಅಥವಾ ಇಬ್ಬರನ್ನು ಇಟ್ಟುಕೊಂಡು ಇಡೀ ಊರಿಗೇ ಗೋಬರ್ ಗ್ಯಾಸ್ ಪ್ಲಾಂಟ್‌ನಿಂದ ಪವರನ್ನು ಫೀಡ್ ಮಾಡುತ್ತಿದ್ದಾರೆ. ಅದರಿಂದ ಅವರ ಸಣ್ಣ ಸಣ್ಣ ರಿಕ್ವಾಯರ್‌ಮೆಂಟ್‌ನ್ನು ಈಡೇರಿಸಿಕೊಳ್ಳುತ್ತಿದ್ದಾರೆ. ಆ ಕೆಲಸವನ್ನು ತಾವು ಮಾಡಬೇಕಾಗುತ್ತದೆ. ಏಕೆಂದರೆ, ಇದರಲ್ಲಿ

ಇನ್‌ವೆಸ್ಟ್‌ಮೆಂಟ್ ಬಿಟ್ಟರೆ ಮತ್ತೆ ಬೇರೆ ರೆಕರಿಂಗ್ ವೆಚ್ಚಗಳು ಇರುವುದಿಲ್ಲ. ಮತ್ತೆ ಒಂದು ಮಾತನ್ನು ಹೇಳಬೇಕಾದರೆ ತಮ್ಮಲ್ಲಿ ಸ್ಟಾಫಿಂಗ್ ಬಹಳ ಕೆಟ್ಟದ್ದಾಗಿದೆ. ಕೆ.ಇ.ಬಿ.ಯಲ್ಲಿ ಚೆನ್ನಾಗಿ ಕೆಲಸ ಮಾಡಬೇಕಾದಂಥ ಅಧಿಕಾರಿಗಳನ್ನು ಯಾರು ರೆಕಗ್ನೈಸ್ ಮಾಡಿಲ್ಲ. ಯಾರು ಯೂನಿಯನ್ ಚಟುವಟಿಕೆಯಲ್ಲಿ ತೊಡಗಿರುತ್ತಾರೆ, ಯಾರ ಬಾಯಿ ಜೋರಾಗಿರುತ್ತದೆ, ಯಾರು ಶಕ್ತಿಶಾಲಿಗಳಾಗಿದ್ದಾರೆ ಅವರಿಗೆ ಮಾತ್ರ ಒಳ್ಳೊಳ್ಳೆಯ ಸ್ಥಾನಗಳು ದೊರಕಿವೆ, ಅದರ ಬಗ್ಗೆ ಯಾರು ಪ್ರಶ್ನೆ ಮಾಡಿಲ್ಲ. ಇದು ಎಲ್ಲಿಯವರೆಗೆ ಹಬ್ಬಿದೆ ಎಂದರೆ ಲೈನ್‌ಮ್ಯಾನ್‌ವರೆಗೂ ಹಬ್ಬಿದೆ. up to the level of linemen ಇವರನ್ನು ನೀವು ಕಂಟ್ರೋಲ್‌ಗೆ ತೆಗೆದುಕೊಳ್ಳಬೇಕಾದರೆ ಇವರನ್ನು ಎಸೆನ್‌ಷಿಯಲ್ ಸರ್ವೀಸ್ ಕೆಳಗೆ ತರಬೇಕಾಗುತ್ತದೆ ಮತ್ತು ಅಂಥ ಯೂನಿಯನ್‌ಗಳನ್ನು ರದ್ದು ಮಾಡಬೇಕಾಗುತ್ತದೆ. ಇಲ್ಲದಿದ್ದರೆ ಕೆ.ಇ.ಬಿ.ಯನ್ನು ಡೀಸೆಂಟ್ರಲೈಸ್ ಮಾಡಬೇಕಾಗುತ್ತದೆ. ಈ ಇಲಾಖೆಯಲ್ಲಿ 4 – 5 ಡಿವಿಷನ್ ಮಾಡಿ ಆಟಾನಮಿಯನ್ನು ಡಿಕ್ಲೇರ್ ಮಾಡಿಕೊಂಡು ಕುಳಿತರೆ ಸ್ವಲ್ಪ ಸಮಾಧಾನವಾಗಬಹುದು. ರಾಜ್ಯಮಟ್ಟದಲ್ಲಿ ಒಂದೇ ಒಂದು ಇಂಥ ಸಂಸ್ಥೆಯನ್ನು ಇಟ್ಟುಕೊಂಡು ಹೋದರೆ ಇನ್ನು ಮುಂದೆ ಬಹಳ ಕಷ್ಟವಾಗುತ್ತದೆ ಎಂದು ಹೇಳುತ್ತೇನೆ. ಮತ್ತು ನಮಗೆ ಏನು 60 ಸಾವಿರ ಐಪಿ ಸೆಟ್ಸ್‌ನ್ನು ಕೊಡುತ್ತೇನೆಂದು ಹೇಳಿದ್ದೀರಿ ಅದನ್ನು ಯಾವುದೇ ಕಾರಣದಿಂದಲೂ ಮುಂದಿನ ಟಾರ್ಗೆಟ್‌ನಲ್ಲಿ ಕಡಿಮೆ ಮಾಡಬಾರದು. ಇವರು ನಮಗೆ ಓವರ್ ಲೋಡ್ ಆಗಿದೆ ಎಂದು ಹೇಳಬಹುದು. ಆದರೆ ತಮಗೆ ಹೇಳುತ್ತೇನೆ, ಹೆಚ್‌ಟಿ ಕನ್‌ಸ್ಯೂಮರ್ಸ್‌ಗೆ ಮತ್ತು ನಮಗೆ ಹೋಲಿಸಿದಾಗ ಅವರೂ ಸಹ ನಮ್ಮಷ್ಟೇ ಪವರ್ ಉಪಯೋಗ ಮಾಡುತ್ತಿದ್ದಾರೆ. ಪ್ರತಿವರ್ಷ ಹೊಸ ಹೊಸ ಇನ್‌ಸ್ಟಲೇಷನ್ಸ್ ಆಗಿದೆ. ನಾವು ಎನರ್ಜೈಸ್ ಮಾಡಿಲ್ಲವೆಂದು ಅವರು ಹೇಳಬಹುದು. ಆದರೆ ತಾವು ತೆಗೆದು ನೋಡಿದರೆ, ಏನು ಬೆಂಗಳೂರಿನಲ್ಲಿ ಹೆಚ್‌ಟಿಯವರಿಗೆ, ಎಲ್.ಟಿಯವರಿಗೆ ಏನು ಈ ಪವರನ್ನು ಕೊಟ್ಟಿದ್ದೀರಿ ಅದೇನೂ ಕಡಿಮೆ ಇಲ್ಲ. ಅಷ್ಟೇ ಪವರನ್ನು ಕೊಟ್ಟುಕೊಂಡು ಬಂದಿದ್ದಾರೆ. ಹೇಳಲಿಕ್ಕೆ ನಮ್ಮನ್ನು ತೋರಿಸುತ್ತಾರೆ. ನೋಡುವವರಿಗೆಲ್ಲ ನಾವು ಪಾಪದ ಕೂಸು ಆಗಿದ್ದೇವೆ. ಪುಕ್ಕಟ್ಟೆ ಕರೆಂಟ್‌ನ್ನು ತೆಗದುಕೊಂಡು ರೈತರು ಭಾರಿ ಮಾತನಾಡುತ್ತಾರೆಂದು ಹೇಳತಕ್ಕ ಸ್ಥಿತಿ ನಮ್ಮದಾಗಿದೆ, ಫ್ರೀಯಾಗಿ ಕರೆಂಟ್ ಕೊಡುತ್ತೇವೆ, ಆದರೂ ಮಾತು ಜಾಸ್ತಿ ಮತ್ತು ಬಾಯಿ ಮಾಡುತ್ತಾರೆಂದು ಹೇಳುವಂತಾಗಿದೆ. ತಮಗೆ ಹೇಳುತ್ತೇನೆ ತಾವು ಮೀಟರ್ ಹಾಕಿ ಅದರ ಮೇಲೆ ಮಾಡತಕ್ಕ ಇನ್‌ವೆಸ್ಟ್‌ಮೆಂಟ್ ಮತ್ತು ವೆಚ್ಚವನ್ನು ಲೆಕ್ಕ ಹಾಕಿದರೆ ಫ್ಲಾಟ್ ರೇಟನ್ನು ಕೊಟ್ಟಿದ್ದರಲ್ಲ ಅದೇ ಲಾಭದಾಯಕವಾಗುತ್ತದೆ. ನಾವೇನು 12 ತಿಂಗಳೂ ಐಪಿ ಸೆಟ್‌ನ್ನು ಓಡಿಸುವುದಿಲ್ಲ, 3 – 4 ತಿಂಗಳು ಮಾತ್ರ ಓಡಿಸುತ್ತೇವೆ, ಆದರೆ ನಾವು ಸಹ 12 ತಿಂಗಳಿಗೂ ಹಣವನ್ನು ಕೊಟ್ಟಿದ್ದೇವೆ. ಅವತ್ತು ಭಾರಿ ಚಾಣಾಕ್ಷತನದಲ್ಲಿ ಫ್ಲಾಟ್‌ರೇಟ್ ಫಿಕ್ಸಾಗಿದೆ.

ರೈತರನ್ನು ಭಾರೀ ಉದ್ಧಾರ ಮಾಡಿದ್ದೇವೆಂದು ಹೇಳುವುದಕ್ಕಾಗುವುದಿಲ್ಲ. 75 ರೂ; 100 ರೂ; ಫಿಕ್ಸ್ ಮಾಡಿದ ದಿವಸ ಕೆ.ಇ.ಬಿ. ಎಕ್ಸ್‌ಪೆಂಡಿಚರ್ ಅಲ್ಲಿಗೆ ಹೋಗಿ ನಿಂತಿತ್ತು. ಇಷ್ಟು ಕನೆಕ್ಷನ್ಸ್‌ಗೆ ಒಬ್ಬ ಲೈನ್‌ಮನ್ ಹಾಕಿ ಮೀಟರ್ ಫಿಕ್ಸ್ ಮಾಡಿ ರೀಡಿಂಗ್‌ಗೆ ಯಾರನ್ನಾದರೂ ಕಳುಹಿಸಿದ್ದಿದ್ದರೆ ಆಗ ನಿಮಗೆ ಗೊತ್ತಾಗುತ್ತಿತ್ತು. ಆ ಜವಾಬ್ದಾರಿಯನ್ನು ತಪ್ಪಿಸಿಕೊಂಡು ನಮ್ಮನ್ನು ದೂರುತ್ತಿದ್ದಾರೆ, ರೈತರು ಪುಗಸಟ್ಟೆ ಪವರ್ ತೆಗೆದುಕೊಂಡಿದ್ದಾರೆ ಎಂದು. ಸ್ವಾಮಿ, ತಾವು ಲೈನ್‌ಮನ್‌ಗಳನ್ನು ಜಾಸ್ತಿ ಮಾಡಬೇಕು. ಕಾಂಟ್ರ್ಯಾಕ್ಟ್ ಮೇಲೆ ಲೈನ್‌ಮನ್‌ಗಳನ್ನು ತೆಗದುಕೊಳ್ಳುವುದಕ್ಕೆ ಮಂಡಲ ಪಂಚಾಯತಿಗೆ ತಾವು ಅವಕಾಶ ಮಾಡಿಕೊಡಬೇಕು. ಮಂಡಲ್ ಪಂಚಾಯಿತಿ ವ್ಯಾಪ್ತಿಯಲ್ಲಿ ಬೀದಿ ದೀಪಗಳನ್ನು ಹಾಕುವುದಕ್ಕೆ ಎಲ್ಲಿ ಹುಡುಕಿದರೂ ಒಬ್ಬ ಲೈನ್‌ಮನ್ ಸಿಕ್ಕುತ್ತಿಲ್ಲ. ಜೊತೆಗೆ ರಿಪೇರಿ ಮಾಡುವವರೂ ಕೂಡ ಇಲ್ಲದಿರುವುದರಿಂದ ಅವರಿಗೆ ಟ್ರೈನಿಂಗ್ ಕೊಡುವ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ದೊಡ್ಡ ನೀರಾವರಿ ವಿಚಾರದಲ್ಲಿ ನಮ್ಮನ್ನೂ ಕೂಡ ತಾವು ಲೆಕ್ಕಕ್ಕೆ ತೆಗೆದುಕೊಳ್ಳಬೇಕು. ಏಕೆಂದರೆ ನಮಗೆ ಭಾರೀ ನೀರಾವರಿ ಯಾವುದೂ ಬರುವುದಿಲ್ಲ. ಜಿಲ್ಲಾ ಪರಿಷತ್ತಿನಿಂದ ಸಣ್ಣ ಕೆರೆಗಳನ್ನು

ನೀರಾವರಿ ಇಲಾಖೆಗೆ ಏನು ತೆಗೆದುಕೊಂಡಿದ್ದೀರಿ; ಒಂದೇ ಒಂದು ಕೆರೆಗೂ ಕೂಡ ಗ್ರ್ಯಾಂಟ್ ಟ್ರಾನ್ಸ್‌ಫರ್ ಆಗಿಲ್ಲ; ಇವತ್ತಿನವರೆಗೂ ಅದರ ದುರಸ್ತಿಯಾಗಿಲ್ಲ. ಅದರ ವ್ಯವಹಾರಗಳನ್ನು ಯಾರಿಗೂ ನೋಡುವುದಕ್ಕಾಗಿಲ್ಲ. ಎರಡನೆಯದಾಗಿ ಪಿ.ಡಬ್ಲ್ಯು.ಡಿ.ನವರು ಕಿಲೋ ಮೀಟರ್ ಗ್ರ್ಯಾಂಟನ್ನು ಕೊಡುವ ಕಡೆ ಗ್ಯಾಂಗ್‌ಮನ್‌ನ್ನು ಆಚೆ ಇಟ್ಟುಕೊಡಬೇಕು. ಏಕೆಂದರೆ 1 ಕಿ.ಮೀ.ಗೆ 6 – 7 ಸಾವಿರ ರೂಪಾಯಿಗಳನ್ನು ಪಿ.ಡಬ್ಲ್ಯು.ಡಿ.ನವರು ಕೊಡುತ್ತಿದ್ದಾರೆಂದು ಮಾನ್ಯ ಸದಸ್ಯರಾದ ರಾಜೂಗೌಡರು ಹೇಳಿದರು. ನಾನು ತಮಗೆ ಹೇಳುತ್ತಿದ್ದೇನೆ, ಇದಿಷ್ಟೂ ಕೇವಲ ಆ ಗ್ಯಾಂಗ್‌ಮನ್ ಸಂಬಳಕ್ಕೇ ಹೋಗುತ್ತಿದೆ. ಅಲ್ಲಿ ಯಾವುದೇ ಮೇನ್‌ಟೇನ್ ಆಗುತ್ತಿಲ್ಲ. ಅವರನ್ನು ಆಚೆ ಇಟ್ಟು ಹಣ ಕೊಡಬೇಕು. ತಾವು ಕೆರೆಗಳ ಬಗ್ಗೆ ಆದ್ಯತೆಯನ್ನು ಕೊಡಬೇಕು. ನಮ್ಮ ಭಾಗದಲ್ಲಿರತಕ್ಕ ಕೆರೆಗಳು ಹಿಂದೆ ಕೃಷ್ಣದೇವರಾಯನ ಕಾಲದಲ್ಲಿ ಕಟ್ಟಿದಂಥ ಕೆರೆಗಳು. ಏನಾದರೂ ಮಾಡಿ ಅವನ್ನು ದುರಸ್ತಿ ಮಾಡಬೇಕು. ಅವುಗಳನ್ನೇನಾದರೂ ನಾಶವಾಗುವುದಕ್ಕೆ ಬಿಟ್ಟರೆ ನಮ್ಮ ಜೀವಮಾನವೇ ನಿರ್ನಾಮವಾಗುತ್ತದೆ. ಆದ್ದರಿಂದ ಕೆರೆಗಳಲ್ಲಿ ಹೂಳು ತೆಗೆಸುವುದರ ಜೊತೆಗೆ ನಾಲೆಗಳ ದುರಸ್ತಿಯನ್ನೂ ಮಾಡಿಸಬೇಕೆಂದು ಕೇಳಿಕೊಂಡು ಇಷ್ಟು ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ):– ಮಾನ್ಯ ಅಧ್ಯಕ್ಷರೇ, ತಾವು ನನಗೆ ಕೇವಲ 15 ನಿಮಿಷ ಕಾಲಾವಕಾಶವನ್ನು ಕೊಟ್ಟಿರುವುದಕ್ಕೆ ಮೊದಲು ತಮ್ಮನ್ನು ಅಭಿನಂದಿಸುತ್ತೇನೆ. ನಾನು ಕೇವಲ ಮಲಪ್ರಭಾ ಮತ್ತು ಘಟಪ್ರಭಾ ಯೋಜನೆಗಳ ಬಗ್ಗೆ ಮಾತ್ರ ಸೀಮಿತವಾಗಿ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ನಮ್ಮ ನೀರಾವರಿ ಇಲಾಖೆಯವರು ವಾರ್ಷಿಕ ವರದಿ 1992–93 ರಲ್ಲಿ ಕೊಟ್ಟಿರತಕ್ಕ ಪ್ರಕಾರ, ''ಎಲ್ಲ ಎಂಟು ಏತ ನೀರಾವರಿ ಯೋಜನೆಗಳ ಕೆಲಸಗಳು ಸರ್ವೇ ಸಾಧಾರಣ ಪೂರ್ತಿಗೊಂಡಿವೆ. 25,136 ಹೆಕ್ಟೇರ್‌ನ ಒಟ್ಟು ಕ್ಷೇತ್ರದಲ್ಲಿ ಎಲ್ಲ ಕ್ಷೇತ್ರವೂ ಮಾರ್ಚಿ 1986ರವರೆಗೆ ನೀರಾವರಿ ಸೌಲಭ್ಯಕ್ಕೆ ತರಲಾಗಿದೆ'' ಎಂದು ಹೇಳಿದ್ದಾರೆ. ಇದು ಮಲಪ್ರಭಾಕ್ಕೆ ಸಂಬಂಧಪಟ್ಟಿದ್ದು. ಕಳೆದ ವರ್ಷ ನಾನು ನಿಯಮ 334ರ ಅಡಿಯಲ್ಲಿ ಒಂದು ಪ್ರಶ್ನೆಯನ್ನು ಕೇಳಿದ್ದೆ. ಆ ಪ್ರಶ್ನೆಗೆ ಅಂದಿನ ನೀರಾವರಿ ಮಂತ್ರಿಗಳಾಗಿದ್ದ ಮಾನ್ಯ ಮಲ್ಲಾರಿ ಗೌಡ ಪಾಟೀಲರು ಉತ್ತರ ಕೊಟ್ಟು ಈಗಾಗಲೆ ಎಂಟು ನೀರಾವರಿ ಯೋಜನೆಗಳಾಗಿವೆ, 16 ಸಾವಿರ ಎಕರೆ ನೀರಾವರಿ ಆಗಿದೆ ಎಂದು ಇದೇ ಸದನದಲ್ಲೇ ಹೇಳಿದ್ದಾರೆ. ಅಂದಮೇಲೆ ಅವತ್ತು ಮಾನ್ಯ ಮಲ್ಲಾರಿಗೌಡ ಪಾಟೀಲರು ಕೊಟ್ಟಂಥ ಉತ್ತರ ನಿಜವೋ ಅಥವಾ ಇವರು ಕೊಟ್ಟಿದ್ದು ಸರಿಯೋ ಎಂಬುದನ್ನು ತಾವು ವಿಚಾರ ಮಾಡಬೇಕು. ಇವತ್ತು ಆ ಎಂಟು ಏತ ನೀರಾವರಿ ಯೋಜನೆಗಳಲ್ಲಿ ಟೇಲ್‌ಎಂಡ್‌ನಲ್ಲಿ ಬರತಕ್ಕ ಜಮೀನುಗಳಿಗೆ ನೀರು ಸರಿಯಾಗಿ ಹೋಗುತ್ತಿಲ್ಲ. ಇದೇ ಉದ್ದೇಶದಿಂದ ಅಂದಾಜು ಸಮಿತಿಯವರು ಆಗ್ಮೆಂಟೇಷನ್ ಆಫ್ ಲಿಫ್ಟ್ ಇರಿಗೇಷನ್ ಸ್ಕೀಮ್‌ನ್ನು ತೆಗೆದುಕೊಳ್ಳಬೇಕೆಂದು ಸಲಹೆ ಮಾಡಿದ್ದಾರೆ. ಅಂದಾಜು ಸಮಿತಿಯವರು ಈ ಒಂದು ವರದಿಯನ್ನು ಕೊಟ್ಟ ಮೇಲೆ ಅದನ್ನು ಅನುಷ್ಠಾನಕ್ಕೆ ತರತಕ್ಕದ್ದು ಸರ್ಕಾರದ ಆದ್ಯ ಕರ್ತವ್ಯ. ನಾನಾದರೂ ಸರ್ಕಾರವನ್ನು ಕೇಳಿಕೊಳ್ಳುತ್ತೇನೆ, ಈಗಾಗಲೇ ಅಂದಾಜು ಸಮಿತಿಯವರು ಏನು ಶಿಫಾರಸು ಮಾಡಿದ್ದಾರೆ. ಅದನ್ನು ತಾವು ಕಾರ್ಯರೂಪಕ್ಕೆ ತರಬೇಕು.

ಇನ್ನು ಎರಡನೆಯದಾಗಿ, ಈ ವಾರ್ಷಿಕ ವರದಿಯಲ್ಲಿ ಈ ರೀತಿ ಇದೆ: ''ಅಣೆಕಟ್ಟಿನ ಎಲ್ಲ ಕಾರ್ಯಗಳು ಸ್ಟಾಪ್‌ಲಾಗ್ ಗೇಟ್ ಕೂಡ್ರಿಸುವುದರೊಂದಿಗೆ ಪೂರ್ತಿಗೊಂಡಿದೆ. 1974ರಿಂದ ನೀರಿನ ಸಂಚಯವಾಗತೊಡಗಿದೆ. ಮುಳುಗಡೆ ಪ್ರದೇಶ ಪೀಡಿತ ಜನರು 33 ಹೊಸ ಹಳ್ಳಿಗಳಲ್ಲಿ ಪುನರ್‌ವಾಸ ಮಾಡಿದ್ದಾರೆ ಮತ್ತು ಅವರಿಗೆ ಬೇಕಾಗುವ ಅವಶ್ಯಕ ಸೌಕರ್ಯಗಳಾದ ಶಾಲೆ, ಕುಡಿಯುವ ನೀರಿನ ಭಾವಿ ಪಂಚಾಯಿತಿ ಕಟ್ಟಡ ಮುಂತಾದ ಸೌಕರ್ಯಗಳನ್ನು ಒದಗಿಸಲಾಗಿದೆ'' ಎಂದು ಹೇಳಿದ್ದೀರಿ. ಇವತ್ತಿನವರೆಗೂ ಮುಳುಗಡೆ ಪ್ರದೇಶದ ಜನರಿಗೆ ಕೆಲವು ಸೌಕರ್ಯಗಳನ್ನು ಮಾತ್ರ ಒದಗಿಸಿಕೊಟ್ಟಿದ್ದೀರಿ. ಯಾವುದನ್ನೂ ಒದಗಿಸಿಲ್ಲ ಎಂದು ಹೇಳುವುದಕ್ಕೆ ನಾನು ತಯಾರಿಲ್ಲ. ಆದರೂ

ಇನ್ನೂ ಕೆಲವು ಸೌಕರ್ಯಗಳನ್ನು ಒದಗಿಸಬೇಕಾದ್ದು ಅವಶ್ಯಕತೆ ಇದೆ. ಉದಾಹರಣೆ ಹೇಳುವುದಾದರೆ, ಕಿತ್ತೂರು ಹತ್ತಿರ ಅಂದರೆ ಮಾನ್ಯ ಬಾಬೂಗೌಡ ಪಾಟೀಲರ ಕ್ಷೇತ್ರದಲ್ಲಿ ಲಿಂಗದ ಹಳ್ಳಿ ಎಂದು ಒಂದು ಗ್ರಾಮ ಇದೆ. ಆ ಗ್ರಾಮಕ್ಕೆ ಇದುವರೆಗೂ ವಿದ್ಯುಚ್ಛಕ್ತಿ ಇಲ್ಲ; ಕುಡಿಯುವ ನೀರು ಇಲ್ಲ, ಶಾಲಾ ಕೋಣೆ ಇಲ್ಲ, ಶಾಲಾ ಮಾಸ್ತರು ಇಲ್ಲ. ಅಂದ ಮೇಲೆ ಈ ಪುನರ್‌ವಸತಿ ಪ್ರದೇಶದ ಜನರಿಗೆ ಸೌಕರ್ಯಗಳನ್ನು ಒದಗಿಸಿದ್ದೀರೆಂಬುದನ್ನು ಯೋಚನೆ ಮಾಡಬೇಕು.

5.50 ಪಿ.ಎಂ.

ನಾನು ಒಂದೇ ಒಂದು ಉದಾಹರಣೆಯನ್ನು ಕೊಟ್ಟೆ. ಅದೇ ಪ್ರಕಾರವಾಗಿ ನಮ್ಮ ಬೈಲಹೊಂಗಲ ಕಾನ್‌ಸ್ಟಿಟ್ಯೂಯನ್ಸಿಯಲ್ಲಿ ಮೇಲ್ ಅಗರ ಗ್ರಾಮ ಇದೆ. ಆ ಗ್ರಾಮವನ್ನು ರೆವಿನ್ಯೂ ವಿಲೇಜ್ ಎಂದು ಟ್ರೀಟ್ ಮಾಡಲಿಲ್ಲ. ಜಿಲ್ಲಾ ಪರಿಷತ್‌ನವರನ್ನು ಕೇಳಿದರೆ ಅವರು ಅದೆಲ್ಲ ಇನ್ನೂ ನೀರಾವರಿ ವ್ಯಾಪ್ತಿಯಲ್ಲಿ ಇರುವುದರಿಂದ ರೆವಿನ್ಯೂ ವಿಲೇಜ್ ಎಂದು ಟ್ರೀಟ್ ಮಾಡಲಿಕ್ಕೆ ಬರುವುದಿಲ್ಲವೆಂದು ಹೇಳುತ್ತಾರೆ. ರೆವಿನ್ಯೂ ವಿಲೇಜ್ ಎಂದು ಟ್ರೀಟ್ ಮಾಡದೆ ಜಿಲ್ಲಾಪರಿಷತ್ತಿನಿಂದ ಯಾವುದೇ ಒಂದು ಸೌಕರ್ಯವನ್ನು ಗ್ರಾಮದ ಜನರಿಗೆ ಕೊಡಲಿಕ್ಕೆ ಬರುವುದಿಲ್ಲ. ಅದಲ್ಲದೆ ಮುಳುಗಡೆ ಪ್ರದೇಶದ ಜನರ ಅಂದರೆ ನೀರಾವರಿ ಇಲಾಖೆಯ ವಶದಲ್ಲಿರತಕ್ಕಂಥ ರಸ್ತೆಗಳಿಗ ಇವತ್ತಿನವರೆಗೆ ಯಾವುದೇ ಒಂದು ದುರಸ್ತಿಯ ಕೆಲಸವಾಗಿಲ್ಲ. ಇವತ್ತು ಜಿಲ್ಲಾಪರಿಷತ್ತನ್ನು ಕೇಳಿದರೆ ಅವರು ನೀರಾವರಿ ಇಲಾಖೆಯ ವಶದಲ್ಲಿದೆ ಎಂದು ಹೇಳುತ್ತಾರೆ. ನೀರಾವರಿ ಇಲಾಖೆಯುವರನ್ನು ಕೇಳಿದರೆ ಇದು ಪಿ.ಡಬ್ಲ್ಯೂ.ಡಿ. ಇಲಾಖೆಯುವರಿಗೆ ಹ್ಯಾಂಡ್ ಓವರ್ ಆಗಿದೆ ಎಂದು ಹೇಳುತ್ತಾರೆ. ಹೀಗಾಗಿ ಈ ರಸ್ತೆಗಳು ಯಾರಿಗೆ ಸೇರಬೇಕೆನ್ನುವುದು ಸಹಿತ ನಿಗದಿಯಾಗಿಲ್ಲ. ಆದಕಾರಣ ಇದು ಅಚ್ಚುಕಟ್ಟಿನ ಒಂದು ಪ್ರದೇಶವಾದ ಕಾರಣ ತಾವು ಈ ರಸ್ತೆಗಳ ರಿಪೇರಿ ಮಾಡಿಸಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತಿದ್ದೇನೆ. ಇದಲ್ಲದೆ ಹಿಂದೆ ಸತ್ಯನಾರಾಯಣಶೆಟ್ಟಿಯವರು ಈ ಇಲಾಖೆಯ ಕಾರ್ಯದರ್ಶಿ ಆಗಿದ್ದಾಗ ಕೆಲವೊಂದು ಇನ್ಸ್‌ಪೆಕ್ಷನ್ ಮಾಡಿದ್ದರು. ಆ ಕಾಲಕ್ಕೆ ಅವರು ಮೀಟಿಂಗ್ ಮಾಡಿ, ಕೆಲವೊಂದು ಗ್ರಾಮಗಳಲ್ಲಿ ಸಮುದಾಯ ಭವನಗಳನ್ನು ಕಟ್ಟಬೇಕು. ಕೆಲವೊಂದು ಶಾಲಾ ಕೋಣೆಗಳನ್ನು ಕಟ್ಟಬೇಕೆಂದು ಸರ್ಕಾರಕ್ಕೆ ಶಿಫಾರಸು ಮಾಡಿದ್ದರು. ಸರ್ಕಾರದ ಶಿಫಾರಸ್ಸಿನ ಪ್ರಕಾರ ಸರ್ಕಾರದ ಕಾರ್ಯದರ್ಶಿಯವರು ಮುಖ್ಯ ಇಂಜಿನಿಯರ್‌ರವರಿಗೆ ಅವುಗಳನ್ನು ಕಟ್ಟಬೇಕೆಂದು ಆದೇಶ ನೀಡಿದ್ದರು. ಮಾನ್ಯ ಅಧ್ಯಕ್ಷರೇ, ಇವತ್ತಿನ ದಿವಸ ನಾನು ಕೇಳಿಕೊಳ್ಳುವುದೇನೆಂದರೆ, ಇದೆಲ್ಲ ಅತಿ ಅವಶ್ಯಕತೆ ಇರುವ ಕಾರಣ ಆ ಕೆಲಸಗಳನ್ನು ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ಇದಲ್ಲದೆ ಡಿವಿಜನಲ್ ಕಮೀಷನರ್ ಅವರ ಅಧ್ಯಕ್ಷತೆಯಲ್ಲಿ ಈ ಮುಳುಗಡೆ ಪ್ರದೇಶದಲ್ಲಿ ಯಾವ ಯಾವ ಕೆಲಸಗಳನ್ನು ತೆಗೆದುಕೊಳ್ಳಬೇಕೆಂದು ನಿರ್ಧರಿಸುವ ಬಗ್ಗೆ ಒಂದು ಸಮಿತಿಯನ್ನು ನೇಮಿಸಲಾಗಿತ್ತು. ಆ ಸಮಿತಿಯವರು ಡಿವಿಜನಲ್ ಕಮೀಷನರು ಸಹಿತ ಸರ್ಕಾರಕ್ಕೆ ಒಂದು ರಿಪೋರ್ಟ್‌ನ್ನು ಕೊಟ್ಟಿದ್ದಾರೆ. ಯಾವ ಯಾವ ಗ್ರಾಮದಲ್ಲಿ ಯಾವ ಯಾವ ಕೆಲಸವನ್ನು ತೆಗೆದುಕೊಳ್ಳಬೇಕೆಂದು ಎಂದು ವರದಿ ಕೊಟ್ಟಿದ್ದಾರೆ. ಆ ಪ್ರಕಾರವಾಗಿ ಸುಮಾರು 2 ಕೋಟಿ ರೂಪಾಯಿಗಳ ಕೆಲಸಗಳನ್ನು ತೆಗೆದುಕೊಳ್ಳಬೇಕೆಂದು ಅವರು ಸರ್ಕಾರಕ್ಕೆ ಶಿಫಾರಸ್ಸು ಮಾಡಿದ್ದಾರೆ. ದಯವಿಟ್ಟು ಡಿವಿಜನಲ್ ಕಮೀಷನರ್ ಮಾಡಿರತಕ್ಕಂಥ ಶಿಫಾರಸುಗಳನ್ನು ಹಾಗೂ ಹಿಂದಿನ ನೀರಾವರಿ ಕಾರ್ಯದರ್ಶಿಯವರು ಶ್ರೀ ಸತ್ಯನಾರಾಯಣರವರು ಕೆಲವೊಂದು ಆದೇಶಗಳನ್ನು ಮಾಡಿದರು. ಅವುಗಳನ್ನು ಸಹಿತ ತಾವು ಕೈಗೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಇದಲ್ಲದೆ ಇನ್ನೊಂದು ವಿಚಾರವೇನೆಂದರೆ, ಅಚ್ಚುಕಟ್ಟು ಪ್ರದೇಶಗಳಲ್ಲಿ ಅಭಿವೃದ್ಧಿ ಪಡಿಸುವುದು.

ಮಲಪ್ರಭಾ ಮತ್ತು ಘಟಪ್ರಭಾ ಪ್ರದೇಶಗಳಲ್ಲಿ ಅಚ್ಚುಕಟ್ಟು ಪ್ರದೇಶದ ಅಭಿವೃದ್ಧಿ. ನನ್ನ ಮತದಾರ ಕ್ಷೇತ್ರದಲ್ಲಿ ಇವತ್ತಿನ ದಿವಸ ಯಾವುದೇ ಒಂದು ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರದವರು ಒಂದು ಕಿಲೋಮೀಟರ್ ಸಹಿತ ರಸ್ತೆ ಮಾಡಿಲ್ಲ. ಅದೇ ಪ್ರಕಾರವಾಗಿ ನಮ್ಮ ಗೋಕಾಕ್ ತಾಲ್ಲೂಕು

ತೆಗೆದುಕೊಂಡರೆ ಕೇವಲ ಒಂದು ಸೌತ್ ತಾಲ್ಲೂಕಿನಲ್ಲಿ 9 ಕಿಲೋಮೀಟರ್ ಮಾತ್ರ ಅದರ ಅಚ್ಚುಕಟ್ಟು ಪ್ರದೇಶದಲ್ಲಿ ಅಭಿವೃದ್ಧಿ ಪಡಿಸಿದ್ದಾರೆಯೇ ಹೊರತಾಗಿ ಯಾವುದೇ ಒಂದು ಅಭಿವೃದ್ಧಿಯನ್ನು ಮಾಡಿಲ್ಲ. ಅಂದರೆ ಕೇವಲ 9 ಕಿಲೋಮೀಟರ್ ಅನ್ನು ಒಂದು ಅಚ್ಚುಕಟ್ಟು ಪ್ರದೇಶವನ್ನು ಅಭಿವೃದ್ಧಿಪಡಿಸಿದರೆ ಯಾವ ಪ್ರಕಾರವಾಗಿ ಇದು ಇನ್ನೆಂದು ಮುಗಿಯುತ್ತದೆನ್ನುವುದನ್ನು ವಿಚಾರ ಮಾಡಬೇಕಾಗುತ್ತದೆ. ಈ ವರ್ಷದಲ್ಲಿ ಕಾಡಾದವರು ಖರ್ಚು ಮಾಡಿರುವುದನ್ನು ಕೇಳಿದಾಗ 40 ಲಕ್ಷ ರೂಪಾಯಿಗಳಲ್ಲಿ 35 ಲಕ್ಷ ರೂಪಾಯಿಗಳನ್ನು ಕೇವಲ ತಮ್ಮ ಸ್ಯಾಲರಿ ಸಲುವಾಗಿ ಖರ್ಚು ಮಾಡಿದ್ದಾರೆಯೇ ಹೊರತಾಗಿ ಯಾವ ಅಭಿವೃದ್ಧಿಯ ಸಲುವಾಗಿಯೂ ಮಾಡಿಲ್ಲ. ಇವತ್ತು ತಾವು ಅದನ್ನು ವಿಚಾರ ಮಾಡಬೇಕು. ಬೆಳಗಾಮ್ ಕಾಡಾದಲ್ಲಿ ಇವತ್ತಿನ ದಿವಸ ಎಷ್ಟು ಅಮೌಂಟ್‌ನ್ನು ರಿಲೀಸ್ ಮಾಡಿದ್ದೀರಿ, ಎಷ್ಟು ಖರ್ಚಾಗಿದೆ, ಅದರ ಆಯವ್ಯಯ ಎಷ್ಟಿತ್ತು ಎಂದರೆ, 10 ಕೋಟಿ ರೂಪಾಯಿಯ ಆಯವ್ಯಯವಿದ್ದರೂ ಸಹಿತ ಇವತ್ತಿನವರೆಗೆ 5 ಕೋಟಿ ರೂಪಾಯಿ ಖರ್ಚಾಗಿಲ್ಲವೆಂದರೆ, ಮಾರ್ಚ್ 15ನೇ ತಾರೀಖಿನೊಳಗೆ 5 ಕೋಟಿ ರೂಪಾಯಿಗಳು ಖರ್ಚಾಗದೇ ಇದ್ದಾಗ ಯಾವ ಪ್ರಕಾರವಾಗಿ ಅಭಿವೃದ್ಧಿ ಕೆಲಸಗಳು ನಡೆಯುತ್ತವೆ ಎನ್ನುವುದನ್ನು ವಿಚಾರ ಮಾಡಬೇಕಾಗುತ್ತದೆ.

ಅದೇ ಪ್ರಕಾರವಾಗಿ ಇವತ್ತಿನ ದಿವಸ ನಮ್ಮ ಘಟಪ್ರಭಾ ಎರಡನೇ ಬಲದಂಡೆ ಸಹಿತ ಆಗಬೇಕಾಗಿದೆ. ಇವತ್ತಿನ ದಿವಸ ಅದನ್ನು ಕೇಳಿದರೆ ಅದರ ಸಲುವಾಗಿ ಎಲ್.ಓ.ಸಿ. ಬಿಡುಗಡೆಯಾಗಿಲ್ಲ, ಅದರ ಸಲುವಾಗಿ ತಾಂತ್ರಿಕ ಮಂಜೂರಾತಿ ಆಗಬೇಕಾಗಿದೆ ಎಂದು ಹೇಳುತ್ತಾರೆ. ಹೀಗಾಗಿ ಮಲಪ್ರಭಾ ಮತ್ತು ಘಟಪ್ರಭಾ ಯೋಜನೆಗಳು 1974ನೇ ಇಸವಿಯಲ್ಲಿಯೇ ಮಂಜೂರಾಗಿದ್ದರೂ ಇವತ್ತಿನವರೆಗೆ ಮುಗಿದಿಲ್ಲ. ಆದಕಾರಣ ತಾವು ಯಾವುದಾದರೂ ಒಂದು ಯೋಜನೆಯನ್ನು ಹಾಕಿಕೊಂಡಾಗ ಅದು ಟೈಮ್‌ಬೌಂಡ್ ಮೇಲೆ ಮಾಡಿ ಮುಗಿಸಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತಿದ್ದೇನೆ.

ನಿಜವಾಗಿಯೂ ಬೈಲಹೊಂಗಲ ಮತ್ತು ಸವದತ್ತಿ ತಾಲ್ಲೂಕಿನ 33 ಹಳ್ಳಿಗಳ ಜನರು ನಿರಾಶ್ರಿತರಾಗಿದ್ದಾರೆ. ತಮಗೆ ಅವರ ಮೇಲೆ ಕರುಣೆ ಇರಬೇಕು. ಹೊಲ ಮನೆಗಳನ್ನು ಕಳೆದುಕೊಂಡವರಿಗೆ ಸರ್ಕಾರದವರು ಆದಷ್ಟು ಎಲ್ಲಾ ರೀತಿಯಿಂದ ಸಹಾಯ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಎರಡನೆಯದಾಗಿ, ಇವತ್ತಿನ ದಿವಸ, ಸರ್ಕಾರದಲ್ಲಿ ಯಾವ ಪ್ರಕಾರವಾಗಿ ಹಣ ವೆಚ್ಚವಾಗುತ್ತಿದೆ. ಎಂದು ತಾವು ವಿಚಾರ ಮಾಡಬೇಕು. ನಮ್ಮಲ್ಲಿ ನ್ಯಾಷನಲ್ ಹೈವೇ ಇದೆ. ಹುಬ್ಬಳ್ಳಿ – ಧಾರವಾಡ ನ್ಯಾಷನಲ್ ಹೈವೇ ಕೇವಲ 18 ಕಿಲೋಮೀಟರ್ ಇದೆ. ಆ 18 ಕಿಲೋಮೀಟರ್ ರಸ್ತೆಗೆ 1992–93 ಒಂದೇ ವರ್ಷದಲ್ಲಿ ಗಿಡಗಳನ್ನು ಹಚ್ಚುವ ಸಲುವಾಗಿ ಎಷ್ಟು ರೊಕ್ಕ ಖರ್ಚು ಮಾಡಿದ್ದಾರೆಂದು ತಾವು ವಿಚಾರ ಮಾಡಬೇಕು. ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ, ನಾವು ಯಾವುದಾದರೂ ಒಂದು ಅಭಿವೃದ್ಧಿ ಕೆಲಸಕ್ಕೆ ಹಣ ಕೇಳಿದಾಗ ಹಣ ಇಲ್ಲ ಎನ್ನುತ್ತಾರೆ. ಆದರೆ ಸರ್ಕಾರದಲ್ಲಿ ವ್ಯರ್ಥವಾಗಿ ಯಾವ ಪ್ರಕಾರ ಹಣ ಪೋಲಾಗುತ್ತಿದೆ ಎಂಬುದಕ್ಕೆ ಒಂದು ನಿದರ್ಶನ ಕೊಡುತ್ತಿದ್ದೇನೆ. 18 ಕಿಲೋಮೀಟರ್ ರಸ್ತೆಗೆ ಗಿಡಗಳನ್ನು ಹಚ್ಚುವುದಕ್ಕೆ 38 ಲಕ್ಷ ರೂಪಾಯಿ ಖರ್ಚು ಹಾಕಿದ್ದಾರೆ. ನ್ಯಾಷನಲ್ ಹೈವೇಯವರು ಹೋದ ವರ್ಷ ಇಷ್ಟು ಖರ್ಚು ಹಾಕಿದ್ದಾರೆ. ಇದರ ಬಗ್ಗೆ ವಿಚಾರ ಮಾಡಬೇಕು. ಅದನ್ನು ಮಾಡಿ ಸರಿ ಇದ್ದರೆ ಸರಿ, ಇಲ್ಲದಿದ್ದರೆ ಸರಿಯಿಲ್ಲ ಎಂದು ಉತ್ತರ ಕೊಡುವಾಗ ಮಂತ್ರಿಗಳು ಹೇಳಬೇಕೆಂದು ಕೇಳಿಕೊಳ್ಳುತ್ತೇನೆ. ಕರ್ನಾಟಕ ರಾಜ್ಯದಲ್ಲಿ, ಲೋಕೋಪಯೋಗಿ ಇಲಾಖೆಯ ಕೆಲಸ ಯಾವ ಪ್ರಕಾರ ನಡೆಯುತ್ತಿದೆ ಎಂಬುದಕ್ಕೆ ಬೆಳಗಾಂ, ಧಾರವಾಡ ಜಿಲ್ಲೆಯ ಉದಾಹರಣೆ ಕೊಡುತ್ತೇನೆ. ನಮ್ಮ ನೇಸರ್ಗಿ ಸರ್ಕಾರಿ ಡಿಗ್ರಿ ಕಾಲೇಜ್ ಕಟ್ಟಡದ ಕೆಲಸವನ್ನು ತಮ್ಮ ಇಲಾಖೆಗೆ ವಹಿಸಿಕೊಟ್ಟಿದ್ದಾರೆ. ತಮ್ಮ ಇಲಾಖೆಗೆ ವಹಿಸಿಕೊಟ್ಟರೆ, ಫೈಲ್ ಫೌಂಡೇಷನ್ ಮಾಡುವ ಒಬ್ಬ ಇಂಜಿನಿಯರ್ ನಿಮ್ಮ ಇಲಾಖೆಯಲ್ಲಿ ಇಲ್ಲದೆ ಇದ್ದಾಗ ನನಗೆ ನಾಚಿಕೆ ಎನ್ನಿಸುತ್ತದೆ. ನಮ್ಮ ಕರ್ನಾಟಕದಲ್ಲಿ ಏನು ಇಂಜಿನಿಯರ್ಸ್ ಇದ್ದಾರೆ, ತಮ್ಮ ಇಲಾಖೆಯಲ್ಲಿ ಕೆಲಸ ಮಾಡುವವರು, ಅವರು ತಲೆ ತಗ್ಗಿಸಬೇಕೆಂದು ಹೇಳುತ್ತಿದ್ದೇನೆ. ಏತಕ್ಕೆಂದರೆ ಎಸ್ಟಿಮೇಟ್ ಮಾಡುವುದಕ್ಕೆ, ಪ್ಲಾನ್ ಮಾಡುವುದಕ್ಕೆ

ಆರ್ಕಿಟೆಕ್ಚರ್‌ಗೆ 75 ಸಾವಿರ ರೂಪಾಯಿಗಳನ್ನು ಕೊಟ್ಟಿದ್ದೇವೆಂದು ಹೇಳುತ್ತಾರೆ. ಲೋಕೋಪಯೋಗಿ ಇಲಾಖೆಯುವರು ಯಾರೋ ಒಬ್ಬ ಕಂಟ್ರಾಕ್ಟರಿಗೆ 75ಸಾವಿರ ರೂಪಾಯಿಗಳನ್ನು ಕೊಟ್ಟು ಅದನ್ನು ಪ್ಲಾನ್ ಮಾಡಿಸಿಕೊಂಡು ಪೈಲ್ ಫೌಂಡೇಷನ್ ಮಾಡಬೇಕೆಂದು ಹೇಳುತ್ತಾರೆ. ಪೈಲ್ ಫೌಂಡೇಷನ್ ಬಿಟ್ಟು ಹಾಗೇ ಬಿಲ್ಡಿಂಗ್ ಕಟ್ಟುವುದಕ್ಕೆ ಆಗುವುದಿಲ್ಲ ಅನ್ನುತ್ತಾರೆ. 75 ಸಾವಿರ ರೂಪಾಯಿಗಳನ್ನು ಉಳಿಸುವ ಕೆಲಸ ಮಾಡುವ ಹೊತ್ತಿನಲ್ಲಿ ಈ ರೀತಿ ಮಾಡುವುದು ತಮ್ಮ ಇಲಾಖೆಗೆ ಶೋಭೆ ತರುವುದಿಲ್ಲ. ಯಾವುದಾದರೂ ಕೆಲಸವನ್ನು ನಿಮ್ಮ ಇಲಾಖೆಯವರಿಗೆ ವಹಿಸಿದಾಗ ನಿಮ್ಮ ಇಲಾಖೆಯವರು ಮನಸ್ಸು ಮಾಡಬೇಕು. ಲೋಕೋಪಯೋಗಿ ಇಲಾಖೆಯವರು ರಸ್ತೆ ಕೆಲಸ ವಹಿಸಿದರೆ ಮನಃಪೂರ್ವಕವಾಗಿ ಮಾಡುತ್ತಾರೆ; ಅದೇ ಬಿಲ್ಡಿಂಗ್ ಕೆಲಸ ಅಂದರೆ ಮೈ ಜುಂ ಅನ್ನುತ್ತದೆ. ಅವರು ಯಾವುದೇ ಕೆಲಸ ಹಿಡಿಯುವುದಕ್ಕೆ ತಯಾರಿಲ್ಲ; ಎಸ್ಟಿಮೇಟ್ ಮಾಡುವುದಕ್ಕೆ ತಯಾರಿಲ್ಲ. ಟೆಕ್ನಿಕಲ್ ಸ್ಯಾಂಕ್ಷನ್ ಕೊಡುವುದಕ್ಕೆ ತಯಾರಿಲ್ಲ. ಅಡ್ಮಿನಿಸ್ಟ್ರೇಟೀವ್ ಅಪ್ರೂವಲ್ ಕೊಡುವುದಕ್ಕೆ ತಯಾರಿಲ್ಲ. ರಿವೈಸ್ ಎಸ್ಟಿಮೇಟ್ ಮಾಡಿದರೆ ಶಾಸಕರು ಹೋಗಿ ಹೇಳಬೇಕು.ಅವರ ಆಫೀಸಿಗೆ ಹೋಗಿ ನಮ್ಮ ಬಿಲ್ಡಿಂಗ್ ಕಟ್ಟಿ ಇಲ್ಲದಿದ್ದರೆ ಇವತ್ತಿನ ದಿವಸ ವಿಶ್ವವಿದ್ಯಾನಿಲಯದವರು ಅಫಿಲಿಯೇಷನ್ ಕ್ಯಾನ್ಸಲ್ ಮಾಡುತ್ತಾರೆ ಅಂದರೂ ಆಗುವುದಿಲ್ಲ ಅನ್ನುತ್ತಾರೆ. ತಾವು ನೋಡಬೇಕು, ಯಾವುದಾದರೂ ಬಿಲ್ಡಿಂಗ್ ಕೆಲಸ ತೆಗೆದುಕೊಳ್ಳಿ, ಒಂದಾದರೂ ಅಡ್ಮಿನಿಸ್ಟ್ರೇಟೀವ್ ಅಪ್ರೂವಲ್ ಆಗುತ್ತದೆಯೆ ? ಏತಕ್ಕೆ ಆಗುವುದಿಲ್ಲ ? ಅವರಿಗೆ ಮನಸ್ಸು ಇಲ್ಲ. ನಾನು ಹೇಳಿದ ಹಾಗೆ, ಯಾವುದೇ ಇಂಜಿನಿಯರ್‌ಗೆ ಎಸ್ಟಿಮೇಟ್ ಮಾಡುವುದಕ್ಕೆ ಬರುವುದಿಲ್ಲ. ಯಾರದ್ದೋ ಹತ್ತಿರ ಎಸ್ಟಿಮೇಟ್ ಮಾಡಿಸುವುದು. ಅದರಲ್ಲಿ ಏನಾದರೂ ಇದೆ ಎಂದರೆ ಹಿಡಿಯುವುದು; ಇಲ್ಲದಿದ್ದರೆ ಏತಕ್ಕೆ ಎಸ್ಟಿಮೇಟ್ ಮಾಡುವುದು, ನಾನು ಇವತ್ತು ಇರುವುದಿಲ್ಲ, ನಾನು ಏಕೆ ಬಿಲ್ಡಿಂಗ್ ಕಟ್ಟಬೇಕು ಎನ್ನುವುದು. ನಮ್ಮ ನೇಸರ್ಗಿ ಸರ್ಕಾರಿ ಡಿಗ್ರಿ ಕಾಲೇಜ್ ಕಟ್ಟುವ ಸಲುವಾಗಿ 1972ರಲ್ಲಿ ಕ್ವೆಶ್ಚನ್ ಹಾಕಿದ್ದೆ. ಏನು ಮಾಡಿದರೂ ಸಹ ಲೋಕೋಪಯೋಗಿ ಇಲಾಖೆಯವರು ಶಿಕ್ಷಣ ಇಲಾಖೆಯವರಿಗೆ ಬರೆಯುತ್ತಾರೆ. ಶಿಕ್ಷಣ ಇಲಾಖೆಯಲ್ಲಿ ಈ ವರ್ಷ ಹಣ ಖರ್ಚಾಗಿಲ್ಲ, ಆದ ಕಾರಣ ಬೇರೆ ಕೆಲಸ ಸೂಚಿಸಬೇಕೆಂದು ಅವರೇ ಪತ್ರ ಬರೆದಿದ್ದಾರೆ. ಮತ್ತೆ 1/3 ಭಾಗ ಗ್ರಾಂಟ್ ಇಲ್ಲವೆಂದು ಹೇಳುತ್ತಾರೆ. 1/3 ಭಾಗ ಗ್ರಾಂಟ್ ಇಲ್ಲದಿದ್ದರೂ ನೀವು ಸಜೆಸ್ಟ್ ಮಾಡಿ ಇಂಥ ಹಣ ಉಳಿದಿದೆ, ಇದರ ಬದಲು ನೀವು ಇದನ್ನು ತೆಗೆದುಕೊಳ್ಳುವುದಕ್ಕೆ ಬರುತ್ತದೆ ಎಂದು. ಮನಸ್ಸು ಇಲ್ಲದುದಕ್ಕೆ 1/3 ಗ್ರಾಂಟ್ ಇಲ್ಲ ಎನ್ನುತ್ತಾರೆ. ಮಾಡಬೇಕೆಂದರೆ ಯಾವುದೂ ಕೆಲಸ ಇಲ್ಲ ಎನ್ನುತ್ತಾರೆ. ಆದಕಾರಣ, ಧಾರವಾಡ ಚೀಫ್ ಇಂಜಿನಿಯರ್‌ರವರ ಕಛೇರಿಯನ್ನು ರೆವ್ಯೂ ಮಾಡಬೇಕೆಂದು ಹೇಳುತ್ತೇನೆ. ಅದರ ಬಗ್ಗೆ ಹೇಳಬೇಕೆಂದರೆ, ಬಹಳ ಇದೆ; ಹೇಳಿದರೆ ತಪ್ಪಲ್ಲ; ಮೊನ್ನೆ ದಿವಸ ರಾಜಶೇಖರ ಮೂರ್ತಿಯವರು ಬೆಳಗಾಂ ಜಿಲ್ಲೆಯಲ್ಲಿ ಎಲ್ಲ ಶಾಸಕರ ಮೀಟಿಂಗ್ ಕರೆದರು. ಆ ಮೀಟಿಂಗ್ ಕರೆದಾಗ ನಿಮ್ಮ ಪಕ್ಷದ ಶಾಸಕರೂ ಇದ್ದರು. ರಾಜಶೇಖರ ಮೂರ್ತಿಯವರು ಮುಂದೆ ಯಾವ ಯಾವ ಪ್ರಕಾರ ಏನೇನು ಮಾಡಬೇಕೆಂದು ಹೇಳಿದರು ಎಂದು ತಮಗೆ ಗೊತ್ತಿದೆ. ನೀವು ಅವರ ಮುಂದೆ ಕೇಳಿಕೊಂಡರೆ ಸಾಕು.

ನಾನು ಅದರ ಬಗ್ಗೆ ಜಾಸ್ತಿ ಹೇಳುವುದು ಸರಿಯಲ್ಲ. ಯಾವ ಪ್ರಕಾರವಾಗಿ ಎಲ್‌ಓಸಿ ಬಿಡುಗಡೆ ಆಗುತ್ತದೆ ? ರಾಯಚೂರು, ಗುಲ್ಬರ್ಗಾಕ್ಕೆ ಎಲ್‌ಓಸಿ ಬಿಡುಗಡೆಯಾಗುತ್ತದೆ. ಅಲ್ಲಿ ಕೆಲಸ ಆಗಿದೆಯೋ ಇಲ್ಲವೋ ಎಂದು ವಿಚಾರ ಮಾಡಿ. ನಾನು ಸರ್ಕಾರಕ್ಕೆ ಛಾಲೆಂಜ್ ಮಾಡುತ್ತೇನೆ. ರಾಯಚೂರು, ಗುಲ್ಬರ್ಗಾಕ್ಕೆ ಏಕೆ ಎಲ್‌ಓಸಿ ಬಿಡುಗಡೆ ಆಗುತ್ತದೆ. ನಿನ್ನೆ ದಿವಸ ಧಾರವಾಡ ಉತ್ತರ ವಲಯಕ್ಕೆ 3 ಕೋಟಿ 20 ಲಕ್ಷ ರೂಪಾಯಿ ಎಲ್‌ಓಸಿ ಬಿಡುಗಡೆ ಮಾಡಿದ್ದೀರಿ. ಅದೇ ಬೆಳಗಾಂಗೆ 24 ಲಕ್ಷ, ಗುಲ್ಬರ್ಗಾಕ್ಕೆ 47 ಲಕ್ಷ ರಾಯಚೂರಿಗೆ 45 ಲಕ್ಷ ಎಲ್‌ಓಸಿ ಬಿಡುಗಡೆ ಮಾಡಿದ್ದೀರಿ. ಯಾವ ಪ್ರಕಾರ ನೀವು ಕೊಡುತ್ತೀರಿ, ಅಲ್ಲಿ ಏನು ಕೆಲಸ ಆಗಿದೆ ಎಂದು ನೀವು ವಿಚಾರ ಮಾಡಬೇಕು. ಏನೋ ಸೆಲ್ ಇದೆ ಎಂದು ಹೇಳುತ್ತೀರಿ; ಅದು ಜೀವಂತ ಇದ್ದರೆ ಆ ಸೆಲ್‌ನ್ನು ಕಳುಹಿಸಿಕೊಡಿ. ಇಷ್ಟೇ ಅಲ್ಲ ಮಾನ್ಯ

ಅಧ್ಯಕ್ಷರೇ, ತಮಗೆ ಗೊತ್ತಿದೆ, ಕಾಂಗ್ರೆಸ್ – ಐ, ಸ್ವತಃ ನಿಮ್ಮ ಪಕ್ಷದ ಸದಸ್ಯರೇ ಮಾನ್ಯ ರಾಜಶೇಖರ ಮೂರ್ತಿಯವರಿಗೆ ಛಾಲೆಂಜ್ ಕೊಟ್ಟರು. ಧಾರವಾಡದಲ್ಲಿ ಎಲ್‌ಐಸಿ ಹರಾಜು ಆಗುತ್ತಿದೆ ಎಂದು ಹೇಳಿದರು. ಅದಕ್ಕಿಂತಲೂ ಹೆಚ್ಚು ನಿಮಗೆ ಏನು ಹೇಳಬೇಕು ? ಅದನ್ನು ನಾನು ಹೇಳಿದ್ದರೆ ಅಪವಾದ ಆಗುತ್ತಾ ಇತ್ತು.

ಶ್ರೀ ಎಂ. ಮಹದೇವ್:– ಮಂತ್ರಿಗಳ ಜೊತೆ ಶಾಸಕರು ಮಾತನಾಡುವಾಗ ಆ ಪಕ್ಷ ಈ ಪಕ್ಷ ಎಂದು ಅಲ್ಲ; ಶಾಸಕರು ಎಂದರೆ ಎಲ್ಲರೂ ಒಂದೇ ತಾನೇ ?

ಶ್ರೀ ಶಿವಾನಂದ ಹೆಚ್. ಕೌಜಲಗಿ:– ಅದರಲ್ಲಿ ಸ್ವಲ್ಪ ಫರಕ್ ಇರುತ್ತದೆ. ಅದಕ್ಕೆ ಹೇಳಿದೆ. ನಾನು ಏಕೆ ಹೇಳುತ್ತಿದ್ದೇನೆಂದರೆ, ಇಷ್ಟೊಂದು ಆಡಳಿತ ಶಿಥಿಲಗೊಂಡಿದೆ. ಆದಕಾರಣ ತಾವು ಬಿಗಿ ಇದ್ದೀರಿ ಎಂದೂ ನಮಗೆ ಗೊತ್ತಿದೆ. ತಾವು ಅದನ್ನು ಬಿಗಿ ಮಾಡಬೇಕೆಂದು ತಮ್ಮನ್ನು ಕೇಳುತ್ತೇನೆ.

ಅಧ್ಯಕ್ಷರು:– ಇನ್ನೂ ಮಾತನಾಡುವವರು ಬಹಳ ಜನರಿದ್ದಾರೆ. ತಾವು ಬೇಗ ಮುಗಿಸಿ.

ಶ್ರೀ ಶಿವಾನಂದ ಹೆಚ್. ಕೌಜಲಗಿ:– ನಮ್ಮ ಕಡೆ ಸ್ಟೇಟ್ ಹೈವೇಸ್ ಆಗಿಲ್ಲ. ಬೆಳಗಾಂ ಜಿಲ್ಲೆಯಲ್ಲಿ, ಬಾಂಬೆ ಕರ್ನಾಟಕದಲ್ಲಿ ಸ್ಟೇಟ್ ಹೈವೇ ಬಗ್ಗೆ ಪ್ರಪೋಸಲ್ಸ್ ಇಲ್ಲ. ಇವತ್ತು ಬೆಳಗಾಂನಿಂದ ಸವದತ್ತಿ ಇದೆ. ಬೆಳಗಾಂ – ಸವದತ್ತಿಯಲ್ಲಿ ಬೈಲಹೊಂಗಲದವರೆಗೆ ಸ್ಟೇಟ್ ಹೈವೇ ಇದೆ. ಬೈಲಹೊಂಗಲದಿಂದ ಸವದತ್ತಿವರೆಗೆ ಸ್ಟೇಟ್ ಹೈವೇ ಮಾಡಬೇಕಾಗಿದೆ. ಹಾಗೆಯೇ ಗೋಕಾಕ್ – ಧಾರವಾಡದವರೆಗೆ ಸ್ಟೇಟ್ ಹೈವೇ ಮಾಡಬೇಕೆಂದು ಕೇಳಿ, ಇಷ್ಟು ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್:– ಮಾನ್ಯ ಮುಖ್ಯಮಂತ್ರಿಗಳು ಕಾಲರಾ ಬಗ್ಗೆ ಸ್ಟೇಟ್‌ಮೆಂಟ್ ಕೊಡಬೇಕೆಂದಿದ್ದರು. ದಯಮಾಡಿ ಅದನ್ನು ಕೊಡಿಸಿ.

ಅಧ್ಯಕ್ಷರು:– ಆಮೇಲೆ ಕೊಡಿಸುತ್ತೇನೆ.

† ಶ್ರೀಮತಿ ಮೋಟಮ್ಮ (ಮೂಡಿಗೆರೆ):– ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಇವತ್ತಿನ ದಿವಸ ಸದನದ ಮುಂದೆ ಏನು ಬೇಡಿಕೆಗಳನ್ನು ಇಟ್ಟಿದ್ದಾರೆ. ಅದನ್ನು ಸ್ವಾಗತ ಮಾಡುತ್ತಾ, ಲೋಕೋಪಯೋಗಿ, ವಿದ್ಯುತ್ ಮತ್ತು ನೀರಾವರಿ ಬಗ್ಗೆ ಕೆಲವಾರು ಮಾತುಗಳನ್ನು ಹೇಳುವುದಕ್ಕೆ ಪ್ರಯತ್ನ ಮಾಡುತ್ತೇನೆ. ಮೊಟ್ಟಮೊದಲನೆಯದಾಗಿ, ಲೋಕೋಪಯೋಗಿ ಇಲಾಖೆ ಬಗ್ಗೆ ಮಾತನಾಡಬಯಸುತ್ತೇನೆ. ಏಕೆಂದರೆ ಇವತ್ತು ಈ ಇಲಾಖೆಗೆ ಹೊಸ ಚಾಲನೆ ಬಂದಿದೆ ಎಂದರೆ ತಪ್ಪಾಗಲಾರದು. ಹಿರಿಯ ನಾಯಕರಾದ ಶ್ರೀ ರಂಗನಾಥ್ ಅವರು ಈ ಖಾತೆಯನ್ನು ವಹಿಸಿಕೊಂಡಿರುವುದೇ ಇದಕ್ಕೆ ಕಾರಣ ಎಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ಇಲಾಖೆ ಬಗ್ಗೆ ಜನರಲ್ಲಿ ಏನು ಭಾವನೆ ಇತ್ತು ಎಂದರೆ, ಪಿಡಬ್ಲ್ಯುಡಿ ಇಲಾಖೆಯಲ್ಲಿ ಯಾವುದೇ ರಸ್ತೆ ಕಾಮಗಾರಿ, ಯಾವುದೇ ಕಟ್ಟಡ ಕಾಮಗಾರಿ ಸರಿಯಾಗಿ ಆಗಲಿಲ್ಲ ಎಂದರೆ, ಅದಕ್ಕೆ ಕಾರಣ ಪರ್ಸೆಂಟೇಜ್ ಎನ್ನುವ ಭಾವನೆ ಎಲ್ಲರಲ್ಲಿಯೂ ಬಂದಿತ್ತು. ಹೋದ ಸಾರಿ ಎ.ಟಿ. ರಾಮಸ್ವಾಮಿಯವರು ಮಾತನಾಡುತ್ತಾ, ಪರ್ಸೆಂಟೇಜ್‌ನಿಂದ ಸಬ್‌ಸ್ಟಾಂಡರ್ಡ್ ವರ್ಕ್ ಆಗುತ್ತಿದೆ ಎಂದು ಹೇಳಿದರು. ನಾನು ಆ ಸಂದರ್ಭದಲ್ಲಿ ಹೇಳಿದೆ; ಈ ಒಂದು ಪರ್ಸೆಂಟೇಜ್ ಹಾವಳಿಯನ್ನು ತಪ್ಪಿಸಬೇಕೆಂದರೆ ಈ ಇಲಾಖೆಯಲ್ಲಿ ವರ್ಕ್ ಗ್ಯಾರಂಟಿಯನ್ನು ಫಿಕ್ಸ್ ಮಾಡಬೇಕಾಗುತ್ತದೆ. ಮತ್ತು ಯಾರು ದಕ್ಷತೆಯಿಂದ ಕೆಲಸ ಮಾಡುವ ಎಂಜಿನಿಯರ್ಸ್ ಇರುತ್ತಾರೆ ಅವರಿಗೆ ತಮಿಳುನಾಡಿನಲ್ಲಿ ಏನು ಅಲ್ಲಿಯ ಅಧಿಕಾರಿಗಳಿಗೆ ಅವಾರ್ಡ್ ಕೊಡುವ ಒಂದು ಕಾರ್ಯಕ್ರಮವನ್ನು ಕುಮಾರಿ ಜಯಲಲಿತಾ ಅವರು ಇಂಟ್ರಡ್ಯೂಸ್ ಮಾಡಿದ್ದಾರೆ ಆ ರೀತಿ ಕರ್ನಾಟಕದಲ್ಲಿ ಮಾಡಬೇಕೆಂದು ಹೇಳಿದಾಗ ಅವತ್ತು ದೊಡ್ಡ ನೀರಾವರಿ ಖಾತೆ

ವಹಿಸಿಕೊಂಡಿದ್ದ ಮಲ್ಲಾರಿಗೌಡ ಪಾಟೀಲರು ಆ ಸಲಹೆಯನ್ನು ಒಪ್ಪಿಕೊಂಡರು. ಹೌದು, ಅಂತಹ ಅವಾರ್ಡ್‌ನ್ನು ವಿಶ್ವೇಶ್ವರಯ್ಯನವರ ಹೆಸರಿನಲ್ಲಿ ಇಂಟರ್‌ಡ್ಯೂಸ್ ಮಾಡುತ್ತೇವೆ. ಉತ್ತಮ ಕೆಲಸಗಾರರಾದ ಎಂಜಿನಿಯರ್ಸ್ ಆ ಅವಾರ್ಡ್ ಪಡೆಯಬೇಕೆನ್ನುವ ದೃಷ್ಟಿಯಿಂದ, ಆ ಒಂದು ಪರ್ಸಂಟೇಜ್ ಬಗ್ಗೆ ಹೆಚ್ಚು ಗಮನ ಹರಿಸದೇ ಕೆಲಸ ಮಾಡುತ್ತಾರೆಂದು ಹೇಳಿದ್ದೇವೆ. ಅದೇ ಮಾತನ್ನು ಇವತ್ತು ಪುನಃ ಉಚ್ಚಾರ ಮಾಡಲಿಕ್ಕೆ ನಾನು ಇಷ್ಟಪಡುತ್ತೇನೆ. ಹಿರಿಯ ನಾಯಕರಾದ ರಂಗನಾಥ್‌ರವರು ಈ ಖಾತೆಯನ್ನು ವಹಿಸಿಕೊಂಡಿದ್ದಾರೆ. ಅವರು ಈ ಬಗ್ಗೆ ಹೆಚ್ಚು ವಿಚಾರ ಮಾಡಬೇಕೆನ್ನುವುದೇ ನನ್ನ ಉದ್ದೇಶ. ಇವತ್ತು ಈ ಇಲಾಖೆಯಲ್ಲಿ ಮುಖ್ಯವಾಗಿ ರಸ್ತೆ ಕಾಮಗಾರಿಗಳು, ಸೇತುವೆಗಳು, ಕಟ್ಟಡಗಳು, ರಾಷ್ಟ್ರೀಯ ಹೆದ್ದಾರಿ ಕೆಲಸಗಳು ಬರುತ್ತವೆ.

ಈ ರಸ್ತೆಗಳಲ್ಲಿ ರಾಜ್ಯ ಹೆದ್ದಾರಿಗಳು ಮತ್ತು ಜಿಲ್ಲಾ ಮುಖ್ಯ ರಸ್ತೆಗಳ ಅಭಿವೃದ್ಧಿ ಹಾಗೂ ಡಾಂಬರೀಕರಣ ಬರುತ್ತದೆ. ಅದಕ್ಕೆ ಹಣ ಇಟ್ಟಿರುವುದು ಏನೇನೂ ಸಾಲದು ಎಂದು ನಾನು ಹೇಳುತ್ತೇನೆ. ಇವತ್ತು ನನ್ನ ಕ್ಷೇತ್ರದಲ್ಲಿ ಸುಮಾರು 221 ಕಿಲೋಮೀಟರ್ ರಾಜ್ಯ ಹೆದ್ದಾರಿ ರಸ್ತೆಗಳು ಮತ್ತು ಎಂಡಿಆರ್ ರಸ್ತೆಗಳು ಸುಮಾರು 158ಕಿಲೋಮೀಟರ್ ಏನೋ ಬರುತ್ತದೆ. ಆದರೆ ಇದುವರೆಗೆ ಬಜೆಟ್‌ನಲ್ಲಿ ಒಂದು ಪೈಸೆ ಹಣ ಬಿಡುಗಡೆ ಮಾಡಲಿಲ್ಲ. ಅಥವಾ ಅಳವಡಿಸಲಿಲ್ಲ. ಮಾನ್ಯ ವೀರೇಂದ್ರ ಪಾಟೀಲ್‌ರವರು ಮುಖ್ಯಮಂತ್ರಿಗಳಾಗಿದ್ದ ಕಾಲದಲ್ಲಿ ನಮಗೆ ಕ್ಷೇತ್ರವಾರು 12ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದರಿಂದ ಅವತ್ತು ಲೋಕೋಪಯೋಗಿ ಇಲಾಖೆಯಲ್ಲಿ ರಸ್ತೆ ಕಾಮಗಾರಿ ಕೆಲಸ ಮಾಡುವುದಕ್ಕೆ ಅನುಕೂಲವಾಯಿತು. ಆದರೆ ಅಲ್ಲಿಂದ ಇಲ್ಲಿಯವರೆಗೆ ಯಾವುದೇ ಒಂದು ಹಣಕಾಸನ್ನು ರಸ್ತೆ ಮತ್ತು ಸೇತುವೆಗಳ ಅಭಿವೃದ್ಧಿ ಕಾರ್ಯಕ್ಕೆ ಒದಗಿಸಿಲ್ಲ. ಇದು ಬಹಳ ವಿಷಾದಕರವಾದ ಸಂಗತಿ. ಹೀಗಿರಬೇಕಾದರೆ ನಮ್ಮ ರಸ್ತೆಗಳು ಯಾವ ರೀತಿ ಅಭಿವೃದ್ಧಿ ಆಗಲಿಕ್ಕೆ ಸಾಧ್ಯವಿದೆ ಎನ್ನುವುದನ್ನು ಇವತ್ತು ಎಲ್ಲ ಸದಸ್ಯರು ಯೋಚನೆ ಮಾಡಬೇಕಾದ ಸಂದರ್ಭ ಬಂದಿದೆ. ಆದರೆ ಒಂದು ಸಂತೋಷ ಏನೆಂದರೆ ಮೊನ್ನೆ ಮಾನ್ಯ ಮುಖ್ಯಮಂತ್ರಿಗಳು ಬಜೆಟ್ ಮೇಲಿನ ಚರ್ಚೆಗೆ ಉತ್ತರ ಹೇಳುವ ಸಂದರ್ಭದಲ್ಲಿ ಕ್ಷೇತ್ರವಾರು 20 ಲಕ್ಷ ರೂಪಾಯಿಗಳನ್ನು ರಸ್ತೆ ಮತ್ತು ಸೇತುವೆಗಳ ಅಭಿವೃದ್ಧಿ ಕೆಲಸಗಳಿಗೆ ಕೊಡಲಾಗುತ್ತದೆಂದು ಹೇಳಿದ್ದಾರೆ. ಅದು ಏನೇನೂ ಸಾಲದು. ಏಕೆಂದರೆ ನಮ್ಮಲ್ಲಿ ಟೋಟಲ್ ಕಿಲೋಮೀಟರ್ ಏನು ಬರುತ್ತದೆ ರಾಜ್ಯದ ಹೆದ್ದಾರಿಗಳು, ಎಂಡಿಆರ್ ರಸ್ತೆಗಳು, ರಾಷ್ಟ್ರೀಯ ಹೆದ್ದಾರಿಗಳು ಅವುಗಳಿಗೆ ಕೇವಲ 20 ಲಕ್ಷ ರೂಪಾಯಿ ಕೊಟ್ಟರೆ ಅದರಲ್ಲಿ ಎಷ್ಟು ಕಿಲೋಮೀಟರ್ ಡಾಂಬರೀಕರಣ ಮಾಡಲಿಕ್ಕೆ ಸಾಧ್ಯ? ಅದರಲ್ಲೂ ಮಳೆಗಾಲದಲ್ಲಿ ತೊಳೆದುಹೋಗಿರುವ ರಸ್ತೆಗಳಿಗೆ ಎಷ್ಟು ಮರು ಡಾಂಬರೀಕರಣ ಮಾಡಲಿಕ್ಕೆ ಸಾಧ್ಯ? ಅದರಲ್ಲೂ ಮಲೆನಾಡಿನ ಪರಿಸ್ಥಿತಿ ಮಾನ್ಯ ಮಂತ್ರಿಗಳಿಗೆ ಚೆನ್ನಾಗಿ ಅರಿವು ಇದೆ. ಏಕೆಂದರೆ ಅಲ್ಲಿ ಒಂದು ರಸ್ತೆಗೆ ಏನಿಲ್ಲವೆಂದರೂ 20-30ಕಲ್ವರ್ಟ್‌ಗಳು ಬರುತ್ತವೆ. ಆ ಮೋರಿಗಳ ರಿಪೇರಿಗೆ ಈ ಹಣ ಎಷ್ಟರಮಟ್ಟಿಗೆ ಸಾಕಾಗುತ್ತದೆ. ಆನೆ ಹೊಟ್ಟೆಗೆ ಅರು ಕಾಸಿನ ಮಜ್ಜಿಗೆ ಕೊಟ್ಟ ಹಾಗೆ ಆಗಿದೆ. ಆದ್ದರಿಂದ ಇವತ್ತು ಹೆಚ್ಚು ಹಣವನ್ನು ಎಲ್ಲ ಕ್ಷೇತ್ರಗಳಿಗೂ ಒದಗಿಸಿಕೊಡಬೇಕು. ನನಗೆ ವಿಶೇಷ ಏನೆಂದರೆ, ಹೋದಸಾರಿ ಕೆಲವು ಕ್ಷೇತ್ರಗಳಿಗೆ ವಿಶೇಷ ಅನುದಾನವನ್ನು ಈವೊಂದು ಇಲಾಖೆಯಲ್ಲಿ ರಸ್ತೆಗಳು ಮತ್ತು ಸೇತುವೆಗಳ ಅಭಿವೃದ್ಧಿಗೆ ಕೊಡಲಾಗಿದೆ. ಈ ಸಾರಿ ಕ್ಷೇತ್ರವಾರು ಕೊಡುವುದಕ್ಕೆ ಬದಲಾಗಿ ಹೋದ ಸಾರಿ ಯಾವ ಕ್ಷೇತ್ರಗಳಿಗೆ ವಿಶೇಷವಾಗಿ ಅನುದಾನ ಒದಗಿಸಲಾಗಿದೆ ಅಂತಹ ಕ್ಷೇತ್ರಗಳಿಗೆ ಸ್ವಲ್ಪ ಕಡಿತ ಮಾಡಿ, ಸಿಗದಿರತಕ್ಕ ಕ್ಷೇತ್ರಗಳಿಗೆ ಹೆಚ್ಚಿನ ಹಣವನ್ನು ಈ ಇಲಾಖೆಯಿಂದ ಬಿಡುಗಡೆ ಮಾಡುವುದು ಒಳ್ಳೆಯದೆಂದು ನನಗನಿಸುತ್ತದೆ. ದಯಮಾಡಿ ಆ ಕೆಲಸವನ್ನು ತಾವು ಮಾಡಬೇಕೆಂದು ಹೇಳುತ್ತೇನೆ. ಮಲೆನಾಡಿನ ರಸ್ತೆಗಳ ಬಗ್ಗೆ ತಮಗೆ ಅರಿವು ಇರುವುದರಿಂದ ಇದಕ್ಕೆ ವಿಶೇಷವಾದ ಒಂದು ಯೋಜನೆಯನ್ನು ತಯಾರು ಮಾಡಿಸುತ್ತೇನೆನ್ನುವ ಮಾತನ್ನು ನನ್ನ ಕ್ಷೇತ್ರಕ್ಕೆ ಭೇಟಿ ಕೊಟ್ಟಾಗ ಹೇಳಿದಿರಿ.

ಅದನ್ನು ತಾವೇನು ಮಾಡಿದ್ದೀರಿ ಎನ್ನುವುದರ ಬಗ್ಗೆ ತಾವು ತಮ್ಮ ಉತ್ತರದಲ್ಲಿ ಹೇಳುತ್ತೀರೆಂದು ನಾನು ನಿರೀಕ್ಷೆ ಮಾಡುತ್ತೇನೆ. ಮಲೆನಾಡು ಅಂದರೆ ಮೂಡಿಗೆರೆ ಒಂದೇ ಅಲ್ಲ, ಮಲೆನಾಡು ಅಂದರೆ ಮಂಗಳೂರು, ಕೊಡಗು, ಶಿವಮೊಗ್ಗ ಇವೆಲ್ಲ ಬರುತ್ತವೆ. ಮಲೆನಾಡು ಡೆವಲಪ್‌ಮೆಂಟ್ ಬೋರ್ಡ್‌ಗೆ ಯಾವ್ಯಾವ ಕ್ಷೇತ್ರಗಳು ಸೇರಿವೆ ಅವೆಲ್ಲ ಬರುತ್ತವೆ. ಆದ್ದರಿಂದ ಮಲೆನಾಡಿಗೆ ವಿಶೇಷವಾದ ಯೋಜನೆಯನ್ನು ರೂಪಿಸಬೇಕಾಗುತ್ತದೆ. ಇದರ ಜೊತೆಗೆ ಬಹಳ ಮುಖ್ಯವಾದ ವಿಷಯ ಹೇಳುವುದಕ್ಕೆ ಇಷ್ಟಪಡುತ್ತೇನೆ. ಅದೇನೆಂದರೆ, ರಸ್ತೆಗಳ ಕಾಮಗಾರಿ ಕೆಲಸಕ್ಕಾಗಲಿ ಅಥವಾ ಕಟ್ಟಡಗಳ ಕೆಲಸಕ್ಕಾಗಲಿ ನೀವು ವರ್ಕ್ ಗ್ಯಾರಂಟಿಯನ್ನು ತೆಗೆದುಕೊಳ್ಳಬೇಕಾಗುತ್ತದೆ ಅಥವಾ ಜವಾಬ್ದಾರಿಯನ್ನು ಫಿಕ್ಸ್ ಮಾಡಬೇಕಾಗುತ್ತದೆ. ಮತ್ತು ಇಂತಿಷ್ಟೇ ಕಾಲಕ್ಕೆ ಈ ಕೆಲಸ ಮುಗಿಸಬೇಕು ಎಂದು ಕಡ್ಡಾಯ ಮಾಡಬೇಕಾಗುತ್ತದೆ. ಇಲ್ಲದಿದ್ದರೆ ಇವತ್ತು ಒಂದು ಬ್ರಿಡ್ಜ್ ಸ್ಯಾಂಕ್ಷನ್ ಆಯಿತೆಂದರೆ ಅದನ್ನು ಫಿನಿಷ್ ಮಾಡಬೇಕಾದರೆ ನಮ್ಮ ಅವಧಿ ಮುಗಿದಿರುತ್ತದೆ. ನನಗೆ ಇನ್ನೂ ನೆನಪಿದೆ ಮಾನ್ಯಮಂತ್ರಿಗಳಿಗೆ ನಮ್ಮ ಕ್ಷೇತ್ರದ ಅರಿವು ಇದೆ. ಗುಗ್ಗರಹಳ್ಳಿಗೆ ಬ್ರಿಡ್ಜ್ ಆಗಿದ್ದು 1983ರಲ್ಲಿ. ಆದರೆ ಮೊನ್ನೆ ಅದರ ಕೆಲಸ ಪೂರ್ಣವಾಗಿದೆ. ಹೀಗಾದರೆ ಜನವರಿಗೆ ಈ ಕೆಲಸದಲ್ಲಿ ಹೇಗೆ ವಿಶ್ವಾಸ ಬರುತ್ತದೆ ? ನಮ್ಮ ಮಲೆನಾಡು ಭಾಗದಲ್ಲಿ ಕೆಲವಾರು ಸೇತುವೆಗಳನ್ನು ಕಟ್ಟುತ್ತಾರೆ. ಸೇತುವೆಗಳು ಕಟ್ಟಿದ ಮೂರು ವರ್ಷಗಳಲ್ಲಿಯೇ ತೊಳೆಯಲಾಗುತ್ತವೆ. ಸೇತುವೆ ತೊಳೆದರೆ ಫ್ಲಡ್ ವರ್ಕ್ಸ್‌ನಲ್ಲಿ ನಾವು ಪುನಃ ಕೇಳುತ್ತೇವೆ. ಇದಕ್ಕೆ ವಿಶೇಷವಾದ ಅನುದಾನವನ್ನು ಕೊಡಿಯೆಂದು ಕೇಳುತ್ತೇವೆ. ಏತಕ್ಕೆ ಮೋರಿಗಳು ತೊಳೆಯಲಾಗುತ್ತವೆಂದರೆ ಸಬ್‌ಸ್ಟ್ಯಾಂಡರ್ಡ್ ವರ್ಕ್‌ನಿಂದ ಹಾಗೆ ಆಗುತ್ತವೆಂದು ನಾನು ಹೇಳುತ್ತೇನೆ. ಯಾವುದೇ ಕೆಲಸವನ್ನು ಟೆಂಡರ್ ಮೂಲಕ ಕಂಟ್ರಾಕ್ಟರಿಗೆ ಕೊಡಬೇಕು. ಆ ರೀತಿ ಕೊಟ್ಟಾಗ ಟೈಮ್ ಫಿಕ್ಸ್ ಮಾಡಬೇಕು. ಜೊತೆಗೆ ಆ ಕೆಲಸಕ್ಕೆ 8 – 10 ವರ್ಷಗಳ ಗ್ಯಾರಂಟಿಯನ್ನು ತೆಗೆದುಕೊಳ್ಳಬೇಕು. ಯಾವುದೇ ಅನಾಹುತವಾದರೂ ರಸ್ತೆ ಡಾಮರೀಕರಣ ಮಾಡಿರುವುದು ಹೋದರೆ, ಸೇತುವೆ ಕೊಚ್ಚಿಕೊಂಡು ಹೋದರೆ, ಮೋರಿಗಳು ಕಿತ್ತುಕೊಂಡು ಹೋದರೆ ಅವರೇ ರೆಸ್ಪಾನ್ಸಿಬಿಲಿಟಿಯೆಂದು ಹೇಳಬೇಕು. ಜೊತೆಗೆ ಸಂಬಂಧಪಟ್ಟ ಇಂಜಿನಿಯರನ್ನೂ ಕೂಡ ರೆಸ್ಪಾನ್ಸಿಬಲ್ ಮಾಡಬೇಕಾಗುತ್ತದೆ. ಇಂಜಿನಿಯರ್ ಏನು ಕೆಲಸ ಮಾಡುತ್ತಾರೆ ಸೂಪರ್‌ವಿಷನ್ ಮಾಡುವುದು ಅವರ ಕೆಲಸ, ಯಾವ ಪ್ರಮಾಣದಲ್ಲಿ ಸಿಮೆಂಟ್ ಹಾಕಿ ಕೆಲಸ ಮಾಡಿದ್ದಾರೆ ಎಷ್ಟು ವರ್ಷ ಗ್ಯಾರಂಟಿ ಬರುತ್ತದೆ ಎಂದು ಅವರು ಹೋಗಿ ನೋಡಬೇಕಾಗುತ್ತದೆ. ಅವರ ಬೇಜವಾಬ್ದಾರಿಯಿಂದ ಈ ಕೆಲಸವಾಗುತ್ತದೆನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ನೀವು ದಕ್ಷರಿದ್ದೀರಿ, ಈ ಕೆಲಸವನ್ನು ಮಾಡಬೇಕು. ವರ್ಕ್ ಗ್ಯಾರಂಟಿಯನ್ನು ಫಿಕ್ಸ್ ಮಾಡಿದರೆ ಮಾತ್ರ ನಿಮ್ಮ ಇಲಾಖೆಗೆ ಒಳ್ಳೆಯ ಹೆಸರು ಬರುತ್ತದೆ.

ಮತ್ತೆ ಈ ಸರ್ಕಾರಕ್ಕೆ ಒಳ್ಳೆಯ ಹೆಸರು ಬರುತ್ತದೆ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ಇನ್ನು ಕಟ್ಟಡಗಳ ವಿಷಯ ಕೂಡ ಅಷ್ಟೆ. ಈ ಕಟ್ಟಡಗಳ ವಿಷಯದಲ್ಲೂ ತಾವು ವಿಶೇಷ ಗಮನ ಹರಿಸಬೇಕಾಗುತ್ತದೆ. ಏಕೆಂದರೆ ನಾನು ತಮ್ಮ ಹತ್ತಿರ ಮಾತನಾಡಿದಾಗ ಜಿಲ್ಲಾಪರಿಷತ್ತು ನನಗೆ ಬರುವುದಿಲ್ಲ ಎಂಬ ಮಾತನ್ನು ಹೇಳಿದಿರಿ. ಆದರೆ ಆ ಇಂಜಿನಿಯರುಗಳು ಒರಿಜಿನಲ್ಲಿ ನಿಮ್ಮ ಇಲಾಖೆಗೆ ಸೇರಿದವರು. ಜಿಲ್ಲಾ ಪರಿಷತ್ತಿನಲ್ಲಿ ಕೆಲಸ ಮಾಡುವ ಇಂಜಿನಿಯರ್‌ಗಳು ನಿಮ್ಮವರೇ ಆಗಿದ್ದಾರೆ. ಒಂದು ಶಾಲಾ ಕಟ್ಟಡ ಕಟ್ಟಿದರೆ ಮೂರು ವರ್ಷಕ್ಕೇ ಬಿದ್ದು ಹೋಗುತ್ತದೆ ಅಥವಾ ಅವರು ಯಾವುದೇ ಕೆಲಸ ಮಾಡಲಿ, ಮೂರು ವರ್ಷ, ಎರಡು ವರ್ಷಕ್ಕೆ ಬಿದ್ದು ಹೋದರೆ ಅದಕ್ಕೆ ಆಶ್ಚರ್ಯಪಡಬೇಕಾಗಿಲ್ಲ. ನೀವು ಬ್ಲಾಕ್‌ಬೋರ್ಡ್ ಶಾಲೆಗಳನ್ನು ಬಂದು ನೋಡಿದರೆ ಯಾವ ಮಟ್ಟಕ್ಕೆ ಕಟ್ಟಿದ್ದಾರೆ ಎಂದು ಗೊತ್ತಾಗುತ್ತದೆ. ನಿಜವಾಗಿಯೂ ನಾವೆಲ್ಲರೂ ನಾಚಿಕೆ ಪಡಬೇಕು. ಜನರು ಅಲ್ಲಿ ಕಂಟ್ರಾಕ್ಟರ್ ಯಾರು, ಏಕೆ ಸ್ಕೂಲ್ ಕಟ್ಟಡ ಬಿದ್ದು ಹೋಗಿದೆ ಎಂದು ಕೇಳುತ್ತಾರೆ. ಇದಕ್ಕೆ ಯಾರನ್ನು ಹೊಣೆಗಾರರನ್ನಾಗಿ ಮಾಡುತ್ತೀರಿ ? ಇದಕ್ಕೆ ಕಾರಣವಾದರೂ ಇಷ್ಟೆ. ಅವರು ಯಾರು ಕಂಟ್ರಾಕ್ಟರ್

ತೆಗೆದುಕೊಂಡಿದ್ದಾರೆ, ಅವರು ಇದರಲ್ಲಿ ಲಾಭ ಎಷ್ಟು ಮಾಡಬಹುದು ಎನ್ನುವ ದೃಷ್ಟಿಯಿಂದ ಕೆಲಸ ಮಾಡುತ್ತಾರೆಯೇ ಹೊರತು ಇದು ಪರ್ಮನೆಂಟ್ ಆಗಿ ಉಳಿಯಬೇಕು, ಇದರಿಂದ ಜನರಿಗೆ ಅನುಕೂಲವಾಗಬೇಕು ಸರ್ಕಾರದ ಹಣ ಎಂದರೆ ಜನರ ಹಣ ಎನ್ನುವ ಭಾವನೆ ಅಲ್ಲಿ ಕೆಲಸ ಮಾಡುವ ಕಂಟ್ರಾಕ್ಟರ್‌ಗೆ ಇರುವುದಿಲ್ಲ. ಜೊತೆಗೆ ಅವರಿಂದ ಕೆಲಸ ತೆಗೆದುಕೊಳ್ಳುವ ದಕ್ಷತೆ ನಮ್ಮ ಇಂಜಿನಿಯರುಗಳಿಗೆ ಇರುವುದಿಲ್ಲ. ಈ ದಕ್ಷತೆಯನ್ನು ನಮ್ಮ ಇಂಜಿನಿಯರುಗಳಲ್ಲಿ ಮೂಡಿಸಬೇಕು ಮತ್ತು ಅವರಿಗೆ ಸರಿಯಾದ ರೀತಿ ಶಿಕ್ಷೆ ಕೊಟ್ಟಾಗ ಮಾತ್ರ ಇದೆಲ್ಲ ಸರಿಯಾಗುತ್ತದೆ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇನ್ನೊಂದು ಬಹಳ ಮುಖ್ಯವಾಗಿ ಹೇಳಬೇಕೆಂದರೆ, ತಾವು ನನ್ನ ತಾಲ್ಲೂಕಿಗೆ ಬಂದಾಗ ಒಂದು ವಿಷಯ ತಮ್ಮ ಗಮನಕ್ಕೆ ಬಂತು. ವರ್ಕ್ ಸಬ್‌ಸ್ಟಾಂಡರ್ಡ್ ಹೇಗೆ ಆಗುತ್ತದೆ ಎನ್ನುವುದನ್ನು ತಾವು ನೋಡಿದ್ದೀರಿ. ಹೋದವರ್ಷ ಕಡೂರು – ಮಂಗಳೂರು ರೋಡಿನಲ್ಲಿ 70ನೇ ಕಿಲೋಮೀಟರ್ ರೀಚ್‌ನಲ್ಲಿ ಡಾಂಬರೀಕರಣ ಮಾಡಿದ್ದಾರೆ. ಆದರೆ ಅದು ಇವತ್ತು ಅಲ್ಲಿ ಇಲ್ಲವೇ ಇಲ್ಲ. ಯಾರು ಸಂಬಂಧಪಟ್ಟ ಇಂಜಿನಿಯರುಗಳು ಅಲ್ಲಿ ಸೂಪರ್‌ವೈಸ್ ಮಾಡುತ್ತಾರೆ, ಅವರನ್ನು ಮನೆಗೆ ಕಳಿಸಿ. ಟಾರು ಹಾಕಬೇಕಾದರೆ ಆತ ಎಲ್ಲಿಗೆ ಹೋಗಿದ್ದ? ಎಂ.ಎಲ್.ಎ.ಗಳು ಹೋಗಿ ನಿಂತು ಟಾರು ಹಾಕುವುದನ್ನು ನೋಡುವುದಕ್ಕೆ ಆಗುತ್ತದೆಯೇನು? ಈ ತರಹ ಆಗುವುದಕ್ಕೆ ತಾವು ಅವಕಾಶ ಮಾಡಿಕೊಡಬಾರದು ಎಂದು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ನಮ್ಮಲ್ಲಿ ರಾಷ್ಟ್ರೀಯ ಹೆದ್ದಾರಿಗಳ ಕೆಲಸ ಎರಡು ಕಡೆ ನಡೆಯುತ್ತಿದೆ. ಒಂದು ಕಳಸ - ಹೊರನಾಡು ಸೇತುವೆ ಮತ್ತು ರಸ್ತೆ. ಇನ್ನೊಂದು ಮಳವಳ್ಳಿ ಮತ್ತು ಹೊರನಾಡು ರಸ್ತೆ ಕೆಲಸ. ಮಳವಳ್ಳಿ – ಹೊರನಾಡು ರಸ್ತೆ ಕೆಲಸ 35 ಲಕ್ಷದ್ದು ಸಿ.ಆರ್.ಎಫ್ ಫಂಡ್‌ನದ್ದು. ಹಾಗೆಯೇ ಕಳಸಾ ಹೊರನಾಡಿನದು 45ಲಕ್ಷ, ಸಿಆರ್‌ಎಫ್ ಫಂಡ್‌ನದ್ದು. ಆದರೆ ಇವತ್ತು ಸರಿಯಾಗಿ ಆ ಕೆಲಸ ನಡೆಯುತ್ತಿಲ್ಲ; ಎರಡು ವರ್ಷವಾಗಿದೆ. ಸೇತುವೆ ಕೆಲಸ ಮುಗಿದಿಲ್ಲ. ಅಲ್ಲಿಗೆ ಬಂದ ಶಾಸಕರು, ವಿ.ಐ.ಪಿ.ಗಳು ಹೊರನಾಡುವಿನ ಶ್ರೀ ಕ್ಷೇತ್ರ ಅನ್ನಪೂರ್ಣೇಶ್ವರಿ ದೇವಸ್ಥಾನಕ್ಕೆ ಬಂದವರು ನನ್ನನ್ನು ಕೇಳುತ್ತಾರೆ. ಇದು ನಿಮ್ಮ ಕ್ಷೇತ್ರವಂತೆ, ಇನ್ನೂ ರಸ್ತೆ ಆಗಿಲ್ಲ, ಸೇತುವೆ ಆಗಿಲ್ಲ ಏನು ಕೆಲಸ ಮಾಡುತ್ತೀರಿ ಎಂದು ಕೇಳುತ್ತಾರೆ. ಈ ಕೆಲಸ ಏಕೆ ನಡೆದಿಲ್ಲವೆಂದರೆ, ಮೈಸೂರು ಸಬ್‌ಡಿವಿಷನ್, ನ್ಯಾಷನಲ್ ಹೈವೇಯವರು ಈ ಕೆಲಸವನ್ನು ನೋಡಿಕೊಳ್ಳುತ್ತಿದ್ದಾರೆ. ಅದೇ ಕೆಲಸ ನಮ್ಮ ಚಾರ್ಮುಡಿ ಘಾಟ್‌ನಲ್ಲಿ ನಡೆಯುತ್ತಿದೆ. ಅದನ್ನು ನೀವು ಹಾಸನ ಸಬ್‌ಡಿವಿಜನ್‌ಗೆ ಕೊಟ್ಟಿದ್ದೀರಿ. 1989ರಲ್ಲಿ ಚಾರ್ಮುಡಿ ಘಾಟ್ ಅನ್ನು ಅಭಿವೃದ್ಧಿಪಡಿಸುವುದಕ್ಕೆ ಮತ್ತು ವೈಡನ್ ಮಾಡುವುದಕ್ಕೆ 98 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಅದು 1989ರಲ್ಲಿ ಆಗಿದ್ದು ಈಗಲೂ ಕೆಲಸ ಪೂರ್ಣಗೊಳಿಸಿಲ್ಲ. ಕಳೆದ ಫೆಬ್ರವರಿಯಲ್ಲಿ ತಾವೇ ಖುದ್ದಾಗಿ ಬಂದಿದ್ದಾಗ ಆ ಕೆಲಸದ ವೀಕ್ಷಣೆ ಮಾಡಿದಿರಿ. ತಡ ಏಕೆ ಆಯಿತು ಎಂದರೆ ಹಾಸನ್ ಸಬ್‌ಡಿವಿಜನ್ ಇಂಜಿನಿಯರ್ ಸರಿಯಾಗಿ ಸೂಪರ್‌ವಿಷನ್ ಮಾಡುತ್ತಾ ಇರಲಿಲ್ಲ. ಆಮೇಲೆ ಅಲ್ಲಿನ ಕಂಟ್ರಾಕ್ಟರ್ಸ್‌ಗೂ ಕೆಲವು ತೊಡಕುಗಳಿವೆ. ಇದಕ್ಕೆ ನಾನು ಏನು ಹೇಳುತ್ತಿದ್ದೇನೆ ಎಂದರೆ, ಈಗ ಅದನ್ನು ಮಂಗಳೂರು ಸಬ್‌ಡಿವಿಜನ್ – ನ್ಯಾಷನಲ್ ಹೈವೇ ಅವರಿಗೆ ಕೊಟ್ಟಿದ್ದೀರಿ. ಈಗ ಮೈಸೂರು ಸಬ್‌ಡಿವಿಜನ್‌ನವರು ಕಳಸ – ಹೊರನಾಡು ಕೆಲಸವನ್ನು ಸಿ.ಆರ್.ಎಫ್. ಫಂಡ್ ವರ್ಕನ್ನು ನೋಡಿಕೊಳ್ಳುವುದು, ಅದೇ ಚಾರ್ಮುಡಿ ಘಾಟ್ ಅನ್ನು ಕೆಲಸವನ್ನು ಮಂಗಳೂರಿನವರು ನೋಡುತ್ತಾರೆ. ಈ ರೀತಿ ಏಕೆ ಮಾಡಿದ್ದೀರಿ. ಇದನ್ನೂ ಮಂಗಳೂರು ಸಬ್‌ಡಿವಿಜನ್‌ನವರೇ ಏಕೆ ನೋಡಿಕೊಳ್ಳಬಾರದು? ಯಾವುದಾದರೂ ಒಂದು ಸಬ್ ಡಿವಿಜನ್‌ಗೆ ಏಕೆ ವಹಿಸಬಾರದು? ಆಗ ಕೆಲಸ ಸರಿಯಾಗಿ ನೋಡಿಕೊಳ್ಳುವುದಕ್ಕೆ ಆಗುತ್ತದೆ. ತ್ವರಿತವಾಗಿ ಕೆಲಸ ಮಾಡುವುದಕ್ಕೂ ಕೂಡ ಸಾಧ್ಯವಾಗುತ್ತದೆ. ಈ ಚಾರ್ಮುಡಿ ಘಾಟ್‌ನ ಅಭಿವೃದ್ಧಿ ಕೆಲಸದ ಬಗ್ಗೆ ತಮಗೆ ಹೇಳಬೇಕು ಎಂದರೆ, ಆಗ ಟೆಂಡರ್ ಏನು ಆಗಿತ್ತೋ ಏನೋ. ಅಲ್ಲಿ ಸಾಕಷ್ಟು

ಕಲ್ವರ್ಟ್ಸ್ ಬರುತ್ತವೆ. ಏಕೆಂದರೆ ಅಲ್ಲಿ ಬಹಳ ಕರ್ವ್ಸ್ ಇರುತ್ತವೆ. ಅವತ್ತಿನ ಟೆಂಡರ್‌ನಲ್ಲಿ ಮಡ್ ಕಲ್ವರ್ಟ್ ವರ್ಕ್ ಹಾಗೇ ಏನೋ ಆಗಿತ್ತಂತೆ. ಈಗ ಸಿಕ್ಕಾಪಟ್ಟೆ ಕಲ್ಲುಗಳು ಸಿಕ್ಕಿ ಅವುಗಳನ್ನು ಬ್ಲಾಸ್ಟ್ ಮಾಡಿ ಕಲ್ವರ್ಟ್ಸ್‌ನ್ನು ಮಾಡಬೇಕಾಗಿರುವುದರಿಂದ ಅದಕ್ಕೆ ಖರ್ಚಾಗುತ್ತದೆ. ಅದ್ದರಿಂದ ತಮಗೆ ತೊಂದರೆಯಾಗಿದೆ ಎಂದು ಆ ಕಂಟ್ರಾಕ್ಟರ್ ನಮಗೆ ಹೇಳಿದರು. ಇದನ್ನು ತಾವು ಸರಿಪಡಿಸಬೇಕಾಗುತ್ತದೆ, ಜೊತೆಗೆ ಆದಷ್ಟು ಬೇಗ ಈ ಕೆಲಸ ಮುಗಿಸಬೇಕು. ಇವತ್ತು ನನ್ನ ಸಲಹೆ ಎಂದರೆ, ಚಾರ್ಮುಡಿ ಘಾಟ್‌ಗೆ ನೀವು ಒಂದು ಬೈಪಾಸ್ ರೋಡನ್ನು ಮಾಡಲೇಬೇಕಾಗುತ್ತದೆ. ಏಕೆಂದರೆ ಪ್ರತಿವರ್ಷ ಹೆವಿರೈನ್ಸ್‌ನಲ್ಲಿ ಚಾರ್ಮುಡಿ ಘಾಟ್ ಕುಸಿದೇ ಕುಸಿಯುತ್ತದೆ. ಯಾವುದಾದರೂ ಒಂದು ಭಾಗದ ರೋಡ್ ಬ್ಲಾಕ್ ಆಗುತ್ತದೆ. ಆ ಸಂದರ್ಭದಲ್ಲಿ ಬೈಪಾಸ್ ರೋಡ್ ನಮಗೆ ಇರುವುದಿಲ್ಲ. ತಮಗೆ ಗೊತ್ತಿರುವ ಹಾಗೆ, ಭಾರಿ ಮಲೆ ಬಂಜಾರಮಲೆ ರೋಡು ಏನು ಕಚ್ಚಾ ರೋಡು ಇದೆ, ಅದನ್ನು ನೀವು ನ್ಯಾಷನಲ್ ಹೈವೇಗಾದರೂ ತೆಗೆದುಕೊಳ್ಳಿ ಅಥವಾ ಸ್ಟೇಟ್ ಹೈವೇಗಾದರೂ ತೆಗೆದುಕೊಂಡು ಅದನ್ನು ಅಭಿವೃದ್ಧಿಪಡಿಸಿದರೆ, ಬೈಪಾಸ್ ರೋಡ್‌ಗೆ ಅನುಕೂಲವಾಗುತ್ತದೆಯೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ಮಾನ್ಯ ಅಧ್ಯಕ್ಷರು ಬೆಲ್ ಮಾಡುತ್ತಿದ್ದಾರೆ. ನಾನು ಎಲ್ಲಾ ಮಹಿಳೆಯರ ಪರವಾಗಿ ಮಾತನಾಡುತ್ತಿದ್ದೇನೆ. ಸುಮಾರು ಪಾಯಿಂಟ್ಸ್‌ನ್ನು ನಾನು ಹೇಳಬೇಕಾಗುತ್ತದೆ. ತಾವು ಬೆಲ್ ಮಾಡಿದರೆ ನಾನು ಮಾತನಾಡುವುದಿಲ್ಲ.

ಅಧ್ಯಕ್ಷರು:- ಬೇಗ ಮುಗಿಸಿ.

ಶ್ರೀಮತಿ ಮೋಟಮ್ಮ:- ಮಾನ್ಯ ಅಧ್ಯಕ್ಷರೇ, ಇನ್ನೊಂದು ಇಲಾಖೆಯಲ್ಲಿ ನಾನು ಕೇಳಿರುವುದೇನೆಂದರೆ ನನಗೆ ಈ ಎನ್.ಎಂ.ಆರ್. ಎಂಬ ಹೆಸರು ಗೊತ್ತಿರಲಿಲ್ಲ. ಆದರೆ, ಎನ್.ಎಂ.ಆರ್. ಮಾಡಿ ಬಿಲ್ ತೆಗೆದುಕೊಳ್ಳುತ್ತಾರಂತೆ. ಎಲ್ಲಿ ಆ ಕೆಲಸ ಮಾಡಿದ್ದಾರೆ, ಏನು ಮಾಡಿದ್ದಾರೆಂದು ಯಾರಿಗೂ ಗೊತ್ತಿಲ್ಲ. ಇವತ್ತು ನಾನು ಯಾರಿಗೋ ಕೇಳಿದೆ. ಈ ಎನ್.ಎಂ.ಆರ್. ಎಂದರೆ ಏನು ಎಂದು. ಮೊನ್ನೆ ಯಾರೋ ಮಾತನಾಡುತ್ತಿದ್ದರು. ನಮ್ಮ ಜಿಲ್ಲೆಯಲ್ಲಿ ಎಲ್ಲೋ ಹೀಗೆ ಆಗುತ್ತಿವೆ ಎಂದು ಹೇಳುತ್ತಿದ್ದರು. ಈ ಹಾವಳಿಯನ್ನು ದಯಮಾಡಿ ತಪ್ಪಿಸಬೇಕು. ಸುಮ್ಮಸುಮ್ಮನೆ ಬಿಲ್ ಮಾಡಿ ದುಡ್ಡು ತೆಗೆದುಕೊಳ್ಳುವುದು. ರಿಪೇರಿ ಕೆಲಸಗಳು ಎಂದು ರೋಡ್ ಸೈಡ್‌ನಲ್ಲಿ ಡ್ರೈನೇಜ್ ಮಾಡಿದ್ದೇವೆ ಎಂದು ದುಡ್ಡು ತೆಗೆದುಕೊಳ್ಳುತ್ತಿದ್ದಾರೆ. ಆಮೇಲೆ ಈ ಪೀಸ್ ವರ್ಕ್ ಕೊಡುವುದೇನಿದೆ, ಇದನ್ನು ನಿಲ್ಲಿಸಿ, ಟೆಂಡರ್ ಮೂಲಕ ಈ ಕೆಲಸ ಮಾಡುವಂಥ ಕಾರ್ಯವನ್ನು ತಮ್ಮ ಇಲಾಖೆಯಲ್ಲಿ, ತಾವು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ ಆಮೇಲೆ ಇನ್ನೊಂದು ಮುಖ್ಯವಾದ ಸಂಗತಿ ಏನೆಂದರೆ ನ್ಯಾಷನಲ್ ಹೈವೇ ಬಗ್ಗೆ ಈ ಬುಕ್‌ನಲ್ಲಿ ಒಂದು ತರಹ ಪ್ರಿಂಟ್ ಆಗಿದೆ. ಏಕೆಂದರೆ, ನ್ಯಾಷನಲ್ ಹೈವೇಗೆ ಹೊಸದಾಗಿ ಯಾವುದು ಸೇರಿದೆ ಎಂದರೆ, ಚಿತ್ರದುರ್ಗ, ಹೊಳಲ್ಕೆರೆ, ಹೊಸದುರ್ಗ, ಚಿಕ್ಕಮಗಳೂರು, ಮೂಡಿಗೆರೆ, ಬೆಳ್ತಂಗಡಿ, ಬಂಟ್ವಾಳ, ಮಂಗಳೂರು ಎಂದು ಪ್ರಿಂಟ್ ಆಗಿದೆ. ನಮ್ಮ ಸ್ನೇಹಿತೆಯರಾದ ಶ್ರೀಮತಿ ಸುಮಾ ವಸಂತ್‌ರವರು ಕೇಳಿದಾಗ ಇದು ಬದಲಾವಣೆಯಾಗಿದೆ. ಚಿತ್ರದುರ್ಗ, ಶಿವಮೊಗ್ಗ, ಚಿಕ್ಕಮಗಳೂರು, ಸಕಲೇಶಪುರ, ಮಡಕೇರಿ ಎಂದು ಆಗಿದೆ. ಇಲ್ಲಿ ಮೂಡಿಗೆರೆ ಬಿಟ್ಟುಹೋಗಿದೆ. ಇದಕ್ಕೆ ನಾನು ಏನು ಹೇಳುತ್ತಿದ್ದೇನೆಂದರೆ, ಇದು ತಮಗೆ ಗೊತ್ತಿರುವ ಸಂಗತಿ. ಏಕೆಂದರೆ, ವೈಯಾ ಸಕಲೇಶಪುರ – ಬದಲಾಗಿ, ವೈಯಾ ಮೂಡಿಗೆರೆ, ಮಡಕೇರಿ ಏಕೆ ಮಾಡಬಾರದು. ಚಿತ್ರದುರ್ಗ, ಶಿವಮೊಗ್ಗ, ಚಿಕ್ಕಮಗಳೂರು, ವೈಯ ಮೂಡಿಗೆರೆ, ಮಡಿಕೇರಿ ಎಂದು ನಿಮ್ಮ ಈ ಬುಕ್‌ಲೆಟ್‌ನಲ್ಲಿ ಏನು ಪ್ರಿಂಟ್ ಮಾಡಿದ್ದೀರಿ, ಇದರಲ್ಲಿ ಮೂಡಿಗೆರೆ ಇವೆ. ಆದ್ದರಿಂದ ತಾವು ಇದನ್ನು ಸರಿಪಡಿಸಬೇಕೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಆಮೇಲೆ ತಮಗೆ ಗೊತ್ತಿರುವ ಹಾಗೆ, ನಮ್ಮ ರೋಡಿನ ಪರಿಸ್ಥಿತಿಯನ್ನು ನಾನು ಹೇಳಿದೆ. ಸಕಲೇಶಪುರ ಮೂಡಿಗೆರೆ ರೋಡಿನಷ್ಟು ವರ್ಸ್ಟ್ ರೋಡು ಜಗತ್ತಿನಲ್ಲಿ ಎಲ್ಲಿಯೂ ಇಲ್ಲವೆಂದೆನಿಸುತ್ತದೆ. ಏಕೆಂದರೆ, ನೀವೂ ಸಹ ಈ ರೋಡುಗಳನ್ನು ನೋಡಿದ್ದೀರಿ. ನಾನು, ಮುಖ್ಯ ಇಂಜಿನಿಯರ್

ರಮೇಶ್‌ರವರನ್ನೂ ಕರೆದುಕೊಂಡು ಹೋಗಿ ಈ ರಸ್ತೆ ತೋರಿಸಿದ್ದೇನೆ. ಆದರೆ ಈ ರಸ್ತೆಯನ್ನು ಅಭಿವೃದ್ಧಿ ಮಾಡುವುದಕ್ಕೆ ಇದುವರೆಗೂ ಸಾಧ್ಯವಾಗಿಲ್ಲ. ಈ ವರ್ಷ ಒಂದು ಕಿಲೋಮೀಟರ್ ಬೆಟ್ಟದ ಮನೆಯ ಹತ್ತಿರ ಮಾಡುತ್ತಾರಂತೆ. ಹಾಗೆಯೇ ಮೂಡಿಗೆರೆ ವೈಯಾ ಗೋಣಿಬೀಡು, ಬೇಲೂರು ರಸ್ತೆ ಬಹಳ ಹಾಳಾಗಿದೆ.

ನಾನು ಹೋದಸಾರಿ ಹೇಳಿದ್ದು ಸರಿಯೋ ತಪ್ಪೋ, ವಿಶೇಷವಾಗಿ ಇದಕ್ಕೆ ಗ್ರಾಂಟ್ಸ್ ತೆಗೆದುಕೊಂಡು, ಕಡೂರು, ಮಂಗಳೂರು ಮತ್ತು ಚೀಕನಹಳ್ಳಿ, ಸಕಲೇಶಪುರ ರಸ್ತೆಯನ್ನು ರಿಪೇರಿ ಮಾಡಿಸಿದೆ. ತಾವು ಈ ಸಾರಿ ಈ- ಭಾಗಕ್ಕೆ ಹೆಚ್ಚು ಗ್ರಾಂಟ್ಸ್ ಕೊಡಬೇಕೆಂದು ಕೇಳುತ್ತೇನೆ. ಇನ್ನೊಂದೇನೆಂದರೆ, ಸಿ.ಆರ್.ಎಫ್. ಫಂಡ್ ಕೇಂದ್ರದಿಂದ ಸಾಕಷ್ಟು ಬರುವುದು ನಮಗೆ ಬಾಕಿ ಇದೆಯಂತೆ. ನಾನು ಈ ಹಿಂದೆ ಸೆಕ್ರೆಟರಿಗಳಾದ ಕೃಷ್ಣಮೂರ್ತಿಯವರು ಇದ್ದಾಗ ಇದನ್ನು ವಿಚಾರ ಮಾಡಿದ್ದೆ. ವರ್ಷಕ್ಕೆ 15 ಕೋಟಿ ಸಿ.ಆರ್.ಎಫ್. ಫಂಡ್ ಬರಬೇಕಾಗಿದ್ದು, ಈ ದುಡ್ಡು ಬಂದಿಲ್ಲವಂತೆ. ನಮಗೆ ಸುಮಾರು 45 ಕೋಟಿ ಮೂರು ವರ್ಷಗಳಿಂದ ಬಾಕಿ ಇದೆ. ಸೆಕ್ರೆಟರಿಯವರೂ ಎಷ್ಟೋ ಸಾರಿ ಡೆಲ್ಲಿಗೆ ಹೋಗುತ್ತಾರೆ, ಮಂತ್ರಿಗಳೂ ಹೋಗುತ್ತಾರೆ. ದಯಮಾಡಿ ನಮಗೆ ಬರಬೇಕಾದ ಷೇರ್‌ಅನ್ನು ಏಕೆ ಕಿತ್ತುಕೊಳ್ಳಬಾರದು, ಏಕೆ ನಾವು ಫೈಟ್ ಮಾಡಬಾರದು ಎಂದು ಹೇಳುತ್ತೇನೆ. ತಾವು ದಕ್ಷರಿದ್ದೀರಿ, ನಮಗೇನು ದುಡ್ಡು ಬಾಕಿ ಬರಬೇಕಾಗಿದೆ. ಅದನ್ನು ನಮ್ಮ ರಾಜ್ಯಕ್ಕೆ ತಂದು ಕೊಡಬೇಕು ಮತ್ತು ಅದರಿಂದ ಈ ರಸ್ತೆಗಳು ಹೆಚ್ಚು ದುರಸ್ತಿಯಾಗಬೇಕೆಂಬ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನೊಂದು ರಸ್ತೆ ಬಗ್ಗೆ ಹೇಳಬೇಕೆಂದರೆ ಬಯಲು ಸೀಮೆಗೆ ಇರಿಗೇಷನ್ ಟ್ರಾಕ್ ರೋಡ್ಸ್ ಎಂದು ಮಾಡಿದ್ದಾರೆ. ಆಮೇಲೆ ಕೆಲವು ಕಡೆ ಷುಗರ್‌ಕೇನ್ ರೋಡ್ಸ್ ಎಂದು ಮಾಡಿದ್ದಾರೆ. ನಾವು, ಇವರೆಲ್ಲರಿಗಿಂತಲೂ ಕಾಫಿಗೆ ಹೆಚ್ಚು ಟ್ಯಾಕ್ಸ್ ಕೊಡುತ್ತೇವೆ. ಆದ್ದರಿಂದ ನಮಗೆ ಏಕೆ ಕಾಫಿ ರೋಡ್ಸ್ ಎಂದು ಮಾಡಬಾರದು. ದಯಮಾಡಿ ಈ ಕೆಲಸ ಮಾಡಿ. ಏಕೆಂದರೆ, ಮಲೆನಾಡು ಪ್ರದೇಶದಿಂದ ತಾವು ಎರಡು ಸಾರಿ ರೆಪ್ರಸೆಂಟ್ ಮಾಡಿದ್ದೀರಿ. ತಮ್ಮ ಹೆಸರು ಶಾಶ್ವತವಾಗಿ ಉಳಿಯುತ್ತದೆ. ಈ ಕೆಲಸವನ್ನು ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಹಾಗೆಯೇ ಕೊನೆಯದಾಗಿ, ಪಿ.ಡಬ್ಲ್ಯು.ಡಿ. ಬಗ್ಗೆ ಏನು ಹೇಳುವುದಕ್ಕೆ ಇಷ್ಟಪಡುತ್ತೇನೆಂದರೆ, ಈ ಗ್ಯಾಂಗ್ ಕೂಲಿಗಳು ಸಾಕಷ್ಟು ಜನ ಇದ್ದರು. ಅವರನ್ನು ಖಾಯಂ ಮಾಡಿದೆವು. ಅವರಿಗೆ, ಸಾಕಷ್ಟು ಸಂಬಳವನ್ನೂ ಕೊಡುತ್ತೇವೆ. ಆದರೆ, ಅವರೊಬ್ಬರೂ ರಸ್ತೆಯ ಮೇಲೆ ಇರುವುದಿಲ್ಲ. ಅವರು ಎಲ್ಲಿ ಹೋಗಿದ್ದಾರೆಂದೂ ಗೊತ್ತಿಲ್ಲ. ಜೊತೆಗೆ ವಯಸ್ಸಾದವರೂ ಇದ್ದಾರೆ. ರಸ್ತೆ, ಚರಂಡಿ ಬಿಡಿಸುವುದಕ್ಕೆ ಜನ ಇಲ್ಲ. ಆಮೇಲೆ ರಸ್ತೆ ಪಕ್ಕದಲ್ಲಿ ಕಾಡು ಬೆಳೆದಿದ್ದರೂ ಬಿಡಿಸುವುದಕ್ಕೆ ಜನ ಇಲ್ಲ. ಇದು ಪಿ.ಡಬ್ಲ್ಯು.ಡಿ. ರೋಡ್ ಅಲ್ಲವೇ ಎನ್ನತಕ್ಕ ಪರಿಸ್ಥಿತಿ ಬಂದಿದೆ. ನಾನೂ ಸಾಕಷ್ಟು ಸಾರಿ ಸಂಬಂಧಪಟ್ಟ ಅಧಿಕಾರಿಗಳಿಗೆ ಹೇಳಿದ್ದೇನೆ. ಅವರು ನಮಗೆ ಗ್ಯಾಂಗ್ ಕೂಲಿಗಳು ಇಲ್ಲ, ಅವರಿಗೆ ವಯಸ್ಸಾಗಿದೆ, ಹಾಗೆ, ಹೀಗೆ ಎಂಬ ಮಾತನ್ನು ಹೇಳುತ್ತಾರೆ. ತಾವು ಇದನ್ನು ಪತ್ತೆ ಹಚ್ಚಿ, ಈ ಕೆಲಸ ಸರಿ ಮಾಡಬೇಕು. ಇಲ್ಲದಿದ್ದರೆ, ಚರಂಡಿ ಕ್ಲೀನ್ ಮಾಡುವ ಕೆಲಸ ಮತ್ತು ಜಂಗಲ್ ಕ್ಲೀನ್ ಮಾಡುವ ಕೆಲಸವನ್ನು ನೀವು ಕಂಟ್ರಾಕ್ಟ್ ಕೊಡಿ. ನಿಮಗೆ ಈ ಗ್ಯಾಂಗ್ ಕೂಲಿ ಏಕೆ ಬೇಕು ಅಥವಾ ಈ ಗ್ಯಾಂಗ್ ಕೂಲಿಗಳನ್ನು ಇಟ್ಟುಕೊಳ್ಳಬೇಡಿ. ಯಾರದೋ ಮನೆಯಲ್ಲಿ ಅಡಿಗೆ ಮಾಡುವ ಗ್ಯಾಂಗ್ ಕೂಲಿಗಳಿಗೆ ನೀವು ಸಂಬಳ ಕೊಡುತ್ತಿದ್ದೀರಿ. ಇದನ್ನು ಸರಿಪಡಿಸುವ ಕೆಲಸವನ್ನು ತಾವು ಮಾಡಬೇಕೆಂಬ ಮಾತನ್ನು ಹೇಳುತ್ತೇನೆ. ಆಮೇಲೆ, ಕೊನೆಯದಾಗಿ, ಮಿನಿ ವಿಧಾನಸೌಧ ಕಟ್ಟಡಗಳು ಈ ಸಾರಿ ತುಂಬ ಕ್ಷೇತ್ರಗಳಿಗೆ ಮಂಜೂರಾಗಿದೆ ಎಂದು ಕೇಳಿದ್ದೇನೆ. ಈಗ ಏನಾಗಿದೆಯೆಂದರೆ, ಇವುಗಳಲ್ಲಿ ಕೆಲವು ಸಿಂಗಲ್ ಟೆಂಡರ್ ಆಗಿದೆ. ಇದನ್ನು ತಾವು ಅಪ್ರೂವ್ ಮಾಡಿ ಕೊಡದೇ ಇದ್ದರೆ, ಈ ಮಿನಿ ವಿಧಾನ ಸೌಧ ಮಂಜೂರು ಮಾಡುತ್ತಾರೆಂದು ನಾವು ಜನಕ್ಕೆ

ಹೇಳುತ್ತೇವೆಯೇ ವಿನಹ ಈ ಕೆಲಸ ಆಗುವುದಿಲ್ಲ. ನಮ್ಮ ಅವಧಿ ಮುಗಿದರೆ ಮಿನಿ ವಿಧಾನಸೌಧ ಎಲ್ಲಿದೆ ಎಂದು ಚುನಾವಣೆಯಲ್ಲಿ ಜನ ಕೇಳಬಹುದು.

ಏಕೆಂದರೆ, ಮಿನಿ ವಿಧಾನಸೌಧ ಅಂದರೆ ಈ ವಿಧಾನಸೌಧ ಎಂದೇ ಜನರು ನೆನಪಿಸಿಕೊಳ್ಳುತ್ತಾರೆ. ಆಮೇಲೆ ನಾವು ಚುನಾವಣೆಗೆ ಹೋದಾಗ ನೋಡಿ ನಾವು 53 ಲಕ್ಷಕ್ಕೆ ನಮ್ಮ ಊರಿಗೆ ಒಂದು ಮಿನಿ ವಿಧಾನಸೌಧ ಸ್ಯಾಂಕ್ಷನ್ ಮಾಡಿಸಿದ್ದೇವೆ ಎಂದು ಏನೇನು ಮಾಡಿದ್ದೇವೆ. ಅವುಗಳ ಪಟ್ಟಿ ಕೊಟ್ಟಾಗ ಇಲ್ಲಾ ಇದೆಲ್ಲಾ ಬೊಗಳೆ ಎಂದು ಹೇಳುತ್ತಾರೆ. ಏಕೆಂದರೆ, ಮಿನಿ ವಿಧಾನಸೌಧ ಆಗಿಲ್ಲ, ನೀವು ಫೌಂಡೇಶನ್ ಹಾಕಿಲ್ಲ. ಅದಕ್ಕೆ ಜನರಿಗೆ ನಾವು ಏನು ಉತ್ತರ ಹೇಳಬೇಕು. ಆದ್ದರಿಂದ ಈಗ ಯಾವ ಯಾವ ಕ್ಷೇತ್ರದಿಂದ ಯಾವ ರೀತಿಯಲ್ಲಿ ಸರ್ಕಾರಕ್ಕೆ ಶಿಫಾರಸ್ಸು ಆಗಿದೆ ಅದೇ ರೀತಿಯಲ್ಲಿ ಮಿನಿ ವಿಧಾನ ಸೌಧಕ್ಕೆ ಆಡಳಿತಾತ್ಮಕ ಅನುಮತಿ ಕೊಟ್ಟು ಕಟ್ಟಡ ಕಟ್ಟಲಿಕ್ಕೆ ಶುರು ಮಾಡಲಿಕ್ಕೆ ನೀವು ಪ್ರಯತ್ನ ಮಾಡಬೇಕು ಎನ್ನುವ ಮಾತನ್ನು ಹೇಳುತ್ತೇನೆ. ಈ ಇಲಾಖೆಗೆ ತಾವು ಬಂದ ಮೇಲೆ ಹೆಚ್ಚಿನ ಕೆಲಸ ಜನರು ನಿರೀಕ್ಷೆ ಮಾಡುತ್ತಿದ್ದಾರೆ. ನಾನು ಮೊದಲೇ ಹೇಳಿದಂತೆ ಹೊಸ ಚಾಲನೆ ಬಂದಿದೆ. ಅದರ ಜೊತೆಗೆ ಕೊನೆಯದಾಗಿ ಒಂದು ಮಾತು ಏನೆಂದರೆ ನಮಗೆ 50 ಕಿಲೋಮೀಟರ್ ರಸ್ತೆಯನ್ನು ಅಪ್‌ಗ್ರೇಡ್ ಮಾಡಿದ್ದೀರಿ. ಅಪ್‌ಗ್ರೇಡ್ ಮಾಡಿರುವುದರಿಂದ 20 ಲಕ್ಷ ಕೊಟ್ಟಿದ್ದೀರಿ ಅದು ಸಾಕಾಗುತ್ತದೋ ಇಲ್ಲವೋ ಗೊತ್ತಿಲ್ಲ. ಅದು ಸಾಕಾಗುವುದಿಲ್ಲ. ಈಗ ಬೇರೆ ಒರಿಜನಲ್ ರೋಡ್ಸ್ ಏನು ಇವೆ. ಎಂ.ಡಿ.ಆರ್. ಮತ್ತು ಸ್ಟೇಟ್ ಹೈವೇಸ್ - ಇವುಗಳಿಗೆ ಬೇರೆ ದುಡ್ಡು ಕೊಡಬೇಕೆಂದು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಇಷ್ಟ ಪಡುತ್ತೇನೆ. ಈ ಇಲಾಖೆ ಬಗ್ಗೆ ನಾಲ್ಕು ಮಾತುಗಳನ್ನು ಹೇಳಿ ನಿಲ್ಲಿಸುತ್ತೇನೆ. ಇನ್ನು ವಿದ್ಯುಚ್ಛಕ್ತಿ ಇಲಾಖೆ ಬಹಳ ಮುಖ್ಯವಾದ ಇಲಾಖೆ. ನಮಗೆ ಸ್ವಾತಂತ್ರ್ಯ ಬಂದು 50ವರ್ಷಕ್ಕೆ ಕಾಲಿಡುತ್ತಾ ಬಂದಿದ್ದೇವೆ. ಆದರೆ ನಾವು ಜನಗಳಿಗೆ ನೀರು, ಬೆಳಕು ಕೊಡಬೇಕಾಗಿತ್ತು. ಇವತ್ತು ಗ್ರಾಮಾಂತರ ಪ್ರದೇಶದಲ್ಲಿ 50 ಪರ್ಸೆಂಟ್ ಜನಗಳಿಗೆ ನೀರು, ಬೆಳಕು ಕೊಡಲಿಕ್ಕೇ ಆಗಿಲ್ಲ. ನಾವು ನಾಚಿಕೆ ಪಟ್ಟುಕೊಳ್ಳಬೇಕು. ನಾವು ರಾಜಕಾರಣಿಗಳು ಏನಿದ್ದೇವೆ ಸರ್ಕಾರ ನಡೆಸುತ್ತೇವೆ ಎಂದು ಹೇಳುತ್ತೇವೆ, ನಾವು ನಾಚಿಕೆ ಪಟ್ಟುಕೊಳ್ಳಬೇಕು. ಇದರ ಬಗ್ಗೆ ತಾವು ಗ್ರಾಮೀಣ ವಿದ್ಯುದ್ದೀಕರಣದ ಬಗ್ಗೆ ಹೆಚ್ಚು ಶಕ್ತಿ ಪ್ರಯೋಗ ಮಾಡಿ ಈ ಕೆಲಸ ಮಾಡಬೇಕು. ಏಕೆಂದರೆ ನಾನು ಮಾತನಾಡುವಾಗ ಹನುಮೇಗೌಡರನ್ನು ಕೇಳಿದೆ. ಕೃಷ್ಣಾ ಎನ್ನುವ ಹೆಸರಿಗೆ ಬಹಳ ಶಕ್ತಿ ಇರುತ್ತದೆಯಲ್ಲಾ ಹನುಮೇಗೌಡರೆ ಎಂದು. ಮಹಾಭಾರತದಲ್ಲಿ ಕೃಷ್ಣಾ ಭೂಮಿಯನ್ನು ಕಾಲಿನಲ್ಲಿ ಅದುಮಿದಾಗ ಒಂದು ಒಂದೂವರೆ ಅಡಿ ಕೆಳಗೆ ಹೋಗುತ್ತದೆ, ಅಷ್ಟು ಬಲವಾದ ಶಕ್ತಿ ಇರುವುದರಿಂದ ವಿದ್ಯುತ್‌ಗೆ ಅಗಾಧವಾದ ಶಕ್ತಿ ಇರುತ್ತದೆ, ಅದಕ್ಕೆ ಕೃಷ್ಣಾರವರ ಶಕ್ತಿ ಸ್ವಲ್ಪ ಜಾಸ್ತಿ ಸೇರಿಸಿ, ಈ ಎಲ್ಲಾ ಸಮಸ್ಯೆಗಳನ್ನು ಹೊಡೆದು ಹಾಕುವುದಕ್ಕೆ ಅಥವಾ ಬಗೆಹರಿಸುವುದಕ್ಕೆ ಸಾಧ್ಯ ಎನ್ನುವ ಮಾತನ್ನು ಅವರ ಹತ್ತಿರ ಹೇಳಿದೆ. ಅದಕ್ಕೆ ಹನುಮೇಗೌಡರು, ಅದು ಕರೆಕ್ಟ್, ಆ ಮಾತನ್ನು ನೀವು ಹೇಳಬೇಕು ಎಂದು ಹೇಳಿದರು. ಅದಕ್ಕೆ ನಾನು ಈಗ ಹೇಳುತ್ತಿದ್ದೇನೆ. ತಮ್ಮ ಶಕ್ತಿಯನ್ನು ಪ್ರಯೋಗ ಮಾಡಿ, ಈ ಇಲಾಖೆಗೆ ಹೆಚ್ಚು ಶಕ್ತಿಯನ್ನು ಕೊಟ್ಟು ಈ ಸಮಸ್ಯೆಗಳನ್ನು ಬಗೆಹರಿಸಬೇಕು. ಆಮೇಲೆ ಇವತ್ತು 50 ಪರ್ಸೆಂಟ್ ಗ್ರಾಮೀಣ ವಿದ್ಯುದ್ದೀಕರಣದಲ್ಲಿ ಹ್ಯಾಮ್ಲೆಟ್ ಗ್ರಾಮಗಳು ಬಿದ್ದು ಹೋಗಿವೆ. ಮಲೆನಾಡು ಗ್ರಾಮಗಳು ಎಂದರೆ ಇದು ನಮ್ಮ ಉಪ ಮುಖ್ಯಮಂತ್ರಿಗಳ ಗಮನದಲ್ಲಿದೆಯೋ ಇಲ್ಲವೋ ಗೊತ್ತಿಲ್ಲ. ಒಂದು ರೆವಿನ್ಯೂ ಗ್ರಾಮ ಎಂದರೆ ಅಲ್ಲಿ 6 – 7 ಹ್ಯಾಮ್ಲೆಟ್ ಗ್ರಾಮಗಳು ಬರುತ್ತವೆ. ಆ ರೆವಿನ್ಯೂ ಗ್ರಾಮಕ್ಕೆ ಎಲೆಕ್ಟ್ರಿಫಿಕೇಶನ್ ಆಯಿತು ಎಂದರೆ ಆ ಹ್ಯಾಮ್ಲೆಟ್ ಗ್ರಾಮಗಳಿಗೂ ವಿದ್ಯುದೀಕರಣ ಆಗಿದೆ ಎಂದು ಇಲಾಖೆಯವರ ತಲೆಯಲ್ಲಿ ಇರುತ್ತದೆ. ಅದಕ್ಕೆ ಎಷ್ಟು ಪರ್ಸೆಂಟ್ ರೂರಲ್ ಎಲೆಕ್ಟ್ರಿಫಿಕೇಶನ್ ಆಗಿದೆ ಎಂದು ಕೇಳಿದರೆ 60, 80, 90 ಪರ್ಸೆಂಟ್ ಆಗಿದೆ ಎಂದು ಒಂದೊಂದು ಜಿಲ್ಲೆಯಲ್ಲಿ, ಒಂದೊಂದು ತಾಲ್ಲೂಕಿನಲ್ಲಿ ಕೊಟ್ಟಿದ್ದಾರೆ. ನಮ್ಮದು ಮೂಡಿಗೆರೆಯದು 70 ಪರ್ಸೆಂಟ್ ಆಗಿದೆ ಎಂದು ಹೇಳಿದ್ದಾರೆ. ನನ್ನ ಲೆಕ್ಕಾಚಾರದಲ್ಲಿ ಇನ್ನೂ 50 ಪರ್ಸೆಂಟ್ ಹ್ಯಾಮ್ಲೆಟ್ ಗ್ರಾಮಗಳು ಉಳಿದುಕೊಂಡಿವೆ. ಹರಿಜನ

ಗಿರಿಜನ ಬಸ್ತಿಗಳು ಬಿಟ್ಟು ಹೋಗಿವೆ. ಇನ್ನು ಯಾವಾಗ ಎಲೆಕ್ಟ್ರಿಫಿಕೇಶನ್ ಆಗುವುದು. ನಮ್ಮದೆಲ್ಲ ಕುಗ್ರಾಮಗಳು. ನೀವು ಆ ಗ್ರಾಮಗಳನ್ನು ನೋಡಿದರೆ ಗೊತ್ತಾಗುತ್ತದೆ. ಮೊನ್ನೆ ಒಬ್ಬ ಹೆಣ್ಣು ಮಗಳನ್ನು ಆನೆ ಸಾಯಿಸಿದೆ. ಏಕೆಂದರೆ ಈ ಗ್ರಾಮಗಳಲ್ಲಿ ಬೆಳಕು ಇಲ್ಲ. ಈ ಬೆಳಕಿಲ್ಲದ ಗ್ರಾಮಗಳಲ್ಲಿ ಆನೆಗಳ ಹಾವಳಿಯಿಂದ ಜನರು ಹೇಗೆ ವಾಸಮಾಡಬೇಕು ಎಂದು ತಾವು ಯೋಜನೆ ಮಾಡಬೇಕು. ಅದಕ್ಕೆ ನಾನು ಏನು ಹೇಳುತ್ತಿದ್ದೇನೆಂದರೆ, ಇದಕ್ಕೆ ಸ್ಪೆಷಲ್ ಆಗಿ ಒಂದು ಯೋಜನೆ ಹಾಕಿಕೊಂಡಿದ್ದೇವೆಂದು ತಮ್ಮ ವರದಿಯಲ್ಲಿ ಹೇಳಿದ್ದೀರಿ. ಇದನ್ನು ನಾನು ಸ್ವಾಗತ ಮಾಡುತ್ತೇನೆ. ಆದರೆ ಇದರ ಜೊತೆಗೆ ಮಲೆನಾಡಿನ ಭಾಗಗಳ ಕಡೆ ತಾವು ವಿಶೇಷ ಗಮನ ಹರಿಸಬೇಕಾಗುತ್ತದೆ. ಏಕೆಂದರೆ ನಮ್ಮಲ್ಲಿ 6 ತಿಂಗಳು ಮಾತ್ರ ಎಲೆಕ್ಟ್ರಿಫಿಕೇಶನ್ ಮಾಡುವುದಕ್ಕೆ ಟೈಮ್ ಇರುತ್ತದೆ. ಇನ್ನು 6 ತಿಂಗಳು ಮಳೆಗಾಲ ಇರುತ್ತದೆ. ಆದ್ದರಿಂದ ಅಲ್ಲಿಗೆ ನೀವು ಸಾಕಷ್ಟು ಮೆಟೀರಿಯಲ್ಸ್ ಕೊಡಬೇಕಾಗುತ್ತದೆ. ನಮಗೆ ಒಂದೊಂದು ಸಾರಿ ನಾಚಿಕೆಯಾಗುತ್ತದೆ. ಏಕೆಂದರೆ, ಅಲ್ಲಿ ನಾವು ಯಾವುದಾದರೊಂದು ಎಲೆಕ್ಟ್ರಿಫಿಕೇಶನ್ ವರ್ಕ್ ಆಗಬೇಕೆಂದು ಹೇಳಿದರೆ ಅಲ್ಲಿ ವೈರ್ ಬಂದಿಲ್ಲ, ಟ್ರಾನ್ಸ್‌ಫಾರ್ಮರ್ಸ್ ಬಂದಿಲ್ಲ, ಕ್ಲಾಂಪ್ಸ್ ಬಂದಿಲ್ಲ, ಕಂಡಕ್ಟರ್ಸ್ ಬಂದಿಲ್ಲ ಕಟೌಟ್ಸ್ ಬಂದಿಲ್ಲ ಎಂದು ಉದ್ದ ಪಟ್ಟಿ ಮಾಡಿ ಹೇಳುತ್ತಾರೆ. ನಾನಂತೂ ಪ್ರತಿ ತಿಂಗಳು ಕೆ.ಇ.ಬಿ. ಮೆಟೀರಿಯಲ್ ಇಂಜಿನೀಯರ್‌ಗೆ ಫೋನ್ ಮಾಡಿ ನಮಗೆ ಸ್ಪೆಷಲ್ ಅಲಾಟ್‌ಮೆಂಟ್ ಹಾಕಿ ಎಂದು ಹೇಳುತ್ತೇನೆ. ಅಲ್ಲಿ ಕೇಳಿದರೆ ಕಟ್‌ಔಟ್ಸ್ ಇಲ್ಲ, ಅದು ಇಲ್ಲ, ಇದು ಇಲ್ಲ ಎಂದು ಹೇಳುತ್ತಾರೆ. ನಾನು ಕಟ್‌ಔಟ್ ಎನ್ನುವುದನ್ನು ಕೇಳಿಯೇ ಇರಲಿಲ್ಲ. ಮೊನ್ನೆ ಒಂದು ವಾಟರ್ ಸಪ್ಲೈಗೆ ಎಲ್ಲಾ ರೆಡಿಯಾಗಿತ್ತು, ಸರ್ವೀಸ್ ಕೊಡಬೇಕಾದರೆ ಕಟೌಟ್ಸ್ ಇಲ್ಲ ಎಂದ ಹೇಳಿದರು. ನಾನು ಚೀಫ್ ಇಂಜಿನೀಯರ್‌ಗೆ ಫೋನ್ ಮಾಡಿ ಸರ್ವೀಸ್ ಕೊಡಬೇಕಾದರೆ ಕಟ್‌ಔಟ್ಸ್ ಇಲ್ಲವೆಂದು ಹೇಳುತ್ತಾರೆ. ಹೀಗಾದರೆ ಹೇಗೆ ಎಂದು ಕೇಳುವುದು. ನಾವು ಇದನ್ನೆಲ್ಲಾ ವಿಚಾರ ಮಾಡುವಂತಹುದೇ ? ದಯಮಾಡಿ ಇಂತಹ ಕೊರತೆ ತಾವು ಕೂಡಲೇ ನೀಗಿಸಬೇಕು. ನೀವು ಕರೆದ ಸ್ಪೆಷಲ್ ಮೀಟಿಂಗ್‌ನಲ್ಲಿ ನಮ್ಮ ಕೆಲವಾರು ಸಮಸ್ಯೆಗಳನ್ನು ಪಟ್ಟಿ ಮಾಡಿ ಕೊಟ್ಟಿದ್ದೆವು. ಲೈನ್‌ಮ್ಯಾನ್ ಕೊರತೆ ಸಾಮಾನ್ಯವಾಗಿ ಎಲ್ಲಾ ಶಾಸನಸಭಾ ಸದಸ್ಯರಿಗೂ ಇರತಕ್ಕಂಥ ಸಮಸ್ಯೆ. ನಾವು ಯಾವ ಹಳ್ಳಿಗೆ ಹೋದರೂ ಮಂಡಲ ಪಂಚಾಯತಿಯಲ್ಲಿ ಮೊದಲು ಅವರು ಕೇಳುವುದು, ನೋಡಿ ಲೈಟ್ ಉರಿಯುತ್ತಿದೆಯೇ, ಟ್ಯೂಬ್‌ಲೈಟ್ ಹಾಕಿ ಎಷ್ಟು ದಿವಸಗಳಾಗಿವೆ. ಲೈಟ್ ಕೆಟ್ಟು ಹೋದರೆ ಲೈನ್‌ಮ್ಯಾನ್ ಬಂದು ಏಕೆ ರಿಪೇರಿ ಮಾಡುವುದಿಲ್ಲ ಎನ್ನುವ ಮಾತನ್ನು ಹೇಳುತ್ತಾರೆ. ನಾವು ಕೆ.ಇ.ಬಿ.ಗೆ ಕೇಳಿದರೆ ಲೈನ್‌ಮನ್ ಇದ್ದಾನೆಂದು ಹೇಳುತ್ತಾರೆ. ಆದರೆ ಅವರು ಹೋಗಿ ಅಲ್ಲಿ ಅಟೆಂಡ್ ಮಾಡುವುದಿಲ್ಲ. ನಾನು ಟಿ.ಪಿ.ಎಸ್.ನಲ್ಲೂ ಕೂಡ ಹೇಳಿದ್ದೆ. ಲೈನ್‌ಮನ್ ಮಂಡಲಕ್ಕೆ ಭೇಟಿ ಕೊಟ್ಟು ಅಲ್ಲಿ ಸಿಗ್ನೇಚರ್ ಮಾಡಬೇಕು. ವಾರಕ್ಕೊಂದು ಸಲ ಹೋಗಿ ಅಲ್ಲಿ ಎಲೆಕ್ಟ್ರಿಸಿಟಿ ಪ್ರಾಬ್ಲಂ ಇದ್ದರೆ ವಿಚಾರ ಮಾಡಬೇಕು ಎಂದು ಹೇಳಿದ್ದೆ. ಆದರೆ ಅದನ್ನು ಯಾರೂ ಫಾಲೋ ಮಾಡುತ್ತಿಲ್ಲ. ನಮ್ಮಲ್ಲಿ ಏನಾಗಿದೆ ಎಂದರೆ ಎಲ್ಲಾ ವಯಸ್ಸಾದ ಲೈನ್‌ಮ್ಯಾನ್‌ಗಳು ಇದ್ದಾರೆ. ಮತ್ತೆ ಹೆಚ್ಚು ಜನ ಕುಡಿಯುತ್ತಾರೆ. ಹೀಗಿರಬೇಕಾದರೆ ಅವರು ಏನು ಕೆಲಸ ಮಾಡುವುದಕ್ಕೆ ಸಾಧ್ಯ. ಇದನ್ನು ತಾವು ಸರಿ ಮಾಡಬೇಕಾಗುತ್ತದೆ. ಅವರನ್ನು ಮನೆಗೆ ಕಳುಹಿಸುತ್ತೀರೋ ಅಥವಾ ಹೊಸದಾಗಿ ಲೈನ್‌ಮ್ಯಾನ್‌ಗಳನ್ನು ಆಯ್ಕೆ ಮಾಡುತ್ತೀರೋ ಎನ್ನುವುದನ್ನು ತಾವು ಹೇಳಬೇಕು.

ಆಮೇಲೆ ಲೋ ವೋಲ್ಟೇಜ್ ಬಗ್ಗೆ ಸಾಕಷ್ಟು ಮಾನ್ಯ ಮಾಧುಸ್ವಾಮಿಯವರು ಮಾತನಾಡಿದ್ದಾರೆ. ಇದನ್ನು ಇಂಪ್ರೂವ್ ಮಾಡಬೇಕು. ಮಾನ್ಯ ಅಧ್ಯಕ್ಷರೇ, ನಿಮಗೂ ಅನುಕೂಲವಾಗುವಂಥ ಒಂದು ಮಾತನ್ನು ನಾನು ಹೇಳುತ್ತೇನೆ, ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಮಾತ್ರ ನಾನು ಮಾತನಾಡುತ್ತಿಲ್ಲ. ಈಗ ವಾಟರ್ ಸಪ್ಲೈಗೆ ಬಿಲ್ ಬರುತ್ತದೆ. ಈಗ ಸಾಕಷ್ಟು ಮಂಡಲ ಪಂಚಾಯಿತಿಗಳಲ್ಲಿ ಎನ್.ಆರ್.ಡಬ್ಲ್ಯೂ., ಎಂ.ಡಬ್ಲ್ಯೂ.ಎಸ್. ವಾಟರ್ ಸಪ್ಲೈ ಇದೆ. ಇಲ್ಲಿ ಬಾಕಿ ಸಿಕ್ಕಾಪಟ್ಟೇ ಇದೆ. ಮಂಡಲ ಪಂಚಾಯತಿಗಳಿಗೆ ಬರುವ ಉತ್ಪತ್ತಿಯಲ್ಲಿ ಮತ್ತು ನೀವು ಕೊಡುವ ರೋಜ್ಗಾರ್ ಹಣದಲ್ಲಿ

ಅವರಿಗೆ ವಾಟರ್ ಸಪ್ಲೈ ಬಿಲ್ ಕಟ್ಟಲಿಕ್ಕೆ ಆಗುವುದೇ ಇಲ್ಲ. ಸಾಕಷ್ಟು ಮಂಡಲ ಪಂಚಾಯಿತಿಗಳಲ್ಲಿ ವಾಟರ್ ಸಪ್ಲೈ ಡಿಸ್‌ಕನೆಕ್ಟ್ ಆಗಿದೆ. ಆಗ ನಾವು ಅವರಿಗೆ ಗೋಗರೆದು ತಿಂಗಳಿಗೆ 10 ಪರ್ಸೆಂಟ್, 5 ಪರ್ಸೆಂಟ್ ಕಟ್ಟಿಸುತ್ತೇವೆ. ರೀ ಕನೆಕ್ಟ್ ಮಾಡಿ ಎಂದು ಹೇಳುವ ಪರಿಸ್ಥಿತಿ ಬಂದಿದೆ. ನಮ್ಮ ಮೂಡಿಗೆರೆ ಮಂಡಲ ಪಂಚಾಯಿತಿಯಲ್ಲಿ 10 ಲಕ್ಷ ರೂಪಾಯಿ ಬಾಕಿ ಇದೆ. ಅವರಿಗೆ ತಿಂಗಳಿಗೆ ಉತ್ಪತ್ತಿ ಇರುವುದು ಎರಡು ಲಕ್ಷ, 10 ಲಕ್ಷ ರೂಪಾಯಿಗಳನ್ನು ಎಲ್ಲಿಂದ ಕಟ್ಟುತ್ತಾರೆ ? ಆದ್ದರಿಂದ ಇದಕ್ಕೆ ತಾವು ಏನಾದರೂ ಒಂದು ಪೋಸ್ಟ್‌ಮಾರ್ಟ್‌ಮ್ ಮಾಡಬೇಕಾಗುತ್ತದೆ. ಈಗ 50 ಪರ್ಸೆಂಟ್ ಏನು ಬಾಕಿ ಇದೆ . ಅದನ್ನು ಸರ್ಕಾರ ಕಟ್ಟುವುದು, 50 ಪರ್ಸೆಂಟ್ ಮಂಡಲ ಪಂಚಾಯಿತಿಯವರು ಕಟ್ಟುವ ಹಾಗೆ ಮಾಡಿದರೆ ಅವರಿಗೆ ಭಾರ ಕಡಿಮೆಯಾಗುತ್ತದೆ. ಆಮೇಲೆ ಎಸ್‌ಸಿ:ಎಸ್.ಟಿ ಯವರ ಮನೆಗಳಿಗೆ ಭಾಗ್ಯಜ್ಯೋತಿ ಯೋಜನೆ ಮುಖಾಂತರ ಇಲಾಖೆಯಿಂದ ಮಾಡಿರುವುದಕ್ಕೆ ಬಿಲ್ ಕೇಳುತ್ತಿಲ್ಲ ಎಂದು ಹೇಳಿದರು. ಆದರೆ 18 ಪರ್ಸೆಂಟ್‌ನಲ್ಲಿ ಸೋಶಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟಿನಿಂದ ಹಾಕಿದ ಕೆಲವು ಗ್ರಾಮದ್ದು ಅಥವಾ ಹರಿಜನ ಬಸಿದಿಯದು ಬಾಕಿ ಸಿಕ್ಕಾಪಟ್ಟೆ ಇದೆ. ಒಂದೊಂದು ಮನೆಯದು 300–400 ರೂಪಾಯಿ ಬಾಕಿ ಇದೆ. ಅದನ್ನು ಕೊಡಲಿಲ್ಲವೆಂದು ಡಿಸ್‌ಕನೆಕ್ಟ್ ಮಾಡಿದ್ದಾರೆ. ಈಗ ಜನ ಏನು ಹೇಳುತ್ತಾರೆ ಎಂದರೆ, ಭಾಗ್ಯಜ್ಯೋತಿ ಕೊಡುವಾಗ ನಮಗೆ ಬಿಲ್ ಕಟ್ಟಬೇಕೆಂದು ಹೇಳಿದ್ದಿರಾ, ಇವತ್ತು ಬಾಕಿ ವಸೂಲಿಗೆ ಬಂದು ನಮಗೆ ಡಿಸ್‌ಕನೆಕ್ಟ್ ಮಾಡಿದರೆ ನಾವು ಹೇಗೆ ಸುಧಾರಿಸುವುದು ಎಂಬ ಮಾತನ್ನು ಹೇಳುತ್ತಾರೆ. ನಾನು ಕೇಳಿಕೊಳ್ಳುವುದೇನೆಂದರೆ, ಈಗ ಇದನ್ನು ಮನ್ನಾ ಮಾಡಿಬಿಡಿ. ಈಗಿರುವುದನ್ನು ಮನ್ನಾ ಮಾಡಿ, ಇನ್ನು ಮುಂದೆ ಭಾಗ್ಯಜ್ಯೋತಿ ಯೋಜನೆಯವರು ಇಷ್ಟು ಕೊಡಲೇಬೇಕೆಂದು ಕಡ್ಡಾಯ ಮಾಡಿದರೆ ಅವರು ಕೊಡುವುದಕ್ಕೆ ತಯಾರಿದ್ದಾರೆ. ಆದ್ದರಿಂದ ಈಗ ಏನೇನು ಇದೆ ಅದನ್ನೆಲ್ಲ ಒಂದು ಸಾರಿ ನೀವು ಮನ್ನಾ ಮಾಡಿದರೆ ಒಳ್ಳೆಯದೆಂದು ನನ್ನ ಅನಿಸಿಕೆ. ಆಮೇಲೆ ನಮ್ಮ ಜಿಲ್ಲೆಯಲ್ಲಿ 6 ಕೆಇಬಿ ಲಾರಿಗಳು ಇವೆ. ಆ ಲಾರಿಗಳು ಹೋಗುತ್ತಿದ್ದರೆ ಬಾಡಿ ಎಲ್ಲಾ ಬಿಚ್ಚಿಕೊಂಡು ಹೋಗುತ್ತವೆ, ಮೆಟೀರಿಯಲ್ ಹಾಕುವುದಕ್ಕೆ ಲಾರಿ ಕಳುಹಿಸಿರಿ ಎಂದರೆ, ಲಾರಿ ರಿಪೇರಿಗೆ ಕಳುಹಿಸಿದ್ದೇವೆಂದು ಹೇಳುತ್ತಾರೆ. ಅವು ಎಷ್ಟೋ ವರ್ಷಗಳ ಲಾರಿಗಳಂತೆ. ದಯಮಾಡಿ ಆ ಲಾರಿಗಳನ್ನು ರೀಪ್ಲೇಸ್ ಮಾಡಿ ಹೊಸ ಲಾರಿಗಳನ್ನು ಕೊಡುವ ವ್ಯವಸ್ಥೆಯನ್ನು ಮಾಡಬೇಕು. ಕೊನೆಯದಾಗಿ ಇರಿಗೇಷನ್ ಬಗ್ಗೆ ಎರಡೇ ಮಾತುಗಳನ್ನು ಹೇಳಿ ಮುಗಿಸುತ್ತೇನೆ. ನಾನು ನಮ್ಮ ಕ್ಷೇತ್ರದಲ್ಲಿ ಗೋಣೀಬೀಡು ಹೋಬಳಿ ಕೇಂದ್ರದಲ್ಲಿ ಒಂದು ಸೆಕ್ಷನ್ ಆಫೀಸ್ ಮಾಡಬೇಕೆಂದು ಕೇಳಿದ್ದೆ. ಅದು ಮೂಡಿಗೆರೆಯಿಂದ ಬಹಳ ದೂರ ಇರುವುದರಿಂದ ಜನರಿಗೆ ಬಹಳ ತೊಂದರೆಯಾಗುತ್ತದೆ. ಆದ್ದರಿಂದ ಅದನ್ನು ತಾವು ಮಾಡಿಕೊಡಬೇಕು. ಇದನ್ನು ಇಷ್ಟಕ್ಕೇ ನಿಲ್ಲಿಸಿ ಮೈನರ್ ಇರಿಗೇಷನ್ ಬಗ್ಗೆ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಬಯಸುತ್ತೇನೆ. ಮೈನರ್ ಇರಿಗೇಷನ್‌ನಲ್ಲಿ ನಮ್ಮ ಮಲೆನಾಡು ಭಾಗಗಳಲ್ಲಿ ಹೆಚ್ಚು ಕೆಲಸಗಳೇನೂ ಇರಲಿಲ್ಲ. ಜಿಲ್ಲಾಪರಿಷತ್ತಿನಲ್ಲಿದ್ದ ಕೆಲವು ಕೆರೆಗಳು ಮತ್ತು ಅಣೆಕಟ್ಟುಗಳು ಇವತ್ತು ಮೈನರ್ ಇರಿಗೇಷನ್‌ಗೆ ಬಂದಿದೆ. ಅವುಗಳಿಗೆ ಜಿಲ್ಲಾ ಪರಿಷತ್ತಿನಲ್ಲಿ ಇಷ್ಟಿಷ್ಟು ಹಣ ಎಂದು ನಾವು ಮಂಜೂರು ಮಾಡಿಸಿ ಇಡಿಸಿದ್ದೆವು. ಆದರೆ ಆ ಕೆಲಸಗಳೇ ಆಗಿಲ್ಲ. ಇದರ ಬಗ್ಗೆ ಮೈನರ್ ಇರಿಗೇಷನ್‌ನವರನ್ನು ಕೇಳಿದರೆ, ವರ್ಕ್ ವರ್ಗಾವಣೆ ಮಾಡಲಾಗಿದೆ, ಆದರೆ ದುಡ್ಡು ಕೊಟ್ಟಿಲ್ಲವೆಂದು ಹೇಳುತ್ತಾರೆ. ಇದನ್ನು ಇತ್ಯರ್ಥಪಡಿಸುವವರು ಯಾರು ? ಹಾಗಾದರೆ ಈ ವರ್ಷದ ದುಡ್ಡು ಎಲ್ಲಿ ಹೋಯಿತು ? ಅಥವಾ ಜಿಲ್ಲಾ ಪರಿಷತ್ತಿನವರು ಆ ದುಡ್ಡನ್ನು ಏತಕ್ಕಾಗಿ ಬಳಸಿದರು ? ವರ್ಕ್ ವರ್ಗಾವಣೆ ಮಾಡಿದ ಮೇಲೆ ಮೈನರ್ ಇರಿಗೇಷನ್‌ನವರಿಗೆ ದುಡ್ಡು ಏಕೆ ಕೊಡಲಿಲ್ಲ ? ಎಂಬುದನ್ನು ತಾವು ವಿಚಾರ ಮಾಡಿ ಸರಿಪಡಿಸಬೇಕು. ಹಾಗೆಯೇ ಕೆರೆಗಳ ಹೂಳು ತೆಗೆಯುವುದರಿಂದ ಬಹಳ ಅನುಕೂಲವಾಗುತ್ತದೆ. ತಮಗೆ ಗೊತ್ತಿರುವ ಹಾಗೆ ವಾಟರ್ ಟೇಬಲ್ ಡೌನ್ ಆಗಿ ಬೋರ್‌ವೆಲ್ ತೆಗೆದರೆ ಎಲ್ಲಾ ಡ್ರೈಅಪ್

ಆಗುತ್ತಿದೆ. ಕೆರೆಗಳಲ್ಲಿ ಹೂಳನ್ನು ತೆಗೆಸುವುದರಿಂದ ನೀರು ನಿಂತು ಕುಡಿಯುವ ನೀರಿಗೆ ಮತ್ತು ಇರಿಗೇಷನ್‌ಗೆ ಬಹಳ ಅನುಕೂಲವಾಗುತ್ತದೆ ಎನ್ನುವ ಮಾತನ್ನು ಹೇಳುತ್ತೇನೆ. ಆಮೇಲೆ ಲಿಫ್ಟ್ ಇರಿಗೇಷನ್ ಬಗ್ಗೆ ನಮ್ಮ ಸಮಿತಿಯಿಂದಲೇ ಕೆಲವು ರಿಪೋರ್ಟ್‌ಗಳನ್ನು ಕೇಳಿದ್ದೆ. ನಾವು ಲಿಫ್ಟ್ ಇರಿಗೇಷನ್ ಕಾರ್ಪೊರೇಷನ್‌ಗೆ ಭೇಟಿ ಕೊಟ್ಟು ಪರಿಶೀಲನೆ ಮಾಡಬೇಕೆಂಬುದರಲ್ಲಿ ಅದು ಮೈನರ್ ಇರಿಗೇಷನ್ ಇಲಾಖೆಗೆ ಮರ್ಜ್ ಆಗಿಬಿಟ್ಟಿದೆ. 1986ರಲ್ಲಿ ಲಿಫ್ಟ್ ಇರಿಗೇಷನ್ ಕಾರ್ಪೊರೇಷನ್ ಸ್ಥಾಪನೆ ಮಾಡಿದ್ದಾರೆ. ಅಲ್ಲಿಂದ ಇಲ್ಲಿಯವರೆಗೆ ಏನು ಅಪಾಯಿಂಟ್ ಮಾಡಿದ್ದಾರೆ ? ಅದರಲ್ಲಿ ಬಹಳ ಅನ್ಯಾಯ ಮಾಡಿದ್ದಾರೆ. ಎಷ್ಟೊಂದು ಜನ ಇಂಜಿನೀಯರ್‌ಗಳನ್ನು ತೆಗೆದುಕೊಂಡಿದ್ದಾರೆ. ಅದರಲ್ಲಿ ಹರಿಜನ ಗಿರಿಜನರಿಗೆ ಪರ್ಸೆಂಟೇಜ್ ಇಲ್ಲ. 52 ಜನ ಸಹಾಯಕ ಇಂಜಿನೀಯರ್ಸ್‌ನ್ನು ತೆಗೆದುಕೊಂಡಿದ್ದಾರೆ. ಅದರಲ್ಲಿ ಹರಿಜನರಿಗೆ ಎರಡು ಕೊಟ್ಟಿದ್ದಾರೆ, ಗಿರಿಜನರಿಗೆ 1 ಕೊಟ್ಟಿದ್ದಾರೆ. ಕಿರಿಯ ಸಹಾಯಕ ಅಭಿಯಂತರರನ್ನು 29 ಜನ ತೆಗೆದುಕೊಂಡಿದ್ದಾರೆ, ಅದರಲ್ಲಿ ಹರಿಜನರಿಗೆ 5 ಕೊಟ್ಟಿದ್ದಾರೆ; ಗಿರಿಜನರಿಗೆ ಕೊಟ್ಟೇ ಇಲ್ಲ. ಪ್ರತಿಯೊಂದು ಕೇಡರ್ ವೈಸ್ ಅಪಾಯಿಂಟ್ ಮಾಡಿಕೊಂಡಿರುವುದರಲ್ಲೂ ಬಹಳ ಅನ್ಯಾಯ ಮಾಡಿದ್ದಾರೆ. ಇದನ್ನು ಹೇಗೆ ಸರಿಪಡಿಸುತ್ತೀರಿ ?

ಪಿ.ಡಬ್ಲ್ಯೂ.ಡಿ.ಯಿಂದ ಏನು ಡೆಪ್ಯುಟೇಷನ್ ಮಾಡಿಕೊಂಡಿದ್ದಾರೆ ? ಅದರ ಬಗ್ಗೆ ನಾನು ಕ್ವೊಶ್ಚನ್ ಮಾಡುತ್ತಿಲ್ಲ. ಆದರೆ ನೇರವಾಗಿ ಅಪಾಯಿಂಟ್ ಮಾಡಿಕೊಂಡಿದ್ದಾರೆ. ಅದರಲ್ಲಿ ಏಕೆ ರೋಸ್ಟರ್ ನಿಯಮ ಪಾಲನೆ ಮಾಡಲಿಲ್ಲ ಎನ್ನುವುದು ನನ್ನ ಪ್ರಶ್ನೆ. ರೋಸ್ಟರ್ ನಿಯಮವನ್ನು ಪಾಲನೆ ಮಾಡದೆ ಈ ರೀತಿ ನೇರವಾಗಿ ನೇಮಕ ಮಾಡಿಕೊಳ್ಳುವಾಗ ಯಾರು ಚೀಫ್ ಇಂಜಿನೀಯರ್ ಇದ್ದರೋ ಯಾರು ಛೇರ್ಮನ್ ಇದ್ದರೋ ಅವರ ಮೇಲೆ ಕೂಡಲೇ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಒತ್ತಾಯ ಮಾಡುತ್ತೇನೆ. 1992ರಲ್ಲಿ ಸಾಕಷ್ಟು ಸಾರಿ ಇಂಜಿನೀಯರ್ ಹುದ್ದೆಗಳನ್ನು ಇವರು ಸೃಷ್ಟಿ ಮಾಡಿ ಅವರಿಗೆ ಬೇಕಾದವರನ್ನು ನೇಮಕ ಮಾಡಿದ್ದಾರೆ. ಇಲ್ಲಿ ಹೇಳಿದ್ದಾರೆ. 92ರ ಅವಧಿಯಲ್ಲಿ 3 ಸಹಾಯಕ ಇಂಜಿನೀಯರ್ ಹುದ್ದೆಗಳನ್ನು ಹೊಸದಾಗಿ ಸೃಷ್ಟಿಸಿ ನೇಮಕ ಮಾಡಿದ್ದಾರೆ. ಖಾಲಿ ಹುದ್ದೆ ಇದ್ದು ವರ್ಗಾವಣೆ ಮೂಲಕ ಭರ್ತಿಯಾಗಿ ಕೆಲಸಕ್ಕೆ ಹಾಜರಾಗದೇ ಇದ್ದ ಹುದ್ದೆಗಳದು. 91ರಲ್ಲಿ 7 ಕಿರಿಯ ಇಂಜಿನೀಯರ್‌ಗಳ ಹುದ್ದೆಗಳನ್ನು ಅವರೇ ಸೃಷ್ಟಿ ಮಾಡಿಕೊಂಡು ಭರ್ತಿ ಮಾಡಿಕೊಂಡಿದ್ದಾರಂತೆ. ಹೀಗೆ ಎಲ್ಲಾ ಕಡೆ ಸಾಕಷ್ಟು ಅನ್ಯಾಯ ಮಾಡಿದ್ದಾರೆ. ಮಾನ್ಯ ಇರಿಗೇಷನ್ ಮಂತ್ರಿಯವರು ಇದರ ಬಗ್ಗೆ ಡೀಟೇಲ್ ವರ್ಕ್ ಔಟ್ ಮಾಡಿ ವಿಚಾರ ಮಾಡಬೇಕಾಗುತ್ತದೆ. ಯಾವ ಯಾವ ಕೇಡರ್‌ನಲ್ಲಿ ಈ ತರಹ ಅನ್ಯಾಯವಾಗಿದೆ ? ಯಾರು ಇದಕ್ಕೆ ಹೊಣೆಗಾರರು ? ಯಾರೇ ಮಂತ್ರಿಯಾಗಿರಲೀ, ಸೆಕ್ರೆಟರಿಯಾಗಿರಲಿ ಅಥವಾ ಸಂಬಂಧಪಟ್ಟ ಇಂಜಿನೀಯರ್ ಆಗಲಿ, ಅವರನ್ನು ನೀವು ಪನಿಷ್ ಮಾಡಲೇಬೇಕಾಗುತ್ತದೆ. ಅವರಿಗೆ ಈ ಹೊಣೆಗಾರಿಕೆಯನ್ನು ಹೇರಲೇಬೇಕಾಗುತ್ತದೆ. ಇದನ್ನು ನಾನು ನಿಷ್ಠೂರವಾಗಿ ಹೇಳುವುದಕ್ಕೆ ಇಷ್ಟಪಡುತ್ತೇನೆ. 1992ರಲ್ಲಿ ರೋಸ್ಟರ್ ನಿಯಮ ಪಾಲನೆ ಮಾಡದೆ ಡೆಲಿಬರೇಟ್ ಆಗಿ ಇವರಿಗೆ ಬೇಕಾದ ಇಂಜಿನೀಯರ್‌ಗಳನ್ನು ತೆಗೆದುಕೊಂಡು ಹುದ್ದೆಗಳನ್ನು ಭರ್ತಿ ಮಾಡಿದ್ದಾರೆಂದರೆ ಇವರಿಗೆ ಎಷ್ಟು ಧೈರ್ಯ ಇರಬಹುದು ? ಬ್ಯಾಕ್‌ಲಾಗ್ ಫಿಲಪ್ ಮಾಡಬೇಕು ಮತ್ತು ರೋಸ್ಟರ್ ಸಿಸ್ಟಂ ಫಾಲೋ ಮಾಡಬೇಕೆಂದು ಸರ್ಕಾರಕ್ಕೆ ಸುಪ್ರೀಮ್ ಕೋರ್ಟ್ ಆದೇಶ ನೀಡಿದೆ. ಇದರ ಬಗ್ಗೆ ಸಂಬಂಧಪಟ್ಟ ಸೆಕ್ರೆಟರಿಯವರು ಮತ್ತು ಇಂಜಿನೀಯರ್‌ರವರು ಏನು ಮಾಡುತ್ತಿದ್ದರು ? ಮಂತ್ರಿಗಳಿಗೆ ಅಥವಾ ಸಂಬಂಧಪಟ್ಟ ಛೇರ್ಮನ್ನರಿಗೆ ವಿಶೇಷವಾದ ಕಾಳಜಿ ಇದ್ದಿರಬಹುದು ತಮ್ಮ ಸಂಬಂಧಿಕರಿಗೆ, ನೆಂಟರಿಷ್ಟರಿಗೆ ಮತ್ತು ಜಾತಿಯವರಿಗೆ ಕೆಲಸ ಕೊಡಬೇಕು ಎಂದು. ಅವರು ಏಕೆ ರೋಸ್ಟರ್ ನಿಯಮವನ್ನು ಪಾಲನೆ ಮಾಡಲಿಲ್ಲ ? ಆದ್ದರಿಂದ ಅವರನ್ನು ನೀವು ಹೊಣೆಗಾರರನ್ನಾಗಿ ಮಾಡಿ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಆಮೇಲೆ ಇದರಲ್ಲಿ ಒಟ್ಟು 143 ಸ್ಕೀಮ್‌ಗಳು ಇವೆ, ಅವುಗಳಲ್ಲಿ 69 ಸ್ಕೀಮ್‌ಗಳಿಗೆ

ಆಡಳಿತಾತ್ಮಕ ಮಂಜೂರಾತಿ ದೊರಕಿದೆ. ಅದರಲ್ಲಿ ನನ್ನದೂ ಒಂದು ಸೇರಿದೆ. ಅದು ಉತ್ತೆ ಎಂದು ಮಾನ್ಯ ಪಿ.ಡಬ್ಲ್ಯು.ಡಿ. ಮಂತ್ರಿಗಳಿಗೆ ಇದು ಗೊತ್ತು. ಮಾನ್ಯ ದೇವೇಗೌಡರು ಇದ್ದಾಗ 12 ಲಕ್ಷ ರೂಪಾಯಿಗೆ ಮಂಜೂರಾಗಿದ್ದ ಈ ಲಿಫ್ಟ್ ಇರಿಗೇಷನ್ ಸ್ಕೀಮ್ ಇವತ್ತು 22 ಲಕ್ಷ ರೂಪಾಯಿಗಳ ಆಡಳಿತಾತ್ಮಕ ಅನುಮತಿ ದೊರಕಿದೆ.

ಹಾಗೆ ಕೊಪ್ಪದ ಹತ್ತಿರ, ಬೊಮ್ಮಲಾಪ್ಪುರ, ನೆಮ್ಮೂರು, ಕೆಸವಿನ ಮನೆ, ಹೆಮ್ಮಾರು ಇಷ್ಟು ಭಾಗಗಳಿಗೆ ಲಿಫ್ಟ್ ಇರಿಗೇಷನ್ ಸ್ಕೀಂ ಸ್ಯಾಂಕ್ಷನ್ ಆಗಿದೆ. ಇದಕ್ಕೆ ಆಡಳಿತಾತ್ಮಕ ಅನುಮೋದನೆ ದೊರಕಿದೆ. ಆದರೆ, ಕೆಲಸ ಪ್ರಾರಂಭವಾಗಿಲ್ಲ, ಹಣ ಬಿಡುಗಡೆ ಮಾಡಿಲ್ಲ. ಏಕೆ? ನಾನು ಚೀಫ್ ಇಂಜಿನೀಯರ್‌ರವರಿಗೆ ಕೇಳಿದಾಗ, ನಬಾರ್ಡ್‌ನವರು ನಮಗೆ ಸಾಲ ಕೊಡುತ್ತಿಲ್ಲವೆಂದು ಹೇಳಿದರು. ಕಾರಣ ಏನು ? ಇವರು ಏನೇನು ಹೊಂದಾಣಿಕೆ ಮಾಡಿಕೊಂಡಿದ್ದರು ? ಹೊಂದಾಣಿಕೆಗೆ ತಕ್ಕ ಹಾಗೆ ಏಕೆ ನಡೆದುಕೊಳ್ಳಲಿಲ್ಲ ? ಇದಕ್ಕೆ ಸಾಲ ಮಂಜೂರಾತಿ ಏಕೆ ಕೊಡಲಿಲ್ಲ ? ಜನರಿಗೆ ನಾವು ಇದು ಮಂಜೂರಾಗಿದೆ ಎಂದು ಹೇಳಿದ ಮೇಲೆ ಅವರು ವಿಶ್ವಾಸ ಇಟ್ಟುಕೊಳ್ಳುತ್ತಾರೆ. ಆದರೆ ಕೆಲಸ ಕಾರ್ಯಗತವಾಗಲಿಲ್ಲವೆಂದರೆ ಜನರು ನಮ್ಮನ್ನೂ ನಂಬುವುದಿಲ್ಲ, ಸರ್ಕಾರವನ್ನೂ ನಂಬುವುದಿಲ್ಲ. ಯಾರ ಬೇಜವಾಬ್ದಾರಿಯಿಂದ ಈ ಕೆಲಸ ನಿಧಾನವಾಗಿದೆಯೋ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಹೇಳಿ, ನನಗೆ ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಉಮೇಶ್ ಭಟ್ (ಅಂಕೋಲ):– ಮಾನ್ಯ ಅಧ್ಯಕ್ಷರೇ, 1993–94ನೇ ಇಸವಿಯ ವಾರ್ಷಿಕ ವರದಿಯನ್ನು ಸ್ವಾಗತ ಮಾಡುತ್ತಾ, ಪಿ ಡಬ್ಲ್ಯೂ ಡಿ ಮತ್ತು ಪವರ್ ಬಗ್ಗೆ ಕೆಲವೊಂದು ಸಲಹೆಗಳನ್ನು ಕೊಡಲಿಕ್ಕೆ ವಿಚಾರ ಮಾಡುತ್ತೇನೆ. ಪಿ ಡಬ್ಲ್ಯೂ ಡಿ ಇಲಾಖೆಯ ರಸ್ತೆ ವಿಚಾರದಲ್ಲಿ ನನ್ನ ಕ್ಷೇತ್ರ ಅಥವಾ. ಜಿಲ್ಲೆಯಲ್ಲಿ ಬಹಳ ತೊಂದರೆಯಾಗುತ್ತಿದೆ. ಕಾರಣ ಇಷ್ಟೇ, ನಮ್ಮ ಜಿಲ್ಲೆ ಬಹಳ ಮಲೆನಾಡು ಮತ್ತು ಅದರ ಸಂಗಡ ಹೆವಿ ರೇನ್. ಬಹಳಷ್ಟು ಮಳೆಗಾಲ ಇದೆ.

ಮಳೆಯಿಂದ ರಸ್ತೆಗಳು ಬಹಳಷ್ಟು ಹಾಳಾಗುತ್ತಿರುತ್ತವೆ. ನಾನು ಲೋಕೋಪಯೋಗಿ ಇಲಾಖೆಯವರನ್ನು ಕೇಳಿದಾಗ, ಸ್ವಾಮಿ ನಮಗೆ ಎಲ್.ಓ.ಸಿ. ಇಲ್ಲ, ನಮ್ಮ ಹತ್ತಿರ ಹಣವಿಲ್ಲ, ನಮಗೆ ಈ ರಸ್ತೆಯನ್ನು ಪ್ರತಿವರ್ಷ ಇದೇ ರೀತಿ ಮಾಡುತ್ತಾ ಹೋಗುವುದಕ್ಕೆ ಕಷ್ಟವಾಗುತ್ತದೆ. ಅನ್ನುವಂತಹ ವಿಚಾರವನ್ನು ಅವರು ಹೇಳುತ್ತಾ ಇದರೆ ಜನತೆಗೆ ನಾವು ರಸ್ತೆಗಳನ್ನು ಮಾಡಿಸಿಕೊತ್ತೇವೆ ಅನ್ನುವಂತಹ ವಿಚಾರವನ್ನು ಹೇಳಿ ಆದರೂ ಕೂಡ ಆ ಕೆಲಸಗಳು ಇದುವರೆಗೂ ಆಗುತ್ತಿಲ್ಲ. ಮಾನ್ಯ ರಂಗನಾಥ್‌ರವರಿಗೆ ನಮ್ಮ ಉತ್ತರ ಕನ್ನಡಜಿಲ್ಲೆಯ ಎಲ್ಲಾ ವಿಚಾರದ ಬಗ್ಗೆ ಮಾಹಿತಿ ಇದೆ. ಅದೇ ರೀತಿ ಅವರಿಗೆ ಬಹಳ ಪ್ರೀತಿ ವಿಶ್ವಾಸ ಕೂಡ ಇದೆ ಎಂದು ನಾನು ನಂಬಿದ್ದೇನೆ. ಅದಕ್ಕಾಗಿ ಮಾನ್ಯ ರಂಗನಾಥಜಿಯವರು ನಮ್ಮ ಜಿಲ್ಲೆಯ ನಮ್ಮ ತಾಲ್ಲೂಕಿನ, ನಮ್ಮ ಕ್ಷೇತ್ರದ ರಸ್ತೆಗಳ ಬಗ್ಗೆ ಹೆಚ್ಚಿನ ಪ್ರೀತಿ, ವಿಶ್ವಾಸವನ್ನು ಇಟ್ಟು ಎಲ್ಲಾ ರೀತಿಯ ಸಹಕಾರವನ್ನು ಅವರು ಕೊಡಬೇಕು ಎಂದು ನಾನು ತಮ್ಮ ಮೂಲಕ ಅವರನ್ನು ಕೇಳಿಕೊಳ್ಳುತ್ತಿದ್ದೇನೆ; ಅದೇ ರೀತಿ ಹೋದ ಸಲ ನಮಗೆ 50 ಕಿ.ಮೀ. ನಷ್ಟು ಜಿಲ್ಲಾಪರಿಷತ್ತಿನ ರಸ್ತೆಗಳನ್ನು ಲೋಕೋಪಯೋಗಿ ಇಲಾಖೆ ತೆಗೆದುಕೊಳ್ಳುತ್ತದೆ ಅನ್ನುವಂತಹ ವಿಚಾರವನ್ನು ಹೇಳಿದರು. ಅದೇ ರೀತಿ ಲೋಕೋಪಯೋಗಿ ಇಲಾಖೆಯವರು ತೆಗೆದುಕೊಂಡರು. ಆದರೆ ಇವತ್ತು ನಾವು ನಮ್ಮ ಕ್ಷೇತ್ರಕ್ಕೆ ಹೋದಾಗ ಬಹಳ ಕಷ್ಟವಾಗುತ್ತದೆ. ಯಾರೇ ಕೇಳಿದರೂ ಇನ್ನುವರೆಗೂ ಕೆಲಸವನ್ನು ಅವರು ಪ್ರಾರಂಭ ಮಾಡಲಿಲ್ಲ. ಉತ್ತರಕನ್ನಡ ಜಿಲ್ಲೆಯಲ್ಲಿ ನಮ್ಮ ಕ್ಷೇತ್ರದಲ್ಲಿ ಮೂರು ತಾಲ್ಲೂಕ್‌ಗಳು ಬರುತ್ತದೆ. ನನ್ನ ಅಂಕೋಲ ಕ್ಷೇತ್ರಕ್ಕೆ, ಸಿರಸಿ ಬರುತ್ತದೆ, ಯಲ್ಲಾಪುರ ಬರುತ್ತದೆ, ಸಿರಸಿ, ಯಲಾಪುರದಲ್ಲಿ 50 ಕಿ.ಮೀ. ಅನು ನಾನು ಡಿವೈಡ್ ಮಾಡಿ

ಕೊಡಬೇಕಾಗುತ್ತದೆ. ಆ ರೀತಿ ಕೊಟ್ಟಾಗ ಏನಾಗುತ್ತದೆ ಅಂದರೆ, ನಮಗೆ ಬಂದಿರುವ ಒಂದೊಂದು ತಾಲ್ಲೂಕಿಗೆ ಮತ್ತು ಬೇರೆ ಸ್ಥಳಕ್ಕೆ 10–15 ಕಿ.ಮೀ.ನಷ್ಟು ಮಾತ್ರ ಬರುತ್ತದೆ. ಆದರೆ ಅದರಿಂದ ಮಾನ್ಯಮಂತ್ರಿಗಳು 50 ಕಿ.ಮೀ. ಬದಲಾಗಿ ಒಂದೊಂದು ಕ್ಷೇತ್ರಕ್ಕೆ ಅಂದರೆ ಒಂದೊಂದು ತಾಲ್ಲೂಕಿಗೆ ನಮಗೆ 50-50 ಕಿ. ಮೀ. ಅನ್ನು ತಾವು ಕೊಡಿಸಿದರೆ ಬಹಳ ಒಳ್ಳೆಯದಾಗುತ್ತದೆ ಎನ್ನುವಂತಹ ವಿಚಾರವನ್ನು ತಮ್ಮ ಮುಂದೆ ಇಡುತ್ತಿದ್ದೇನೆ. ಅದೇ ರೀತಿ ನ್ಯಾಷನಲ್ ಹೈವೆ. 50–60 ಕಿ.ಮೀ. ದೂರ ನನ್ನ ಕ್ಷೇತ್ರವನ್ನು ನ್ಯಾಷನಲ್ ಹೈವೆ ಪಾಸ್ ಮಾಡಿಕೊಂಡು ಹೋಗುತ್ತದೆ. ನ್ಯಾಷನಲ್ ಹೈವೆಯಲ್ಲಿ ಮೊನ್ನೆಯಿಂದ ಕೆಲಸಗಳನ್ನು ಮಾಡುತ್ತಿದ್ದಾರೆ, ಅಲ್ಲಿನ ಕಂಟ್ರಾಕ್ಟ್‌ದಾರರನ್ನು ಕೇಳಿದರೆ ನಮಗೆ ಪೇಮೆಂಟ್ ಇಲ್ಲ ಅನ್ನುವಂತಹ ವಿಚಾರವನ್ನು ನಮ್ಮ ಗಮನಕ್ಕೆ ತಂದರು. ಆಗ ಅಧಿಕಾರಿಗಳನ್ನು ಕೇಳಿದಾಗ ಎಲ್.ಓ.ಸಿ. ಇಲ್ಲ ಎಂದು ಹೇಳುತ್ತಾರೆ. ಎಲ್.ಓ.ಸಿ.ಯನ್ನು ಮಂಗಳೂರಿಗೆ ಕೊಟ್ಟಿದ್ದಾರೆ, ಎಲ್.ಓ.ಸಿ.ಯನ್ನು ಬೆಳಗಾಂಗೆ ಕೊಟ್ಟಿದ್ದಾರೆ, ಎಲ್.ಓ.ಸಿ.ಯನ್ನು ಚಿತ್ರದುರ್ಗಕ್ಕೆ ಕೊಟ್ಟಿದ್ದಾರೆ, ಆದರೆ ನಮ್ಮ ಜಿಲ್ಲೆಗೆ ಇವತ್ತಿನವರೆಗೂ ಎಲ್.ಓ.ಸಿ. ಬರಲಿಲ್ಲ, ಆದ್ದರಿಂದ ಅವರಿಗೆ ಪೇಮೆಂಟ್ ಅನ್ನು ಕೊಡುವುದಕ್ಕೆ ಆಗುತ್ತಿಲ್ಲ ಎನ್ನುವಂತಹ ವಿಚಾರವನ್ನು ಅವರು ಹೇಳುತ್ತಿದ್ದಾರೆ. ಆದ್ದರಿಂದ ಇದಕ್ಕೆ ಮಾನ್ಯ ಮಂತ್ರಿಗಳು ಹೆಚ್ಚಿನ ಗಮನವನ್ನು ಕೊಟ್ಟು ಎಲ್.ಓ.ಸಿ.ಯನ್ನು ಕೊಡುವಂತಹ ವ್ಯವಸ್ಥೆಯನ್ನು ಮಾಡಬೇಕು. ಲೋಕೋಪಯೋಗಿ ಇಲಾಖೆಯ ಬಗ್ಗೆ ಇಷ್ಟು ವಿಚಾರವನ್ನು ಹೇಳುತ್ತಾ, ನಾನು ಇನ್ನು ವಿದ್ಯುತ್ ವಿಚಾರದ ಬಗ್ಗೆ ಹೇಳುತ್ತೇನೆ. ವಿದ್ಯುತ್ ವಿಚಾರದಲ್ಲಿ ಹೇಳುವುದಾದರೆ ನಮ್ಮ ಉತ್ತರ ಕನ್ನಡ ಜಿಲ್ಲೆ ಎಷ್ಟೊಂದು ತ್ಯಾಗವನ್ನು ಮಾಡುತ್ತಿದೆ ಅಂದರೆ ಹೇಳಲಿಕ್ಕೆ ಶಕ್ತಿ ಇಲ್ಲದಷ್ಟು ತ್ಯಾಗವನ್ನು ಮಾಡುತ್ತಿದೆ. ಇವತ್ತು ಕರ್ನಾಟಕ ಸರ್ಕಾರ ತ್ಯಾಗ ಮಾಡುತ್ತಿದೆ. ಅದೇ ರೀತಿ ಕೇಂದ್ರ ಸರ್ಕಾರವು ಕೂಡ ತ್ಯಾಗವನ್ನು ಮಾಡುತ್ತಿದೆ. ಒಂದೆಡೆ ಹೋದರೆ ನಮಗೆ ಕೈಗಾ ಬರುತ್ತಿದೆ, ಇನ್ನೊಂದು ಅಡಿಯಲ್ಲಿ ಸೀಬರ್ಡ್ ಬರುತ್ತಿದೆ. ಈಗ ತ್ಯಾಗವನ್ನು ಮಾತ್ರ ನಾವು ಮಾಡುತ್ತಿದ್ದೇವೆಯೇ ಹೊರತಾಗಿ ಜನರ ತೊಂದರೆಯನ್ನು ಇವತ್ತಿನವರೆಗೂ ನಾವು ಅರ್ಥ ಮಾಡಿಕೊಂಡಿಲ್ಲ ಅನ್ನುವಂತಹ ವಿಚಾರ ನನಗೆ ಬರುತ್ತಿದೆ. ಈಗ ಸೂಪಾ ಒಂದೇ ಒಂದು ಡ್ಯಾಮ್‌ನಿಂದ 75–80 ಲಕ್ಷ ರೂಪಾಯಿ ಪ್ರತಿ ತಿಂಗಳು ಕರ್ನಾಟಕ ರಾಜ್ಯ ಸರ್ಕಾರಕ್ಕೆ ಹಣ ಬರುತ್ತಿದೆ. ಅದೇ ರೀತಿ ಜೋಗ್‌ನಿಂದಲೂ ಬರುತ್ತಿದೆ. ಆದರೆ ಇವತ್ತು ನಮ್ಮ ಕ್ಷೇತ್ರಕ್ಕೆ ಹೋದಾಗ ನಾವು ಪಡುವಂತಹ ಕಷ್ಟವನ್ನು ನಮ್ಮ ಬಾಯಿಂದ ಹೇಳಲಿಕ್ಕೂ ಕೂಡ ಆಗುತ್ತಿಲ್ಲ. ಆದರೆ ಮಾನ್ಯ ಶ್ರೀಮತಿ ಮೋಟಮ್ಮನವರು ಹೇಳಿದ ಹಾಗೆ ಮಾನ್ಯ ಕೃಷ್ಣರವರು ಈಗ ಇಲಾಖೆಗೆ ಮಂತ್ರಿಯಾಗಿ ಬಂದಿದ್ದಾರೆ. ಅವರಿಗೂ ಕೂಡ ನಮ್ಮ ಪರಿಸರದ ನಮ್ಮ ಪ್ರದೇಶದ ಅನುಭವ ಇದೆ. ಈ ಮೂರು ತಾಲ್ಲೂಕುಗಳು ಬರುವುದರಿಂದ ನಮಗೆ ತೊಂದರೆಗಳು ಏನಾಗುತ್ತಿದೆ ಅಂದರೆ, ವೈರುಗಳನ್ನು ಕೇಳಿದರೆ ವೈರುಗಳು ಇಲ್ಲ ಎನ್ನುವಂತಹ ವಿಚಾರವನ್ನು ಹೇಳುತ್ತಾರೆ. ವೈರ್ ಇಲ್ಲ ಎಂದು ಕೇಳಿದ ಕೂಡಲೆ, ಟ್ರಾನ್ಸ್‌ಫಾರ್ಮರ್ ಬಂದಿದೆ. ಆದರೆ ನಮಗೆ ಮೀಟರ್ ಇಲ್ಲ ಎನ್ನುವ ವಿಚಾರವನ್ನು ಪದೇ ಪದೇ ಹೇಳುತ್ತಿರುತ್ತಾರೆ. ಆದರೆ ಜನರು ಹೇಳುತ್ತಾರೆ. ನಾವು ಪ್ರತಿ ತಿಂಗಳಿಗೆ 75–80 ಲಕ್ಷ ರೂಪಾಯಿ ಟ್ಯಾಕ್ಸ್ ಅನ್ನು ಸರ್ಕಾರಕ್ಕೆ ಕೊಡುತ್ತಿದ್ದೇವೆ, ಕೆ.ಇ.ಬಿ.ಯವರು ನಮಗೆ ವಿದ್ಯುಚ್ಛಕ್ತಿಯನ್ನು ಕೊಡುವುದಕ್ಕೆ ಹೆಚ್ಚಿನ ಗಮನವನ್ನು ಏತಕ್ಕೆ ಕೊಡುವುದಿಲ್ಲ ಎನ್ನುವಂತಹ ವಿಚಾರವನ್ನು ಜನ ನಮಗೆ ಕೇಳುತ್ತಿರುತ್ತಾರೆ. ಉತ್ತರ ಕನ್ನಡ ಜಿಲ್ಲೆಯ ಬಗ್ಗೆ ಹೆಚ್ಚಿನ ಆಸಕ್ತಿಯನ್ನು ವಹಿಸಿ ನಮಗೆ ಲೈನ್‌ಅನ್ನು ಕೊಡಿ ಅಥವಾ ನಮಗೆ ಯಾವ್ಯಾವ ಮೆಟೀರಿಯಲ್‌ಗಳು ಇಲ್ಲವೋ ಅಂತಹ ಮೆಟೀರಿಯಲ್‌ಗಳನ್ನು ಕೂಡಲೇ ಕೊಡುವಂತಹ ವ್ಯವಸ್ಥೆಯನ್ನು ತಾವು ಮಾಡಿಸಬೇಕು. ಅದೇ ರೀತಿ ವೆಹಿಕಲ್‌ಗಳು ಇಲ್ಲ ಎಂದು ಹೇಳುತ್ತಾರೆ. ನಮ್ಮದು ಗುಡ್ಡಗಾಡು ಪ್ರದೇಶವಾಗಿದೆ. ನಮ್ಮಲ್ಲಿ ಒಂದೊಂದು ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್ ಆಫೀಸ್ ಇದೆ. ಅಲ್ಲಿ ಜೀಪುಗಳು ಇಲ್ಲ, ಟ್ರಕ್‌ಗಳು ಇಲ್ಲ, ಕೇಳಿದರೆ ನಮಗೆ ಟ್ರಾನ್ಸ್‌ಪೋರ್ಟ್ ಮಾಡಲಿಕ್ಕೆ ಮೆಟೀರಿಯಲ್ ಇಲ್ಲ

ಎನ್ನುವಂತಹ ವಿಚಾರವನ್ನು ಹೇಳುತ್ತಿದ್ದಾರೆ. ನಾನು ಕಳೆದ 1 - 2 ತಿಂಗಳ ಹಿಂದೆ ಕೆ.ಇ.ಬಿ.ಯ ಅಧ್ಯಕ್ಷರನ್ನು ಭೇಟಿಯಾದಾಗ, ಅವರು ಅಧ್ಯಕ್ಷರು ನಮ್ಮನ್ನು ಬಹಳ ಒಳ್ಳೆಯ ರೀತಿಯಿಂದ ಕಂಡು ನಮ್ಮ ಅಂಕೋಲ ಕ್ಷೇತ್ರಕ್ಕೆ ಈಗ ಒಂದು ಟ್ರಕ್ ಅನ್ನು ಕೊಟ್ಟಿದ್ದಾರೆ. ಇನ್ನೂ ಜೀಪನ್ನು ಕೊಡಲಿಲ್ಲ. ಆ ಜೀಪನ್ನು ಕೂಡಲೇ ಕೊಡಿಸುವಂತಹ ವ್ಯವಸ್ಥೆಯನ್ನು ಮಾಡಬೇಕು. ಅದೇ ರೀತಿ ಯಲ್ಲಾಪುರದಲ್ಲಿಯೂ ಕೂಡ ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್ ಆಫೀಸ್ ಇದೆ, ಅಲ್ಲೂ ಕೂಡ ಜೀಪೂ ಇಲ್ಲ, ಟ್ರಕ್ಕೂ ಇಲ್ಲ, ಈ ರೀತಿ ವ್ಯವಸ್ಥೆಯಾಗಿದೆ. ಅದನ್ನು ಕೊಡಿಸುತ್ತೇನೆ ಎನ್ನುವಂತಹ ವಿಚಾರವನ್ನು ನಮ್ಮ ಕೆ.ಇ.ಬಿ.ಯ ಅಧ್ಯಕ್ಷರು ಹೇಳಿದ್ದಾರೆ. ಅದನ್ನೂ ಕೂಡ ಅವರು ಬೇಗ ಕೊಡಿಸಿದರೆ ಅವರಿಗೆ ನನ್ನ ಆತ್ಮೀಯ ಧನ್ಯವಾದವನ್ನು ಅರ್ಪಿಸುತ್ತೇನೆ. ನನ್ನ ಕ್ಷೇತ್ರದಲ್ಲಿ ಬರ್ನಿಂಗ್ ಪ್ರಾಬ್ಲಮ್ ಇರುವುದು ಎಂದರೆ ಬೇಡ್ತಿ ಯೋಜನೆ. ಈಗ ಬೇಡ್ತಿ ಯೋಜನೆಯ ವಿಚಾರದಲ್ಲಿ ಒಂದೊಂದು ಸ್ಟೇಟ್‌ಮೆಂಟ್‌ನ್ನೂ ಓದಿದಾಗ ನನಗೆ ಬಹಳ ದುಃಖವಾಗುತ್ತಿದೆ. ಉದಾಹರಣೆಗೆ ಮಾನ್ಯ ಮುಖ್ಯಮಂತ್ರಿಗಳು ಜನತೆಯ ನೋವನ್ನು ಅರಿತು ಅಂತಹ ಪ್ರಾಜೆಕ್ಟ್ ಅನ್ನು ತೆಗೆದುಕೊಳ್ಳುವಂತಹ ವ್ಯವಸ್ಥೆಯನ್ನು ಮಾಡುತ್ತೇನೆ ಅಥವಾ ಮಾಡುವುದಿಲ್ಲ ಎನ್ನುವಂತಹ ವಿಚಾರವನ್ನು ಹೇಳಿದ್ದಾರೆ. ಅದೇ ರೀತಿ ಮೊನ್ನೆ ಮಾನ್ಯ ಖಂಡ್ರೆಯವರು ಕೌನ್ಸಿಲ್‌ನಲ್ಲಿ ಇಂತಹ ಪ್ರಾಜೆಕ್ಟ್‌ಗಳನ್ನು ನಾವು ತೆಗೆದುಕೊಳ್ಳಬೇಕಾಗುತ್ತದೆ ಅನ್ನುವಂತಹ ವಿಚಾರವನ್ನು ಹೇಳಿದ್ದಾರೆ. ಅದೇ ರೀತಿ ನಮ್ಮ ಜಿಲ್ಲೆಯ ಮಂತ್ರಿಯಾದಂತಹ ಪ್ರಭಾಕರ ರಾಣೆಯವರು ಪ್ರಾಜೆಕ್ಟ್ ಅನ್ನು ನಾವು ತರುವುದಿಲ್ಲ ಅನ್ನುವಂತಹ ವಿಚಾರ ಹೇಳಿದ್ದಾರೆ. ಮಾನ್ಯ ರಾಣೆಯವರು ಹೇಳಿದಂತೆ ಪ್ರಾಜೆಕ್ಟ್‌ಗಳು ಬರದೇ ಇದ್ದರೆ ಮತ್ತು ಬೇಡ್ತಿ ಯೋಜನೆ ಬರುವುದರಿಂದ ಎಷ್ಟು ಕಷ್ಟವಾಗುತ್ತಿದೆ ಅನ್ನುವಂತಹ ವಿಚಾರ ನಾವೆಲ್ಲರೂ ತಿಳಿಯುವಂತಹ ವಿಚಾರವಾಗಿದೆ. ಇವತ್ತು ಬೇಡ್ತಿ ಯೋಜನೆ ಬರುವುದರಿಂದ ಸಾಧಾರಣ 1800 ಎಕರೆ ಭೂಮಿ ಹೋಗುತ್ತದೆ. ನಾವು 300 ಕುಟುಂಬಗಳನ್ನು ಕಳೆದುಕೊಳ್ಳುತ್ತೇವೆ. ಅದೇ ರೀತಿ 2500 ಎಕರೆಯಷ್ಟು ಫಾರೆಸ್ಟ್ ಲ್ಯಾಂಡ್‌ಅನ್ನು ನಾವು ಕಳೆದುಕೊಳ್ಳುತ್ತಿದ್ದೇವೆ. ನಮ್ಮ ಕ್ಷೇತ್ರದ ಜನ ಇಷ್ಟೊಂದು ಬೇಸತ್ತಿದ್ದಾರೆ. ಯುವಕರ ಸಂಘಟನೆ ಕೂಡ ಆಗುತ್ತಿದೆ. ಯುವಕರ ಸಂಘಟನೆ ಆಗಿ ಏನು ಮಾಡುತ್ತಿದ್ದಾರೆಂದರೆ, ಸರ್ಕಾರದವರು ನೀವು ಬೇಡ್ತಿ ಯೋಜನೆಯನ್ನು ತರುತ್ತೇವೆಂದು ಹೇಳಿದರೆ ಅದನ್ನು ತರಲಿಕ್ಕೆ ಕೊಡುವುದಿಲ್ಲ ಎನ್ನುವಂತಹ ಮಾತನ್ನು ಹೇಳುವುದಕ್ಕೆ ಯುವಕರು ಇವತ್ತು ತಯಾರಾಗಿದ್ದಾರೆ. ಅದರ ಬಗ್ಗೆ ಹೋರಾಟವನ್ನು ಮಾಡಲಿಕ್ಕೆ ಅವರು ಬಹಳ ವಿಚಾರವನ್ನು ಮಾಡುತ್ತಿದ್ದಾರೆ. ನನ್ನ ವೈಯಕ್ತಿಕವಾದ ಒಂದೇ ಒಂದು ಅಭಿಪ್ರಾಯ ಏನೆಂದರೆ, ಈ ಬೇಡ್ತಿ ಯೋಜನೆಯನ್ನು ಸರ್ಕಾರ ಕೈಬಿಟ್ಟು ಬೇರೆ ರೀತಿಯಿಂದ ನಮಗೆ ಪವರ್ ಜನರೇಷನ್ ಅನ್ನು ಮಾಡುವಂತಹ ಕೆಲಸವನ್ನು ಮಾಡಿದರೆ ಬಹಳ ಒಳ್ಳೆಯದು ಎಂದು ನನಗೆ ಅನ್ನಿಸುತ್ತಿದೆ. ಬೇಡ್ತಿ ಯೋಜನೆ ಇಷ್ಟೇ ಆಗಲಿಲ್ಲ. ಈಗ ಅದಕ್ಕೆ ಸೆಂಟ್ರಲ್ ಗೌರ್ನಮೆಂಟ್‌ನ ಪರಿಸರದ ಖಾತೆ ಅನುಮತಿಯನ್ನು ಕೊಡಲಿಲ್ಲ ಎನ್ನುವಂತಹ ಒಂದೇ ಒಂದು ಕಾರಣದಿಂದ ಇವತ್ತು ಸ್ಟೇ ಕೊಟ್ಟಿದ್ದಾರೆ.

ಆದರೆ ಈ ರೀತಿ ಬೇರೆ ಬೇರೆಯ ಉತ್ತರಗಳನ್ನು ಕೊಡುವುದರಿಂದ ನಮ್ಮ ಕ್ಷೇತ್ರದಲ್ಲಿ ನಾವು ಹೋದಾಗ ಜನ ನಮ್ಮನ್ನು ಬಹಳ ತೊಂದರೆಗೆ ಈಡು ಮಾಡುತ್ತಿದ್ದಾರೆ. ಅದಕ್ಕಾಗಿ ಈ ನಮ್ಮ ಘನ ಸರ್ಕಾರ ಬೇಡ್ತಿ ಯೋಜನೆಯನ್ನು ಕೈ ಬಿಟ್ಟಿದೆ ಎಂದು ಹೇಳಿದರೆ ಬಹಳ ಒಳ್ಳೆಯದು. ಈ ರೀತಿಯಾಗಿ ಬೇರೆ ಬೇರೆ ತರಹದ ಒಂದೊಂದು ಸ್ಟೇಟ್‌ಮೆಂಟ್‌ಗಳನ್ನು ಬೇರೆ ಬೇರೆ ಮಂತ್ರಿಗಳು ಕೊಡುತ್ತಾ ಹೋದರೆ ನಮಗೆ ಕಷ್ಟವಾಗುತ್ತದೆ. ಅದಕ್ಕೆ ಮಾನ್ಯ ಉಪಮುಖ್ಯಮಂತ್ರಿಗಳು ಇದರ ಬಗ್ಗೆ ಪ್ರಾಮಾಣಿಕವಾದಂತಹ ಹೇಳಿಕೆಯನ್ನು ಅಂದರೆ ಮಾಡುವುದಿಲ್ಲ ಎನ್ನುವಂತಹ ಹೇಳಿಕೆಯನ್ನು ಕೊಟ್ಟರೆ ನಾನು ಅವರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಬೇಡ್ತಿ ಯೋಜನೆಯಿಂದ ನಮಗೆ ರಿಹ್ಯಾಬಿಲಿಟೇಷನ್ ಬೇಕಾದಷ್ಟು ಆಗುವಂತಹ ಪರಿಸ್ಥಿತಿ ಇದೆ. ಬೇಡ್ತಿ ಯೋಜನೆ ಬರಬಹುದು ಅಥವಾ

ಬರದೇ ಇರಬಹುದು. ಇದುವರೆಗೂ ಕೊಡಸಳ್ಳಿಯಲ್ಲಿ ರಿಹ್ಯಾಬಿಲಿಟೇಷನ್ ಆಗಲಿಲ್ಲ. ಇದಕ್ಕಾಗಿ ಜನರು ನಮಗೆ ಗದ್ದಲವನ್ನು ಮಾಡುತ್ತಿದ್ದಾರೆ. ರಿಹ್ಯಾಬಿಲಿಟೇಷನ್ ಅನ್ನು ಮಾಡುವುದಿಲ್ಲ. ಈ ಜನರಿಗೆ ನಾವು ಯಾವ ರೀತಿ ಉತ್ತರವನ್ನು ಕೊಡಬೇಕು ಅದಕ್ಕೆ ಸರ್ಕಾರ ನಮಗೆ ನಿಲುವನ್ನು ಹೇಳಬೇಕು.

ಕೊಡಸಹಳ್ಳಿ ರಿಹ್ಯಾಬಿಲಿಟೇಷನ್ ಅನ್ನು ಇಷ್ಟು ದಿವಸದಲ್ಲಿ ಮುಗಿಸುತ್ತೇವೆ. ಆ ಕೆಲಸವನ್ನು ಕೈಗೆ ತೆಗೆದುಕೊಳ್ಳುವ ಬಗ್ಗೆ ವಿಚಾರವನ್ನು ಕೂಡ ಸರ್ಕಾರದವರು ಹೇಳಬೇಕು. ನಾನು ಮತ್ತೊಮ್ಮೆ ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತೇನೆ. ಬೇಡ್ತಿ ಯೋಜನೆಯನ್ನು ತಾವು ಮಾಡುವುದಿಲ್ಲ ಎನ್ನುವ ವಿಚಾರವನ್ನು ಮಾನ್ಯ ಮಂತ್ರಿಗಳು ಹೇಳುತ್ತೀರೆಂದು ತಿಳಿದುಕೊಂಡು ನನಗೆ ಸಮಯ ಕೊಟ್ಟ ಬಗ್ಗೆ ತಮಗೆ ಧನ್ಯವಾದಗಳನ್ನು ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್:- ಕಾಲರ ಬಗ್ಗೆ ಬೆಳಿಗ್ಗೆ ಹೇಳಿದ್ದರು ಸಾಯಂಕಾಲ ಕೊಡುತ್ತೇವೆಂದು. ಅದನ್ನು ಕೊಡಿಸಿಕೊಡಿ.

ಸಚಿವರಿಂದ ಹೇಳಿಕೆ

ಮೈಸೂರು ನಗರ ಮತ್ತು ಇತರೆ ಪ್ರದೇಶಗಳಲ್ಲಿ ಅತಿಸಾರ ಪ್ರಕರಣಗಳು ಮತ್ತು ಅದರ ನಿಯಂತ್ರಣ

† ಶ್ರೀ ಹಾರನಹಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):- ಮಾನ್ಯ ಅಧ್ಯಕ್ಷರೆ, ಮೈಸೂರು ನಗರದಲ್ಲಿ ಮತ್ತು ಇತರೆ ಪ್ರದೇಶಗಳಲ್ಲಿ ಅತಿಸಾರ ಪ್ರಕರಣಗಳ ಮತ್ತು ನಿಯಂತ್ರಣ ಕ್ರಮದ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಹೇಳಿಕೆಯನ್ನು ತಮ್ಮ ಮುಂದೆ ಇಡುತ್ತಿದ್ದೇನೆ.

ಮೈಸೂರು ನಗರದಲ್ಲಿ 1ನೇ ಜನವರಿಯಿಂದ ಇಲ್ಲಿಯವರೆವಿಗೂ 745 ಅತಿಸಾರ ಪ್ರಕರಣಗಳು ಮತ್ತು 28 ಮರಣಗಳು ಸಂಭವಿಸಿವೆ. ಈ ಕಾಯಿಲೆಗಳು ಫೆಬ್ರವರಿ 3ನೇ ವಾರದಿಂದ ಉಲ್ಬಣಿಸಿತ್ತು ಮತ್ತು ಮೈಸೂರು ತಾಲ್ಲೂಕುಗಳಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ಈ ಕಾಯಿಲೆಗಳು ಕಾಣಿಸಿಕೊಂಡಿದ್ದು, ಇಲ್ಲಿಯವರೆವಿಗೂ 594 ಪ್ರಕರಣಗಳು ಮತ್ತು 19 ಮರಣಗಳು ಸಂಭವಿಸಿದೆ. ಒಟ್ಟಾಗಿ ಮೈಸೂರು ಜಿಲ್ಲೆಯಲ್ಲಿ 1359 ಅತಿಸಾರ ಪ್ರಕರಣಗಳು ಮತ್ತು 47 ಮರಣಗಳು ದಿನಾಂಕ: 14-3-93ರಿಂದ ಕಾಣಿಸಿಕೊಂಡಿದೆ.

ಈಗ ಮೂರು ದಿನಗಳಿಂದ ಎಂದರೆ ದಿನಾಂಕ: 12, 13ಮತ್ತು 14ನೇ ತಾರೀಖಿನಲ್ಲಿ ಮರಣಗಳು ವರದಿಯಾಗಿಲ್ಲ.

ಮೈಸೂರು ನಗರದಲ್ಲಿ ಈ ಖಾಯಿಲೆಗಳ ಚಿಕಿತ್ಸೆ ಮಾಡಲು ಸಾಂಕ್ರಾಮಿಕ ರೋಗಗಳ ಆಸ್ಪತ್ರೆ ವಹಿಸಿಕೊಂಡಿದೆ. ಈ ಆಸ್ಪತ್ರೆಯ ಸಿಬ್ಬಂದಿ ಈ ಕೆಳಗಿನಂತೆ ಇದೆ.

1. ಶಸ್ತ್ರ ಚಿಕಿತ್ಸಕರು	:1
2. ಸಹಾಯಕ ಶಸ್ತ್ರ ಚಿಕಿತ್ಸಕರು	:1
3. ಶುಶ್ರೂಷಾ ದಾದಿಯರು	:2
4. ಗ್ರೂಪ್ - ಡಿ	:9

ಈಗ ಈ ಖಾಯಿಲೆಗಳ ತೀವ್ರತೆಯಿಂದ ದಿನಾಂಕ: 10-3-93ರಿಂದ 19 ಸಹಾಯಕ ಶಸ್ತ್ರ ಚಿಕಿತ್ಸಕರನ್ನು, 26 ಶುಶ್ರೂಷಾ ದಾದಿಯವರನ್ನು ಮತ್ತು 18 ಗ್ರೂಪ್ - ಡಿ ನೌಕರರನ್ನು ಇತರೇ ಆಸ್ಪತ್ರೆಗಳಿಂದ ನಿಯೋಜಿಸಲಾಗಿದೆ. ಈ ಆಸ್ಪತ್ರೆಯ ಹಾಸಿಗೆಗಳ ಸಂಖ್ಯೆ 40. ಈಗ ಮತ್ತೆ 60